ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಬನ್ನೇರುಘಟ್ಟ ಉದ್ಯಾನಕ್ಕೆ ಬಂದ ದಕ್ಷಿಣ ಆಫ್ರಿಕಾದ ನಾಲ್ಕು ಚೀತಾಗಳು ।೦೫

ಯಶಸ್ಸಿನ ಶ್ರೇಯಕ್ಕಾಗಿ ಒಪ್ಪಂದ ತಡ ಮಾಡಿದ್ರಾ ಅಧ್ಯಕ್ಷ ಟ್ರಂಪ್? ।೦೭



ಹುಬ್ಬಳ್ಳಿ
ಭಾನುವಾರ, 19 ಏಪ್ರಿಲ್ 2026
ಸಂಪುಟ 16, ಸಂಚಿಕೆ 25, ಪುಟಗಳು 14
■ ಹುಬ್ಬಳ್ಳಿ ■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ
₹5
RNI No.KARKAN/ 2011/64413
hosadigantha.com
epaper.hosadigantha.com
Hosadigantha Digital

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಶುಕ್ಲ ಪಕ್ಷ, ತಿಥಿ: ಬಿದಿಗೆ, ನಕ್ಷತ್ರ: ಭರಣಿ ಉಪರಿ ಕೃತ್ತಿಕೆ

ದಿನದ ಮಾತು

ನಾಲಿಗೆಯ ತುದಿಯಲ್ಲಿ ಲಕ್ಷ್ಮಿ ನೆಲೆಸಿದ್ದಾಳೆ. ಅಲ್ಲಿಯೇ ಮಿತ್ರರು, ಬಂಧುಗಳು, ಆದರಿಂದಲೇ ಬಂಧನ ಹಾಗೂ ಮರಣ ಒದಗುತ್ತದೆ. ಇದು ಸತ್ಯ.

▲ ಶಾರ್ಙ್ಗಧರ ಪದ್ಧತಿ

ನೆನ್ನೆ ಎಂಬ ನೆಚ್ಚಿನ ಸಂಗಾತಿ

ವಕ್ರದೃಷ್ಟಿ

• ಎನ್.ರಾಮನಾಥ್

• ಪುಟ ೬

ಕಿರುಸುದ್ದಿ

ಹಿಂದಿನ ವಿವಾಹ ಬಚ್ಚಿಟ್ಟು ಸುಳ್ಳು ಭರವಸೆ: ನಾಸಿಕ್ ಸಂತ್ರಸ್ತೆ ದೂರು

ಪುಟ ೭

ರೈಲ್ವೆ ಕಾರಿಡಾರ್ ನಿರ್ಮಾಣಕ್ಕೆ ಕೇಂದ್ರ ಅಸ್ತು

ಪುಟ ೭

ಕಾಂಗ್ರೆಸ್ಸಿಗೆ ಮುಖಭಂಗ ಕಾದಿದೆ: ಛಲವಾದಿ

ಪುಟ ೩

ಪ್ರಜಾಪ್ರಭುತ್ವದ ಗೆಲುವು ಎಂದ ಪ್ರಿಯಾಂಕಾ ವಾದ್ರಾ

ಪುಟ ೭

ಭಾರತ ಸಿದ್ಧತೆ ಸಮರ್ಪಕ: ರಾಜನಾಥ್ ಸಿಂಗ್

ಪುಟ ೭

ರಷ್ಯಾ ತೈಲ ಖರೀದಿ ನಿರ್ಬಂಧ ಸಡಿಲಿಸಿದ ಅಮೆರಿಕ

ಪುಟ ೭

ಕಲಾಪ ಅನಿರ್ದಿಷ್ಟಾವಧಿ ಮುಂದೂಡಿಕೆ

ಪುಟ ೭

ಮಹಿಳಾ ಮೀಸಲಿಗೆ ಕೈನಿಂದ ವಿರೋಧವಿಲ್ಲ: ಸಿಎಂ

ಪುಟ ೩

ವಿಪಕ್ಷಗಳಿಂದ ಮಸೂದೆಯ ಭ್ರೂಣಹತ್ಯೆ | ಮೋದಿ ವಾಗ್ದಾಳಿ
ಮಹಿಳೆಯರಲ್ಲಿ ಮೋದಿ ಕ್ಷಮೆ | ಹೋರಾಟ ಮುಂದುವರಿಕೆ

ನಾರೀಶಕ್ತಿಗೆ ಅಪಮಾನ

• ಹೊಸದಿಲ್ಲಿ: ಮಹಿಳಾ ಮೀಸಲಾತಿ ತಿದ್ದುಪಡಿ ಮಸೂದೆ ಸಂಸತ್ತಿನಲ್ಲಿ ವಿಫಲವಾದ ಬೆನ್ನಲ್ಲೇ ಪ್ರಧಾನಿ ನರೇಂದ್ರ ಮೋದಿ ಅವರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದು, ಕಾಂಗ್ರೆಸ್ ಹಾಗೂ ಅದರ ಮಿತ್ರಪಕ್ಷಗಳ ವಿರುದ್ಧ ಕಿಡಿಕಾರಿದರು. 'ನಾರಿ ಶಕ್ತಿ ವಂದನ ಅಧಿನಿಯಮ' ತಿದ್ದುಪಡಿ ಮಸೂದೆ ಜಾರಿಯಾಗದಿರುವುದು ದೇಶದ ಮಹಿಳಾ ಶಕ್ತಿಯ ಕನಸುಗಳ ಮೇಲೆ ಬಿದ್ದ ದೊಡ್ಡ ಹೊಡೆತವಾಗಿದ್ದು, ಇದಕ್ಕಾಗಿ ದೇಶದ ತಾಯಂದಿರು, ಸಹೋದರಿಯರಲ್ಲಿ ಕ್ಷಮೆಯಾಚಿಸುತ್ತೇನೆ ಎಂದು ಹೇಳಿದರು. ಪ್ರತಿಪಕ್ಷಗಳು ಮಹಿಳಾ ಮಸೂದೆಯ ಭ್ರೂಣ ಹತ್ಯೆ ಮಾಡಿವೆ ಎಂದೂ ಆಕ್ರೋಶ ವ್ಯಕ್ತಪಡಿಸಿದರು.

ದೇಶವನ್ನುದ್ದೇಶಿಸಿ ಶನಿವಾರ ರಾತ್ರಿ ಭಾಷಣ ಮಾಡಿದ ಮೋದಿ ಅವರು, ಮಹಿಳಾ ಮಸೂದೆ ವಿಚಾರದಲ್ಲಿ ಪ್ರತಿಪಕ್ಷಗಳ ನಡೆಯನ್ನು ತೀವ್ರವಾಗಿ ಖಂಡಿಸಿದರು.



ಸಂಸತ್ತಿನಲ್ಲಿ ಮಹಿಳೆಯರ ಹಿತಾಸಕ್ತಿಯ ಪ್ರಸ್ತಾವನೆ ಬಿದ್ದಾಗ ವಿಪಕ್ಷಗಳು ತೋರಿದ ವರ್ತನೆ ತೀವ್ರ ನೋವುಂಟುಮಾಡಿದೆ ಎಂದು ಮೋದಿ ಹೇಳಿದರು. ಮಹಿಳೆಯರ ಹಕ್ಕುಗಳನ್ನು ಕಸಿದುಕೊಂಡು ಚಪ್ಪಾಳೆ ತಟ್ಟುವುದು ಅವರ ಸ್ವಾಭಿಮಾನಕ್ಕೆ ಮಾಡಿದ ಪೆಟ್ಟು ಎಂದು ಬೇಸರ ವ್ಯಕ್ತಪಡಿಸಿದರು. ಮಹಿಳೆಯರು ತಮ್ಮ ಮೇಲೆ ಆಗಿರುವ ಅವಮಾನವನ್ನು ಎಂದಿಗೂ ಮರೆಯುವುದಿಲ್ಲ; ಆದ್ದರಿಂದ ಕಾಂಗ್ರೆಸ್ ಹಾಗೂ ಅದರ ಮಿತ್ರಪಕ್ಷಗಳ ನಡೆ ಮಹಿಳೆಯರ ಮನಸ್ಸಿನಲ್ಲಿ ಶಾಶ್ವತವಾಗಿ ಉಳಿಯಲಿದೆ ಎಂದು ಎಚ್ಚರಿಸಿದರು. 21ನೇ ಶತಮಾನದ ಮಹಿಳೆ ಎಲ್ಲವನ್ನೂ ಗಮನಿಸುತ್ತಿದ್ದು, ಸತ್ಯವನ್ನು ಅರಿತುಕೊಂಡಿದ್ದಾಳೆ. ಮಹಿಳಾ ಮೀಸಲಾತಿ ವಿರೋಧಿಸಿದವರಿಗೆ ತಕ್ಕ ಉತ್ತರ ನೀಡಲಾಗುತ್ತದೆ ಎಂಬ ವಿಶ್ವಾಸವನ್ನೂ ವ್ಯಕ್ತಪಡಿಸಿದರು.

ಎಲ್ಲರಿಗೂ ಅವಕಾಶ ಯತ್ನ: ಈ ತಿದ್ದುಪಡಿ ಯಾರಿಂದಲೂ ಏನನ್ನೂ ಕಸಿದುಕೊಳ್ಳುವ ಉದ್ದೇಶ ಹೊಂದಿರಲಿಲ್ಲ, ಬದಲಿಗೆ ಎಲ್ಲರಿಗೂ ಅವಕಾಶ ನೀಡುವ ಪ್ರಯತ್ನವಾಗಿತ್ತು ಎಂದು ಪ್ರಧಾನಿ ವಿವರಿಸಿದರು. 40 ವರ್ಷಗಳಿಂದ ಬಾಕಿ ಉಳಿದಿದ್ದ ಮಹಿಳೆಯರ ಹಕ್ಕನ್ನು 2029ರಿಂದ ಜಾರಿಗೊಳಿಸುವ ಮಹತ್ವದ ಹೆಜ್ಜೆ. ಪುಟ ೪



ಮೋದಿ ಪ್ರಮುಖ ಹೇಳಿಕೆಗಳು

- 'ಮಹಿಳೆಯರ ಹಕ್ಕು ಕಸಿದುಕೊಂಡ ಘಟನೆ'
- 'ವಿಪಕ್ಷಗಳ ಸ್ವಾರ್ಥದಿಂದ ಮಸೂದೆ ವಿಫಲ'
- 'ಮಹಿಳೆಯರ ಅವಮಾನ ಮರೆಯುವುದಿಲ್ಲ'
- 'ಸಂಕಲ್ಪ ಅಚಲ ಹೋರಾಟ ಮುಂದುವರಿಯುತ್ತದೆ'
- ಕಾಂಗ್ರೆಸ್, ಡಿಎಂಕೆ, ಟಿಎಂಸಿ, ಎಸ್‌ಪಿಗಳಿಂದ ಸ್ವಾರ್ಥ ರಾಜಕಾರಣ
- ಮಸೂದೆ ಸೋತಾಗ ಮೇಜುಕುಟ್ಟಿ ಸಂಭ್ರಮಿಸಿದ್ದು ನೋವುಂಟು ಮಾಡಿತು
- ನಾರಿ ಎಲ್ಲ ಮರೆಯುತ್ತಾಳೆ, ಆದರೆ ತನ್ನ ಮೇಲಿನ ಅಪಮಾನ ಮರೆಯಲ್ಲ
- ಪ್ರತಿಪಕ್ಷಗಳು ಮಹಿಳಾ ಮಸೂದೆ ಸೋಲಿಸಿ ಭ್ರೂಣಹತ್ಯೆ ಮಾಡಿವೆ
- ವಿರೋಧ ಪಕ್ಷಗಳು ಮಾಡಿದ ಪಾಪಕ್ಕೆ ಆಕೆಯೇ ಶಿಕ್ಷೆ ನೀಡುತ್ತಾಳೆ
- ಸಂವಿಧಾನ ಶಿಲ್ಪಿಗಳ ಆಶಯಕ್ಕೂ ಪ್ರತಿಪಕ್ಷಗಳಿಂದ ಧಕ್ಕೆ ಪುಟ ೪

ಮಸೂದೆ ಮುಖ್ಯ ಅಂಶಗಳು

- ಲೋಕಸಭೆ, ವಿಧಾನಸಭೆಗಳಲ್ಲಿ ಮಹಿಳೆಗೆ ಮೀಸಲಾತಿ
- 2029ರಿಂದ ಜಾರಿಗೆ ಉದ್ದೇಶ
- 40 ವರ್ಷಗಳ ನಿರೀಕ್ಷೆಗೆ ಅಂತ್ಯ ಮಾಡುವ ಪ್ರಯತ್ನ
- ದೇಶದ ಅರ್ಧ ಜನಸಂಖ್ಯೆಗೆ ರಾಜಕೀಯ ಹಕ್ಕು

ಮೀಸಲಾತಿ ಮಸೂದೆ ವಿಫಲ: ರಾಹುಲ್ ನಿವಾಸಕ್ಕೆ ಮುತ್ತಿಗೆ

• ಹೊಸದಿಲ್ಲಿ: ಮಹಿಳಾ ಮೀಸಲಾತಿ ಜಾರಿಗೆ ತರುವ ಸಂಬಂಧ ಮಂಡಿಸಲಾಗಿದ್ದ 131ನೇ ಸಂವಿಧಾನ ತಿದ್ದುಪಡಿ ಮಸೂದೆ ಲೋಕಸಭೆಯಲ್ಲಿ ಅಂಗೀಕಾರಗೊಳ್ಳಲು ವಿಫಲವಾದ ಹಿನ್ನೆಲೆಯಲ್ಲಿ, ಬಿಜೆಪಿ ಶನಿವಾರ ಬೃಹತ್ ಪ್ರತಿಭಟನೆ ನಡೆಸಿತು. ಬಿಜೆಪಿ ಮಹಿಳಾ ಮುಖಂಡರು, ಕಾರ್ಯಕರ್ತರು ಶನಿವಾರ ಲೋಕಸಭಾ ವಿಪಕ್ಷದ ನಾಯಕ ರಾಹುಲ್ ಗಾಂಧಿ ಅವರ ಸುನೇಹ್ರಿ ಬಾಗ್ ನಿವಾಸಕ್ಕೆ ಮುತ್ತಿಗೆ ಹಾಕಿದ್ದಾರೆ.ಅದೇರೀತಿ ದೇಶದ ಹಲವೆಡೆ ಬಿಜೆಪಿ ಪ್ರತಿಭಟನೆ ನಡೆಸಿ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಪುಟ ೪

ನ್ಯಾಯಾಂಗ ಸಮ್ಮೇಳನದಲ್ಲಿ ಸಿಎಂ ಅಭಿಮತ

ದಕ್ಷಿಣದಲ್ಲಿ ಸುಪ್ರೀಂ ನ್ಯಾಯಖಾತ್ರಿಗೆ ಶಕ್ತಿ



• ಬೆಂಗಳೂರು: ದಕ್ಷಿಣ ಭಾರತದಲ್ಲಿ ಸರ್ವೋಚ್ಚ ನ್ಯಾಯಾಲಯದ ಪೀಠ ಸ್ಥಾಪನೆಯಾದರೆ ನ್ಯಾಯವನ್ನು ಖಾತ್ರಿಪಡಿಸುವ ನಿಟ್ಟಿನಲ್ಲಿ ಬಹು ದೊಡ್ಡ ಹೆಜ್ಜೆ ಇರಿಸಿದಂತಾಗುತ್ತದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಕರ್ನಾಟಕ ರಾಜ್ಯ ನ್ಯಾಯಾಂಗ ಅಧಿಕಾರಿಗಳ ಸಂಘದಿಂದ ಶನಿವಾರ ಬಾಬು ರಾಜೇಂದ್ರ ಪ್ರಸಾದ್ ಅಂತಾರಾಷ್ಟ್ರೀಯ ಕೇಂದ್ರದಲ್ಲಿ ಹಮ್ಮಿಕೊಳ್ಳಲಾದ



ನ್ಯಾಯಾಂಗ ಅಧಿಕಾರಿಗಳ 22ನೇ ದ್ವೈವಾರ್ಷಿಕ ಸಮ್ಮೇಳನದಲ್ಲಿ ಮಾತನಾಡಿದ ಅವರು, ಕೃತಕ ಬುದ್ಧಿಮತ್ತೆಯ ಸಹಾಯದಿಂದ ತ್ವರಿತ ಕಾನೂನು ಸಂಶೋಧನೆ, ಪ್ರಕರಣ ಇತ್ಯರ್ಥಕ್ಕೆ ಸಂಬಂಧಿಸಿದಂತೆ ಸುಧಾರಿತ ನಿರ್ವಹಣೆ ವ್ಯವಸ್ಥೆಗಳ ಮೂಲಕ ಬಾಕಿ ಇರುವ ಪ್ರಕರಣಗಳನ್ನು ಕಡಿಮೆ ಮಾಡುವ ಸಾಧ್ಯತೆಯಿದೆ ಎಂದರು.

ನ್ಯಾಯಾಂಗ ವ್ಯವಸ್ಥೆಯಲ್ಲಿ ಎಐ ಅಳವಡಿಸಿಕೊಳ್ಳುವುದರ ಕುರಿತು ಆಳವಾದ ಕಳವಳಗಳು ಮೂಡದೆ ಇರಲಾರದು. ಅಲ್ಗಾರಿದಮಿಕ್ ಪಕ್ಷಪಾತವು ಕಾನೂನಿನ ಮುಂದೆಸಮಾನತೆಯ ಖಾತರಿ ಹಾಳುಮಾಡಬಹುದು. ಅಪಾರದರ್ಶಕವ್ಯವಸ್ಥೆನ್ಯಾಯಾಂಗವ್ಯವಸ್ಥೆಯತಾರ್ಕಿಕ ನಿರ್ಧಾರಗಳ ಸಿದ್ಧಾಂತ ದುರ್ಬಲಗೊಳಿಸುವ ಆತಂಕವನ್ನು ಅಲ್ಲಗಳೆಯುವಂತಿಲ್ಲ ಎಂದರು. ಪುಟ ೪

ಲೋಕಾಯುಕ್ತ ಅತ್ಯಂತ ಪರಿಣಾಮಕಾರಿ: ಸಿಜೆಐ

• ಬೆಂಗಳೂರು: ಕರ್ನಾಟಕ ಲೋಕಾಯುಕ್ತ ಸಂಸ್ಥೆ ದೇಶದಲ್ಲೇ ಅತ್ಯಂತ ಪರಿಣಾಮಕಾರಿ ಲೋಕಾಯುಕ್ತ ಸಂಸ್ಥೆಗಳಲ್ಲಿ ಒಂದಾಗಿ ಗುರುತಿಸಿಕೊಂಡಿದೆ. ಭ್ರಷ್ಟಾಚಾರಮುಕ್ತ ಆಡಳಿತ ಮತ್ತು



ಸಾಮಾನ್ಯ ಜನರ ಹಕ್ಕುಗಳ ರಕ್ಷಣೆಯಲ್ಲಿ ಕರ್ನಾಟಕ ಲೋಕಾಯುಕ್ತ ಸಂಸ್ಥೆಯು ದೇಶಕ್ಕೇ ಮಾದರಿಯಾಗಿದೆ ಎಂದು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಹೇಳಿದರು. ಶನಿವಾರ ವಿಧಾನಸೌಧದ ಬ್ಯಾಂಕ್ವೆಟ್ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದ್ದ ಲೋಕಾಯುಕ್ತ ಸಂಸ್ಥೆಗೆ ನಲವತ್ತರ ಸಂಭ್ರಮ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಪುಟ ೪

4 ಶಂಕಿತ ಉಗ್ರರ ಸೆರೆ | ರಾಮಮಂದಿರ, ಸಂಸತ್ ದಾಳಿ ಗುರಿ

ರಿಮೋಟ್ ಕಾರಲ್ಲಿ ಸ್ಫೋಟ ಸಂಚು

• ಹೊಸದಿಲ್ಲಿ: ರಾಜಧಾನಿಯಲ್ಲಿ ದೊಡ್ಡ ಭಯೋತ್ಪಾದಕ ಸಂಚನ್ನು ಭೇದಿಸಿದ ದೆಹಲಿ ಪೊಲೀಸರು ಮಹಾರಾಷ್ಟ್ರ, ಒಡಿಶಾ ಹಾಗೂ ಬಿಹಾರ ಮೂಲದ ನಾಲ್ವರು ಶಂಕಿತ ಉಗ್ರರನ್ನು ಬಂಧಿಸಿದ್ದಾರೆ. ಇವರು ರಾಮಮಂದಿರ, ಸಂಸತ್ ಸೇರಿದಂತೆ



ಪ್ರಮುಖ ಸ್ಥಳಗಳ ಮೇಲೆ ದಾಳಿ ನಡೆಸಲು ಯೋಜನೆ ರೂಪಿಸಿದ್ದು, ಆನ್‌ಲೈನ್ ಎನ್‌ಕ್ರಿಪ್ಟೆಡ್ ವೇದಿಕೆಗಳ ಮೂಲಕ ಇತರರನ್ನು ಸೇರಿಸಿಕೊಳ್ಳಲು ಯತ್ನಿಸುತ್ತಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ಪೊಲೀಸರು ಕಾರ್ಯಾಚರಣೆ ವೇಳೆ ಸ್ಫೋಟಕ ಸಾಧನ (ಎಲ್‌ಇಡಿ) ಹಾಗೂ ಸಂಬಂಧಿತ ವಸ್ತುಗಳನ್ನು ವಶಪಡಿಸಿಕೊಂಡಿದ್ದಾರೆ. ಆರೋಪಿಗಳಲ್ಲಿ ಇಬ್ಬರು ರಿಮೋಟ್ ನಿಯಂತ್ರಿತ ಆಟಿಕೆ ಕಾರಿನಲ್ಲಿ ಬಾಂಬ್ ಅಳವಡಿಸಿ ಜನಸಂದಣಿ ಪ್ರದೇಶಗಳಲ್ಲಿ ದಾಳಿ ನಡೆಸಲು ಸಿದ್ಧತೆ ನಡೆಸುತ್ತಿದ್ದರು ಎಂದು ಆರೋಪಿಸಲಾಗಿದೆ. ವಿಶೇಷ ದಳವು ಗುಪ್ತಚರ ಮಾಹಿತಿ ಆಧಾರದ ಮೇಲೆ ಮಹಾರಾಷ್ಟ್ರದಿಂದ ಇಬ್ಬರು, ಒಡಿಶಾ, ಬಿಹಾರದಿಂದ ತಲಾ ಒಬ್ಬರನ್ನು ಬಂಧಿಸಿದೆ. ಬಂಧಿತರಲ್ಲಿ ಮೋಸೈಬ್ ಅಹ್ಮದ್, ಮೊಹಮ್ಮದ್ ಹಮ್ಮಾದ್, ಮೊಹಮ್ಮದ್ ಸೋಹೈಲ್, ಶೇಖ್ ಇಮ್ರಾನ್ ಸೇರಿದ್ದಾರೆ. ಇವರು ಸಾಮಾನ್ಯ ಸಾಮಾಜಿಕ-ಆರ್ಥಿಕ ಹಿನ್ನೆಲೆಯವರಾಗಿದ್ದು, ತಾಂತ್ರಿಕ ಕೌಶಲ್ಯ ಬಳಸಿ ದಾಳಿ ರೂಪಿಸಲು ಯತ್ನಿಸುತ್ತಿದ್ದರೆಂದು ಪೊಲೀಸರು ಹೇಳಿದ್ದಾರೆ. ಪುಟ ೪

- ದೆಹಲಿ ಉಗ್ರರ ಸಂಚು ಭೇದಿಸಿದ ಪೊಲೀಸರು
- ರೆಡ್ ಫೋರ್ಟ್, ಇಂಡಿಯಾ ಗೇಟ್ ಸೇರಿದಂತೆ ಪ್ರಮುಖ ಸ್ಥಳಗಳ ಪರಿಶೀಲನೆ
- ಸ್ಫೋಟಕ ಸಾಧನ ವಶಕ್ಕೆ
- ಎನ್‌ಕ್ರಿಪ್ಟೆಡ್ ಆನ್‌ಲೈನ್ ಗುಂಪುಗಳ ಮೂಲಕ ನೇಮಕಾತಿ ಯತ್ನ

ಭಾರತದ ತೈಲ ಹಡಗಿನ ಮೇಲೆ ಇರಾನ್ ದಾಳಿ!

• ಮುಂಬೈ: ಹಾರ್ಮುಜ್ ಜಲಸಂಧಿಯಿಂದ ಭಾರತದತ್ತ 20




ಲಕ್ಷ ಬ್ಯಾರೆಲ್ ಇರಾಕಿ ಕಚ್ಚಾ ತೈಲ ಹೊತ್ತು ಹೊರಟಿದ್ದ ಭಾರತೀಯ ಹಡಗೊಂದರ ಸಹಿತ ಒಟ್ಟು 14 ತೈಲ ಹಡಗುಗಳ ಕಾನ್ವಾಯ್ ಮೇಲೆ ಶನಿವಾರ ಇರಾನ್ ನೌಕಾಪಡೆಗೆ ಸೇರಿದ 2 ಗನ್‌ಬೋಟುಗಳು ಗುಂಡಿನ ದಾಳಿ ನಡೆಸಿವೆ. ಪುಟ ೪

- 14 ಭಾರತೀಯ ಹಡಗುಗಳ ಕಾನ್ವಾಯ್ ಮೇಲೆ ದಾಳಿ
- ಗುಂಡಿನ ದಾಳಿಯಿಂದ ಯಾವುದೇ ಹಾನಿಯಾಗಿಲ್ಲ
- ಒಂದು ಹಡಗು ಹಾರ್ಮುಜ್ ದಾಟುವಲ್ಲಿ ಯಶಸ್ವಿ
- ದಾಳಿ ವಿರುದ್ಧ ಎಂಇಎ ಆಕ್ರೋಶ, ಇರಾನ್ ರಾಯಭಾರಿಗೆ ಸಮನ್ಸ್

ಕೇಂದ್ರ ಸರ್ಕಾರಿ ನೌಕರರಿಗೆ ತುಟ್ಟಿಭತ್ತೆ ಶೇ.2 ಹೆಚ್ಚಳ

• ಹೊಸದಿಲ್ಲಿ: ಕೇಂದ್ರ ಸರಕಾರಿ ನೌಕರರ ತುಟ್ಟಿಭತ್ಯೆ ಮತ್ತು ಪಿಂಚಣಿದಾರರ ಡಿಯರ್‌ನೆಸ್ ರಿಲೀಫ್ ಅಥವಾ ಡಿಆರ್‌ನ್ನು ಶೇ.2ರಷ್ಟು ಹೆಚ್ಚಿಸಲಾಗಿದೆ. ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷತೆಯಲ್ಲಿ ನಡೆದ ಸಂಪುಟ ಸಭೆಯಲ್ಲಿ



ಮಂಜೂರಾತಿ ನೀಡಲಾಗಿದೆ. ಈ ಮೂಲಕ ಡಿಎ-ಡಿಆರ್ ದರವು ಮೂಲ ವೇತನದ ಶೇ.60ರಷ್ಟಾಗಲಿದೆ. ಈ ಹೆಚ್ಚಳವು 2026ರ ಜ.1 ರಿಂದಲೇ ಪೂರ್ವಾನ್ವಯವಾಗಲಿದೆ. ಪುಟ ೪

ಸಿಪಿಎಂ ಕಾರ್ಯಕರ್ತನಿಗೆ 25 ವರ್ಷ ಜೈಲು

• ಕಣ್ಣೂರು(ಕೇರಳ): 2011ರಲ್ಲಿ ಆರ್‌ಎಸ್‌ಎಸ್ ಬಿಜೆಪಿ ಕಾರ್ಯಕರ್ತರ ಮೇಲೆ ನಡೆದ ಬಾಂಬ್ ದಾಳಿ ಪ್ರಕರಣದಲ್ಲಿ ಸಿಪಿಐ(ಎಂ)ಗೆ ಸೇರಿದ 10 ಕಾರ್ಯಕರ್ತರಿಗೆ ಕೇರಳದ ನ್ಯಾಯಾಲಯವು 10 ವರ್ಷದಿಂದ 25 ವರ್ಷಗಳವರೆಗೆ ಜೈಲು ಶಿಕ್ಷೆಯನ್ನು ವಿಧಿಸಿದೆ. • ವಿವರ ಪುಟ ೭

ಬೆಳ್ಳಿ ಬಂಗಾರ (ಬೆಂಗಳೂರು) ಬೆಳ್ಳಿ: 2,75,000 (2,65,000) ಅಪರಂಜಿ ಚಿನ್ನ: 1,55,780 (1,54,200) ಆಭರಣ ಚಿನ್ನ: 1,42,800 (1,41,350) ಚಿನ್ನ 10 ಗ್ರಾಂ.ಗೆ, ಬೆಳ್ಳಿ 1 ಕೆ.ಜಿಗೆ, ರೂ.ಗಳಲ್ಲಿ (ಆವರಣದಲ್ಲಿ ಹಿಂದಿನ ದಿನದ ದರ) $1 = ₹93.20

ಕಿರುಸುದ್ದಿ

ನಾದ ನಮನ ಇಂದು

ಹುಬ್ಬಳ್ಳಿ: ರಾಮು ಕಲಾ ವೇದಿಕೆ ವತಿಯಿಂದ ರಾಮಚಂದ್ರ ಯಾವಗಲ್ ಅವರ ಸ್ಮರಣಾರ್ಥ ವಾರ್ಷಿಕ ಸಂಗೀತ ಉತ್ಸವ ಅಂಗವಾಗಿ ನಾದ ನಮನ ಏ.19ರಂದು ಬೆಳಗ್ಗೆ 9.30 ಗಂಟೆಯಿಂದ 9ರ ವರೆಗೆ ದೇಶಪಾಂಡೆ ನಗರದ ಸವಾಯಿ ಗಂಧರ್ವ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ವೇದಿಕೆ ಖಜಾಂಚಿ ರವೀಂದ್ರ ದೇಸಾಯಿ ಹೇಳಿದರು. ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಗಣಪತಿ ಭಟ್ ಹಾಸಣಗಿ ಅವರಿಗೆ ವೇದಿಕೆಯ ಕಲಾಶ್ರಂಗ ರಾಷ್ಟ್ರೀಯ ಪ್ರಶಸ್ತಿ ಪ್ರದಾನ ಸಮಾರಂಭ ಬೆಳಗ್ಗೆ 11 ಗಂಟೆಗೆ ನಡೆಯಲಿದೆ. ಸಾನ್ನಿಧ್ಯ ಹಾಗೂ ಅಧ್ಯಕ್ಷತೆ ರಾಮಕೃಷ್ಣ ಮಠ ಸ್ವಾಮಿ ವಿಜಯಾನಂದ ಮಹಾರಾಜ್ ಜಿ., ಸಂಸದ ಬಸವರಾಜ ಬೊಮ್ಮಾಯಿ, ಖ್ಯಾತ ಹಿಂದುಸ್ತಾನಿ ಗಾಯಕ ಪಂಡಿತ್ ಎಂ. ವೆಂಕಟೇಶ್ ಕುಮಾರ, ಕನ್ನಡ ಹಾಗೂ ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಕುಮಾರ ಬೆಕ್ಕೇರಿ ಭಾಗವಹಿಸುವರು ಎಂದು ತಿಳಿಸಿದರು. ರವೀಂದ್ರ ಯಾವಗಲ್, ಜ್ಞಾನೇಶ್ವರ ವಾರನ್, ಕಿರಣ ಯಾವಗಲ್, ನಯನ ಯಾವಗಲ್, ಮಾರುತಿ ಹುಟಕಿ ಇದ್ದರು.

ಬೆಕ್ಕು ರಕ್ಷಣೆ

ಕುಂದಗೋಳ: ಪಟ್ಟಣದ ಕೆಇಬಿ ಗ್ರಿಡ್‌ನಲ್ಲಿರುವ ವಿದ್ಯುತ್ ವಿಭಜಕ ಕಂಬದಲ್ಲಿ ಶುಕ್ರವಾರ ತಡರಾತ್ರಿ 11 ಗಂಟೆಯ ವೇಳೆಯಲ್ಲಿ ಬೆಕ್ಕೊಂದು ಸಿಲುಕಿಕೊಂಡಿದ್ದನ್ನು ಕೆಇಬಿ ಸಿಬ್ಬಂದಿ ರಕ್ಷಿಸಿ ಮಾನವಿಯತೆ ಮೆರೆದ ಘಟನೆ ಜರುಗಿದೆ.



ನಾಯಿಗಳು ಅಟ್ಟಿಸಿಕೊಂಡ ಬಂದಿದ್ದಕ್ಕೆ ಬೆಕ್ಕು ಗ್ರಿಡ್ ಪ್ರದೇಶದ ವಿದ್ಯುತ್ ಕಂಬದ ಮೇಲ್ಭಾಗದಲ್ಲಿ ಹತ್ತಿ ಸಿಲುಕಿಕೊಂಡಿದ್ದು, ಕೆಳಗೆ ಇಳಿಯಲು ಸಾಧ್ಯವಾಗದೇ ಆತಂಕದಲ್ಲಿ ಕಿರುಚುತ್ತಿದ್ದುದ್ದನ್ನು ಗಮನಿಸಿದ ಕೆಇಬಿ ಸ್ಟೇಷನ್ ಸಿಬ್ಬಂದಿ ತಕ್ಷಣವೇ ಪ್ರಭಾರಿ ಶಾಖಾ ಅಧಿಕಾರಿ ಶರಣಪ್ಪ ಅಂಗಡಿ ಅವರ ಗಮನಕ್ಕೆ ತಂದು ವಿದ್ಯುತ್ ಸರಬರಾಜನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಿ ಸುರಕ್ಷತಾ ಕ್ರಮಗಳನ್ನು ಅನುಸರಿಸಿ ಬೆಕ್ಕನ್ನು ರಕ್ಷಿಸಿದರು. ಪ್ರಭಾರಿ ವಿಭಾಗೀಯ ಅಧಿಕಾರಿ ಶರಣಪ್ಪ ಅಂಗಡಿ ಮಾತನಾಡಿ, ಇಂತಹ ಸಂದರ್ಭಗಳಲ್ಲಿ ವಿದ್ಯುತ್ ಸಂಪರ್ಕವನ್ನು ನಿಲ್ಲಿಸಿ ಸುರಕ್ಷಿತವಾಗಿ ಕಾರ್ಯಾಚರಣೆ ನಡೆಸುವುದು ಅತ್ಯಂತ ಅಗತ್ಯವೆಂದರು.

ಪದಾಧಿಕಾರಿಗಳ ಪದಗ್ರಹಣ ಇಂದು

ಹುಬ್ಬಳ್ಳಿ: ಇಂಡಿಯನ್ ಕಾಂಕ್ರಿಟ್ ಇನ್‌ಸ್ಟಿಟ್ಯೂಟ್ (ಐಸಿಐ)ನ ಹುಬ್ಬಳ್ಳಿ-ಧಾರವಾಡ ಸೆಂಟರ್‌ನ ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭ ಗೋಕುಲ ರಸ್ತೆ ಹೊಸೂರ ಬಳಿಯ ದಿ ಫರ್ನ್ ರೆಸಿಡೆನ್ಸಿಯಲ್ಲಿ ಏ.19ರಂದು ಸಂಜೆ 6.30ಕ್ಕೆ ಆಯೋಜಿಸಲಾಗಿದೆ ಎಂದು ಸೆಂಟರ್‌ನ ಅಧ್ಯಕ್ಷ ಸುರೇಶ ಕಿರೇಸೂರ ತಿಳಿಸಿದರು. ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೋಟಿ ಸ್ಟೀಲ್ ಸಹಯೋಗದೊಂದಿಗೆ ಕಾರ್ಯಕ್ರಮ ಸಂಘಟಿಸಿದ್ದೇವೆ. ಸೆಂಟರ್‌ನ ಕಾರ್ಯದರ್ಶಿಯಾಗಿ ಡಾ. ಆನಂದ ಹುಣಶ್ಯಾಳ, ಕಾರ್ಯಕಾರಿ ಸಮಿತಿ ಸದಸ್ಯರಾಗಿ ವಿಜಯ ತೋಟಗೇರ, ಶ್ರೀಹರಿ ಕೆ.ಎಚ್., ಸುರೇಶ ಪಾಟೀಲ, ಉಮೇಶ ನೀಲಿ, ಡಾ. ಎಂ.ಆರ್. ಪಾಟೀಲ, ಸಂತೋಷ ಅಂಚಟಗೇರಿ, ಜಿ.ಎಸ್. ಅಂಗಡಿ ಹಾಗೂ ಡಾ. ರೂಪಾ ಎ.ಕೆ. ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಪದಗ್ರಹಣ ಸಮಾರಂಭಕ್ಕೆ ಐಸಿಐ ಅಧ್ಯಕ್ಷ ಡಾ. ವಿ. ರಾಮಚಂದ್ರ, ಕೋಟಿ ಸ್ಟೀಲ್ ಮ್ಯಾನೇಜಿಂಗ್ ಪಾರ್ಟನರ್ ರಾಹುಲ ಕೋಟಿ ಪಾಲ್ಗೊಳ್ಳುವರು ಎಂದರು. ಕೋಟಿ ಸ್ಟೀಲ್‌ನ ಮ್ಯಾನೇಜಿಂಗ್ ಪಾರ್ಟನರ್ ರಾಹುಲ ಕೋಟಿ ಮಾತನಾಡಿ, ಭಾರತದಲ್ಲಿಯೇ ಕೋಟಿ ಸ್ಟೀಲ್ ಉನ್ನತ ಗುಣಮಟ್ಟದ 600ಡಿ ಗ್ರೇಡ್ ಟಿಎಂಟಿ ಕಬ್ಬಿಣದ ಬಾರ್ ಉತ್ಪಾದಿಸುವ ಕೆಲವೇ ಕಂಪನಿಗಳಲ್ಲಿ ಒಂದಾಗಿದೆ. 6 ಮಿ.ಮೀ ನಿಂದ 32 ಮಿ.ಮೀ. ವರೆಗೆ ಟಿಎಂಟಿ ಬಾರ್ ಹಾಗೂ 18ರಿಂದ 20 ಗೇಜ್ ಬಾಂಡಿಂಗ್ ವೈರ್‌ಗಳನ್ನು ಉತ್ಪಾದಿಸಿ ವಿವಿಧ ನಿರ್ಮಾಣ ಅಗತ್ಯ ಪೂರೈಸುತ್ತಿದ್ದೇವೆ ಎಂದರು.

ಏ.22ಕ್ಕೆ ರಕ್ತದಾನ ಶಿಬಿರ

ನವಲಗುಂದ: ನಗರದ ಸರ್ಕಾರಿ ಪ್ರಥಮ ದರ್ಜೆ ಮಹಾವಿದ್ಯಾಲಯದ ಐ.ಕ್ಯೂ.ಎ.ಸಿ, ಭಾರತೀಯ ಯುವ ರೆಡ್ ಕ್ರಾಸ್, ಎನ್. ಎಸ್.ಎಸ್, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಘಟಕಗಳು ಹಾಗೂ ಹಳೆಯ ವಿದ್ಯಾರ್ಥಿಗಳ ಸಂಘ ಮತ್ತು ರೋಟರಿ ಬ್ಲಾಡ್ ಬ್ಯಾಂಕ್ ಧಾರವಾಡ ಇವುಗಳ ಸಂಯುಕ್ತಾಶ್ರಯದಲ್ಲಿ ಏ.22ರಂದು ಬೆಳಗ್ಗೆ 10 ಗಂಟೆಯಿಂದ ರಕ್ತದಾನ ಶಿಬಿರವನ್ನು ಕಾಲೇಜಿನ ಆವರಣದಲ್ಲಿ ಏರ್ಪಡಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ 9742843882, 9741658356, 9620090667 ಕಾಲೇಜಿನ ಪ್ರಾಂಶುಪಾಲರು ಪ್ರಕಟಣೆ ಮೂಲಕ ತಿಳಿಸಿದ್ದಾರೆ.

ಏ.23ಕ್ಕೆ ಭಗೀರಥ ಜಯಂತಿ

ಧಾರವಾಡ: ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಮಹರ್ಷಿ ಭಗೀರಥ ಜಯಂತಿ ಕಾರ್ಯಕ್ರಮ ಏ.23ರಂದು ಬೆಳಗ್ಗೆ 11ಕ್ಕೆ ನಗರದ ಕರ್ನಾಟಕ ಕುಲಪುರೋಹಿತ ಆಲೂರು ವೆಂಕಟರಾವ್ ಸಾಂಸ್ಕೃತಿಕ ಭವನದಲ್ಲಿ ನಡೆಯಲಿದೆ. ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಲಾಡ್ ಉದ್ಘಾಟಿಸಲಿದ್ದು, ಶಾಸಕ ಅರವಿಂದ ಬೆಲ್ಲದ ಅಧ್ಯಕ್ಷತೆ ವಹಿಸುವರು. ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ, ವಿಪ ಸಭಾಪತಿ ಬಸವರಾಜ ಹೊರಟ್ಟಿ, ಸರ್ಕಾರದ ಮುಖ್ಯ ಸಚೇತಕ ಸಲೀಂ ಅಹ್ಮದ್, ಜಿಲ್ಲೆಯ ಶಾಸಕರು, ಸಚಿವರು, ವಿವಿಧ ನಿಗಮ ಮಂಡಳಿ ಅಧ್ಯಕ್ಷರು ಪಾಲ್ಗೊಳ್ಳಲಿದ್ದಾರೆ. ಕ್ಲಾಸಿಕ್ ಸಂಸ್ಥೆ ಅಧ್ಯಕ್ಷ ಲಕ್ಷ್ಮಣ ಉಪ್ಪಾರ ವಿಶೇಷ ಉಪನ್ಯಾಸ ನೀಡುವರು. ಇದಕ್ಕೂ ಮೊದಲ ಜಿಲ್ಲಾಧಿಕಾರಿ ಕಚೇರಿಯಿಂದ ಆರಂಭವಾಗುವ ಮಹರ್ಷಿ ಭಗೀರಥ ಭಾವಚಿತ್ರದ ಮೆರವಣಿಗೆಗೆ ಜಿಲ್ಲಾಧಿಕಾರಿ ಸ್ನೇಹಲ್ ಆರ್. ಚಾಲನೆ ನೀಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.



ಹುಬ್ಬಳ್ಳಿ: ಕಚುಸಾಪ 14ನೇ ಜಿಲ್ಲಾ ಸಮ್ಮೇಳನದ ಸರ್ವಾಧ್ಯಕ್ಷ ಶಿವಶಂಕರ ಹಿರೇಮಠ ಅವರ ನಿವಾಸಕ್ಕೆ ತೆರಳಿದ ಕಚುಸಾಪ ತಂಡ ಹಿರೇಮಠ ದಂಪತಿಗೆ ಆಮಂತ್ರಣ ಪತ್ರ ನೀಡಿ ಗೌರವಿಸಿತು. ಕೃಷ್ಣಮೂರ್ತಿ ಕುಲಕರ್ಣಿ, ಶಂಕರ ಕುಂಬಿ. ಚನ್ನಬಸಪ್ಪ ಧಾರವಾಡಶೆಟ್ರು, ಮೃತ್ಯುಂಜಯ ಮಟ್ಟಿ, ವಂದನಾ ರಮೇಶ, ಗೀತಾ ಕುಂಬಿ, ಶಂಕರ ಹಲಗತ್ತಿ ಇದ್ದರು.

ಅಂತರ್ ಕಾಲೇಜು ವಚನ ಗಾಯನ ಸ್ಪರ್ಧೆ

ಹುಬ್ಬಳ್ಳಿ: ಕೆ.ಎಲ್.ಇ. ಸಂಸ್ಥೆಯ ಶ್ರೀ ಕಾಡಸಿದ್ದೇಶ್ವರ ಕಲಾ ಮಹಾವಿದ್ಯಾಲಯ ಹಾಗೂ ಎಚ್.ಎಸ್. ಕೋತಂಬ್ರಿ ವಿಜ್ಞಾನ ಸಂಸ್ಥೆಯಲ್ಲಿ ತ್ಯಾಗವೀರ ಶಿರಸಂಗಿ ಲಿಂಗರಾಜರ ಜಯಂತಿ ಹಾಗೂ ಶ್ರೀ ಗುದ್ಲೆಪ್ಪ ಹಳ್ಳಿಕೇರಿ ಸ್ಮಾರಕ ಅಂತರ್ ಕಾಲೇಜು ವಚನ ಗಾಯನ ಸ್ಪರ್ಧೆ ಮಹಾವಿದ್ಯಾಲಯದ ಸಭಾಭವನದಲ್ಲಿ ಯಶಸ್ವಿಯಾಗಿ ಜರಗಿತು.

ನಿವೃತ್ತ ಪ್ರಾಚಾರ್ಯ, ಸಿಂಡಿಕೇಟ್ ಸದಸ್ಯ ಡಾ. ಲಿಂಗರಾಜ ಸಿ. ಮುಳ್ಳಳ್ಳಿ ಅವರು ತ್ಯಾಗವೀರ ಶಿರಸಂಗಿ ಲಿಂಗರಾಜರ ಅವರನ್ನು ಸ್ಮರಿಸಿವುದರ ಜೊತೆಗೆ ವಚನ ಸಾಹಿತ್ಯದ ಮಹತ್ವವನ್ನು ವಿವರಿಸಿ, ವಿದ್ಯಾರ್ಥಿಗಳು ಇಂತಹ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುವಂತೆ ಹೇಳಿದರು. ಸಂಸ್ಥಾಪಕ ಕಾರ್ಯದರ್ಶಿ ವೀರಣ್ಣ ಚಕ್ಕಿ ಅವರು ಬಸವಣ್ಣರ ವಚನಗಳ ಸಾಮಾಜಿಕ ಸಂದೇಶಗಳನ್ನು ಕುರಿತು ಮಾತನಾಡಿ, ಯುವಜನತೆಗೆ ಮೌಲ್ಯಾಧಾರಿತ ಬದುಕಿನ ಅಗತ್ಯತೆಯನ್ನು ತಿಳಿಸಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಪ್ರಾಚಾರ್ಯ ಸುಮಂಗಲಾ ಬಿ. ಪಾಟೀಲ ಅವರು ವಿದ್ಯಾರ್ಥಿಗಳ ಪ್ರತಿಭೆಯನ್ನು ಮೆಚ್ಚಿ ಇಂತಹ ಸ್ಪರ್ಧೆಗಳು ವ್ಯಕ್ತಿತ್ವ ವಿಕಾಸಕ್ಕೆ ನೆರವಾಗುತ್ತವೆ ಎಂದರು.

ಅಂತರ್ ಕಾಲೇಜು ವಚನ ಗಾಯನ ಸ್ಪರ್ಧೆಯಲ್ಲಿ ವಿವಿಧ ಕಾಲೇಜುಗಳ ವಿದ್ಯಾರ್ಥಿಗಳು ಭಾಗವಹಿಸಿ ತಮ್ಮ ಗಾಯನ ಕೌಶಲ್ಯವನ್ನು ಪ್ರದರ್ಶಿಸಿದರು. ಕನ್ನಡ ವಿಭಾಗದ ಮುಖ್ಯಸ್ಥ ಡಾ. ಎಸ್. ಬಿ. ಬೆಟಗೇರಿ, ಕಾಲೇಜು ಒಕ್ಕೂಟದ ಕಾರ್ಯಾಧ್ಯಕ್ಷ ಎಸ್. ಎನ್. ಎಮ್ಮಿ ಹಾಗೂ ಪದವಿಪೂರ್ವ ಪ್ರಾಂಶುಪಾಲ ಡಾ. ಬಾಜಿರಾವ ಕಾಂಬಳೆ, ಡಾ. ಈರಣ್ಣ ಪೂಜಾರ ಮತ್ತು ಉಪನ್ಯಾಸಕರು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.



ಹುಬ್ಬಳ್ಳಿ: ಹುಬ್ಬಳ್ಳಿ-ಧಾರವಾಡ ಪೂರ್ವ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ವಾರ್ಡ್ ನಂ. 73 ರ ಪಾಲಿಕೆ ಸದಸ್ಯೆ ಶೀಲಾ ಕಾಟಕರ ನೇತೃತ್ವದಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ದಿನ ಆಚರಿಸಲಾಯಿತು. ಸಮಾರಂಭದ ಅಧ್ಯಕ್ಷತೆಯನ್ನು ಪೂರ್ವ ಕ್ಷೇತ್ರದ ಬಿಜೆಪಿ ಅಧ್ಯಕ್ಷ ಮಂಜುನಾಥ ಕಾಟಕರ ವಹಿಸಿದ್ದರು. ಬಿಜೆಪಿ ಮುಖಂಡ ಲಕ್ಷ್ಮಣ ಬಿಳಗಿ ಪುಷ್ಪಾರ್ಚನೆ ಮಾಡಿದರು. ಪೌರ ಕಾರ್ಮಿಕರಿಗೆ ಸನ್ಮಾನಿಸಲಾಯಿತು. ಮುಖಂಡರಾದ ಗುರಪ್ಪ ಗೌಡರ್, ಮಲ್ಲೇಶಪ್ಪ ಬಂಕಾಪುರ್, ಹು-ಧಾ ಪೂರ್ವ ಮಂಡಲ ವಕ್ತಾರ ಲಕ್ಷ್ಮೀಕಾಂತ ಘೋಡಕೆ ಇತರರಿದ್ದರು.

ಆರೂಢ ಆರತಿಗೆ ಚಾಲನೆ | ಶಂಕರ ಪಾಟೀಲ ಮುನೇನಕೊಪ್ಪ ಅಭಿಮತ

ಆರೂಢ ಆರತಿ ಧರ್ಮದ ಸಂಕೇತ

ಹುಬ್ಬಳ್ಳಿ: ಸಿದ್ಧಾರೂಢ ಸ್ವಾಮಿ ಮಠದ ಈ ಪವಿತ್ರ ಪುಷ್ಕರಣಿಯಲ್ಲಿ ನಡೆಯುತ್ತಿರುವ ಆರೂಢ ಆರತಿ ಧರ್ಮ ಜಾಗೃತಿ ಸಂಕೇತವಾಗಿದೆ ಎಂದು ಮಾಜಿ ಸಚಿವ ಶಂಕರ ಪಾಟೀಲ ಮುನೇನಕೊಪ್ಪ ಹೇಳಿದರು.

ಸಿದ್ಧಾರೂಢ ಸ್ವಾಮಿ ಮಠ ಟ್ರಸ್ಟ್ ಕಮಿಟಿ ವತಿಯಿಂದ ಶ್ರೀಮಠದ ಪುಷ್ಕರಣಿ ಹತ್ತಿರ ನಡೆದ ಆರೂಢ ಆರತಿಗೆ ಚಾಲನೆ ನೀಡಿ ಮಾತನಾಡಿದ ಅವರು, ಸಿದ್ಧಾರೂಢ ಮಠದಲ್ಲಿ ಇಡೀ ವರ್ಷ ಪೂಜ್ಯರಿಂದ ಪ್ರವಚನ ನಡೆಯುತ್ತಿರುವುದು ಮಾನವ ಕುಲಕ್ಕೆ ಸಂಸ್ಕಾರ ಭಕ್ತಿಯ ಮಾರ್ಗದರ್ಶನವಾಗಿದೆ ಎಂದರು.

ಶ್ರೀಮಠದ ಭಕ್ತರ ಮೇಲ್ಮನೆ ಸಭಾದ ಅಧ್ಯಕ್ಷ ಡಿ.ಆರ್.ಪಾಟೀಲ ಮಾತನಾಡಿ, ಶ್ರೀಮಠದಲ್ಲಿ ಸದಾ 24 ಗಂಟೆ ''ಓಂ ನಮಃ ಶಿವಾಯ'' ಪಠಣದಿಂದ ಮಾನವ ಕುಲಕ್ಕೆ ಹೊಸ ಚೈತನ್ಯ ದೊರಕಿದೆ ಎಂದರು.



» ಸಿದ್ಧಾರೂಢ ಸ್ವಾಮೀಜಿ ಹಾಗೂ ಮೌನಯೋಗಿ ಗುರುನಾಥಾರೂಢ ಸ್ವಾಮೀಜಿ ಮಠದ ಆವರಣದಲ್ಲಿರುವ ಪುಷ್ಕರಣಿಯಲ್ಲಿ ''ಆರೂಢ ಆರತಿ'' ಸಾವಿರಾರು ಭಕ್ತರ ಸಮ್ಮುಖದಲ್ಲಿ ನಡೆಯಿತು.

» ಈ ಕಾರ್ಯಕ್ರಮದ ಹಿರಿಯ ಧರ್ಮದರ್ಶಿ ಶಾಮಾನಂದ ಬಾ. ಪೂಜೇರಿ, ವೈಸ್-ಚೇರ್‌ಮನ್ ಗೀತಾ ಟಿ. ಕಲಬುರ್ಗಿ, ಧರ್ಮದರ್ಶಿ ಉದಯಕುಮಾರ ಡಿ. ನಾಯಕ ನೆರವೇರಿಸಿದರು

ಅಧ್ಯಕ್ಷತೆಯನ್ನು ಟ್ರಸ್ಟ್ ಕಮಿಟಿಯ ಚೇರಮನ್ ಬಾಳು ಟಿ. ಮಗಜಿಕೊಂಡಿ ಇವರು ವಹಿಸಿದ್ದರು. ಸಾನಿಧ್ಯವನ್ನು ಶಾಂತಶ್ರಮ ಅಭಿನವ ಸಿದ್ಧಾರೂಢ ಸ್ವಾಮೀಜಿ ವಹಿಸಿದ್ದರು. ಈ ಸಂದರ್ಭದಲ್ಲಿ ಟ್ರಸ್ಟ್ ಕಮಿಟಿಯ ಗೌರವ ಕಾರ್ಯದರ್ಶಿ ವಿನಾಯಕ ಅ. ಘೋಡಕೆ, ಧರ್ಮದರ್ಶಿ ಚನ್ನವೀರ ಡಿ. ಮುಂಗುರವಾಡಿ, ಮಂಜುನಾಥ ಎಸ್. ಮುನವಳ್ಳಿ, ಬಸವರಾಜ ಸಿ. ಕಲ್ಯಾಣಶೆಟ್ಟರ, ಮಾಜಿ ಧರ್ಮದರ್ಶಿ ಎಸ್.ಐ.ಕೋಳಕೂರ ಇದ್ದರು.

ದಮನಿತರ ಧ್ವನಿಯಾಗಿದ್ದ ಅಂಬೇಡ್ಕರ್

ಕಲಘಟಗಿ: ಅಂಬೇಡ್ಕರ್ ಅವರ ಚಿಂತನೆಗಳು ಸಮಾನತೆ ಮತ್ತು ಶಿಕ್ಷಣದ ಮಹತ್ವವನ್ನು ಸಮಾಜಕ್ಕೆ ತೋರಿಸಿಕೊಟ್ಟಿವೆ. ಬಾಬಾಸಾಹೇಬ ಅಂಬೇಡ್ಕರ್ ದಮನಿತರ ಧ್ವನಿಯಾಗಿದ್ದರು ಎಂದು ಡಾ. ಸದಾಶಿವ ಮರ್ಜಿ ಹೇಳಿದರು.

ಅವರು ಪಟ್ಟಣದ ಗುಡ್ ನ್ಯೂಸ್ ಕಾಲೇಜಿನಲ್ಲಿ ಅಂಬೇಡ್ಕರ್ ಜಯಂತಿ ಅಂಗವಾಗಿ ನಡೆದ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಮಾತನಾಡಿ, ಡಾ. ಬಾಬಾಸಾಹೇಬ ಅಂಬೇಡ್ಕರ್ ಅವರ ಹೋರಾಟಮಯ ಜೀವನ, ಸಾಮಾಜಿಕ ನ್ಯಾಯಕ್ಕಾಗಿ ಅವರು ನಡೆಸಿದ ಅನನ್ಯ ಸೇವೆ ಹಾಗೂ ಸಾಧನೆಗಳನ್ನು ವಿವರಿಸಿದರು.

ಕೆಯುಡಿ ಸಿಂಡಿಕೇಟ್ ಸದಸ್ಯ ಸದಾನಂದ ಚಿಂತಾಮಣಿ ಮಾತನಾಡಿ, ಅಂಬೇಡ್ಕರ್ ಅವರ ಚಿಂತನೆಗಳು ಇಂದಿನ ಸಮಾಜಕ್ಕೂ ಅತ್ಯಂತ ಪ್ರಸ್ತುತವಾಗಿವೆ. ಅಂಬೇಡ್ಕರ್ ಅವರ ಆದರ್ಶಗಳನ್ನು ಎಲ್ಲರೂ ಅಳವಡಿಸಿಕೊಂಡು ಸಮಾಜದಲ್ಲಿ ಸಮಾನತೆ ಮತ್ತು ಸಹಭಾಗಿತ್ವವನ್ನು ಬಲಪಡಿಸಬೇಕು ಎಂದರು.

ಅಂಬೇಡ್ಕರ್ ಜಯಂತಿ ಪ್ರಯುಕ್ತ ಆಧುನಿಕ ಭಾರತದಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಅವರ ಕೊಡುಗೆಗಳು ಎಂಬ ವಿಷಯದ ಮೇಲೆ ಪ್ರಬಂಧ ಏರ್ಪಡಿಸಲಾಗಿತ್ತು. ಸ್ಪರ್ಧೆಯ ವಿಜೇತ ವಿದ್ಯಾರ್ಥಿಗಳಾದ ರೋಶನಿ ನಾಯ್ಕರ, ಸರಸ್ವತಿ ಅಂಬಾಯಿ, ತನುಜಾ ಹರಿಜನ, ಆರ್. ಕಾತುನಬಿ ಪಾನಿಬಂದ, ಪ್ರತಿಭಾ ಚಿಕ್ಕಮಠ ಅವರಿಗೆ ಕಾರ್ಯಕ್ರಮದಲ್ಲಿ ನಗದು ಬಹುಮಾನ ವಿತರಿಸಲಾಯಿತು. ರೆ. ಬ್ರ. ಅರುಲಾನಂದಂ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಪ್ರಾಚಾರ್ಯ ಡಾ. ಮಹೇಶ ಧ. ಹೊರಕೇರಿ ಸ್ವಾಗತಿಸಿದರು. ಎಸ್ಸಿ ಎಸ್ಟಿ ಘಟಕದ ಸಂಯೋಜಕ ಶಶಿಕುಮಾರ್ ಕಟ್ಟಿಮನಿ, ಲಕ್ಷ್ಮೀ ಅಪ್ಪಣ್ಣವರ, ಮಹಾದೇವ ಉಳ್ಳಾಗಡ್ಡಿ, ರೈಮಾನಸಾಬ ಗೋಲಳ್ಳಿ, ಕುಲ್ಸುಂಬಿ ಶೇಕ್, ಸಂಧ್ಯಾ ಗಾಂವ್ಕರ್, ಮಹಾಂತೇಶ ನಿಂಬಣ್ಣವರ, ಶಶೀಧರಯ್ಯ ಹೆಬ್ಬಳ್ಳಿಮಠ, ಅಕ್ಷತಾ ಕುಬ್ಯಾಳ್, ಎಸ್.ಎಸ್. ಸುತಗಟ್ಟಿ, ಪ್ರಕಾಶ್ ನೆನಕ್ಕಿ, ಜಾಕೋಬ್ ದೊಡ್ಡಬುಟ್ಟಿ, ರವಿ ಹಂಡಿಯವರ, ವಿದ್ಯಾರ್ಥಿನಿಯರಾದ ಅಶ್ವಿನಿ ಮಾಳಗಿ ನಿರೂಪಿಸಿದರು, ಅನ್ನಪೂರ್ಣ ಹೀರೆಮಠ ವಂದಿಸಿದರು.



ಬಸವೇಶ್ವರರ ಜಯಂತ್ಯುತ್ಸವ: ಭವ್ಯ ಮೆರವಣಿಗೆ

ಕುಂದಗೋಳ: ಜಗಜ್ಯೋತಿ ಬಸವೇಶ್ವರರ 893ನೇ ಜಯಂತ್ಯುತ್ಸವದ ಅಂಗವಾಗಿ ಏ.20 ರಂದು ಪಟ್ಟಣದದಲ್ಲಿ ಭವ್ಯ ಮೆರವಣಿಗೆ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

ಶಿವಾಜಿನಗರ ಕಿಲ್ಲಾ ಓಣಿಯ ಶಂಭುಲಿಂಗೇಶ್ವರ ದೇವಸ್ಥಾನದ ಆವರಣದಿಂದ ಮಧ್ಯಾಹ್ನ 4 ಗಂಟೆಗೆ ಮೆರವಣಿಗೆ ಆರಂಭವಾಗಲಿದ್ದು, ಬಸವೇಶ್ವರರ ಮೂರ್ತಿಯೊಂದಿಗೆ ಎತ್ತಿನ ಬಂಡಿ ಬಸವೇಶ್ವರ ಭಾವಚಿತ್ರದೊಂದಿಗೆ ವಿವಿಧ ವಾದ್ಯಮೇಳಗಳೊಂದಿಗೆ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಅದ್ದೂರಿಯಾಗಿ ಮೆರವಣಿಗೆನಡೆಯಲಿದೆ. ಕಾರ್ಯಕ್ರಮದಲ್ಲಿ ಪಟ್ಟಣದ ಸೇರಿದಂತೆ ತಾಲೂಕಿನ ವಿವಿಧ ಗ್ರಾಮಗಳ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ಬಸವ ಸೇನೆ, ಬಿಎಸ್ ಗ್ರೂಪ್ ಬಸವೇಶ್ವರ ಉತ್ಸವ ಸಮಿತಿಯಿಂದ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಲಾಗಿದೆ.



ಧಾರವಾಡ: ಚನ್ನಬಸವೇಶ್ವರ ನಗರದ ಅಖಿಲ ಭಾರತ ವೀರಶೈವ-ಲಿಂಗಾಯತ ಮಹಾಸಭಾ ಭವನದಲ್ಲಿ ಡಾ. ಬಿ.ಆರ್.ಅಂಬೇಡ್ಕರ್ ಜಯಂತಿ ನಡೆಯಿತು. ಶಂಕರ ಕುಂಬಿ ಸಂವಿಧಾನ ಪೀಠಿಕೆ ವಾಚಿಸಿದರು. ಪದಾಧಿಕಾರಿಗಳಾದ ಶಿವಶರಣ ಕಲಬಶೆಟ್ಟರ್, ನಿಂಗನಗೌಡ ಬಿರಾದಾರ, ಬಸವರಾಜ ಗೊಲ್ಲಪ್ಪನವರ, ಮಹೇಶ ಬಿಳೆಹಾಳ, ಮಂಜುನಾಥ ಮಗ್ಗನವರ, ವಿಜಯ ಉಪನಾಳ ಇತರರಿದ್ದರು.



ಧಾರವಾಡ: ಜೆ.ಎಸ್.ಎಸ್ ನಲ್ಲಿ ಎಪ್ರಿಲ್ 25 ರಂದು ಜರುಗಲಿರುವ ಓಯ್ಸರ್ ಅಣಬೆ ಕೃಷಿ ಪ್ರಾಯೋಗಿಕ ತರಬೇತಿಯ ಕಮ್ಮಟ ಕುರಿತ ಭಿತ್ತಿಪತ್ರವನ್ನು ಡಾ. ಅಜಿತ ಪ್ರಸಾದ ಅವರು ಬಿಡುಗಡೆ ಮಾಡಿದರು. ಡಾ. ಸೂರಜ ಜೈನ, ಮಹಾವೀರ ಉಪಾಧ್ಯೆ, ಡಾ. ರತ್ನಾ ಐರಸಂಗ, ಬಿಂದುಶ್ರೀ ಬಿ., ಡಾ. ಜಿನ್ನಪ್ಪ ಕುಂದಗೋಳ, ವರುಣ ವಿಶ್ವನಾಥ, ಡಾ. ಜಯಶ್ರೀ ಕುರಂದವಾಡ ಉಪಸ್ಥಿತರಿದ್ದರು.

ಪೋಡಿ ಮಾಡಿಕೊಡಲು ವಿಳಂಬ: ಸುಭಾಷ್ ಸುಣಗಾರ್

ಕಲಘಟಗಿ: ಕಳೆದಮೂರುವರ್ಷಗಳಿಂದಲೂ ತಮ್ಮ ಜಮೀನುಗಳಿಗೆ ಆಕಾರ ನಿಗದಿಪಡಿಸಿ ಪೋಡಿ ಮಾಡಿಕೊಡಲು ವಿಳಂಬ ಮಾಡುತ್ತಿರುವುದನ್ನು ಖಂಡಿಸಿ ತಾಲೂಕಿನ ಹುಲ್ಲಂಬಿ ಗ್ರಾಮದ ರೈತರು ಏ. 20ರಂದು ಬೆಂಗಳೂರು ವಿಧಾನಸೌಧದ ಎದುರು ಧರಣೆ ಮಾಡಲು ನಿರ್ಧರಿಸಿರುವುದಾಗಿ ರೈತ ಸುಭಾಷ್ ಸುಣಗಾರ್ ಹೇಳಿದರು.

ಪಟ್ಟಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಹುಲ್ಲಂಬಿ ಗ್ರಾಮದ ರಿ.ಸ.ನಂ. 23ರ 59 ಎಕರೆ, ರಿ.ಸಿ.ನಂ.ರ 121 ಎಕರೆ, 32 ಗುಂಟೆ ಜಮೀನಿನಲ್ಲಿ ಹಲವಾರು ರೈತರು ದಶಕಗಳಿಂದಲೂ ಸಾಗುವಳಿ ಮಾಡಿಕೊಳ್ಳುತ್ತಾ ಬಂದಿದ್ದಾರೆ. ಕಂದಾಯ ಇಲಾಖೆಗೆ ಅರ್ಜಿ ಸಲ್ಲಿಸಿ ಓಡಾಡಿ ಸುಸ್ತಾಗಿದೆ. ಸಂಬಂಧಿಸಿದ ಅಧಿಕಾರಿಗಳು ನಿರ್ಲಕ್ಷಿಸಿದ ಕಾರಣ ಬೆಂಗಳೂರಿಗೆ ತೆರಳಿ ವಿಧಾನಸೌಧದ ಎದುರು ಧರಣಿ ಮಾಡಲು ನಿರ್ಧರಿಸಿದ್ದೇವೆ ಎಂದರು.

ರೈತರಾದ ಬಸಪ್ಪ ಬಿಸರಳ್ಳಿ, ರಾಚಪ್ಪ ಬಿಸರಳ್ಳಿ, ನಾಗಪ್ಪ ಶಿಗ್ಗಟ್ಟಿ, ಸಹದೇವಪ್ಪ ಹೊನ್ನೆಹಳ್ಳಿ, ಶಿವಪ್ಪ ಮಲ್ಲಾಡದ, ಸಿದ್ದಯ್ಯ ಕಂಬೂರ, ಶಂಕ್ರಪ್ಪ ನಡುವಿನಮನಿ ಸೇರಿದಂತೆ ಇತರರಿದ್ದರು.



ಮೇಳಮ್ಮ ದೇವಿಯರ ಮೂರ್ತಿ ಮೆರವಣಿಗೆ

ಉಪ್ಪಿನಬೆಟಗೇರಿ: ಸಮೀಪ ಹನುಮನಹಾಳ ಗ್ರಾಮದ ಉಭಯ ದೇವಿಗಳಾದ ಮೇಳಮ್ಮ ದೇವಿಯರ ನೂತನ ಮೂರ್ತಿಗಳ ಮೆರವಣಿಗೆಗೆ ಇನಾಂಹೊಂಗಲ ವಿರಕ್ತಮಠದ ಸಿದ್ಧಲಿಂಗೇಶ್ವರ ಸ್ವಾಮೀಜಿಯವರು ಶನಿವಾರದಂದು ಚಾಲನೆ ನೀಡಿದರು. ಸ್ಥಳೀಯ ಸಮುದಾಯ ಭವನದಲ್ಲಿದ್ದ ಮೂರ್ತಿಗಳನ್ನು ಗ್ರಾಮಸ್ಥರು ಪೂರ್ಣಕುಂಭ, ಆರುತಿ ಮಂಗಳಕರ ವಾದ್ಯ, ಹೆಜ್ಜೆ ಮಜೇಲು ಹಾಗೂ ಮಹಿಳೆಯರು ಕುಂಭದೊಂದಿಗೆ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಮೇಳಮ್ಮದೇವಿ ಹಾಗೂ ಸಣ್ಣ ಮೇಳಮ್ಮರ ಪುರಪ್ರವೇಶ ಕಾರ್ಯಕ್ರಮ ಜರುಗಿತು. ಮೆರವಣಿಗೆಯಲ್ಲಿ ಚಣ್ಣರು, ಯುವಕರು ಪರಸ್ಪರವಾಗಿ ಭಂಡಾರ ಎರಚಿ ಸಂಭ್ರಮಿಸಿದರು. ನಂತರ ಸೇರಿದ ಭಕ್ತಾದಿಗಳಿಗೆ ನಿರಂತರ ಪ್ರಸಾದ ವ್ಯವಸ್ಥೆ ಮಾಡಲಾಗಿದೆ. ಉತ್ಸವದಲ್ಲಿ ಹನುಮನಹಾಳ ಹಾಗೂ ಸುತ್ತಮುತ್ತಲಿನ ಗ್ರಾಮಸ್ಥರು ಪಾಲ್ಗೊಂಡಿದ್ದರು.



ಶ್ರೀ ಶಂಕರ ಕಾಲೇಜು ಚಾಂಪಿಯನ್



ನವಲಗುಂದ: ಅಣ್ಣಿಗೇರಿಯ ಶ್ರೀ. ಎಂ.ಬಿ. ಹಳ್ಳಿ ಸರ್ಕಾರಿ ಪ್ರಥಮ ದರ್ಜೆ ಮಹಾವಿದ್ಯಾಲಯದಲ್ಲಿ ಜರುಗಿದ ಕರ್ನಾಟಕ ವಿಶ್ವವಿದ್ಯಾಲಯದ ಎರಡನೇ ವಲಯ ಮಟ್ಟದ ಪುರುಷರ ವಾಲಿಬಾಲ್ ಪಂದ್ಯಾವಳಿಯ ಫೈನಲ್ ಪಂದ್ಯದಲ್ಲಿ ನವಲಗುಂದ ನಗರದ ಶ್ರೀ ಶಂಕರ ಮಹಾವಿದ್ಯಾಲಯ ತಂಡವು ಹುಬ್ಬಳ್ಳಿಯ ಕೆ.ಎಸ್.ಎಸ್. ಪದವಿ ಮಹಾವಿದ್ಯಾಲಯದ ತಂಡವನ್ನು ಪರಾಭವಗೊಳಿಸಿ ಪ್ರಥಮ ಸ್ಥಾನವನ್ನು ಪಡೆದಿದೆ. ಮಹಾವಿದ್ಯಾಲಯದ ವಾಲಿಬಾಲ್ ತಂಡ ಪ್ರಶಸ್ತಿ ಪಡೆದಿದ್ದಕ್ಕೆ ಹಾಗೂ ಕಾಲೇಜಿನ ದೈಹಿಕ ನಿರ್ದೇಶಕ ಡಾ. ಎ. ಜಿ. ಜಕ್ಕನಗೌಡ್ರ ಅವರ ಬಗ್ಗೆ ಸಂಸ್ಥೆಯ ಆಡಳಿತ ಮಂಡಳಿಯವರು, ಪ್ರಾಚಾರ್ಯ ಡಾ. ಎಸ್. ವಿ. ಬಡಿಗೇರ, ಪ್ರಾಧ್ಯಾಪಕರು-ಪ್ರಾಧ್ಯಾಪಕೇತರ ಸಿಬ್ಬಂದಿ ಮತ್ತು ಕಾಲೇಜಿನ ವಿದ್ಯಾರ್ಥಿಗಳು ಹರ್ಷವ್ಯಕ್ತಪಡಿಸಿದ್ದಾರೆ.

2026ರ ಮನೆಪಟ್ಟಿ ಗಣತಿಗೆ ಚಾಲನೆ



ನವಲಗುಂದ: ತಾಲೂಕಿನ ಜಾವೂರ ಗ್ರಾಮದಲ್ಲಿ 2026ರ ಮನೆಪಟ್ಟಿ ಗಣತಿ ಕಾರ್ಯಕ್ಕೆ ತಾಲೂಕು ಕಾರ್ಯ ನಿರ್ವಹಣಾಧಿಕಾರಿ ರವೀಂದ್ರಗೌಡ ಪಾಟೀಲ ಅವರು ಶನಿವಾರ ಅಧಿಕೃತವಾಗಿ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ಗಣತಿ ಕಾರ್ಯವು ಸರ್ಕಾರದ ಯೋಜನೆಗಳ ಪರಿಣಾಮಕಾರಿ ಅನುಷ್ಠಾನಕ್ಕೆ ಅತ್ಯಂತ ಮುಖ್ಯವಾಗಿದ್ದು, ಸಾರ್ವಜನಿಕರು ಪೂರ್ಣ ಸಹಕಾರ ನೀಡಬೇಕು ಎಂದರು. ಕರ್ನಾಟಕ ರಾಜ್ಯ ಸರ್ಕಾರಿ ನೌಕರ ಸಂಘ ತಾಲೂಕು ಘಟಕದ ಅಧ್ಯಕ್ಷ ವಿ.ಡಿ. ರಂಗಣ್ಣವರ ಮಾತನಾಡಿದರು. ಗಣತಿದಾರರಾಗಿ ಎಸ್.ಎನ್. ಅಕ್ಕಿಮರಡಿ, ಜಿ.ಎ. ಬೆಳಹಾರ ಹಾಗೂ ಕುಮಾರಿ ಸರಿತಾ ಕೊಪ್ಪದ ಅವರು ಕಾರ್ಯನಿರ್ವಹಿಸುತ್ತಿದ್ದು, ಪಿಡಿಒ ವಿಜಯಲಕ್ಷ್ಮೀ ಕೊರವಾರ ಹಾಗೂ ಗ್ರಾಮ ಲೆಕ್ಕಿಗ ಸತೀಶ್ ಕೋರಿ ಪಾಲ್ಗೊಂಡಿದ್ದರು. ಜಾವೂರ ಗ್ರಾಮದಿಂದ ಗಣತಿ ಪ್ರಾರಂಭಿಸಲಾಯಿತು.

ಇಂದಿನಿಂದ ನೀರಿನಲ್ಲಿ ವ್ಯತ್ಯಯ

ಹುಬ್ಬಳ್ಳಿ: ಧಾರವಾಡ ನಗರದ ಗಾಂಧಿನಗರ ಸಿಗ್ನಲ್‌ನಲ್ಲಿ 45 ವರ್ಷಗಳಿಗೂ ಹಳೆಯದಾದ ಪಿಎಸ್‌ಸಿ ಮುಖ್ಯ ಕೊಳವೆ ಮಾರ್ಗ ಆಕಸ್ಮಿಕವಾಗಿ ಒಡೆದಿದ್ದು, ದುರಸ್ತಿ ಕಾರ್ಯವನ್ನು ಕೈಗೊಳ್ಳಲಾಗುತ್ತಿರುವುದರಿಂದ ಏ.19 ಮತ್ತು 20 ರಂದು ನೀರಿನಲ್ಲಿ ವ್ಯತ್ಯಯ ಉಂಟಾಗಲಿದೆ.

ಧಾರವಾಡ ನಗರದ ಗಾಂಧಿನಗರ, ಯಾಲಕ್ಕಿಶೆಟ್ಟರ್ ಕಾಲೋನಿ, ವಿಠಲ ನಗರ, ವನಶ್ರೀ ನಗರ, ಉದಯಗಿರಿ, ಕೆಎಂಎಫ್, ಎಸ್‌ಡಿಎಂ ಮೆಡಿಕಲ್ ಕಾಲೇಜ್, ಡೆಂಟಲ್ ಕಾಲೇಜ್ ಸತ್ತೂರ, ನವಲೂರು ಪ್ರದೇಶದ ಮಧ್ಯಂತರ ಹಾಗೂ 24/7 ನೀರು ಸರಬರಾಜು ಭಾಗಗಳಿಗೆ ನೀರು ಸರಬರಾಜು ವ್ಯತ್ಯಯವಾಗಲಿದೆ. ಮುಂದಿನ 2 ನೀರು ಸರಬರಾಜು ವೇಳಾಪಟ್ಟಿಗಳಲ್ಲಿ ಬದಲಾವಣೆ ಮಾಡಲಾಗುವುದರಿಂದ ಸಾರ್ವಜನಿಕರು ನೀರನ್ನು ಮಿತವಾಗಿ ಬಳಸಿ ಸಹಕರಿಸುವಂತೆ ಕೆಯುಐಡಿಎಫ್‌ಸಿ ಯೋಜನಾ ಅನುಷ್ಠಾನ ಘಟಕದ ಕುಸ್ಲೆಂಪ್ ಯೋಜನೆಯ ಅಧೀಕ್ಷಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರೈಲ್ವೆ ನಿಲ್ದಾಣಕ್ಕೆ ಬೇಮಾ ಮೀನಾ ತಂಡ ಭೇಟಿ



ಹುಬ್ಬಳ್ಳಿ: ನಗರದ ಸಿದ್ಧಾರೂಢ ಸ್ವಾಮೀಜಿ ರೈಲ್ವೆ ನಿಲ್ದಾಣಕ್ಕೆ ನೈರುತ್ಯ ರೈಲ್ವೆಯ ವಿಭಾಗೀಯ ರೈಲ್ವೆ ವ್ಯವಸ್ಥಾಪಕಿ ಬೇಮಾ ಮೀನಾ ಅವರ ನೇತೃತ್ವದ ತಂಡ ಭೇಟಿ ಮಾಡಿ ಪರಿಶೀಲನೆ ನಡೆಸಿತು.

ಈ ವಿಶೇಷ ಪರಿಶೀಲನಾ ಕಾರ್ಯಾಚರಣೆಯ ವೇಳೆ ಪ್ರಯಾಣಿಕರಿಗೆ ಪ್ಲಾಟ್‌ಫಾರ್ಮ್ ಟಿಕೆಟ್ ಪಡೆದು ನಿಲ್ದಾಣ ಪ್ರವೇಶಿಸುವುದು, ಮಾನ್ಯತೆಯ ಪಾಸ್ ಅಥವಾ ಟಿಕೆಟ್ ಹೊಂದಿ ಪ್ರಯಾಣಿಸುವುದು, ಪ್ರಯಾಣಿಕರ ಸೌಲಭ್ಯಗಳ ಸರಿಯಾದ ಬಳಕೆ, ಸುರಕ್ಷತೆ ಹಾಗೂ ನಿಲ್ದಾಣ ಪರಿಸರವನ್ನು ಸ್ವಚ್ಛವಾಗಿಡುವ ಕುರಿತು ಜಾಗೃತಿ ಮೂಡಿಸಲಾಯಿತು. ಜೊತೆಗೆ ಅನಧಿಕೃತ ಪ್ರಯಾಣವನ್ನು ತಡೆಗಟ್ಟುವತ್ತ ವಿಶೇಷ ಗಮನ ಹರಿಸಲಾಯಿತು. ಪ್ರಯಾಣಿಕರಿಗೆ ಗುಣಮಟ್ಟದ ಆಹಾರವನ್ನು ಒದಗಿಸುವುದು ಹಾಗೂ ದೂರುಗಳಿಗೆ ಕಾರಣವಾಗುವ ಯಾವುದೇ ರೀತಿಯ ನಡವಳಿಕೆಯನ್ನು ತಪ್ಪಿಸುವ ಕುರಿತು ಡಿಆರ್‌ಎಂ ಅವರು ಭಾರತೀಯ ರೈಲ್ವೆ ಕೇಟರಿಂಗ್ ಮತ್ತು ಪ್ರವಾಸೋದ್ಯಮ ನಿಗಮದ ಅಧಿಕಾರಿಗಳೊಂದಿಗೆ ಚರ್ಚೆ ನಡೆಸಿದರು. ಜೊತೆಗೆ ಪ್ಯಾಂಟ್ರಿ ಕಾರ್ ಸಿಬ್ಬಂದಿಗೆ ಸ್ವಚ್ಛತೆ ಮತ್ತು ಸೇವಾ ಗುಣಮಟ್ಟವನ್ನು ಕಾಪಾಡುವಂತೆ ಅಗತ್ಯ ಸಲಹೆಗಳನ್ನು ನೀಡಿದರು. ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

ನಾಳೆ ಜಯಂತ್ಯುತ್ಸವ: ಬಿರಾದಾರ

ಧಾರವಾಡ: ಅನುಭವ ಮಂಟಪ ಸಂಘ ಹಾಗೂ ಬಸವಶಾಂತಿ ಮಿಷನ್ ಟ್ರಸ್ಟ್ ಸಹಯೋಗದಲ್ಲಿ ವಿಶ್ವಗುರು ಬಸವೇಶ್ವರ ಮತ್ತು ವೈರಾಗ್ಯನಿಧಿ ಅಕ್ಕಮಹಾದೇವಿ ಜಯಂತ್ಯುತ್ಸವ ಏ.20ರಂದು ಸಂಜೆ 5.30ಕ್ಕೆ ಯಾಲಕ್ಕಿ ಶೆಟ್ಟರ ಕಾಲೋನಿಯ ಬಸವಶಾಂತಿ ಮಿಷನ್ ಟ್ರಸ್ಟ್‌ನಲ್ಲಿ ಜರುಗಲಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅನುಭವ ಮಂಟಪದ ಮಹಿಳಾ ವೇದಿಕೆ ಮುಖ್ಯಸ್ಥೆ ಡಾ.ವೀಣಾ ಬಿರಾದಾರ, ಅಂದು ಮಧ್ಯಾಹ್ನ 3.30ಕ್ಕೆ ಅಲಂಕೃತ ರಥದಲ್ಲಿ ಬಸವೇಶ್ವರ-ಅಕ್ಕಮಹಾವಿ ಭಾವಚಿತ್ರ ಕುಳ್ಳಿಸಿದ ಭವ್ಯ ಮೆರವಣಿಗೆ ಸಪ್ತಗಿರಿ ಲೇಔಟ್ ಉದ್ಯಾನದಿಂದ ಆರಂಭವಾಗಿ ಶಂಕರಮಠ, ಕರಿಯಮ್ಮಗುಡಿ, ಹುಲ್ಲೂರ ಬಿಲ್ಡಿಂಗ್ ಮಾರ್ಗವಾಗಿ ಬಸವಶಾಂತಿ ಮಿಷನ್ ಟ್ರಸ್ಟ್ ತಲುಪಲಿದೆ. ಸಂಜೆ 5.30ಕ್ಕೆ ನಡೆಯುವ ಜಯಂತ್ಯುತ್ಸವಕ್ಕೆ ಶಾಸಕ ಅರವಿಂದ ಬೆಲ್ಲದ ಉದ್ಘಾಟಿಸಲಿದ್ದು, ಸಿಎಸ್‌ಐ ಕಾಲೇಜಿನ ಪ್ರಾಚಾರ್ಯರಾದ ಪ್ರೊ. ಶಂಭು ಹೆಗಡಾಳ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದು, ಅನುಭವ ಮಂಟಪದ ಅಧ್ಯಕ್ಷ ವಿಜಯ ಅಗಡಿ ಅಧ್ಯಕ್ಷತೆ ವಹಿಸುವುದಾಗಿ ತಿಳಿಸಿದರು. ಬಸವಶಾಂತಿ ಮಿಷನ್ ಅಧ್ಯಕ್ಷ ಮಹಾದೇವ ಹೊರಟ್ಟಿ ಭಾಗವಹಿಸಲಿದ್ದು, ಗಾಯಕ ಡಾ. ಮೃತ್ಯುಂಜಯ ಶೆಟ್ಟರ್ ಮತ್ತು ಶ್ರೀ ಸಾಯಿ ಪಿಯು ಕಾಲೇಜಿನ ಅಧ್ಯಕ್ಷೆ ಡಾ.ವೀಣಾ ಬಿರಾದಾರ ಅವರಿಗೆ ಸನ್ಮಾನ, ಎಸ್ಸೆಸ್ಸೆಲ್ಸಿ-ಪಿಯುಸಿಯಲ್ಲಿ ಹೆಚ್ಚು ಅಂಕ ಪಡೆದವರಿಗೆ ಪ್ರತಿಭಾ ಪುರಸ್ಕಾರ ನೀಡಲಾಗುವುದು ಎಂದರು. ಸುದ್ದಿಗೋಷ್ಠಿಯಲ್ಲಿ ಅನುಭವ ಮಂಟಪದ ಅಧ್ಯಕ್ಷ ವಿಜಯ ಆಗಡಿ, ಸದಯ್ಯ ಪಾಲಭಾವಿಮಠ, ಅಶೋಕ ಕೋಳಕೂರ, ಶಶಿಕಲಾ ಕೋಳಕೂರ, ಸುಮಿತ್ರಾ ಯಲಿಗಾರ, ಸುವರ್ಣಾ ಯಲಿಗಾರ, ಶ್ರೀಕಾಂತ ಯಲಿಗಾರ ಇದ್ದರು.



ಕ್ರಮ ಕೈಗೊಂಡರೆ ಹೋರಾಟ: ಎಚ್ಚರಿಕೆ



ಹುಬ್ಬಳ್ಳಿ: ದಾವಣಗೆರೆ ಉಪ ಚುನಾವಣೆ ಸಂಬಂಧಿಸಿ ಕಾಂಗ್ರೆಸ್ ಹೈಕಮಾಂಡ್ ಮುಸ್ಲಿಂ ನಾಯಕರ ವಿರುದ್ಧ ಕ್ರಮ ಕೈಗೊಳ್ಳುತ್ತಿದೆ. ಇದು ಮುಂದುವರೆದರೆ ಹೋರಾಟ ಮಾಡಲಾಗುವುದು ಎಂದು ಕರ್ನಾಟಕ ಮುಲ್ಲಾ ಅಸೋಸಿಯೇಶನ್ ಜಿಲ್ಲಾಧ್ಯಕ್ಷ ಶಮೀಮ ಅಹ್ಮದ್ ಮುಲ್ಲಾ ಎಚ್ಚರಿಕೆ ನೀಡಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ಮುಖಂಡರಾದ ಜಬ್ಬಾರ, ನಾಸೀರ್ ಅವರನ್ನು ಪಕ್ಷದಿಂದ ತೆಗೆದು ಹಾಕಲಾಯತು. ಇದೀಗ ಜಮೀರ ಅಹ್ಮದ ವಿರುದ್ಧ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಹೇಳಲಾಗುತ್ತಿದೆ. ಒಂದು ವೇಳೆ ಜಮೀರ್ ಅಹ್ಮದ ವಿರುದ್ಧ ಕ್ರಮ ಕೈಗೊಂಡರೆ ಮುಸ್ಲಿಂ ಸಮಾಜಕ್ಕೆ ಹೋರಾಟ ಅನಿವಾರ್ಯ ಆಗಲಿದೆ ಎಂದರು. ಅನೇಕ ದಲಿತ ಸಂಟನೆಗಳು ಸೇರಿಕೊಳ್ಳಲಿವೆ. ಸಲೀಂ ಅಹ್ಮದ ಅವರು ನಮ್ಮದೇ ಪಕ್ಷದ ಅಭ್ಯರ್ಥಿಯನ್ನು ಸೋಲಿಸಲು ಪಕ್ಷದ ಕೆಲ ಮುಖಂಡರು ಹುನ್ನಾರ ನಡೆಸಿದ್ದಾರೆ ಎಂದು ಆರೋಪಿಸಿದರು. ಬಹಿರಂಗವಾಗಿ ಮುಸ್ಲಿಂ ಮುಖಂಡರ ಬಗ್ಗೆ ಟೀಕೆ ಮಾಡಿದ್ದಾರೆ. ಇದು ಸರಿಯಾದ ಕ್ರಮವಲ್ಲ ಎಂದರು.

ವಿಶ್ವ ಬಹುಜನ ಧ್ವಜ ಸಂವಿಧಾನ ರಾ ಸೇನೆ ಅಧ್ಯಕ್ಷ ಸದಾನಂದ ತೇರದಾಳ ಮಾತನಾಡಿ, ಕಾಂಗ್ರೆಸ್ ಪಕ್ಷ ಹಿಂದುಳಿದ ಸಮಾಜಗಳನ್ನು ಸರಿಯಾಗಿ ನಡೆಸಿಕೊಳ್ಳದಿದ್ದರೆ ಹೋರಾಟದಲ್ಲಿ ದಲಿತ ಸಂಟನೆಗಳು ಭಾಗಿಯಾಗಲಿವೆ ಎಂದರು.

ರಮೇಶ ವಡ್ಡಪಲ್ಲಿ, ಅಬ್ದುಲ್ ಹಮೀದ ಬಂಗಾಲಿ, ಮೌಲಾಲಿ ಮುಲ್ಲಾ, ಪ್ರಕಾಶ ಕಂಜರಬಾಟ ಇದ್ದರು.

ಇಂದು ಜಯಂತ್ಯುತ್ಸವ: ಅರಕೇರಿ

ಹುಬ್ಬಳ್ಳಿ: ಶ್ರೀ ಶಿವಶರಣ ಹರಳಯ್ಯ ಸಮಗಾರ ಸಮಾಜ ಮತ್ತು ಸಾಮರಸ್ಯ ವೇದಿಕೆ ಸಹಯೋಗದಲ್ಲಿ ಏ.19 ರಂದು ಶಿವಶರಣ ಹರಳಯ್ಯನವರ 893ನೇ ಹಾಗೂ ಸಂತ ಶಿರೋಮಣಿ ರವಿದಾಸರ 650ನೇ ಜಯಂತ್ಯುತ್ಸವವನ್ನು ಏರ್ಪಡಿಸಲಾಗಿದೆ ಎಂದು ಸಮಾಜದ ಮುಖಂಡ ಪರಶುರಾಮ ಅರಕೇರಿ ತಿಳಿಸಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 9 ಕ್ಕೆ ದುರ್ಗದಬೈಲ್ ನಿಂದ ಹರಳಯ್ಯ, ಅಂಬೇಡ್ಕರ, ರವಿದಾಸರು ಸೇರಿದಂತೆ ಮಹನೀಯರ ಭಾವಚಿತ್ರ ಮೆರವಣಿಗೆ ನಡೆಯಲಿದೆ. ಬೆಳಗ್ಗೆ 11ಕ್ಕೆ ದಾಜಿಬಾನಪೇಟ ದುರ್ಗಾದೇವಿ ಕಲ್ಯಾಣ ಮಂಟಪದಲ್ಲಿ ಸಭಾ ಕಾರ್ಯಕ್ರಮ ನಡೆಯಲಿದೆ. ಮೂರುಸಾವಿರ ಮಠದ ಗುರುಸಿದ್ಧ ರಾಜಯೋಗೀಂದ್ರ ಸ್ವಾಮೀಜಿ, ಗುರುದೇವ ತಪೋವನದ ಗುರುಮಾತೆ ನಂದಾತಾಯಿ ಸಾನ್ನಿಧ್ಯ ವಹಿಸುವರು. ಕೇಂದ್ರ ಸಚಿವ ಪ್ರಹ್ಲಾದ ಜೋಶಿ, ಶಾಸಕರಾದ ಪ್ರಸಾದ ಅಬ್ಬಯ್ಯ, ಅರವಿಂದ ಬೆಲ್ಲದ, ಮಹೇಶ ಟೆಂಗಿನಕಾಯಿ ಪಾಲ್ಗೊಳ್ಳುವರು.

ಕರ್ನಾಟಕ ರಾಜ್ಯ ಸಮಗಾರ ಸಮಿತಿ ನಿಕಟಪೂರ್ವ ಅಧ್ಯಕ್ಷ ಜಗದೀಶ ಬೆಟಗೇರಿ ಉದ್ಘಾಟಿಸುವರು. ಆರ್‌ಎಸ್ಎಸ್ ಅಖಿಲ ಭಾರತ ವ್ಯವಸ್ಥಾ ಪ್ರಮುಖ ಮಂಗೇಶ ಭೆಂಡೆ ಮುಖ್ಯ ಭಾಷಣ ಮಾಡುವರು. ಸಮಾಜದ ಅಧ್ಯಕ್ಷ ರಾಜಶೇಖರ ಸಾಂಬ್ರಾಣಿ ಅಧ್ಯಕ್ಷತೆ ವಹಿಸುವರು. ಮಂಜುನಾಥ ಬೆಟಗೇರಿ, ಉಮೇಶ ಮಿರಜಕರ, ರಾಜಶೇಖರ ಸಾಂಬ್ರಾಣಿ, ವಸಂತ ಬೆಟಗೇರಿ, ಯಲ್ಲಪ್ಪ ಬಾಗಲಕೋಟ ಇದ್ದರು.



ಕಿರುಸುದ್ದಿ

ಏ.24 ರಂದು ಸಿರಿ ಸಿಂಗಾರ ಕೋಲ



ತೀರ್ಥಹಳ್ಳಿ: ಇಲ್ಲಿಯ ಕರುಣಾಪುರ– ಮೇಗರವಳ್ಳಿಯ ವೀರಕಲ್ಲುಕುಟಿಕ ದೈವಸ್ಥಾನದಲ್ಲಿ ವರ್ತೆ ವೀರ ಕಲ್ಲುಕುಟಿಕ ಮತ್ತು ಶ್ರೀ ಚೌಡೇಶ್ವರಿ ಅಮ್ಮನವರ 28ನೇ ವರ್ಷದ ಸಿರಿ ಸಿಂಗಾರ ಕೋಲ ಏ.24ರಂದು ಜರುಗಲಿದೆ. ಅಂದು ಮಧ್ಯಾಹ್ನ 2 ಗಂಟೆಯಿಂದ ತುಲಾಭಾರ ,ಹೊರೆಸೇವೆ, ಸಂಜೆ 7 ಗಂಟೆಯಿಂದ ಅನ್ನಸಂತರ್ಪಣೆ ನಡೆಯಲಿದೆ. ಏ.27 ರಂದು ಸೋಮವಾರ ರಾತ್ರಿ 7 ಗಂಟೆಗೆ ವರ್ತೆ ವೀರ ಕಲ್ಲುಕುಟಿಕ ಮತ್ತು ಶ್ರೀ ಚೌಡೇಶ್ವರಿ ಅಮ್ಮನವರಿಗೆ ಕಲಹೋಮ ನಡೆಯಲಿದೆ. ಏ.28 ರಂದು ಮಂಗಳವಾರ ಬೆಳಿಗ್ಗೆ 8.30 ಗಂಟೆಗೆ ನಾಗದೇವರಿಗೆ ಕಲಹೋಮ, ಸಾಮೂಹಿಕ ಆಶ್ಲೇಷ ಪೂಜೆ, ಮಧ್ಯಾಹ್ನ ಅನ್ನಸಂತರ್ಪಣೆ ಜರುಗಲಿದೆ ಎಂದು ಪ್ರಧಾನ ಪಾತ್ರಿಯವರಾದ ಕೆ.ಎಲ್.ಚಂದ್ರಶೇಖರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜನಪ್ರತಿನಿಧಿಗಳಿಗಿಲ್ಲ ಇಚ್ಛಾಶಕ್ತಿ | ಬಸವಾಭಿಮಾನಿಗಳಲ್ಲಿ ಬೇಸರ

ಬಸವ ಪುತ್ಥಳಿಗೆ ಬಿಡದ ಗ್ರಹಣ

▸ ಲಕ್ಷ್ಮೀಕಾಂತ್ ಕುಲಕರ್ಣಿ



ಶಾಸಕರೇ ಗಮನಹರಿಸಿ

ಈಗಿನ ಶಾಸಕ ಚನ್ನಾರಡ್ಡಿ ಪಾಟೀಲ್ ಮೇಲೆ ಸಾಕಷ್ಟು ನಂಬಿಕೆ ಇಟ್ಟುಕೊಂಡು ಬಸವಾಭಿಮಾನಿಗಳು ಗೆಲುವಿನ ದಡ ಸೇರಿಸಿದರೆ, ಬಸವ ಪುತ್ಥಳಿ ಸ್ಥಾಪನೆಗೆ ಅವಿತರ ಶ್ರಮಿಸಿದ ದಿ.ವೆಂಕಟರಡ್ಡಿ ಮುದ್ನಾಳ್ ಪರಾಭವಗೊಂಡರು. ಮುದ್ನಾಳ್ ಅವರಿಗೆ ಕೊನೆವರೆಗೂ ನಗರದಲ್ಲಿ ಬಸವೇಶ್ವರ ಮೂರ್ತಿ ಸ್ಥಾಪನೆಯಾಗಿಲ್ಲ ಎಂಬ ಕೊರಗು ಇದ್ದೇ ಇತ್ತು. ಈಗಲಾದರೂ ಜವಾಬ್ದಾರಿ ಸ್ಥಾನದಲ್ಲಿರುವ ಶಾಸಕರು ಈ ಬಗ್ಗೆ ಗಮನ ಹರಿಸುವ ಅಗತ್ಯವಿದೆ.

ದಿಗಂತ ವಿಶೇಷ

ಯಾದಗಿರಿ: ವಿಶ್ವಕ್ಕೆ ಸಮಾನತೆಯ ಸಾರಿದ 12ನೇ ಶತಮಾನದಲ್ಲಿ ತಮ್ಮ ವಚನಗಳ ಮೂಲಕ ಸಾಮಾಜಿಕ ಕ್ರಾಂತಿ ಮಾಡಿದ್ದ ಅಣ್ಣ ಬಸವಣ್ಣನ ಮೂರ್ತಿ ಸ್ಥಾಪನೆಗೆ ಜನಪ್ರತಿನಿಧಿಗಳಲ್ಲಿ ಇಚ್ಛಾಶಕ್ತಿ ಕೊರತೆ ಮುಂದುವರಿದಿದ್ದು,ಗಿರಿ ನಗರದ ಬಸವಾಭಿಮಾನಿಗಳಲ್ಲಿ ತೀವ್ರ ಬೇಸರ ಮೂಡಿಸಿದೆ.

ಯಾದಗಿರಿ ಜಿಲ್ಲೆಯಾಗಿ 16 ವರ್ಷಗಳೇ ಗತಿಸಿದರೂ ನಗರದಲ್ಲಿ ಬಸವೇಶ್ವರರ ಮೂರ್ತಿ ಸ್ಥಾಪನೆಗೆ ಇನ್ನೂ ಮುಹೂರ್ತ ಫಿಕ್ಸ್ ಆಗುತ್ತಿಲ್ಲ. ಕಾರಣ ಬಸವ ಮೂರ್ತಿ ಸ್ಥಾಪನೆಯ ಕ್ರೆಡಿಟ್ ಪಡೆದುಕೊಳ್ಳಲು ನಾ ಮುಂದು, ತಾ ಮುಂದು ಎಂದು ಇಷ್ಟು ವರ್ಷಗಳ ಕಾಲ ಸಾಮಾಜಿಕ ಹರಿಕಾರನಿಗೆ ಜನಪ್ರತಿನಿಧಿಗಳು ಅಪಮಾನ ಮಾಡುತ್ತಿರುವುದು ಸ್ಪಷ್ಟವಾಗಿದೆ.

ಯಾದಗಿರಿ ಜಿಲ್ಲೆಯಾದ ತಕ್ಷಣ ನಗರದಲ್ಲಿ ಬಸವ ಪುತ್ಥಳಿ ಸ್ಥಾಪನೆಗಾಗಿ ನಗರಸಭೆಯಲ್ಲಿ 35 ಲಕ್ಷ ರೂ. ಅನುದಾನ ಮೀಸಲಿರಿಸಲಾಯಿತು. ನಿರಂತರ 12 ವರ್ಷಗಳ ಕಾಲ ಈ ಅನುದಾನ ಅಕ್ಷರಶಃ ಕೊಳೆತು, ಕೊನೆಗೆ ಬಸವ ಭಕ್ತರ ತೀವ್ರಆಕ್ರೋಶದ ಹಿನ್ನೆಲೆಯಲ್ಲಿ 2023ರಲ್ಲಿ ಬಸವಣ್ಣನವರ ಸ್ಥಿತಪ್ರಜ್ಞ (ನಿಂತ) ಮೂರ್ತಿ ಬೆಂಗಳೂರಿನಲ್ಲಿ ಸಿದ್ಧಗೊಂಡಿತು.

ಆದರೆ, ಅದು ಯಾದಗಿರಿಗೆ ಬರುವಷ್ಟರೊಳಗೆ ವಿಧಾನಸಭೆ ಚುನಾವಣೆ ಎದುರಾಯಿತು. ಚುನಾವಣೆ ಮುಗಿದ ನಂತರ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಶಾಸಕ ಚನ್ನಾರಡ್ಡಿ ಪಾಟೀಲ್ ತುನ್ನೂರ ಮೂರ್ತಿ ನಗರಕ್ಕೆ ಬಂದಾಗ ಸೌಜನ್ಯಕ್ಕಾದರೂ ಸ್ವಾಗತಿಸಲಿಲ್ಲ. ಕೊನಗೆ ನಗರಸಭೆ ಅಧಿಕಾರಿಗಳೇ ಅದನ್ನು ನಗರದ ಹೊರ ವಲಯದಲ್ಲಿನ ದಾಸಬಾಳ ಮಠದ ಆವರಣದಲ್ಲಿ ತಾತ್ಕಾಲಿಕ ಶೆಡ್ ನಿರ್ಮಾಣ ಮಾಡಿ ನಿಲ್ಲಿಸಿದ್ದಾರೆ.

ಕಳೆದ ಮೂರು ವರ್ಷಗಳಿಂದಲೂ ಬಸವೇಶ್ವರರ ಮೂರ್ತಿ ದಾಸಬಾಳ ಮಠದಲ್ಲೇ ಇದ್ದರೂ ಅದನ್ನು ಸ್ಥಾಪನೆ ಮಾಡುವ ವಿಷಯದಲ್ಲಿ ಅಖಿಲಭಾರತವೀರಶೈವ ಲಿಂಗಾಯತ ಮಹಾಸಭಾ ಜಿಲ್ಲಾ ಘಟಕ ಮುಂದಾಗದಿರುವುದು ವರ್ತಮಾನದ ದುರಂತ.

ಪಕ್ಕದ ಶಹಾಪುರ, ಹುಣಸಗಿ ಅಷ್ಟೇ ಏಕೆ ಸಿಮೆಂಟ್ ನಗರಿ ವಾಡಿಯಲ್ಲಿ ಸಹ ಬಸವ ನೆಲೆಯೂರಿ ನಿಂತಿದ್ದಾನೆ. ಗ್ರಾಮೀಣ ಭಾಗದ ಅನೇಕ ಕಡೆ ವಿಶ್ವಗುರು ಬಂದಾಗಿದೆ. ಆದರೆ, ಗಿರಿನಗರದಲ್ಲಿ ವಚನ ಕ್ರಾಂತಿಯ ಹರಿಕಾರನನ್ನು ನಿಲ್ಲಿಸಲು ಸಂಬಂಧಿತರು ಮುಂದಾಗದೆ ತಮ್ಮ ಬೇಜವಾಬ್ದಾರಿತನ ಮುಂದುವರಿಸಿದ್ದಾರೆ ಎಂದು ಬಸವ ಭಕ್ತರು ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ.

> ನಗರದಲ್ಲಿ ಅಶ್ವಾರೂಢ ಬಸವೇಶ್ವರ ಪುತ್ಥಳಿ ಸ್ಥಾಪನೆಗಾಗಿ ಈಗಾಗಲೇ ಒಂದು ಸುತ್ತಿನ ಉನ್ನತ ಮಟ್ಟದ ಚರ್ಚೆಯಾಗಿದೆ. ಸಧ್ಯ ಈ ವಿಷಯದ ಬಗ್ಗೆ ಹೆಚ್ಚು ಹೇಳಲಾಗದು. ಮುಂದಿನ ದಿನಗಳಲ್ಲಿ ನಮ್ಮ ಕಾರ್ಯ ಅನುಷ್ಠಾನಕ್ಕೆ ತರಲಾಗುವುದು.
>
> ■ **ಚನ್ನಪ್ಪಗೌಡ ಮೋಸಂಬಿ,** ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭೆ ಜಿಲ್ಲಾಧ್ಯಕ್ಷ

ಮಹಿಳಾ ಸಮುದಾಯಕ್ಕೆ ಕಾಂಗ್ರೆಸ್ ಅಪಮಾನ: ಶೆಟ್ಟರ



ಹುಬ್ಬಳ್ಳಿ: ನಾರೀಶಕ್ತಿ ವಂದನಾ ಕಾಯ್ದೆಗೆ ಅಡ್ಡಿಯುಂಟು ಮಾಡುವ ಮೂಲಕ ಕಾಂಗ್ರೆಸ್ ನೇತೃತ್ವದ 'ಇಂಡಿ' ಮೈತ್ರಿಕೂಟ ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿಯೇ ಒಂದು ಕರಾಳ ದಿನವನ್ನು ಸೃಷ್ಟಿಸಿದೆ. ಕಾಂಗ್ರೆಸ್ ಪಕ್ಷದ ಈ ದಮನಕಾರಿ ನಡೆಯು ಕೇವಲ ಭಾರತೀಯ ನಾರಿಯರಿಗಷ್ಟೇ ಅಲ್ಲ, ಇಡೀ ವಿಶ್ವದ ಮಹಿಳಾ ಸಮುದಾಯಕ್ಕೆ ಮಾಡಿದ ಅಕ್ಷಮ್ಯ ಅಪಮಾನವಾಗಿದೆ ಎಂದು ಸಂಸದ ಜಗದೀಶ ಶೆಟ್ಟರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಈ ಕುರಿತು ಪ್ರಕಟಣೆಗೆ ತಿಳಿಸಿದ ಅವರು, ಮಹಿಳಾ ಸಬಲೀಕರಣದ ಬಗ್ಗೆ ಕಾಂಗ್ರೆಸ್ ನಾಯಕರು ವೇದಿಕೆಗಳ ಮೇಲೆ ತೋರುವ ಕಳಕಳಿ ಕೇವಲ ಮೊಸಳೆ ಕಣ್ಣೀರು ಎಂಬುದು ಅವರ ಈ ನಡೆಯಿಂದ ಸ್ಪಷ್ಟವಾಗಿ ಸಾಬೀತಾಗಿದೆ. ಮಹಿಳೆಯರಿಗೆ 33% ಮೀಸಲಾತಿ ಬಿಲ್ ಸೋಲುವ ಹಾಗೆ ಮಾಡಿದೆ ಕಾಂಗ್ರೆಸ್ ಹಾಗೂ ಮೈತ್ರಿಕೂಟ ಮಹಿಳೆಯರಿಗೆ ರಾಜಕೀಯ ಪ್ರಾತಿನಿಧ್ಯ ನೀಡುವ ವಿಚಾರ ಬಂದಾಗಲೆಲ್ಲಾ ಕಾಂಗ್ರೆಸ್ ತನ್ನ ಇಬ್ಬಗೆಯ ನೀತಿಯನ್ನು ಪ್ರದರ್ಶಿಸುತ್ತಲೇ ಬಂದಿದೆ.

ಮಹಿಳೆಯರಿಗೆ ಸಮಾನ ಹಕ್ಕು ಮತ್ತು ಪ್ರಾತಿನಿಧ್ಯ ನೀಡುವ ವಿಚಾರದಲ್ಲಿ ನಮ್ಮ ಪಕ್ಷ ಸದಾ ಬದ್ಧವಾಗಿದೆ. ಆದರೆ, ಅಧಿಕಾರದ ಲಾಲಸೆಗಾಗಿ ಮಾತೃ ಸ್ವರೂಪಿಣಿಯರ ಹಕ್ಕನ್ನು ಕಸಿದುಕೊಂಡ, ಸ್ತ್ರೀ ವಿರೋಧಿ ನೀತಿಯನ್ನು ಅನುಸರಿಸುತ್ತಿರುವ ಕಾಂಗ್ರೆಸ್ ಮತ್ತು ಅದರ ಮೈತ್ರಿಕೂಟಕ್ಕೆ ಮುಂಬರುವ ದಿನಗಳಲ್ಲಿ ದೇಶದ ಪ್ರಜ್ಞಾವಂತ ಮಹಿಳಾ ಸಮುದಾಯ ತಕ್ಕ ಪಾಠ ಕಲಿಸಲಿದೆ ಎಂದು ತಿಳಿಸಿದ್ದಾರೆ.

ಕಾಂಗ್ರೆಸ್‌ನವರ ಕರಾಳ ಮುಖ ಬಯಲು: ಟೆಂಗಿನಕಾಯಿ



ಹುಬ್ಬಳ್ಳಿ: ಮಹಿಳೆಯರ ಕುರಿತು ಕಾಂಗ್ರೆಸ್‌ನವರ ಕರಾಳ ಮುಖ ಮತ್ತೆ ಬಯಲಾಗಿದೆ. ಈ ಮುಂಚೆಯೂ ಕಾಂಗ್ರೆಸ್ ಪಕ್ಷ ಮಹಿಳಾ ವಿರೋಧಿಗಳು ಎನ್ನುವುದು ಎಲ್ಲರಿಗೂ ಗೊತ್ತಿತ್ತು. ಈಗ ಮತ್ತೆ ಸಾಬೀತಾಗಿದೆ ಎಂದು ಶಾಸಕ ಮಹೇಶ ಟೆಂಗಿನಕಾಯಿ ಕಿಡಿಕಾರಿದ್ದಾರೆ.

ಈ ಕುರಿತು ಪ್ರಕಟಣೆಗೆ ತಿಳಿಸಿದ ಅವರು, ದೇಶವು ಐತಿಹಾಸಿಕ ಮಸೂದೆಯನ್ನು ಕಳೆದುಕೊಂಡಿದೆ. ಮಹಿಳೆಯರ ದೃಷ್ಟಿಯಿಂದ ಈ ಬೆಳವಣಿಗೆ ಸಹಕಾರಿಯಾಗುತ್ತಿತ್ತು. ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ ಅಸ್ತಿತ್ವಕ್ಕೆ ಬಂದಾಗಿನಿಂದಲೂ ಕಾಂಗ್ರೆಸ್ ಪ್ರತಿಯೊಂದು ವಿಷಯಗಳನ್ನು ವಿರೋಧಿಸುತ್ತಲೇ ಬಂದಿರುವುದು ದುರ್ದೈವದ ಸಂಗತಿ. ದೇಶದ ಮಹಿಳೆಯರ ಮೀಸಲಾತಿ ಮಸೂದೆಯನ್ನು ವಿರೋಧಿಸಿ ಕಾಂಗ್ರೆಸ್ ಆತ್ಮ ವಂಚನೆ ಮಾಡಿಕೊಂಡಿದೆ ಎಂದು ಹರಿಹಾಯ್ದಿದ್ದಾರೆ.

ಸುಮಾರು 50 ವರ್ಷಗಳ ಆಳಿದ ಕಾಂಗ್ರೆಸ್ ಪಕ್ಷ ಇಂತಹ ಮಸೂದೆ ತರಲು ಸಾಧ್ಯವಾಗಿರಲಿಲ್ಲ, ಕನಿಷ್ಠ ಪಕ್ಷ ದೇಶದ ಮಹಿಳೆಯರ ಹಿತ ದೃಷ್ಟಿಯಿಂದ ಬೆಂಬಲಿಸಿದರೂ ಸಾಕಾಗಿತ್ತು. ಇಂತಹ ಉತ್ತಮ ಅವಕಾಶವನ್ನು ಇಂದು ದೇಶವು ಕಳೆದುಕೊಂಡಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ದೇಶಾದ್ಯಂತ ಈಗ ಕಾಂಗ್ರೆಸ್ ಮಹಿಳಾ ವಿರೋಧಿಎಂದು ಹಣೆಪಟ್ಟಿಯನ್ನು ಕಟ್ಟಿಕೊಂಡಿದೆ. ಮುಂದಿನ ದಿನಗಳಲ್ಲಿ ದೇಶದ ಮಹಿಳಾ ಮತದಾರರು ಕಾಂಗ್ರೆಸ್ ಪಕ್ಷಕ್ಕೆ ತಕ್ಕ ಉತ್ತರವನ್ನು ನೀಡಲಿದ್ದಾರೆ. ಒಂದು ಕಡೆ ಕರ್ನಾಟಕದಲ್ಲಿ ಮಹಿಳೆಯರ ವೋಟ್ ಬ್ಯಾಂಕ್ ಗಾಗಿ ಮಹಿಳೆಯರು ಬೇಕು. ಗಹಲಕ್ಷ್ಮಿ ಯೋಜನೆಯನ್ನು ಕರ್ನಾಟಕ ರಾಜ್ಯದಲ್ಲಿ ಜಾರಿಗೆ ತಂದು ಕೇವಲ ಎರಡು ಸಾವಿರ ರೂ.ಗಳಿಗೆ ಸೀಮಿತಗೊಳಿಸಲಾಗಿದೆ.

ವೋಟ್ ಬ್ಯಾಂಕ್ ಸಲುವಾಗಿ ಆದರೆ ಮಹಿಳಾ ಶೇ.33% ಮೀಸಲಾತಿ ಮಾತ್ರ ಬೇಡ ಅನ್ನುತ್ತಿದ್ದು, ಇದರ ಮರ್ಮವೇನು. ಗೃಹಲಕ್ಷ್ಮಿ ಹೆಸರಿನಲ್ಲಿ ರಾಜ್ಯ ಕಾಂಗ್ರೆಸ್ ಸರ್ಕಾರ ಕೋಟ್ಯಾಂತರ ಹಣವನ್ನು ಗೋಲ್ಮಾಲ್ ಮಾಡಿದ್ದು ರಾಜ್ಯದ ಜನರಿಗೆ ಗೊತ್ತಿದ್ದ ವಿಷಯ. ಈ ಎಲ್ಲ ಸಂಗತಿಗಳನ್ನು ನಾನು ವಿಧಾನಸಭೆಯ ಕಲಾಪಗಳಲ್ಲಿ ಪ್ರಸ್ತಾಪಿದ್ದೇನೆ. ಸರ್ಕಾರ ಬಾಕಿ ಹಣವನ್ನು ಬಿಡುಗಡೆ ಮಾಡದೆ ಕಾಲ ಕಳೆಯುತ್ತಿದ್ದು ಕಣ್ಮುಚ್ಚಿ ಕುಳಿತಿದ್ದು ವಿಪರ್ಯಾಸದ ಸಂಗತಿ ಎಂದು ಕಿಡಿಕಾರಿದ್ದಾರೆ.

ಪೊಲೀಸ್ ಇಲಾಖೆಯಿಂದ ತನಿಖೆ ವಿಳಂಬ: ಆರೋಪ

ಹಿಂದು ಯುವತಿ ಆತಹತ್ಯೆ ಪ್ರಕರಣ



ಸಿದ್ದಾಪುರ: ತಾಲೂಕಿನ ಬಿಕ್ಕಳಸೆಯ ಹಿಂದು ಯುವತಿ ಆತ್ಮಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸ್ ಇಲಾಖೆ ವಿಳಂಬ ಧೋರಣೆ ಮತ್ತು ತನಿಖೆಯಲ್ಲಿ ನಿರ್ಲಕ್ಷ್ಯತನ ತೋರುತ್ತಿದೆ ಎಂದು ಸಿದ್ದಾಪುರ ಬಿಜೆಪಿ ಮಂಡಲ ಘಟಕ ಆರೋಪಿಸಿದೆ.

ಶನಿವಾರ ಪಕ್ಷದ ಕಚೇರಿಯಲ್ಲಿ ಪತ್ರಿಕಾಗೋಷ್ಠಿಯಲ್ಲಿಮಾತನಾಡಿದ ಬಿಜೆಪಿ ಮಂಡಲ ಅಧ್ಯಕ್ಷ ತಿಮ್ಮಪ್ಪ ಎಂ.ಕೆ. ಅವರು, ಈ ಯುವತಿಯ ಸಾವು ಸಾಮಾನ್ಯ ಆತ್ಮಹತ್ಯೆಯಲ್ಲ, ಇದೊಂದು ವ್ಯವಸ್ಥಿತ ಲವ್ ಜಿಹಾದ್‌ವಾಗಿದೆ. ಪೊಲೀಸರು ಅಪರಾಧಿಯನ್ನು ರಕ್ಷಿಸುತ್ತಿದ್ದಾರೆ ಎಂದು ದೂರಿದರು.

ಮೃತ ಯುವತಿ ಹಿಂದುತ್ವವಾದಿಯಾಗಿದ್ದಳು. ಪ್ರತಿದಿನ ಡೈರಿಯಲ್ಲಿ ಶ್ರೀರಾಮ ಜೈರಾಮ ಎಂದು ಬರೆಯುವಷ್ಟು ಧಾರ್ಮಿಕಳಾಗಿದ್ದ ಅವಳನ್ನು ಮುಸ್ಲಿಂ ಯುವಕನೊಬ್ಬ ತಾನು ಹಿಂದು ಮತ್ತು ನಾಯ್ಕ ಜನಾಂಗದವನು ಎಂದು ಸುಳ್ಳು ಹೇಳಿ ಆರು ತಿಂಗಳ ಕಾಲ ಪ್ರೀತಿಸುವ ನಾಟಕವಾಡಿದ್ದಾನೆ. ಬೇರೆ ಕಡೆ ಮದುವೆ ನಿಶ್ಚಯವಾದಾಗಲೂ ಸುಳ್ಳು ಹೇಳಿ ನಂಬಿಸಿದ್ದ. ಕೊನೆಗೆ ಆತ ಮುಸ್ಲಿಂ ಎಂಬ ಸತ್ಯ ತಿಳಿದಾಗ ಆಕೆಗೆ ತೀವ್ರ ಆಘಾತವುಂಟಾಗಿತ್ತು ಎಂದರು.

ಯುವತಿಯ ಸಾವಿಗೂ ಮುನ್ನಾ ಯುವಕನಿಗೆ ಫೋನ್ ಮಾಡಿ ಮಾಹಿತಿ ನೀಡಿದ್ದಾಳೆ ಎನ್ನಲಾದ ಕಾಲ್ ರೆಕಾರ್ಡ್‌ಗಳಿದ್ದರೂ ಪೊಲೀಸರು ಯಾಕೆ ಮೌನವಾಗಿದ್ದಾರೆ? ಪದೇ ಪದೆ ಸ್ಟೇಷನ್‌ಗೆ ಅಲೆದರೂ ತನಿಖೆ ನಡೆಸದ ಅಧಿಕಾರಿಗಳು ಸಾಕ್ಷ್ಯಗಳನ್ನು ಮುಚ್ಚಿ ಹಾಕಲು ಪ್ರಯತ್ನಿಸುತ್ತಿದ್ದಾರೆ. ವ್ಯವಸ್ಥಿತವಾಗಿ ನಡೆಯುತ್ತಿರುವ ಇಂತಹ ಕೃತ್ಯಗಳ ಹಿಂದೆ ದೊಡ್ಡ ಜಾಲವೇ ಇರುವ ಶಂಕೆಯಿದ್ದು ನ್ಯಾಯ ಸಿಗುವವರೆಗೂ ಭಾರತೀಯ ಜನತಾ ಪಕ್ಷ ಹೋರಾಟವನ್ನು ನಿಲ್ಲಿಸುವುದಿಲ್ಲ ಎಂದರು.

ಈ ಅನ್ಯಾಯದ ವಿರುದ್ಧ ಬೃಹತ್ ಹೋರಾಟಕ್ಕೆ ಕರೆ ನೀಡಿದ ತಿಮ್ಮಪ್ಪ ಅವರು ಬರುವ ಸೋಮವಾರ ಸಿದ್ದಾಪುರ ಪೊಲೀಸ್ ಸ್ಟೇಷನ್ ಎದುರು ವಿವಿಧ ಸಂಘಟನೆಗಳ ಸಹಯೋಗದೊಂದಿಗೆ ಬೃಹತ್ ಧರಣಿ ಹಮ್ಮಿಕೊಳ್ಳಲಾಗಿದೆ. ಪೊಲೀಸರು ತಕ್ಷಣವೇ ಎಚ್ಚೆತ್ತುಕೊಂಡು ಆರೋಪಿಯನ್ನು ಬಂಧಿಸದಿದ್ದರೆ ಮುಂಬರುವ ದಿನಗಳಲ್ಲಿ ಸಿದ್ದಾಪುರ ಬಂದ್‌ಗೆ ಕರೆ ನೀಡಲಾಗುವುದು ಎಂದರು. ಈ ಸಂದರ್ಭದಲ್ಲಿ ಪಕ್ಷದ ಪ್ರಮುಖರಾದ ಗುರುರಾಜ ಶಾನಭಾಗ, ಎಸ್.ಕೆ.ಮೇಸ್ತ, ನಂದನ ಬೋರ್ಕರ, ತೋಟಪ್ಪ ನಾಯ್ಕ, ವೆಂಕಟೇಶ, ಸುರೇಶ ನಾಯ್ಕ, ಶಾಂತಕುಮಾರ ಭಟ್ಟ, ಶ್ರೀಧರನಾಯ್ಕ,ಕೃಷ್ಣಮೂರ್ತಿ ನಾಯ್ಕ,ಮಂಜುನಾಥ ಭಟ್ಟ, ಶ್ರೀನಿವಾಸ ಮಡಿವಾಳ, ಜಿ.ಬಿ.ನಾಯ್ಕ ಹಾಗೂ ಶಿವು ಕೊಂಡ್ಲಿ ಉಪಸ್ಥಿತರಿದ್ದರು.

ವಿನಯ ಕುಲಕರ್ಣಿಗೆ ಖೈದಿ ನಂಬರ್ 16110

ಬೆಂಗಳೂರು: ಬಿಜೆಪಿ ಮುಖಂಡ ಯೋಗೇಶ್ ಗೌಡ ಕೊಲೆ ಪ್ರಕರಣದಲ್ಲಿ ದೋಷಿಯಾಗಿ ಜೀವಾವಧಿ ಶಿಕ್ಷೆ ಅನುಭವಿಸುತ್ತಿರುವ ವಿನಯ ಕುಲಕರ್ಣಿಗೆ ಸೇರಿದಂತೆ 16 ಮಂದಿ ಅಪರಾಧಿಗಳಿಗೆ ಸಜಾ ಬಂಧಿ ಖೈದಿ ನಂಬರ್ ನೀಡಲಾಗಿದೆ. ಶುಕ್ರವಾರದ ಮೊದಲ ದಿನ ಜೈಲಿನಲ್ಲಿ ಊಟವಿಲ್ಲದೇ, ವಿನಯ ಕುಲಕರ್ಣಿ ಕೇವಲ ಹಣ್ಣು ತಿಂದಿದ್ದಾರೆ. ಅಲ್ಲದೆ, ರಾತ್ರಿಯಿಡಿ ನಿದ್ದೆ ಮಾಡದೆ ಚಿಂತೆಗೀಡಾಗಿದ್ದಾರೆ ಎಂದು ಮೂಲಗಳು ತಿಳಿಸಿವೆ.

ನಗರದ ಸಿಸಿಎಚ್-82 ನ್ಯಾಯಾಲಯ ವಿಧಿಸಿದ ಜೀವಾವಧಿ ಶಿಕ್ಷೆ ತೀರ್ಪು ಪ್ರಕ್ರಿಯೆ ಮುಗಿದ ನಂತರ, ಶುಕ್ರವಾರ ರಾತ್ರಿ 11 ಗಂಟೆ ಸುಮಾರಿಗೆ ಪೊಲೀಸರು ಜೈಲಿನಲ್ಲಿ ಬಿಟ್ಟು ಬಂದಿದ್ದಾರೆ, ವಿನಯ ಕುಲಕರ್ಣಿ ಸೇರಿದಂತೆ 16 ಮಂದಿ ಅಪರಾಧಿಗಳಿಗೂ ಪ್ರಸ್ತುತ ಡಿ ಬ್ಯಾರಕ್‌ನ ಕ್ವಾರಂಟೈನ್ ಸೆಲ್‌ಗೆ ಕಳುಹಿಸಲಾಗಿದೆ.

ಎರಡು ಗುಂಪುಗಳನ್ನಾಗಿ ವಿಂಗಡಿಸಿರುವ ಜೈಲು ಸಿಬ್ಬಂದಿ, ವಿನಯ ಕುಲಕರ್ಣಿ ಜತೆಗೆ ಇತರೆ ಮೂವರು ಅಪರಾಧಿಗಳನ್ನು ಒಂದು ಬ್ಯಾರಕ್‌ನಲ್ಲಿ ಇರಿಸಿದರೆ, ಪಕ್ಕದ ಬ್ಯಾರಕ್‌ನಲ್ಲಿ ಇತರೆ ಅಪರಾಧಿಗಳನ್ನು ಇರಿಸಲಾಗಿದೆ. ಮುಂದಿನ 10 ದಿನಗಳ ಕಾಲ ಎಲ್ಲರೂ ಇಲ್ಲೇ ಇರಲಿದ್ದು, ನಂತರ ಅವರನ್ನು ಬೇರೆಡೆಗೆ ಸ್ಥಳಾಂತರಿಸಲಾಗುತ್ತದೆ ಎಂದು ಮೂಲಗಳಿಂದ ತಿಳಿದುಬಂದಿದೆ.

ರಾಜಕೀಯ ಉತ್ತುಂಗದಲ್ಲಿ ಪ್ರತಿದಿನ ಐಷಾರಾಮಿ ಜೀವನ ನಡೆಸುತ್ತಿದ್ದ ವಿನಯ ಕುಲಕರ್ಣಿ ಜೈಲಿನಲ್ಲಿ ಇರಲಾಗದೆ ಶುಕ್ರವಾರ ರಾತ್ರಿಯಿಡೀ ಚಿಂತೆಗೆ ಒಳಗಾಗಿದ್ದರು. ಜತೆಗೆ ರಾತ್ರಿ ಚಪಾತಿ ಊಟ ನೀಡಲಾಗಿತ್ತು. ಸರಿಯಾಗಿ ಆಹಾರ ಸೇವಿಸದೆ ಬೇಜಾರಿನಲ್ಲಿ ಮಲಗಿದ್ದರು. ಶನಿವಾರ ಮುಂಜಾನೆ ಬೇಗ ಎದ್ದು ಸಹ ಕೈದಿಗಳೊಂದಿಗೆ ಕೊಂಚ ಚರ್ಚಿಸಿ, ಬಳಿಕ ಮೌನಕ್ಕೆ ಜಾರಿದ್ದಾರೆ. ಬೆಳಗ್ಗೆ ಸ್ವಲ್ಪ ಉಪಹಾರ ಮತ್ತು ರಾತ್ರಿಯೂ ಸಾಮಾನ್ಯ ಕೈದಿಗಳಂತೆ ಜೈಲಿನ ಊಟವನ್ನು ಸೇವಿಸಿದ್ದಾರೆ ಎಂದು ತಿಳಿದುಬಂದಿದೆ.

ದರ್ಶನ್ ಬ್ಯಾರಕ್‌ನ ಕೂಗಳತೆಯ ದೂರದಲ್ಲಿ ವಿನಯವಾಸ್ತವ್ಯ: ಚಿತ್ರದುರ್ಗ ದರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಪರಪ್ಪನ ಅಗ್ರಹಾರ ಜೈಲು ವಾಸವನ್ನು ಅನುಭವಿಸುತ್ತಿರುವ ದರ್ಶನ್ ಇರುವ ಬ್ಯಾರಕ್‌ನಿಂದ ಅದೇ ಮಾರ್ಗದಲ್ಲಿ ಮುಂದೆ ಸಾಗುವ ದಾರಿಯ ಕೂಗಳತೆಯ ದೂರದಲ್ಲೇ ವಿನಯ ಕುಲಕರ್ಣಿ ವಾಸ್ತವ್ಯದ ಬ್ಯಾರಕ್ ಇದೆ ಎಂದು ಗೊತ್ತಾಗಿದೆ.

ಅಪರಾಧಿ ಸಂಖ್ಯೆ

- ವಿಕ್ರಂ ಬಳ್ಳಾರಿ - 16097
- ಕೀರ್ತಿ ಕುಮಾರ್ ಬೆಳ್ಳಟ್ಟಿ - 16098
- ಸಂದೀಪ್ ಸವದತ್ತಿ - 16099
- ವಿನಾಯಕ ಕಟಗಿ - 16100
- ಮಹಾಬಲೇಶ್ವರ ಹೊಂಗಳೇ- 16101
- ಸಂತೋಷ ಸವದತ್ತಿ - 16102
- ದಿನೇಶ್ - 16103
- ಅಶ್ವಥ್ - 16104
- ಸುನಿಲ್ - 16105
- ನಜೀರ್ ಅಹ್ಮದ್ - 16106
- ಶನವಾಜ್ - 16107
- ನೂತನ್ - 16108
- ಹರ್ಷಿತ್ - 16109
- ವಿನಯ ಕುಲಕರ್ಣಿ - 16110
- ಚಂದ್ರಶೇಖರ್ ಇಂಡಿ - 16111
- ವಿಕಾಸ್ ಕಲಬುರಗಿ - 16112
- ಚನ್ನಕೇಶವ ಟಿಂಗರಿಕರ್ - 16113


ಕೆ.ಎಸ್. ಸೋಮಶೇಖರ್ ರಾಜ್ಯಸಭೆ ಕಾರ್ಯದರ್ಶಿ

ಹೊಸದಿಲ್ಲಿ: ರಾಜ್ಯಸಭಾ ಅಧ್ಯಕ್ಷ ಸಿ.ಪಿ.ರಾಧಾಕೃಷ್ಣನ್ ಅವರು ಕೆ.ಎಸ್. ಸೋಮಶೇಖರ್ ಅವರನ್ನು ರಾಜ್ಯಸಭೆ ಕಾರ್ಯಾಲಯದ ಕಾರ್ಯದರ್ಶಿಯಾಗಿ



ನೇಮಕ ಮಾಡಿದ್ದು, ಶನಿವಾರದಿಂದ ಜಾರಿಗೆ ಬಂದಿದೆ. 1993ರಲ್ಲಿ ಕಾರ್ಯಾಲಯಕ್ಕೆ ಸೇರಿದ ಅವರು ಹೆಚ್ಚುವರಿ ಕಾರ್ಯದರ್ಶಿ, ಜಂಟಿ ಕಾರ್ಯದರ್ಶಿ ಸೇರಿದಂತೆ ಹಲವು ಹುದ್ದೆಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ಸಂಸತ್ತಿನ ವ್ಯಾಖ್ಯಾನ, ಆಡಳಿತ ಹಾಗೂ ಸಮಿತಿ ಕಾರ್ಯಗಳಲ್ಲಿ ಪರಿಣತಿ ಹೊಂದಿರುವ ಅವರು ಕರ್ನಾಟಕ ಸರ್ಕಾರದಲ್ಲೂ ಉನ್ನತ ಹುದ್ದೆಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ಅಂತರರಾಷ್ಟ್ರೀಯ ಸಂಸದೀಯ ವೇದಿಕೆಗಳಲ್ಲಿ ಭಾರತವನ್ನು ಪ್ರತಿನಿಧಿಸಿರುವ ಅವರು ಯುಕೆ ಮತ್ತು ಯುರೋಪಿಯನ್ ಯೂನಿಯನ್‌ನಲ್ಲಿ ತರಬೇತಿ ಪಡೆದು, ಜಿನೀವಾ ದ ಐಪಿಯು ಸಭೆಗಳಲ್ಲೂ ಭಾಗವಹಿಸಿದ್ದಾರೆ.

ರಾಮ ಬಾಣ



ಕಿಡಿ ನುಡಿ

ವಾಸುದೇವರಾವ್ ಕಕ್ಕೆನೇಜಿ

ಯೋಗೀಶ್ ಗೌಡ ಹತ್ಯೆ ಪ್ರಕರಣದಲ್ಲಿ ಶಾಸಕ ವಿನಯ್ ಕುಲಕರ್ಣಿ ಸೇರಿ 16 ಮಂದಿಗೆ ಜೀವಾವಧಿ ಶಿಕ್ಷೆ - ವರದಿ

- ಮಾಡಿದ್ದುಣ್ಣೋ ಮಹರಾಯ, ತಡವಾಗಿರಬಹುದು, ಆದರೆ ಕರ್ಮಫಲ ಉಣ್ಣುವುದನ್ನು ತಡೆಯಲಾಗದು ಎಂಬುದನ್ನು ನಾವು ಮರೆಯಬಾರದು!

ದಿನ ಭವಿಷ್ಯ

ಮೇಷ ಸಕಾರಾತ್ಮಕ ಬೆಳವಣಿಗೆ ಇಂದು ನೀವು ಕಾಣುವಿರಿ. ಭಾವುಕ ಪ್ರಸಂಗದಲ್ಲಿ ಮನಸ್ಸು ದೃಢವಾಗಿರಲಿ. ನಿಮ್ಮ ದೌರ್ಬಲ್ಯ ಪ್ರದರ್ಶಿಸದಿರಿ.

ವೃಷಭ ಬಾಕಿ ಇರುವ ಕೆಲಸ ಪೂರೈಸಿ ಸಮಾಧಾನ ಪಟ್ಟುಕೊಳ್ಳುವಿರಿ. ಹಣದ ಕೊರತೆ ನೀಗಲಿದೆ. ಬಂಧುಮಿತ್ರರ ಭೇಟಿ. ಆರೋಗ್ಯ ಚಿಂತೆ ಮಾಯ.

ಮಿಥುನ ಒತ್ತಡ ಹೆಚ್ಚು, ಕೆಲವು ಕಿರಿಕಿರಿಗೆ ಒಳಗಾಗುವಿರಿ. ಮನೆಯಲ್ಲಿ ಸಂಗಾತಿ ಜತೆ ವಾಗ್ವಾದ ನಡೆದೀತು. ತಾಳ್ಮೆಯಿಂದ ವ್ಯವಹರಿಸಿ. ವಿದ್ಯಾರ್ಥಿಗಳಿಗೆ ಯಶ.

ಕಟಕ ಮನೆಯವರ ಜತೆ ಹೆಚ್ಚು ಸೂಕ್ಷ್ಮವಾಗಿ ವರ್ತಿಸುವಿರಿ. ಅವರ ಭಾವನೆಗೆ ಸ್ಪಂದಿಸುವಿರಿ. ಖರೀದಿ ಉತ್ಸಾಹದಲ್ಲಿ ಜೇಬಿಗೆ ತೂತು ಬಿದ್ದೀತು.

ಸಿಂಹ ದಿನದ ಆರಂಭ ಉತ್ಸಾಹದಿಂದ. ಆದರೆ ಸಂಜೆ ವೇಳೆಗೆ ಬೇಸರದ ಬೆಳವಣಿಗೆ ನಡೆದೀತು. ಕೆಲವರನ್ನು ಅತಿಯಾಗಿ ಹಚ್ಚಿಕೊಳ್ಳದಿರಿ.

ಕನ್ಯಾ ಹೆಚ್ಚು ಪರಿಶ್ರಮ ಬೇಡುವ ದಿನ. ಏಕೆಂದರೆ ಯಾವುದೂ ಸುಲಭದಲ್ಲಿ ಸಾಧ್ಯವಾಗದು. ಆಪ್ತರು ಮುನಿಸಿಕೊಳ್ಳಬಹುದು. ಆರ್ಥಿಕ ವ್ಯಯ ಹೆಚ್ಚು.

ತುಲಾ ಪ್ರವಾಸದ ಸಾಧ್ಯತೆ. ಹೊಸ ವ್ಯವಹಾರದಲ್ಲಿ ಹಣ ಹೂಡದಿರಿ. ಬಾಕಿ ಇರುವ ಕಾರ್ಯ ಮುಗಿಸಿ. ಇಲ್ಲವಾದರೆ ಒತ್ತಡ ಎದುರಿಸುವಿರಿ.

ವೃಶ್ಚಿಕ ಮಾನಸಿಕ ಒತ್ತಡವು ನಿಮ್ಮ ಕಾರ್ಯದಲ್ಲಿ ಪ್ರತಿಫಲಿಸಬಹುದು. ನಿಮ್ಮ ಮಿತಿಯಲ್ಲೆ ಕಾರ್ಯಾಚರಿಸಿ. ಕೈಗೆ ಎಟುಕದ ವಿಷಯ ಬಿಡಿ.

ಧನು ನಿಮ್ಮ ಯಾವುದೋ ಕೆಲಸ ಅರ್ಧದಲ್ಲೆ ನಿಂತು ಬಿಟ್ಟಿದೆ. ಅದರ ವ್ಯಾಕುಲ ಕಾಡುವುದು. ಇನ್ನೂ ಕೆಲವು ದಿನ ನೀವು ಕಾಯಬೇಕಾಗುವುದು.

ಮಕರ ವೃತ್ತಿಯಲ್ಲಿ ಉನ್ನತಿ. ಉದ್ದೇಶಿತ ಕಾರ್ಯ ಪೂರ್ಣ. ಆದರೆ ಕೌಟುಂಬಿಕ ಅಸಹನೆ. ಶಾಂತಿ, ಸೌಹಾರ್ದತೆ ದೂರ. ಧನವ್ಯಯ ಅಧಿಕ.

ಕುಂಭ ಸಮಸ್ಯೆ ಪರಿಹಾರಕ್ಕೆ ಆತುರ ತೋರಬೇಡಿ. ಸಾವಧಾನವಾಗಿ ಯೋಚಿಸಿ ನಿರ್ಧಾರ ತಾಳಿ. ಅವಶ್ಯ ಸಹಕಾರ ಪಡೆಯಿರಿ. ಬಂಧು ಭೇಟಿ.

ಮೀನ ನಿರಾಳ ದಿನ. ಕಾಡುತ್ತಿದ್ದ ಚಿಂತೆ ಪರಿಹಾರ. ಉತ್ಸಾಹ ತುಂಬುವ ಕಾರ್ಯದಲ್ಲಿ ತೊಡಗಿ. ಬಂಧುಮಿತ್ರರ ಭೇಟಿ ಸಂತೋಷ ತರಲಿದೆ.

ರಾಹುಕಾಲ: 4.30-6.00
ಗುಳಿಕಕಾಲ: 3.00-4.30

ಅದೃಷ್ಟ ಸಂಖ್ಯೆ : 1,6.3,8

ಕೇಂದ್ರ ಸರ್ಕಾರಿ ನೌಕರರಿಗೆ ತುಟ್ಟಿ ಭತ್ಯೆ ಶೇ.2 ಹೆಚ್ಚಳ

ಪುಟ ೧ → ಸರಕಾರದ ಈ ಮಹತ್ವದ ನಿರ್ಧಾರದಿಂದ ಬರೋಬ್ಬರಿ 50.46 ಲಕ್ಷ ಸರಕಾರಿ ಉದ್ಯೋಗಿಗಳು, 68.27 ಲಕ್ಷ ಪಿಂಚಣಿದಾರರಿಗೆ ತುಂಬು ಪ್ರಯೋಜನವಾಗ ಲಿದೆ. ಈ ಪ್ರಮುಖ ನಿರ್ಧಾರ ದಿಂದ ಸರಕಾರದ ಬೊಕ್ಕಸಕ್ಕೆ ವಾರ್ಷಿಕ ರೂ.6,791 ಕೋಟಿ ರೂ.ಗಳಷ್ಟು ಹೆಚ್ಚುವರಿ ವೆಚ್ಚವಾಗಲಿದೆ.

ರಿಮೋಟ್ ಕಾರಲ್ಲಿ ಸ್ಫೋಟ ಸಂಚು

ಪುಟ ೧ → ಜತೆಗೆ ಈ ನಾಲ್ವರು ಖಲೀಫತ್ ಸ್ಥಾಪನೆ ಎಂಬ ಅತಿರೇಕಿ ಚಿಂತನೆಗಳಿಂದ ಪ್ರೇರಿತರಾಗಿದ್ದು, 'ಘಜ್ವಾ-ಎ-ಹಿಂದ್' ಮುಂತಾದ ಅಭಿಯಾನಗಳನ್ನು ಪ್ರಚಾರ ಮಾಡುತ್ತಿದ್ದರೆಂದು ಪೊಲೀಸರು ತಿಳಿಸಿದ್ದಾರೆ. ಅವರ ಚಟುವಟಿಕೆಗಳು ಗುಪ್ತ ಹಾಗೂ ಎನ್‌ಕ್ರಿಪ್ಟೆಡ್ ಸೋಶಿಯಲ್ ಮೀಡಿಯಾ ಗುಂಪುಗಳ ಮೂಲಕ ನಡೆಯುತ್ತಿದ್ದು, ಅಲ್ಲಿ ಜಿಹಾದ್, ಅತಿರೇಕಿ ಸಿದ್ಧಾಂತ ಮತ್ತು ಶಸ್ತ್ರಾಸ್ತ್ರಗಳ ಕುರಿತು ವಿಷಯ ಹಂಚಿಕೊಳ್ಳಲಾಗುತ್ತಿತ್ತು. ಹೊಸ ಸದಸ್ಯರನ್ನು ಗುರುತಿಸಿ, ಅವರನ್ನು ಪ್ರಭಾವಿತಗೊಳಿಸಿ ನೇಮಕಾತಿ ಮಾಡುವುದೇ ಉದ್ದೇಶವಾಗಿತ್ತು ಎಂದು ಅಧಿಕಾರಿಗಳು ಹೇಳಿದ್ದಾರೆ. ತನಿಖೆಯಲ್ಲಿ 2025 ಡಿಸೆಂಬರ್‌ನಲ್ಲಿ ಆರೋಪಿಗಳಲ್ಲಿ ಒಬ್ಬರು ದೆಹಲಿಗೆ ಭೇಟಿ ನೀಡಿ ರೆಡ್ ಫೋರ್ಟ್ ಹಾಗೂ ಇಂಡಿಯಾ ಗೇಟ್ ಸೇರಿದಂತೆ ಪ್ರಮುಖ ಸ್ಥಳಗಳ ಪರಿಶೀಲನೆ ನಡೆಸಿದ್ದುದೂ ಬೆಳಕಿಗೆ ಬಂದಿದೆ. ರಾಮಮಂದಿರ (ಅಯೋಧ್ಯೆ), ಸಂಸತ್ ಭವನ ಮತ್ತು ಕೆಲವು ಸೇನಾ ಸ್ಥಾಪನೆಗಳ ಮೇಲೆ ದಾಳಿ ನಡೆಸುವ ಕುರಿತು ಚರ್ಚೆಗಳು ನಡೆದಿದ್ದವು ಎನ್ನಲಾಗಿದೆ.

ಅನುಭವ ಮಂಟಪದಲ್ಲಿ ಮಹಿಳೆಯರಿಗೆ ಸಮಾನ ಅವಕಾಶ ಇತ್ತು: ಬಿಎಸ್‌ವೈ

ಕಾಂಗ್ರೆಸ್ ಮಹಿಳಾ ವಿರೋಧಿ

ಬೆಂಗಳೂರು: ಮಹಿಳಾ ಮೀಸಲಾತಿ ವಿರೋಧಿಸುವುದು ಸಮಾನತೆಯ ತತ್ವವನ್ನು ವಿರೋಧಿಸಿದಂತೆ ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ತಿಳಿಸಿದರು.



ಶನಿವಾರ ಮಾಧ್ಯಮಗಳ ಜೊತೆ ಮಾತನಾಡಿ, ವಿಪಕ್ಷಗಳ ಮಹಿಳಾ ವಿರೋಧಿ ನೀತಿಯನ್ನು ಖಂಡಿಸಿದರು. ಬಸವಣ್ಣನವರ ಅನುಭವ ಮಂಟಪದಲ್ಲಿ ಸಮಾನ ಅವಕಾಶ ಇತ್ತು. ಮಹಿಳೆಯರಿಗೆ ರಾಜಕೀಯದಲ್ಲಿ ಪ್ರವೇಶ ಸಿಗುವುದೆಂದರೆ ಅದು ಅವರ ಹಕ್ಕು. ಅದನ್ನು ವಿರೋಧಿಸುವುದು ಸಮಾನತೆಯ ವಿರುದ್ಧ ಎಂದು ನುಡಿದರು.

ಹಣಕಾಸಿನ ವ್ಯವಹಾರ ಸರಿ ಮಾಡದೇ, ವಿದ್ಯುತ್ ದರವನ್ನು ಏರಿಸಿದ್ದು ಖಂಡಿತ ಸರಿಯಲ್ಲ.ಸರ್ಕಾರ ಈ ನಿರ್ಧಾರವನ್ನು ತಕ್ಷಣ ವಾಪಸ್ ಪಡೆಯಬೇಕು ಎಂದು ಆಗ್ರಹಿಸಿದರು.

ಜನರು ನೆಮ್ಮದಿ, ಸ್ವಾಭಿಮಾನದಿಂದ ಬದುಕಲು ಅವಕಾಶ ಮಾಡಿಕೊಡಬೇಕೆಂದು ಒತ್ತಾಯಿಸಿದರು. ದಾವಣಗೆರೆ ದಕ್ಷಿಣ ಮತ್ತು ಬಾಗಲಕೋಟೆ ವಿಧಾನ ಸಭಾ ಕ್ಷೇತ್ರಗಳಲ್ಲಿ ಬಿಜೆಪಿ ಗೆಲುವು ಸಾಧಿಸುವುದು ನಿಶ್ಚಿತ ಎಂದು ಅವರು ತಿಳಿಸಿದರು.

ಮಹಿಳೆಯರಿಗೆ ಕಾಂಗ್ರೆಸ್ ದ್ರೋಹ ಬಗೆದಿದೆ: ಅಶೋಕ

ಮಹಿಳಾ ಮೀಸಲಿಗೆ ತಡೆವೊಡ್ಡಿದ ಕಾಂಗ್ರೆಸ್ ಕೋಟ್ಯಂತರ ಮಹಿಳೆಯರಿಗೆ ದ್ರೋಹ ಬಗೆದಿದೆ. ಮಹಿಳೆಯರ ಶಕ್ತಿ ನಿರ್ಲಕ್ಷಿಸಿದ ಕಾಂಗ್ರೆಸ್‌ನ್ನು ದೇಶದ ಜನ ಕ್ಷಮಿಸುವುದಿಲ್ಲ. ಮುಂಬರುವ ರಾಜ್ಯಗಳ ಚುನಾವಣೆಯಲ್ಲಿ ಜನರು ಬುದ್ಧಿ ಕಲಿಸಲಿದ್ದಾರೆ ಎಂದು ವಿರೋಧ ಪಕ್ಷದ ನಾಯಕ ಆರ್. ಅಶೋಕ ಭವಿಷ್ಯ ನುಡಿದಿದ್ದಾರೆ. ಶನಿವಾರ ಮಾಧ್ಯಮಗಳ ಜತೆಗೆ ಮಾತನಾಡಿ, ಮಹಿಳಾ ಮೀಸಲು ಮಸೂದೆಗೆ ಸೋಲಾಗಿದ್ದು ಸಾಮಾನ್ಯ ವಿಚಾರ ಅಲ್ಲ. ಇದು ರಾಜಕೀಯ ಪಕ್ಷಗಳ ಪಿತೂರಿ, ನಿರ್ಲಕ್ಷ್ಯ, ಮಹಿಳಾ ವಿರೋಧಿ ಭಾವನೆಯ ಸ್ಪಷ್ಟ ಸಂಕೇತ ಎಂದರು.



ಫ್ರೀ ಬಸ್ ಕೊಟ್ಟರೆ ಸಾಕು: ಮಹಿಳೆಯರಿಗೆ ಪುಕ್ಕಟೆಯಾಗಿ ಎರಡು ಸಾವಿರ ಕೊಟ್ಟರೆ ಸಾಕು. ಫ್ರೀ ಬಸ್ ಕೊಟ್ಟರೆ ಸಾಕು ಮನೆಯಲ್ಲೇ ಇರ್ತಾರೆ. ಅಡಿಗೆ ಮಾಡಿಕೊಂಡು, ದೇವಸ್ಥಾನಕ್ಕೆ ತಿರುಗಿಕೊಂಡು ಇರ್ತಾರೆ. ಅವರಿಗೆ ರಾಜಕೀಯ ಪ್ರಾತಿನಿಧ್ಯ ಸಿಗಬಾರದು. ಸಂಸತ್‌ಗೆ, ವಿಧಾನಸಭೆಗೆ ಹೋಗುವುದು ಬೇಡ ಎಂದು ಕಾಂಗ್ರೆಸ್‌ನವರು ತಿಳಿದಿದ್ದಾರೆ. ಮೀಸಲಾತಿ ಕಸಿದ ದ್ರೋಹಿ ಕಾಂಗ್ರೆಸ್ಸಿಗರು ಎಂದರು. ಕ್ಷೇತ್ರ ಮರುವಿಂಗಡಣೆಯಲ್ಲಿ ದಕ್ಷಿಣದ ರಾಜ್ಯಗಳಿಗೆ ಹೆಚ್ಚಿನ ಕ್ಷೇತ್ರಗಳು ಸಿಗುವಂತೆ ಮಾಡಲು ಅವಕಾಶ ಇತ್ತು. ಆದರೆ ಕಾಂಗ್ರೆಸ್ನವರು ಮೊಸರಲ್ಲಿ ಕಲ್ಲು ಹುಡುಕುವ ಕೆಲಸ ಮಾಡಿದರು. ಈ ಬಗ್ಗೆ ಚರ್ಚೆ ಮಾಡಬಹುದಿತ್ತು. ಹಿಂದೆ ಹಲವು ಬಾರಿ ಕ್ಷೇತ್ರ ಮರುವಿಂಗಡಣೆ ಆದಾಗ ಅವರು ವಿರೋಧಿಸಲಿಲ್ಲ. ಇದೇ ಮೊದಲ ಬಾರಿಗೆ ಆಗಿಲ್ಲ. ಆಗಲೂ ಸಂಸತ್ ಸೀಟು ಹೆಚ್ಚಳ ಆಗಿದೆ. ಆಗ ಇವರು ಬಾಯಿಗೆ ಬಟ್ಟೆ ತುರುಕಿಕೊಂಡಿದ್ದರೇ ಎಂದರು. ವಿಧಾನಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ, ಬಿಜೆಪಿ ರಾಜ್ಯ ಉಪಾಧ್ಯಕ್ಷೆ ಮಾಳವಿಕಾ ಅವಿನಾಶ್, ಮಹಿಳಾ ಮೋರ್ಚಾ ರಾಜ್ಯ ಅಧ್ಯಕ್ಷೆ ಸಿ.ಮಂಜುಳಾ ಅವರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ವಿರೋಧ ಪಕ್ಷಗಳ ನೀತಿಗೆ ಯಡಿಯೂರಪ್ಪ ಖಂಡನೆ

ಚಿಕ್ಕಮಗಳೂರು: ಮಹಿಳಾ ಮೀಸಲಾತಿಯನ್ನು ವಿರೋಧಿಸುವುದು ಬಸವಣ್ಣನವರ ಸಮಾನತೆ ತತ್ವಕ್ಕೆ ವಿರುದ್ಧವಾಗಿದೆ. ವಿರೋಧ ಪಕ್ಷಗಳ ಈ ನೀತಿಯನ್ನು ನಾನು ಖಂಡಿಸುತ್ತೇನೆ ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹೇಳಿದರು. ಅವರು ಶನಿವಾರ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿ, ಮಹಿಳಾ ಮೀಸಲಾತಿಯನ್ನು ಯಾರಿಂದಲೂ ತಡೆಯಲು ಸಾಧ್ಯವಿಲ್ಲ. ಮಹಿಳಾ ಮೀಸಲಾತಿ ಬಗ್ಗೆ ಬಹಳ ದಶಕಗಳಿಂದ ಮಾತನಾಡಿಕೊಂಡು ಬರುತ್ತಿದ್ದೇವೆ. ಈಗ ಮತ್ತೆ ಅದರ ಬಗ್ಗೆ ಇನ್ನೂ ಚರ್ಚೆ ಆಗಬೇಕು ಎಂದರೆ ಅದು ವಿಳಂಬಮಾಡುವ ನೀತಿ ಎನ್ನುವುದು ಸ್ಪಷ್ಟವಾಗುತ್ತದೆ ಎಂದು ದೂರಿದರು. ರಾಜಕೀಯ ಲಾಭಕ್ಕಾಗಿ ಮಸೂದೆ ತರಲಾಗುತ್ತಿದೆ ಎನ್ನವುದು ತಪ್ಪು. ಒಳ್ಳೆಯ ನೀತಿ ಯಾವುದಾದರೂ ಒಳ್ಳೆಯದೆ. ಬಸವಣ್ಣನವರು ಸಮಾಜದಲ್ಲಿ ಸಮಾನತೆ, ನ್ಯಾಯ ಮತ್ತು ಅವಕಾಶಗಳ ಬಗ್ಗೆ ಹೇಳಿದ್ದಾರೆ. ಅವರ ಕಾಲದಲ್ಲಿ ಹೆಣ್ಣು, ಗಂಡು ಭೇದವಿಲ್ಲದೆ ಎಲ್ಲರಿಗೂ ಸಮಾನ ಹಕ್ಕು ಕೊಡಲು ಹೋರಾಟ ಮಾಡಿದರು. ಈಗ ಮಹಿಳಾ ಮೀಸಲಾತಿ ವಿರೋಧಿಸುವುದು ಸಮಾನತೆ ತತ್ವಕ್ಕೆ ವಿರುದ್ಧವಾಗಿದೆ ಎಂದರು. ಮಹಿಳೆಯರು ರಾಜಕೀಯ ಪ್ರವೇಶಿಸುವುದು ಅವರ ಹಕ್ಕು ಅದನ್ನು ವಿರೋಧಿಸುವುದು ಸಮಾನತೆಯ ವಿರುದ್ಧ. ಇದನ್ನು ಅರ್ಥ ಮಾಡಿಕೊಂಡು ವಿರೋಧ ಮಾಡುತ್ತಿರುವವರು ಪ್ರಧಾನಿ ಅವರ ಐತಿಹಾಸಿಕ ತೀರ್ಮಾನಕ್ಕೆ ಬೆಂಬಲ ಕೊಡಬೇಕು ಎಂದರು.

ವಿದ್ಯುತ್ ದರ ಏರಿಕೆಗೆ ಖಂಡನೆ: ರಾಜ್ಯ ಸರ್ಕಾರ ಬೇಕಾಬಿಟ್ಟಿ ವಿದ್ಯುತ್ ದರ ಏರಿಸುತ್ತಿದೆ. ಇದು ಖಂಡಿತ ಸರಿಯಲ್ಲ ಎಂದು ಯಡಿಯೂರಪ್ಪ ಹೇಳಿದರು. ಸರಿಯಾಗಿ ಆಡಳಿತ ಮಾಡದೆ, ಹಣಕಾಸಿನ ವ್ಯವಹಾರವನ್ನೂ ಸರಿ ಮಾಡದೆ. ಈಗ ವಿದ್ಯುತ್ ದರ ಹೆಚ್ಚಿಸಿದರೆ ಸಾಮಾನ್ಯ ಜನ ಅದನ್ನು ಭರಿಸಲು ಸಾಧ್ಯವಾಗುವುದಿಲ್ಲ. ತಕ್ಷಣ ಈ ನಿರ್ಧಾರ ವಾಪಾಸ್ ತೆಗೆದುಕೊಳ್ಳಬೇಕು. ಜನರು ಸ್ವಾಭಿಮಾನದಿಂದ, ನೆಮ್ಮದಿಯಿಂದ ಬದುಕಲು ಅವಕಾಶ ಮಾಡಿಕೊಡಬೇಕು ಎಂದು ಆಗ್ರಹಿಸಿದರು.

ಖಾನಾಪುರಕ್ಕೆ ಕಾಡಾನೆ: ಆತಂಕ

ಖಾನಾಪುರ: ಅರಣ್ಯ ಪ್ರದೇಶದ ತನ್ನ ಹಿಂಡಿನಿಂದ ತಪ್ಪಿಸಿಕೊಂಡ 10-12 ವರ್ಷ ವಯಸ್ಸಿನ ಕಾಡಾನೆಯೊಂದು ಶನಿವಾರ ಪಟ್ಟಣದ ಹೊರವಲಯದ ಜನವಸತಿ ಪ್ರದೇಶಗಳ ಬಳಿ ಕಾಣಿಸಿಕೊಂಡು ಆತಂಕ ಸೃಷ್ಟಿಸಿತ್ತು.

ಶುಕ್ರವಾರ ಮಧ್ಯಾಹ್ನ ಮತ್ತು ಸಂಜೆಯ ಹೊತ್ತಿನಲ್ಲಿ ತಾಲೂಕಿನ ಜಾಂಬೋಟಿ ರಸ್ತೆಯ ನಾಗುರ್ಡಾ, ಮೋದೆಕೊಪ್ಪ, ಕಾನಸುಲಿ ಗ್ರಾಮಗಳ ವ್ಯಾಪ್ತಿಯಲ್ಲಿ ಕಾಣಿಸಿಕೊಂಡಿದ್ದ ಆನೆ ಶನಿವಾರ ನಸುಕಿನಜಾವ ಬಾಚೋಳಿ ಮೂಲಕ ಪಟ್ಟಣ ಪ್ರವೇಶಿಸಿ ಶಿವಾಜಿನಗರ, ಮಯೇಕರ ನಗರ, ಅಸೋಗಾ ರಸ್ತೆ, ರೈಲ್ವೆ ಸ್ಟೇಶನ್ ಪ್ರದೇಶದಲ್ಲಿ ಕಾಣಿಸಿಕೊಂಡಿತ್ತು.

ಕಳೆದ ಹಲವು ದಿನಗಳಿಂದ ತಾಲೂಕಿನ ನೀಲಾವಡೆ ಅರಣ್ಯದಲ್ಲಿ ತಂಗಿದ್ದ ಕಾಡಾನೆಗಳ ಹಿಂಡಿನಿಂದ ಬೇರ್ಪಟ್ಟ ಆನೆಯೊಂದು ಶನಿವಾರ ಹಗಲು ಹೊತ್ತಿನಲ್ಲೇ ಪಟ್ಟಣದ ಹೊರವಲಯದ ಜನವಸತಿ ಪ್ರದೇಶದ ಬಳಿ ಕಾಣಿಸಿಕೊಂಡಿದೆ. ಜನವಸತಿ ಪ್ರದೇಶದ ಬಳಿ ಕಾಡಾನೆ ಪತ್ತೆಯಾದ ಮಾಹಿತಿ ಲಭ್ಯವಾಗುತ್ತಲೇ ಆನೆ ಕಾಣಿಸಿಕೊಂಡ ಪ್ರದೇಶದತ್ತ ನಮ್ಮ ಇಲಾಖೆಯ ಅಧಿಕಾರಿಗಳು ಹಾಗೂ ಸಿಬ್ಬಂದಿ ಧಾವಿಸಿದ್ದಾರೆ. ಮಧ್ಯಾಹ್ನದ ಬಳಿಕ ಕಾಡಾನೆ ಅರಣ್ಯದಲ್ಲಿ ಮರೆಯಾಗಿದ್ದು, ಮುನ್ನೆಚ್ಚರಿಕೆ ಕ್ರಮವಾಗಿ ಅರಣ್ಯ ಇಲಾಖೆಯ ಸಿಬ್ಬಂದಿ ಆನೆಯ ಚಲನವಲನದ ಬಗ್ಗೆ ನಿಗಾ ವಹಿಸಿದ್ದಾರೆ.

ಉಪಟಳ ನೀಡುತ್ತಿದ್ದ ಹುಲಿ ಸೆರೆ

ಸರಗೂರು: ಗ್ರಾಮಸರಿಗೆ ಉಪಟಳ ನೀಡುತ್ತಿದ್ದ ಹುಲಿಯೊಂದನ್ನು ಅರಣ್ಯ ಇಲಾಖೆಯ ಸಿಬ್ಬಂದಿ, ಅಧಿಕಾರಿಗಳು ಸೆರೆ ಹಿಡಿದಿರುವ ಘಟನೆ ಸರಗೂರು



ತಾಲೂಕಿನ ಹಾದನೂರು ಬಳಿ ನಡೆದಿದೆ. ಸರಗೂರು ತಾಲೂಕಿನ ಹಾದನೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹಾದನೂರು ಗ್ರಾಮದಲ್ಲಿ ಶುಕ್ರವಾರ ಬೆಳಗ್ಗೆ ಹುಲಿ ಕಾಣಿಸಿಕೊಂಡಿದ್ದು, ಗ್ರಾಮಸ್ಥರಲ್ಲಿ ಆತಂಕ ಮೂಡಿಸಿತು. ಗ್ರಾಮದ ಸಮೀಪದಲ್ಲೇ ಹುಲಿ ಕಾಣಿಸಿಕೊಂಡಿದ್ದರಿಂದ ಜನ ಭಯಗೊಂಡು ಅರಣ್ಯ ಇಲಾಖೆ ಕೂಡಲೇ ಹುಲಿ ಸೆರೆಗೆ ಕ್ರಮವಹಿಸಬೇಕೆಂದು ಒತ್ತಾಯಿಸಿದರು.

ರಾಜ್ ನಡವಳಿಕೆಯೇ ಒಂದು ಸಂದೇಶ

ಬೆಂಗಳೂರು: ವರನಟ ಡಾ.ರಾಜ್‌ಕುಮಾರ್ ಅವರು ಬದುಕಿನ ಒಂದೊಂದು ಹೆಜ್ಜೆಯನ್ನೂ ಹೇಳಿಕೊಟ್ಟರು. ಯಾರಿಗೂ ನೇರವಾಗಿ ಏನನ್ನೂ ಹೇಳದ ಅವರು, ತಮ್ಮ ನಡವಳಿಕೆ ಮುಖಾಂತರವೇ ಸಂದೇಶ ನೀಡುತ್ತಿದ್ದರು ಎಂದು ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷೆ ಡಾ. ಜಯಮಾಲಾ ತಿಳಿಸಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಗರದ ನಯನ ಸಭಾಂಗಣದಲ್ಲಿ ಶನಿವಾರ ಆಯೋಜಿಸಿದ್ದ ಮನೆಯಂಗಳದಲ್ಲಿ ಮಾತುಕತೆ ಕಾರ್ಯಕ್ರಮದಲ್ಲಿ ಮಾತನಾಡಿದರು.

ನಾರೀಶಕ್ತಿಗೆ ಅಪಮಾನ

ಪುಟ ೧ → ದೇಶದ ಅರ್ಧ ಜನಸಂಖ್ಯೆಗೆ ನ್ಯಾಯ ನೀಡುವ ಪವಿತ್ರ ಪ್ರಯತ್ನವಾಗಿತ್ತು ಎಂದರು. ಆದರೆ ಕಾಂಗ್ರೆಸ್ ಹಾಗೂ ಅದರ ಮಿತ್ರಪಕ್ಷಗಳು ಈ ಪ್ರಾಮಾಣಿಕ ಪ್ರಯತ್ನವನ್ನು ಭ್ರೂಣದಲ್ಲೇ ಕೊಂದಿವೆ ಎಂದು ಟೀಕಿಸಿದರು.

ವಂಶಪಾರಂಪರ್ಯಕ್ಕೆ ಪೆಟ್ಟು ಆತಂಕ: ವಿಪಕ್ಷಗಳ ವಿರೋಧದ ಹಿಂದೆ 'ಭಯ'ವೇ ಕಾರಣ ಎಂದು ಮೋದಿ ಆರೋಪಿಸಿದರು. ಮಹಿಳೆಯರು ಸಬಲರಾದರೆ ತಮ್ಮ ವಂಶಪಾರಂಪರ್ಯ ರಾಜಕೀಯಕ್ಕೆ ಧಕ್ಕೆ ಉಂಟಾಗುತ್ತದೆ ಎಂಬ ಆತಂಕವೇ ಇದಕ್ಕೆ ಮೂಲ ಎಂದು ಹೇಳಿದರು. ಪಂಚಾಯತ್ ಮತ್ತು ಸ್ಥಳೀಯ ಸಂಸ್ಥೆಗಳಲ್ಲಿ ತಮ್ಮ ಸಾಮರ್ಥ್ಯವನ್ನು ಸಾಬೀತುಪಡಿಸಿದ ಮಹಿಳೆಯರು ಮುಂದೆ ಬಂದು ಲೋಕಸಭೆ ಮತ್ತು ವಿಧಾನಸಭೆಗಳಲ್ಲಿ ಸೇವೆ ಸಲ್ಲಿಸುವ ಸಾಧ್ಯತೆಯೇ ಈ ಪಕ್ಷಗಳಿಗೆ ಭೀತಿಯಾಗಿದೆ ಎಂದು ಅವರು ವಿವರಿಸಿದರು.

ಕ್ಷೇತ್ರ ಪುನರ್ವಿಂಗಡಣೆಯ ಸುಳ್ಳು: ಕ್ಷೇತ್ರ ಪುನರ್ವಿಂಗಡಣೆಯ ವಿಚಾರದಲ್ಲಿ ವಿಪಕ್ಷಗಳು ನಿರಂತರವಾಗಿ ಸುಳ್ಳು ಪ್ರಚಾರ ನಡೆಸುತ್ತಿವೆ ಎಂದು ಮೋದಿ ಆರೋಪಿಸಿದರು. ಯಾವುದೇ ರಾಜ್ಯದ ಪ್ರಾತಿನಿಧ್ಯ ಕಡಿಮೆಯಾಗುವುದಿಲ್ಲ, ಬದಲಿಗೆ ಎಲ್ಲಾ ರಾಜ್ಯಗಳ ಸೀಟುಗಳು ಹೆಚ್ಚಾಗಲಿವೆ ಎಂದು ಸರ್ಕಾರ ಸ್ಪಷ್ಟಪಡಿಸಿದ್ದರೂ ಕಾಂಗ್ರೆಸ್, ಡಿಎಂಕೆ, ಟಿಎಂಸಿ ಮತ್ತು ಸಮಾಜವಾದಿ ಪಕ್ಷಗಳು ಜನರನ್ನು ತಪ್ಪು ದಾರಿಗೆಳೆಯುತ್ತಿವೆ ಎಂದರು. ಈ ಮಸೂದೆ ಅಂಗೀಕಾರವಾಗಿದ್ದರೆ ತಮಿಳುನಾಡು, ಬಂಗಾಳ, ಉತ್ತರ ಪ್ರದೇಶ, ಕೇರಳ ಸೇರಿದಂತೆ ಎಲ್ಲಾ ರಾಜ್ಯಗಳಿಗೆ ಲಾಭವಾಗುತ್ತಿತ್ತು ಎಂದು ಹೇಳಿದರು.

ಸುಧಾರಣೆ ವಿರೋಧಿ ಕಾಂಗ್ರೆಸ್: ಕಾಂಗ್ರೆಸ್ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದ ಪ್ರಧಾನಿ, ಅದು ಸದಾ ಸುಧಾರಣೆಗೆ ವಿರೋಧಿಸುವ ಪಕ್ಷವಾಗಿದೆ ಎಂದು ಆರೋಪಿಸಿದರು. ಜನ್ ಧನ್, ಆಧಾರ್, ಡಿಜಿಟಲ್ ಪಾವತಿ, ಜಿಎಸ್‌ಟಿ, ತ್ರಿವಳಿ ತಲಾಖ್ ನಿಷೇಧ, 370ನೇ ವಿಧಿ ರದ್ದತಿ, ಸಿಎಎ, ಒಂದು ರಾಷ್ಟ್ರ ಒಂದು ಚುನಾವಣೆ, ಸಮಾನ ನಾಗರಿಕ ಸಂಹಿತೆ, ಹಿಂದುಳಿದ ವರ್ಗದವರಿಗೆ ಮೀಸಲಾತಿ ಸೇರಿದಂತೆ ಅನೇಕ ನಿರ್ಧಾರಗಳನ್ನು ಕಾಂಗ್ರೆಸ್ ವಿರೋಧಿಸಿತ್ತು ಎಂದರು.

ಮೋದಿ ಹೇಳಿಕೆಗಳು

- ಪುಟ ೧ → 40 ವರ್ಷಗಳಿಂದ ನೆನೆಗುದಿಗೆ ಬಿದ್ದಿರುವ ಮಸೂದೆಗೆ ಒಪ್ಪಿಗೆ ಯತ್ನ
- ಮಹಿಳೆಯರಿಗೆ ಹೊಸ ಅವಕಾಶ ಮಾಡಿಕೊಡುವ ಮಹಾಯಜ್ಞ
- ಭಾರತದ ವಿಕಾಸ ಯಾತ್ರೆಯಲ್ಲಿ ಸಹಯಾತ್ರಿ ಮಾಡುವ ಮಹಾನ್ ಉದ್ದೇಶ
- ಎಲ್ಲ ರಾಜ್ಯಗಳಿಗೂ ಸಮಾನ ಕ್ಷೇತ್ರಗಳ ಮರು ಹಂಚಿಕೆ ಯತ್ನ
- ಹಿಂದಿನಿಂದಲೂ ಮಹಿಳಾ ಮಸೂದೆಗೆ ಕಾಂಗ್ರೆಸ್‌ನಿಂದಲೇ ಅಡ್ಡಿ
- ಕ್ಷೇತ್ರ ಪುನರ್‌ವಿಂಗಡಣೆ ವಿಚಾರದಲ್ಲಿ ಪ್ರತಿಪಕ್ಷಗಳಿಂದ ದೊಡ್ಡ ಸುಳ್ಳು
- ಬಂಗಾಳ, ಉ.ಪ್ರದೇಶ, ಕೇರಳದ ಸ್ಥಾನ ಹೆಚ್ಚುತ್ತಿದ್ದವು

ಮೀಸಲಾತಿ ಮಸೂದೆ ವಿಫಲ: ರಾಹುಲ್ ನಿವಾಸಕ್ಕೆ ಮುತ್ತಿಗೆ

ಪುಟ ೧ → ರಾಹುಲ್ ಗಾಂಧಿ ನಿವಾಸದ ಬಳಿ ಪ್ರತಿಭಟನೆ ನಡೆಸುತ್ತಿದ್ದ ಬಿಜೆಪಿ ಕಾರ್ಯಕರ್ತರನ್ನು ಚದುರಿಸಲು ಪೊಲೀಸರು ಜಲಫಿರಂಗಿ ಬಳಸಿದರು. 2023ರಲ್ಲಿ ಅಂಗೀಕರಿಸಲಾದ 'ನಾರೀಶಕ್ತಿ ವಂದನ್ ಅಧಿನಿಯಮ'ವನ್ನು ಪ್ರಾಯೋಗಿಕವಾಗಿ ಜಾರಿಗೆ ತರಲು ಈ ತಿದ್ದುಪಡಿ ಅತ್ಯಗತ್ಯ ಎಂದು ಬಿಜೆಪಿ ಸಮರ್ಥಿಸಿಕೊಂಡಿದೆ.

ದಕ್ಷಿಣದಲ್ಲಿ ಸುಪ್ರೀಂ ನ್ಯಾಯಪೀಠ ಶಕ್ತಿ

ಪುಟ ೧ → **ಎಐ ನಿಯಂತ್ರಿಸುವಲ್ಲಿ ನ್ಯಾಯಾಂಗ ಪಾತ್ರ ನಿರ್ಣಾಯಕ:** ಭಾರತದಲ್ಲಿ ಎಐ ನಿಯಂತ್ರಕ ಚೌಕಟ್ಟನ್ನು ರೂಪಿಸುವಲ್ಲಿ ನ್ಯಾಯಾಂಗವು ನಿರ್ಣಾಯಕ ಪಾತ್ರ ವಹಿಸುತ್ತದೆ. ಸರಿಯಾದ ಪ್ರಕ್ರಿಯೆ, ಅನುಪಾತ ಮತ್ತು ಗೌಪ್ಯತೆಯ ಹಕ್ಕಿನ ಸಂರಕ್ಷಣೆಯಂತಹ ವಿಶ್ವಾಸಾರ್ಹ ಸಾಂವಿಧಾನಿಕ ಸಿದ್ಧಾಂತಗಳ ಮೂಲಕ ಕೃತಕ ಬುದ್ಧಿಮತ್ತೆಯ ಪರಿಧಿಯನ್ನು ನಿರ್ಧರಿಸಬೇಕಿದೆ. ನ್ಯಾಯಾಂಗವು ತಂತ್ರಜ್ಞಾನದ ಬಳಕೆದಾರ ಮಾತ್ರವಲ್ಲದೆ ಸಮಾಜದಲ್ಲಿ ಅದರ ನಿಯೋಜನೆಗೆ ಮಾರ್ಗದರ್ಶನ ನೀಡುವ ನೈತಿಕ ದಿಕ್ಸೂಚಿಯೂ ಆಗಿದೆ ಎಂದು ಹೇಳಿದರು.

ನ್ಯಾಯಾಂಗ ಪ್ರಕ್ರಿಯೆಗಳನ್ನು ಬಲಪಡಿಸಲು ತಂತ್ರಜ್ಞಾನವು ಅರ್ಥಪೂರ್ಣ ಅವಕಾಶಗಳನ್ನು ನೀಡುತ್ತದೆ. ಕೃತಕ ಬುದ್ಧಿಮತ್ತೆಯು ನೆರವಿನಿಂದ ಕಾನೂನು ನಿರ್ವಹಣಾ ವ್ಯವಸ್ಥೆ ಸುಧಾರಿಸಬಹುದು. ಸವಾಲಿನ ಪ್ರಕರಣಗಳ ನಿರ್ವಹಣೆಯನ್ನು ಸುಗಮಗೊಳಿಸಬಹುದು. ಆಗಬಹುದಾದ ವಿಳಂಬವನ್ನು ತಪ್ಪಿಸಬಹುದು. ಆದರೆ ಈ ಎಲ್ಲಾ ನಾವೀನ್ಯತೆಗಳನ್ನು ಜಾಗರೂಕತೆಯಿಂದ ಅಳವಡಿಸಿಕೊಳ್ಳಬೇಕು ಎಂಬುದನ್ನು ಮರೆಯಬಾರದು ಎಂದು ಕಿವಿಮಾತು ಹೇಳಿದರು.

ಕರ್ನಾಟಕ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ಮಾತನಾಡಿ, ಈಗ ನ್ಯಾಯಾಂಗ ವ್ಯವಸ್ಥೆಯಲ್ಲಿ ಎಐ ಅಳವಡಿಸಬೇಕೇ ಅಥವಾ ಬೇಡವೇ ಎಂಬುದು ಪ್ರಶ್ನೆಯಾಗಿ ಉಳಿದಿಲ್ಲ. ಯಾವ ರೀತಿಯಲ್ಲಿ ಇದನ್ನು ಅಳವಡಿಸಬೇಕು ಎಂಬುದಷ್ಟೇ ಈಗಿನ ಪ್ರಶ್ನೆಯಾಗಿದೆ.

ಲೋಕಾಯುಕ್ತ ಅತ್ಯಂತ ಪರಿಣಾಮಕಾರಿ: ಸಿಜೆಐ

ಪುಟ ೧ → ಲೋಕಾಯುಕ್ತ ಸಂಸ್ಥೆಯು ಕಳೆದ 40 ವರ್ಷಗಳಿಂದ ಸಾರ್ವಜನಿಕ ಸೇವೆಯಲ್ಲಿ ಪಾರದರ್ಶಕತೆ ಕಾಯ್ದುಕೊಳ್ಳುವಲ್ಲಿ ಪ್ರಮುಖ ಪಾತ್ರ ವಹಿಸಿದೆ ಎಂದರು. ಜನರಿಗೆ ಆಡಳಿತವನ್ನು ಅರ್ಥವಾಗುವಂತೆ ಮತ್ತು ಸುಲಭವಾಗಿ ತಲುಪುವಂತೆ ಮಾಡುವ ಮೂಲಕ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಎತ್ತಿಹಿಡಿಯುವಲ್ಲಿ ಲೋಕಾಯುಕ್ತ ಸಂಸ್ಥೆ ಪ್ರಮುಖ ಪಾತ್ರ ವಹಿಸುತ್ತದೆ. ಕಳೆದ ನಾಲ್ಕು ದಶಕಗಳಲ್ಲಿ, ಇದು ಸರ್ಕಾರಿ ಮೇಲ್ವಿಚಾರಣೆಯನ್ನು ಹೆಚ್ಚು ವಿಶ್ವಾಸಾರ್ಹವಾಗಿಸಿದೆ ಎಂದು ಹೇಳಿದರು. ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳಾದ ನ್ಯಾ. ಬಿ.ವಿ. ನಾಗರತ್ನ, ನ್ಯಾ. ಅರವಿಂದ್‌ಕುಮಾರ್ ಸೇರಿ ಹಲವು ನ್ಯಾಯಮೂರ್ತಿಗಳು ಉಪಸ್ಥಿತರಿದ್ದರು.

ಕರ್ನಾಟಕದ ನ್ಯಾಯಾಂಗ ವ್ಯವಸ್ಥೆಯಲ್ಲಿ ದಾಖಲೆಗಳ ಡಿಜಿಟಲೀಕರಣ, ಇ-ಫೈಲಿಂಗ್ ಹಾಗೂ ಕಾಗದರಹಿತ ವ್ಯವಸ್ಥೆ ನಿರ್ಮಿಸುವ ದಿಸೆಯಲ್ಲಿ ಉಪಕ್ರಮಗಳು ಆರಂಭಗೊಂಡಿದ್ದು, ಇದು ವೇಗ ಪಡೆದುಕೊಳ್ಳಬೇಕಾಗಿದೆ ಎಂದು ಅಭಿಪ್ರಾಯಪಟ್ಟರು. ಬೆಂಗಳೂರಿನ ನ್ಯಾಯಾಲಯಗಳಲ್ಲಿ ಕಡತಗಳ ಸಂಗ್ರಹ ಹಾಗೂ ಬೇಕೆಂದಾಗ ಅವುಗಳ ಲಭ್ಯತೆಯೇ ದೊಡ್ಡ ತೊಡಕಾಗಿತ್ತು ಎಂದರು.

ಭಾರತದ ತೈಲ ಹಡಗಿನ ಮೇಲೆ ಇರಾನ್ ದಾಳಿ!

ಪುಟ ೧ → 14 ಹಡಗುಗಳಲ್ಲಿ ಕೇವಲ 2 ಹಡಗುಗಳ ಮೇಲೆ ಇರಾನ್ ಗನ್‌ಬೋಟುಗಳು ದಾಳಿ ನಡೆಸಿದ್ದು, ಅವುಗಳಲ್ಲಿ ಒಂದು ಹಡಗಿಗೆ ಮಾತ್ರ ಗುಂಡು ತಗುಲಿದೆ. 14ರಲ್ಲಿ ಒಂದು ಹಡಗು ಹಾರ್ಮುಜ್ ಜಲಸಂಧಿಯನ್ನು ದಾಟುವಲ್ಲಿ ಯಶಸ್ವಿಯಾಗಿದ್ದು, ಉಳಿದ 13 ಹಡಗುಗಳು ಗುಂಡಿನ ದಾಳಿ ಕಾರಣ ಹಿಂದಿರುಗಿವೆ. ಒಮಾನ್‌ನಿಂದ 37 ಕಿ.ಮೀ. ಈಶಾನ್ಯದಲ್ಲಿ ಗನ್‌ಬೋಟುಗಳು ದಾಳಿ ನಡೆಸಿವೆ. ಖೇಶ್ಮ್ ಮತ್ತು ಲರಾಕ್ ದ್ವೀಪಗಳ ನಡುವೆ ಘಟನೆ ಸಂಭವಿಸಿದೆ ಎಂದು ವರದಿಯಾಗಿದೆ.


ಹಾರ್ಮುಜ್‌ನಲ್ಲಾದ ಆಘಾತಕಾರಿ ಬೆಳವಣಿಗೆಯ ಹಿನ್ನೆಲೆ ಭಾರತದತ್ತ ಪ್ರಯಾಣಿಸುತ್ತಿದ್ದ ಎರಡೂ ತೈಲ ಹಡಗುಗಳು ಬಲವಂತವಾಗಿ ಹಿಂದಿರುಗುವ ಪರಿಸ್ಥಿತಿ ಎದುರಾಗಿದೆ ಎಂದು ತಿಳಿದುಬಂದಿದೆ. ಘಟನೆಯ ವಿರುದ್ಧ ವಿದೇಶಾಂಗ ವ್ಯವಹಾರಗಳ ಸಚಿವಾಲಯ (ಎಂಇಎ) ದಿಲ್ಲಿಯಲ್ಲಿನ ಇರಾನ್ ರಾಯಭಾರಿ ಡಾ.ಮೊಹಮ್ಮದ್ ಫಥಾಲಿ ಅವರಿಗೆ ಸಮನ್ ಕಳುಹಿಸಿ ಕರೆಸಿಕೊಂಡಿದ್ದು, ತನ್ನ ಪ್ರತಿಭಟನೆಯನ್ನು ಸಲ್ಲಿಸಿದೆ. ಅಲ್ಲದೆ, ಆದಷ್ಟು ಬೇಗನೆ ಭಾರತೀಯ ಹಡಗುಗಳ ಸುರಕ್ಷಿತ ಸಂಚಾರ ಪ್ರಕ್ರಿಯೆಗೆ ಅನುವು ಮಾಡಿಕೊಡಬೇಕು ಎಂದು ರಕ್ಷಣಾ ಕಾರ್ಯದರ್ಶಿ ವಿಕ್ರಮ್ ಮಿಸ್ರಿ ಇರಾನ್ ರಾಯಭಾರಿಗೆ ತಾಕೀತು ಮಾಡಿದ್ದಾರೆ. ಜಗ್ ಅರ್ನಾವ್ ಮತ್ತು ಸನ್ಮಾರ್ ಹೆರಾಲ್ಡ್ ಎಂಬ ಹೆಸರಿನ ಎರಡು ತೈಲ ಹಡಗುಗಳು ಹಾರ್ಮುಜ್‌ನಿಂದ ಹೊರಟಿದ್ದು, ಜಗ್ ಅರ್ನಾವ್ ಹಡಗಿನ ಮೇಲೆ ಇರಾನ್ ಗನ್‌ಬೋಟುಗಳು ಗುಂಡಿನ ದಾಳಿ ನಡೆಸಿದ್ದವು. ಆದರೆ ಸನ್ಮಾರ್ ಹೆರಾಲ್ಡ್ ಅನ್ನು ಗುರಿಯಾಗಿಸಿ ದಾಳಿ ನಡೆದಿರಲಿಲ್ಲ. ಗುಂಡಿನ ದಾಳಿ ಹೊರತಾಗಿಯೂ ಜಗ್ ಅರ್ನಾವ್ ತೈಲ ಟ್ಯಾಂಕರ್‌ಗೆ ಹಾನಿಯಾಗಿಲ್ಲ.

ಪರಿಸ್ಥಿತಿ ಅವಲೋಕಿಸಿದ ಭಾರತೀಯ ನೌಕಾಪಡೆ: ಹಾರ್ಮುಜ್‌ನಲ್ಲಿ ಈ ಹಿಂದೆಯೇ ಭಾರತ ನಿಯೋಜಿಸಿದ್ದ ಭಾರತೀಯ ನೌಕಾಪಡೆಗೆ ಸೇರಿದ ಎರಡು ಯುದ್ಧನೌಕೆಗಳು ಪರಿಸ್ಥಿತಿಯ ಅವಲೋಕನ ನಡೆಸುತ್ತಿವೆ. ಘಟನೆಗೆ ಕಾರಣವೇನೆಂದು ಮಾಹಿತಿಯನ್ನು ಕಲೆಹಾಕುವಲ್ಲಿ ಭಾರತೀಯ ನೌಕಾಪಡೆ ಅಧಿಕಾರಿಗಳು ವ್ಯಸ್ತವಾಗಿದ್ದಾರೆಂಬ ಮಾಹಿತಿ ಲಭ್ಯವಾಗಿದೆ.

ಭಾರತೀಯ ತೈಲ ಹಡಗುಗಳು ಸುರಕ್ಷಿತ!: ಇರಾನ್ ಗನ್‌ಬೋಟುಗಳ ಗುಂಡಿನ ದಾಳಿ ಹೊರತಾಗಿಯೂ ಎರಡು ಹಡಗುಗಳಿಗೂ ಅದರಲ್ಲಿದ್ದ ಸಿಬ್ಬಂದಿಗೂ ಯಾವುದೇ ಹಾನಿಯಾಗಿಲ್ಲ ಎಂದು ತಿಳಿದುಬಂದಿದೆ. ಇವೆರಡರಲ್ಲಿ ಒಂದು ವಿಎಲ್‌ಸಿಸಿ (ಬೃಹತ್ ತೈಲ ಕ್ಯಾರಿಯರ್) ಸೂಪರ್ ಟ್ಯಾಂಕರ್ ಹಡಗು ಆಗಿದ್ದು, ಇವೆರಡರಲ್ಲಿ 2 ದಶಲಕ್ಷ ಬ್ಯಾರೆಲ್ ಇರಾಕಿ ಕಚ್ಚಾ ತೈಲವಿತ್ತೆಂದು ಟ್ಯಾಂಕರ್ ಟ್ರ್ಯಾಕರ್ ದೃಢೀಕರಿಸಿದೆ.

ಇರಾನ್ ರಾಯಭಾರಿಗೆ ಎಂಇಎ ಸಮನ್

ಭಾರತೀಯ ತೈಲ ಹಡಗುಗಳ ಮೇಲೆ ಇರಾನ್ ಗನ್‌ಬೋಟುಗಳು ಗುಂಡಿನ ದಾಳಿ ನಡೆಸಿದ ಬಳಿಕ ವಿದೇಶಾಂಗ ವ್ಯವಹಾರಗಳ ಸಚಿವಾಲಯ (ಎಂಇಎ) ದಿಲ್ಲಿಯಲ್ಲಿನ ಇರಾನ್ ರಾಯಭಾರಿ ಡಾ.ಮೊಹಮ್ಮದ್ ಫಥಾಲಿ ಅವರಿಗೆ ಸಮನ್ ಕಳುಹಿಸಿದೆ.



ಭಾರತದ ವ್ಯಾಪಾರಿ ಹಡಗುಗಳ ಮೇಲೆ ನಡೆಸಿದ ದಾಳಿಯನ್ನು ಸಭೆಯಲ್ಲಿ ರಕ್ಷಣಾ ಕಾರ್ಯದರ್ಶಿ ವಿಕ್ರಮ್ ಮಿಸ್ರಿ ವಿರೋಧಿಸಿದ್ದಾರೆ. ಭಾರತದ ದೃಷ್ಟಿಕೋನವನ್ನು ಇರಾನ್ ಆಡಳಿತಕ್ಕೆ ತಿಳಿಸುವಂತೆ ಮಿಸ್ರಿ ಇರಾನ್ ರಾಯಭಾರಿಗೆ ಸ್ಪಷ್ಟಪಡಿಸಿದ್ದಾರೆ. ಭಾರತದತ್ತ ಪ್ರಯಾಣಿಸುವ ಎಲ್ಲಾ ಹಡಗುಗಳ ಸುರಕ್ಷಿತ ಸಂಚಾರಕ್ಕೆ ಅನುವು ಮಾಡಿಕೊಡಬೇಕೆಂದು ಮಿಸ್ರಿ ಇರಾನ್‌ಗೆ ತಾಕೀತು ಮಾಡಿದ್ದಾರೆ. ಈ ಸಂಬಂಧ ಎಂಇಎ ವಕ್ತಾರ ರಣಧೀರ್ ಜೈಸ್ವಾಲ್ ಅಧಿಕೃತ ಹೇಳಿಕೆಯನ್ನು ಎಕ್ಸ್ ಪೋಸ್ಟ್ ನಲ್ಲಿ ಹಂಚಿಕೊಂಡಿದ್ದಾರೆ. ಇರಾನ್ ರಾಯಭಾರಿಯನ್ನು ಕರೆಸಿಕೊಂಡು ಘಟನೆ ವಿರುದ್ಧ ಕೇಂದ್ರ ಸರ್ಕಾರ ತನ್ನ ಪ್ರತಿಭಟನೆಯನ್ನು ಸಲ್ಲಿಸಿದೆ. ಈ ಮೂಲಕ ಇರಾನ್ ಆಡಳಿತದ ಮೇಲೆ ಭಾರತ ಒತ್ತಡ ಹೇರಿದೆ. ಯಾವ ಕಾರಣಕ್ಕಾಗಿ ಭಾರತೀಯ ತೈಲ ಹಡಗುಗಳ ಮೇಲೆ ಗುಂಡಿನ ದಾಳಿ ನಡೆಸಿದ್ದೀರಿ? ಸ್ನೇಹ ರಾಷ್ಟ್ರವಾದ ಭಾರತದ ತೈಲ ಹಡಗುಗಳ ಮೇಲೆ ಯಾಕೆ ದಾಳಿ ಮಾಡಲಾಗಿದೆ? ಎಂದು ಇರಾನ್ ರಾಯಭಾರಿಯನ್ನು ಪ್ರಶ್ನಿಸಲಾಗಿದೆ ಎಂದು ವರದಿಯಾಗಿದೆ.

ಹಾರ್ಮುಜ್ ಸುರಕ್ಷಿತವೇ?

ಇತ್ತೀಚೆಗೆ ಘಟನೆಯಿಂದಾಗಿ ಇಂತಹದ್ದೊಂದು ಪ್ರಶ್ನೆ ಎದುರಾಗಿದೆ. ಭಾರತೀಯ ಹಡಗುಗಳ ಮೇಲೆ ಗುಂಡಿನ ದಾಳಿ ಆಗಿರುವುದರ ಹಿಂದಿನ ಕಾರಣವೇನೆಂಬ ಬಗ್ಗೆ ಇರಾನ್ ತನ್ನ ಸ್ಪಷ್ಟನೆ ನೀಡುವುದು ಬಾಕಿಯಿದೆ. ಇರಾನ್ ಮತ್ತು ಒಮಾನ್ ನಡುವಿನ ಈ ಜಲಸಂಧಿಯ ಮೂಲಕ ಜಾಗತಿಕ ಕಚ್ಚಾ ತೈಲ ಮಾರಾಟದ ಶೇ.20ರಷ್ಟು ಪಾಲು ದಾಟುತ್ತವೆ. ಆದರೆ ಈ ಘಟನೆಯಿಂದ ಹಾರ್ಮುಜ್‌ನಲ್ಲಿ ಸಾಗರೋತ್ತರ ಸುರಕ್ಷತೆ ವಿಚಾರದಲ್ಲಿ ಹೊಸ ಆತಂಕ ಸೃಷ್ಟಿಸಿದೆ.



ಬನ್ನೇರುಘಟ್ಟಕ್ಕೆ ಬಂದ ದಕ್ಷಿಣ ಆಫ್ರಿಕಾದ ಚೀತಾಗಳು

ಬೆಂಗಳೂರು/ಆನೇಕಲ್: ಬನ್ನೇರುಘಟ್ಟ ಮೃಗಾಲಯಕ್ಕೆ ದಕ್ಷಿಣ ಆಫ್ರಿಕಾದಿಂದ ತರಿಸಲಾದ 4 ಚೀತಾಗಳನ್ನು (ಚೀತಾ) ಅರಣ್ಯ ಮತ್ತು ಪರಿಸರ ಸಚಿವ ಈಶ್ವರ ಖಂಡ್ರೆ, ಅವರು ಶುಕ್ರವಾರ ಮಧ್ಯರಾತ್ರಿ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಬರಮಾಡಿಕೊಂಡರು.



ಶುಕ್ರವಾರ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಸರಕು ಸಾಗಣೆ ವಿಭಾಗಕ್ಕೆ ತೆರಳಿ ಬನ್ನೇರುಘಟ್ಟ ಮೃಗಾಲಯಕ್ಕೆ ಆಗಮಿಸುತ್ತಿರುವ ಈ ವಿದೇಶೀ ಅತಿಥಿಗಳನ್ನು ಬರಮಾಡಿಕೊಂಡರು.

ದಕ್ಷಿಣ ಆಫ್ರಿಕಾದಿಂದ ಬೆಂಗಳೂರಿಗೆ ಆಗಮಿಸಿರುವ ಈ ಚೀತಾಗಳಿಗೆ ವಾತಾವರಣ, ಹವಾಮಾನ ಬದಲಾವಣೆಯಾಗುವ ಕಾರಣ ಅವುಗಳಿಗೆ ಯಾವುದೇ ತೊಂದರೆ ಆಗದಂತೆ, ಆರೋಗ್ಯ ಸಮಸ್ಯೆ ಎದುರಾಗದ ರೀತಿಯಲ್ಲಿ ಸೂಕ್ತ ನಿಗಾ ಇಡಬೇಕು. ವನ್ಯಜೀವಿಗಳನ್ನು ಕ್ವಾರಂಟೈನ್‌ನಲ್ಲಿರಬೇಕು. 30 ದಿನಗಳ ಕಾಲ ಗೊತ್ತುಪಡಿಸಿದ ಆಹಾರ ನೀಡಬೇಕು. ಈ ವಿದೇಶಿ ವನ್ಯಜೀವಿಗಳಿಗೆ ಸೋಂಕು ವಿನಾ ರೋಗ ಇದೆಯೇ ಎಂದು ಪರೀಕ್ಷಿಸಬೇಕು. ಪ್ರಾಣಿಗಳನ್ನು ಸುರಕ್ಷಿತವಾಗಿ ಬನ್ನೇರುಘಟ್ಟಕ್ಕೆ ಸಾಗಿಸಬೇಕು ಎಂದು ಅಧಿಕಾರಿಗಳಿಗೆ ಮತ್ತು ಪಶು ವೈದ್ಯಾಧಿಕಾರಿಗಳಿಗೆ ಸೂಚನೆ ನೀಡಿದರು. ಒಂದು ಕಾಲದಲ್ಲಿ ಕರ್ನಾಟಕದ ಕಾಡುಗಳಲ್ಲಿಯೂ ಚೀತಾಗಳು ಇದ್ದವು ಎಂದು ಕರೆಸಿಕೊಳ್ಳುವ ಚೀತಾಗಳಿದ್ದವು. ಆದರೆ ರಾಜ್ಯದ ಕಾಡಿನಲ್ಲಿ ಇವು ನಾಮಾವಶೇಷ ಆಗಿವೆ. ಹೀಗಾಗಿ ಮೃಗಾಲಯಗಳಲ್ಲಾದರೂ ಇವುಗಳನ್ನು ನೋಡಲು ಅವಕಾಶ ಆಗಬೇಕು. ಈ ನಿಟ್ಟಿನಲ್ಲಿ ಅವುಗಳ ಸುರಕ್ಷತೆಗೆ ಆದ್ಯ ಗಮನ ನೀಡುವಂತೆ ಕರ್ನಾಟಕ ಮೃಗಾಲಯ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಸುನೀಲ್ ಪನ್ವಾರ್ ಅವರಿಗೆ ಸೂಚಿಸಿದರು.





4 ಚೀತಾಗಳ ಆಗಮನ

ಕಾಡು ಪ್ರಾಣಿಗಳ ದಾಳಿ ತಡೆಗೆ ಕ್ರಮ: ಸಚಿವ ಈಶ್ವರ ಖಂಡ್ರೆ

ಚಿಕ್ಕಮಗಳೂರು: ಕಾಡು ಪ್ರಾಣಿಗಳ ದಾಳಿಯಿಂದ ಸಂಭವಿಸುತ್ತಿರುವ ಸಾವುಗಳ ನಿಯಂತ್ರಣಕ್ಕೆ ಹೆಚ್ಚಿನ ಕ್ರಮಗಳನ್ನು ಕೈಗೊಳ್ಳಲಾಗುವುದು, ಈ ಸಂಬಂಧ ಹಿರಿಯ ಅಧಿಕಾರಿಗಳ ಜತೆ ಚರ್ಚಿಸಲಾಗುವುದು ಎಂದು ಅರಣ್ಯ ಸಚಿವ ಖಂಡ್ರೆ ತಿಳಿಸಿದರು.

ಕಳಸದ ಯಮಗೊಂಡ ಎಸ್ಟೇಟ್‌ನಲ್ಲಿ ಶನಿವಾರ ಕಾಡುಕೋಣ ದಾಳಿ ಯಿಂದ ತೋಟ ಕಾರ್ಮಿಕರೊಬ್ಬರು ಮೃತಪಟ್ಟ ಕುರಿತು ಚಿಕ್ಕಮಗಳೂರು ನಗರದಲ್ಲಿ ಸಂತಾಪ ವ್ಯಕ್ತಪಡಿಸಿ ಪ್ರತಿಕ್ರಿಯಿಸಿದ ಸಚಿವರು, ಕಾಡು ಪ್ರಾಣಿಗಳಿಂದ ಯಾವುದೇ ಸಾವು ಸಂಭವಿಸಬಾರದು ಎನ್ನುವುದು ನಮ್ಮ ಗುರಿ. ನಮ್ಮ ಅಧಿಕಾರಿಗಳು ಇಂತಹ ಘಟನೆ ತಪ್ಪಿಸಲು ಹಗಲಿರುಳೂ ಶ್ರಮಿಸುತ್ತಿದ್ದಾರೆ. ನಿದ್ರೆಯಿಲ್ಲದೆ ಓಡಾಡುತ್ತಿದ್ದಾರೆ. ಸರ್ಕಾರ ಸಹ ಬಹಳಷ್ಟು ಕ್ರಮಗಳನ್ನು ಈಗಾಗಲೇ ತೆಗೆದುಕೊಂಡಿದೆ ಎಂದರು.

ಬ್ಯಾರಿಕೇಡ್ ಅಳವಡಿಸುವುದು, ಟೆಂಟೆಕಲ್ ಫೆನ್ಸಿಂಗ್, ಕಂದಕ ನಿರ್ಮಾಣ, ಆಧುನಿಕ ಉಪಕರಣಗಳ ಬಳಕೆ, ಎಲ್‌ಟಿಎಫ್, ಇಕೆಎಫ್‌ರಚನೆ, ಟಾಸ್ಕ್‌ಫೋರ್ಸ್, ಆ್ಯಂಟಿ ಪೋಚಿಂಗ್ ಕ್ಯಾಂಪ್‌ಗಳನ್ನು ಬಲಪಡಿಸುವ ಕೆಲಸ ಮಾಡಿದ್ದೇವೆ. ಇಷ್ಟೆಲ್ಲಾ ಆದರೂ ಈ ದಾಳಿ ನಡೆದಿದೆ ಎಂದು ವಿಷಾದಿಸಿದರು. ಟ್ರಕ್ಕಿಂಗ್ ತೆರಳುವವರಿಗೆ ನಿನ್ನೆ ಇಲಾಖೆಯಿಂದ ಎಸ್ ಒಪಿ ಬಿಡುಗಡೆ ಮಾಡಲಾಗಿದೆ. ಯಾರ‍್ಯಾರು ಚಾರಣಿಗರಿದ್ದಾರೋ ಅವರೆಲ್ಲರೂ ಈ ಎಸ್ ಒಪಿಗಳನ್ನು ಪಾಲನೆ ಮಾಡಬೇಕು. ಇಲ್ಲವಾದಲ್ಲಿ ಚಾರಣಿಗರು ಮತ್ತು ಅಧಿಕಾರಿಗಳ ವಿರುದ್ಧ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದರು.

ವಿದ್ಯುತ್ ದರ ಏರಿಕೆ ಕುರಿತು ಬಿಜೆಪಿ ನಾಯಕರ ಆರೋಪಕ್ಕೆ ಪ್ರತಿಕ್ರಿಯಿಸಿದ ಸಚಿವರು, ಪೆಟ್ರೋಲ್, ಡೀಸೆಲ್, ಗ್ಯಾಸ್ ಬೆಲೆ ಏರಿಕೆಯಾಗಿದೆ. ಈ ಬಗ್ಗೆ ಬಿಜೆಪಿ ಮೊದಲು ಆತ್ಮಾವಲೋಕನ ಮಾಡಿಕೊಳ್ಳಲಿ ಎಂದರು. ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾತೈಲ ಬೆಲೆ ಕಡಿಮೆ ಇದ್ದರೂ ಭಾರತದಲ್ಲಿದರ ಹೆಚ್ಚಿದೆ. ಕೇಂದ್ರದಿಂದ ಬಡವರ ಹಣ ಲೂಟಿಯಾಗುತ್ತಿದೆ. ತೆರಿಗೆ ಪಾಲು ಹಂಚಿಕೆ ವಿಚಾರದಲ್ಲಿ ರಾಜ್ಯಕ್ಕೆ ಅನ್ಯಾಯವಾಗುತ್ತಿದೆ ಎಂದರು.

ಸಿಮೆಂಟ್ ನಾಮಫಲಕ ಕುಸಿದು 2 ಮಕ್ಕಳು ಸಾವು

ರಾಯಚೂರು (ಮಾನ್ವಿ): ಜಿಲ್ಲೆಯ ಮಾನ್ವಿ ತಾಲೂಕಿನ ರಾಯಚೂರು ಗ್ರಾಮೀಣ ಕ್ಷೇತ್ರದ ವ್ಯಾಪ್ತಿಯ ಬೈಲ್ ಮಾರ್ಚೆಡ್ ಗ್ರಾಮದಲ್ಲಿ ಶುಕ್ರವಾರ ರಾತ್ರಿ ಬಯಲು ನಾಟಕದ ಪ್ರದರ್ಶನ ವೀಕ್ಷಿಸುತ್ತಿದ್ದ ಸಮಯದಲ್ಲಿ ಸಮುದಾಯ ಭವನದ ಸಿಮೆಂಟಿನ ನಾಮಫಲಕ ಕುಸಿದು ಬಿದ್ದು ಸ್ಥಳದಲ್ಲೇ ಇಬ್ಬರು ಮಕ್ಕಳು ಮೃತಪಟ್ಟಿದ್ದು, ಓರ್ವ ಮಹಿಳೆ ಗಂಭೀರವಾಗಿ ಗಾಯಗೊಂಡಿದ್ದಾರೆ.





1) ಶ್ರೀಮತಿ ಲಕ್ಷ್ಮವ್ವ ಗಂ: ರಂಗಪ್ಪ ಕರಡಿಗುಡ್ಡ ವಯಾ: **52** ವರ್ಷ ಉದ್ಯೋಗ: ಮನೆಗೆಲಸ ಸಾ|| ರಾಮದುರ್ಗ ಸರ್ಕಲ್ ಹತ್ತೀರ, ಬಾದಾಮಿ ತಾ|| ಬಾದಾಮಿ ಜಿ|| ಬಾಗಲಕೋಟೆ, **2)** ಶ್ರೀ ರಾಘವೇಂದ್ರ ತಂ: ರಂಗಪ್ಪ ಕರಡಿಗುಡ್ಡ ವಯಾ: **25** ವರ್ಷ ಉದ್ಯೋಗ: ಒಕ್ಕಲುತನ ಸಾ|| ರಾಮದುರ್ಗ ಸರ್ಕಲ್ ಹತ್ತೀರ, ಬಾದಾಮಿ ತಾ|| ಬಾದಾಮಿ ಜಿ|| ಬಾಗಲಕೋಟೆ, **3)** ಶ್ರೀ ಮಹಾಂತೇಶ ತಂ: ರಂಗಪ್ಪ ಕರಡಿಗುಡ್ಡ ವಯಾ: **25** ವರ್ಷ ಉದ್ಯೋಗ: ಒಕ್ಕಲುತನ ಸಾ|| ರಾಮದುರ್ಗ ಸರ್ಕಲ್ ಹತ್ತೀರ, ಬಾದಾಮಿ ತಾ|| ಬಾದಾಮಿ ಜಿ|| ಬಾಗಲಕೋಟೆ, **4)** ಶ್ರೀಮತಿ ಸುಧಾ @ ಸುಧಾರಾಣಿ ಗಂ: ಸಿದ್ಧಾರೂಢಾ ಚವಡಿ ವಯಾ: **23** ವರ್ಷ ಉದ್ಯೋಗ: ಮನೆಗೆಲಸ ಸಾ|| ಹಂಸನೂರ ತಾ|| ಗುಳೆದಗುಡ್ಡ ಜಿ|| ಬಾಗಲಕೋಟೆ, **5)** ಶ್ರೀ ಹುಲ್ಲಪ್ಪ ತಂ: ಚಂದಪ್ಪ ಕರಡಿಗುಡ್ಡ ವಯಾ: **69** ವರ್ಷ ಉದ್ಯೋಗ: ನಿವೃತ್ತ ನೌಕರ ಸಾ|| ಹಂಸನೂರ ತಾ|| ಗುಳೆದಗುಡ್ಡ ಜಿ|| ಬಾಗಲಕೋಟೆ, **6)** ಶ್ರೀಮತಿ ನೀಲವ್ವ @ ಲೀಲಾ ಗಂ: ಅಡಿವೆಪ್ಪ ಕರಡಿಗುಡ್ಡ ವಯಾ: **57** ವರ್ಷ ಉದ್ಯೋಗ: ಮನೆಗೆಲಸ ಸಾ|| ಹಂಸನೂರ ತಾ|| ಗುಳೆದಗುಡ್ಡ ಜಿ|| ಬಾಗಲಕೋಟೆ, **7)** ಶ್ರೀ ಮಂಜು ತಂ: ಅಡಿವೆಪ್ಪ ಕರಡಿಗುಡ್ಡ ವಯಾ: **21** ವರ್ಷ ಉದ್ಯೋಗ: ಮನೆಗೆಲಸ ಸಾ|| ಹಂಸನೂರ ತಾ|| ಗುಳೆದಗುಡ್ಡ ಜಿ|| ಬಾಗಲಕೋಟೆ, **8)** ಶ್ರೀ ಯಮನಪ್ಪ ತಂ: ಚಂದಪ್ಪ ಕರಡಿಗುಡ್ಡ ವಯಾ: **54** ವರ್ಷ ಉದ್ಯೋಗ: ಕೂಲಿ ಸಾ|| ಹಂಸನೂರ ತಾ|| ಗುಳೆದಗುಡ್ಡ ಜಿ|| ಬಾಗಲಕೋಟೆ

.....ಎದುರುದಾರರು/ಪ್ರತಿವಾದಿ ನಂ: **2** ರಿಂದ **9**

ಸಾರ್ವಜನಿಕ ಜಾಹೀರು ನೋಟಿಸು

ಸದರಿ ಮೇಲ್ಕಾಣಿಸಿದ ದಾವಾದಲ್ಲಿನ ಪ್ರತಿವಾದಿ ನಂ: **2** ರಿಂದ **9** ರವರಿಗೆ ಸಾಕಷ್ಟು ಬಾರಿ ಮಾನ್ಯ ನ್ಯಾಯಾಲಯದ ಮುಖಾಂತರ ಸಮನ್ಸನ್ನು ಕಳುಹಿಸಿದರೂ ಸಹ ಮೇಲಿನವರು ಉದ್ದೇಶಪೂರ್ವಕವಾಗಿ ಪಡೆದುಕೊಂಡಿರುವುದಿಲ್ಲಾ ಆದ ಕಾರಣ ಸದರಿ ದಾವಾದಲ್ಲಿ ಮೇಲಿನ ಪ್ರತಿವಾದಿಯರು ನ್ಯಾಯಾಲಯಕ್ಕೆ ಬಂದು ಹಾಜರಾಗುವುದು ಅತೀ ಅವಶ್ಯವಾಗಿರುತ್ತದೆ. ಆದ್ದರಿಂದ ಮೆ|| ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ. ನ್ಯಾಯಾಧೀಶರ ನ್ಯಾಯಾಲಯ, ಬಾದಾಮಿ ಇವರ ನ್ಯಾಯಾಲಯದಲ್ಲಿ ಅಸಲು ದಾವಾ ಸಂಖ್ಯೆ **172/2025** ಅಂತಾ ದಾಖಲಿಸಿದ್ದು ಸದರಿ ಮೇಲ್ಕಾಣಿಸಿದ ದಾವಾಕ್ಕೆ ಸಂಬಂಧಿಸಿದಂತೆ ಮೇಲಿನವರದ್ದು ಏನಾದರೂ ಹಿತಾಸಕ್ತಿ ಮತ್ತು ತಕರಾರು ಇದ್ದಲ್ಲಿ ಸಂಬಂಧ ಪಟ್ಟವರು ದಿನಾಂಕ: **18/6/2026** ರಂದು ಬೆಳಿಗ್ಗೆ **10:30** ಘಂಟೆಗೆ ತಾವಾಗಲಿ ಅಥವಾ ತಮ್ಮ ಪರ ವಕೀಲರ ಮುಖಾಂತರವಾಗಲಿ ಹಾಜರಾಗಿ ತಕರಾರು ವೈಗೆರೆ ಸಲ್ಲಿಸತಕ್ಕದ್ದು. ತಪ್ಪಿದಲ್ಲಿ ಯಾವುದೇ ತಕರಾರು ಇರುವುದಿಲ್ಲಾ ಅಂತಾ ಪರಿಗಣಿಸಿ ಮುಂದಿನ ಆದೇಶವನ್ನು ಮಾಡಲಾಗುವುದು ಅಂತಾ ಕೊಟ್ಟ ಸಾರ್ವಜನಿಕ ನೋಟಿಸು ಈ ದಿವಸ ಮೆ|| ನ್ಯಾಯಾಲಯದ ಆದೇಶದ ಮೇರೆಗೆ ಸಹಿ ಮತ್ತು ಮೋಹರಿನೊಂದಿಗೆ ಹೊರಡಿಸಲಾಗಿದೆ.

ಸ್ಥಳ: ಬಾದಾಮಿ ದಿ: **2–4–2026**

ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/– ಶಿರಸ್ತೆದಾರರು,
ಮೆ|| ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ ಬಾದಾಮಿ
ವಾದಿಯ ಪರ ವಕೀಲರು
ಸಹಿ/– ಶ್ರೀ ಎಮ್.ಎಮ್. ಗೌಡರ, ವಕೀಲರು, ಬಾದಾಮಿ

ಕ್ರಿಮಿ. ನಂ.: **106/2025**

ಮೆ|| ಪ್ರಧಾನ ದಿವಾಣಿ ನ್ಯಾಯಾಧೀಶರ ನ್ಯಾಯಾಲಯ ಹಾಗೂ ಜೆ.ಎಂ.ಎಫ್.ಸಿ. ಬಾಗಲಕೋಟೆ ಇವರ ನ್ಯಾಯಾಲಯದಲ್ಲಿ

1) ನಿರ್ಮಲಾ ಬಸಪ್ಪ ಕೋಲಕಾರ ಸಾ|| ರಾಜೀವಗಾಂಧಿ ಆಶ್ರಯ ಕಾಲೋನಿ ನವನಗರ, ತಾ||ಜಿ|| ಬಾಗಲಕೋಟೆ .....ಅರ್ಜಿದಾರರು

ವಿರುದ್ಧ

1) ಮೆ|| ಪೌರಾಯುಕ್ತರು, ಜನನ ಮತ್ತು ಮರಣ ಕಾರ್ಯಾಲಯ ನಗರಸಭೆ, ನವನಗರ ಬಾಗಲಕೋಟ .....ಎದುರುದಾರರು

ಸಾರ್ವಜನಿಕ ಜಾಹೀರ ಪ್ರಕಟಣೆ
(ಅರ್ಜಿ ಕ್ರಮಾದೇಶ 5 ನಿಯಮ 20 ದಿವಾಣಿ ಪ್ರಕ್ರಿಯಾ ಸಂಹಿತೆ ಅಡಿಯಲ್ಲಿ ಕೋರ್ಟ ಸಮನ್ಸ)

ಸದರಿ ಪ್ರಕರಣದಲ್ಲಿ ಅರ್ಜಿದಾರಳು ಎದುರುದಾರರ ವಿರುದ್ಧ ತನ್ನ ಅತ್ತೆಯಾದ ಶಂಕ್ರಮ್ಮ ಗಂ: ಹಣಮಂತ ಕೋಲಕಾರ ಈತಳು ದಿನಾಂಕ: **06–07–2022** ರಂದು ಬಾಗಲಕೋಟೆ ಶಹರದ ತನ್ನ ವಾಸದ ಮನೆಯಲ್ಲಿ ಮೃತಳಾಗಿದ್ದು, ಇದರ ಬಗ್ಗೆ ಮೆ|| ನ್ಯಾಯಾಲಯದಿಂದ ಎದುರುದಾರರಿಗೆ ಮರಣ ವಿವರವನ್ನು ಮರಣ ರಜಿಸ್ಟರದಲ್ಲಿ ದಾಖಲ್ ಮಾಡಿಕೊಳ್ಳಲು ಮೆ|| ನ್ಯಾಯಾಲಯದಿಂದ ಎದುರುದಾರಿಗೆ ನಿರ್ದೇಶನ ನೀಡುವ ಕುರಿತು ಸದರಿ ಅರ್ಜಿಯನ್ನು ಮಾಡಿರುತ್ತಾರೆ. ಆದರೆ ಸದರಿ ಪ್ರಕರಣದಲ್ಲಿ ಮೃತಳ ಹಿತಾಸಕ್ತಿಯುಳ್ಳವರು ಇದ್ದದ್ದಲ್ಲಿ ದಿನಾಂಕ: **20/06/2026** ರಂದು ಮೆ|| ಹೆಚ್ಚುವರಿ ದಿವಾಣಿ ನ್ಯಾಯಾಧೀಶರ ನ್ಯಾಯಾಲಯ ಹಾಗೂ ಜೆ.ಎಮ್.ಎಫ್.ಸಿ. ಬಾಗಲಕೋಟ ಇವರ ನ್ಯಾಯಾಲಯದ ಮುಂದೆ ಹಾಜರಿದ್ದು, ತಮ್ಮ ತಕರಾರುಗಳನ್ನು ಸಲ್ಲಿಸತಕ್ಕದ್ದು ಅದಕ್ಕೆ ತಪ್ಪಿದ್ದಲ್ಲಿ ಯಾರದೂ ಏನು ತಕರಾರು ಇರುವುದಿಲ್ಲಾ ಅಂತಾ ಪರಿಗಣಿಸಿ ಮೆ|| ರವರು ಮುಂದಿನ ವಿಚಾರಣೆಯನ್ನು ಕೈಗೆತ್ತಿಗೊಳ್ಳುತ್ತಾರೆ ಅಂತಾ ನೀಡಿದ ಸಾರ್ವಜನಿಕ ನೋಟೀಸು.

ಸದರಿ ಸಮನ್ಸನ್ನು ಇವತ್ತು ದಿನಾಂಕ: **16/04/2026** ರಂದು ಮೆ|| ನ್ಯಾಯಾಲಯದ ಮೊಹರು ಹಾಗೂ ಸಹಿಯೊಂದಿಗೆ ಕೊಡಲಾಗಿದೆ.

ಸ್ಥಳ: ಬಾಗಲಕೋಟ
ದಿನಾಂಕ:

ನ್ಯಾಯಾಲಯದ ಆದೇಶ ಮೇರೆಗೆ
ಸಹಿ/– ಶಿರಸ್ತೆದಾರರು
ಮೆ|| ಪ್ರಧಾನ ದಿವಾಣಿ ನ್ಯಾಯಾಧೀಶರ ನ್ಯಾಯಾಲಯ ಹಾಗೂ ಜೆ.ಎಮ್.ಎಫ್.ಸಿ. ನ್ಯಾಯಾಲಯ ಬಾಗಲಕೋಟ.
ಸಹಿ/– (ಬಿ.ಬಿ. ಮುದ್ದೇಬಿಹಾಳ)
ಅರ್ಜಿದಾರಳ ಪರ ವಕೀಲರು

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜೀನಿಯರರು, ಲೋಕೋಪಯೋಗಿ ಇಲಾಖೆ,
ಕಲಬುರಗಿ ವಿಭಾಗ ಕಲಬುರಗಿ

ಸಂ.ಕಾನಿಅ/ಲೋಇ/ವಿಗು/ತಾಶಾ–4/.ಟೆಂಡರ್.ಅಧಿಸೂಚನೆ/2026–27/210 ದಿನಾಂಕ: 18.04.2026

:: ಟೆಂಡರ್ ಅಧಿಸೂಚನೆ ::

ಈ ಕೆಳಗಿನ ಕಾಮಗಾರಿಗಳ ದರ ಅನುಮೋದನೆಯಾದ ದರಪಟ್ಟಿಯಲ್ಲಿ ಇಲ್ಲದಿರುವ ಪ್ರಯುಕ್ತ ಅಂದಾಜು ಪಟ್ಟಿ ಸಿದ್ದಪಡಿಸಲು ವಿಷಯ ಸೂಚಿಯಲ್ಲಿ ವಿವರಿಸಿದ ವಿವರದಂತೆ ಕಾಮಗಾರಿಯನ್ನು ನಿಗಧಿತ ಅವಧಿಯಲ್ಲಿ ಪೂರ್ಣಗೊಳಿಸಬೇಕಾಗಿರುವುದರಿಂದ ಎಲ್ಲಾ ಸಾಮಗ್ರಿ, ಸಾಗಾಣಿಕೆ ವೆಚ್ಚ ಹಾಗೂ ಇತರ ವೆಚ್ಚಗಳ ದರ ನಮೂದಿಸಲು ಅವಶ್ಯವಿದ್ದಲ್ಲಿ ನಮೂದಿಸಿದ ಕಾಮಗಾರಿ ಪೂರ್ತಿಗೊಳಿಸುವ ಆಸಕ್ತಿ ಉಳ್ಳವರು ಪರಿಣಿತ ಅನುಭವ ಹೊಂದಿದವರು ಮುಚ್ಚಿದ ಲಕೋಟಿಯಲ್ಲಿ ದರ ನಮೂದಿಸಿ ಸಲ್ಲಿಸಲು ಕೋರಲಾಗಿದೆ.

1) ಅರ್ಜಿ ಸ್ವೀಕರಿಸುವ ಕೊನೆಯ ದಿನಾಂಕ: **27.04.2026 : 17:30 (ಕಚೇರಿ ವೇಳೆಯಲ್ಲಿ),** 2) ಖಾಲಿ ಟೆಂಡರ ಪುಸ್ತಕಗಳನ್ನು ನೀಡುವ ದಿನಾಂಕ: **28.04.2026 : 11:30 (ಕಚೇರಿ ವೇಳೆಯಲ್ಲಿ)**

ಟೆಂಡರಿಗಿಟ್ಟ ಕಾಮಗಾರಿಗಳ ವಿವರಣಾ ಪಟ್ಟಿ

1) Particular: Supplying and installation of an 8 Layer Synthetic Acrylic Sports Flooring System, Supply And Inastallation of Handball Goal Posts Made of Aluminium Rectangular Pipe, Supply of volleyball Umpire Chair, Supply and Installation of a portable Volleyball Main Post, Supply of ball stand, Supply Of volleyball, Providing Provision for Water supply and electrical points near hockey Fields, Providing and Fixing FIH certified sand dressed synthetic Hockey Turf, Supplying and installation of Hockey goal posts made of aluminium, Supply installation and commisioning of sprinkler with gun metal spreadre arm, 2" Butterfly valves with B class G 1 pipe, 30 HP kirloskar Mon block pump set along with necessary control panel, providing and fixing Chlorinated poly venyl Chloride pipes, Supplyuing & Fixing of PVDF coated 900 GSM Fabric, Supplying of Hockey Goal Keeper Kit, hockey Sticks, Hockey Balls, hockey Shin Gaurd,

2) Unit : Nos, 3) **Qty :** 1

ಸೂಚನೆ:– ದರ ನಮೂದಿಸಿದಕ್ಕೆ ಮಾತ್ರ ಕಾಮಗಾರಿ ವಹಿಸಿಕೊಡಬೇಕೆಂಬುದು ಹಕ್ಕಿಲ್ಲ ಕಾಮಗಾರಿ ನಿರ್ವಹಿಸಲು ಟೆಂಡರ್ ಆಹ್ವಾನಿಸುವ ಪ್ರಾಧಿಕಾರದ ಹಕ್ಕಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಲೋಕೋಪಯೋಗಿ ಇಲಾಖೆ ವಿಭಾಗ ಕಛೇರಿಗೆ ಸಂಪರ್ಕಿಸಲು ಸೂಚಿಸಲಾಗಿದೆ.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ ವಿಭಾಗ ಕಲಬುರಗಿ.

ವಾ.ಸಾ.ಸಂ.ಇ/ಕಲಬುರಗಿ/47/ಕೆ.ಎಸ್.ಎಂ.ಸಿ.&ಎ/2026–27

ಅಸಲು ದಾವಾ ಸಂಖ್ಯೆ: **369/2025**

ಮೆ|| ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ ನ್ಯಾಯಾಧೀಶರ ನ್ಯಾಯಾಲಯ, ಬಾದಾಮಿ

1) ಶ್ರೀ ಬಸವರಾಜ ತಂ: ಯಲಗೂರದಪ್ಪ ಆರೇರ .....ವಾದಿ

ವಿರುದ್ಧ

1) ಶ್ರೀ ಯಲಗೂರದಪ್ಪ ತಂ: ಯಮನಪ್ಪ ಆರೇರ ಹಾಗೂ ಇತರರು .....ಪ್ರತಿವಾದಿಯರು

ಗೆ,

1) ಶ್ರೀ ಗಣಪತಿ ತಂ: ಭುಜಗಂಪ್ಪ ಆರೇರ@ಕದಂ, ವಯಸ್ಸು: **45** ವರ್ಷ, ಉದ್ಯೋಗ: ಒಕ್ಕಲುತನ ಸಾ|| ಪಟ್ಟದಕಲ್ ತಾ|| ಬಾದಾಮಿ ಜಿ|| ಬಾಗಲಕೋಟೆ ಹಾಲಿವಸ್ತಿ: ಸೆಕ್ಟರ್ ನಂ: **45**, ಪ್ಲಾಟ್ ನಂ: **58** ನವನಗರ ತಾ|| ಜಿ|| ಬಾಗಲಕೋಟ, 2) ಶ್ರೀಮತಿ ದ್ಯಾಮವ್ವ ಗಂ|| ಬಾಬಜೇಪ್ಪ ಘಾಟಿಗೆ, ವಯಾ: **50** ವರ್ಷ ಉದ್ಯೋಗ: ಮನೆಗೆಲಸ ಸಾ|| ಪಟ್ಟದಕಲ್ ತಾ|| ಬಾದಾಮಿ ಜಿ|| ಬಾಗಲಕೋಟೆ 3) ಶ್ರೀ ಸಂಗಪ್ಪ ತಂ|| ಚನ್ನಬಸಪ್ಪ ಹಡಪದ, ವಯಾ: **45** ವರ್ಷ ಉದ್ಯೋಗ: ಒಕ್ಕಲುತನ ಸಾ|| ಪಟ್ಟದಕಲ್ ತಾ|| ಬಾದಾಮಿ ಜಿ|| ಬಾಗಲಕೋಟೆ 4) ಶ್ರೀಮತಿ ಶೀವಬಾಯವ್ವ ಗಂ|| ಮಲ್ಲಪ್ಪ ಬೈಲೂರ ವಯಾ: **51** ವರ್ಷ ಉದ್ಯೋಗ: ಒಕ್ಕಲುತನ ಸಾ|| ಪಟ್ಟದಕಲ್ ತಾ|| ಬಾದಾಮಿ ಜಿ|| ಬಾಗಲಕೋಟೆ

.....ಎದುರುದಾರರು/ಪ್ರತಿವಾದಿ ನಂ: **13, 14, 19, 21**

ಸಾರ್ವಜನಿಕ ಜಾಹೀರು ನೋಟಿಸು

ಸದರಿ ಮೇಲ್ಕಾಣಿಸಿದ ದಾವಾದಲ್ಲಿನ ಪ್ರತಿವಾದಿ ನಂ: **13, 14, 19, 21** ರವರಿಗೆ ಸಾಕಷ್ಟು ಬಾರಿ ಮಾನ್ಯ ನ್ಯಾಯಾಲಯದ ಮುಖಾಂತರ ಸಮನ್ಸನ್ನು ಕಳುಹಿಸಿದರೂ ಸಹ ಮೇಲಿನವರು ಉದ್ದೇಶಪೂರ್ವಕವಾಗಿ ಪಡೆದುಕೊಂಡಿರುವುದಿಲ್ಲಾ ಆದ ಕಾರಣ ಸದರಿ ದಾವಾದಲ್ಲಿ ಮೇಲಿನ ಪ್ರತಿವಾದಿಯರು ನ್ಯಾಯಾಲಯಕ್ಕೆ ಬಂದು ಹಾಜರಾಗುವುದು ಅತೀ ಅವಶ್ಯವಾಗಿರುತ್ತದೆ. ಆದ್ದರಿಂದ ಮೆ|| ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ. ನ್ಯಾಯಾಧೀಶರ ನ್ಯಾಯಾಲಯ, ಬಾದಾಮಿ ಇವರ ನ್ಯಾಯಾಲಯದಲ್ಲಿ ಅಸಲು ದಾವಾ ಸಂಖ್ಯೆ **369/2025** ಅಂತಾ ದಾಖಲಿಸಿದ್ದು ಸದರಿ ಮೇಲ್ಕಾಣಿಸಿದ ದಾವಾಕ್ಕೆ ಸಂಬಂಧಿಸಿದಂತೆ ಮೇಲಿನವರದ್ದು ಏನಾದರೂ ಹಿತಾಸಕ್ತಿ ಮತ್ತು ತಕರಾರು ಇದ್ದಲ್ಲಿ ಸಂಬಂಧಪಟ್ಟವರು ದಿನಾಂಕ: **5/06/2026** ರಂದು ಬೆಳಿಗ್ಗೆ **10:30** ಘಂಟೆಗೆ ತಾವಾಗಲಿ ಅಥವಾ ತಮ್ಮ ಪರ ವಕೀಲರ ಮುಖಾಂತರವಾಗಲಿ ಹಾಜರಾಗಿ ತಕರಾರು ವಗೈರೆ ಸಲ್ಲಿಸತಕ್ಕದ್ದು. ತಪ್ಪಿದಲ್ಲಿ ಯಾವುದೇ ತಕರಾರು ಇರುವುದಿಲ್ಲಾ ಅಂತಾ ಪರಿಗಣಿಸಿ ಮುಂದಿನ ಆದೇಶವನ್ನು ಮಾಡಲಾಗುವುದು ಅಂತಾ ಕೊಟ್ಟ ಸಾರ್ವಜನಿಕ ನೋಟಿಸು ಈ ದಿವಸ ಮೆ|| ನ್ಯಾಯಾಲಯದ ಆದೇಶದ ಮೇರೆಗೆ ಸಹಿ ಮತ್ತು ಮೋಹರಿನೊಂದಿಗೆ ಹೊರಡಿಸಲಾಗಿದೆ. ದಿ: **16–4–2026**

ಸ್ಥಳ: ಬಾದಾಮಿ ದಿ: **9–4–2026**

ನ್ಯಾಯಾಲಯದ ಆದೇಶದ ಮೇರೆಗೆ

ಸಹಿ/– ಶಿರಸ್ತೆದಾರರು,
ಮೆ|| ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ ಬಾದಾಮಿ
ವಾದಿಯ ಪರ ವಕೀಲರು ಸಹಿ/– ಶ್ರೀ ಎಮ್.ಎಮ್. ಗೌಡರ, ವಕೀಲರು ಬಾದಾಮಿ

ಕರ್ನಾಟಕ ಸರ್ಕಾರ
ಲೋಕೋಪಯೋಗಿ ಇಲಾಖೆ, ಬಳ್ಳಾರಿ.

ಐಎಫ್‌ಟಿ ಸಂಖ್ಯೆ ಲೋಇ/ಕಾನಿಇ/ಬವಿ/ಟಿಎಸ್–4/289/2026–27 ದಿನಾಂಕ : 17–04–2026

ಟೆಂಡರ್ ಪ್ರಕಟಣೆ

ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತರಾದ ಆಸಕ್ತಿಯುಳ್ಳ ಅರ್ಹ ಗುತ್ತಿಗೆದಾರರಿಂದ ಈ ಕೆಳಕಾಣಿಸಿದ ಕಾಮಗಾರಿಗಳಿಗೆ ಟೆಂಡರುಗಳನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್(ಕೆಪಿಪಿ)ರ ಮುಖಾಂತರ ಆಹ್ವಾನಿಸಲಾಗಿದೆ. ಕಾಮಗಾರಿಗಳಿಗೆ ದ್ವಿ ಲಕೋಟೆ ಟೆಂಡರಿಂಗ್ ಪದ್ಧತಿಯನ್ನು ಅನುಸರಿಸಲಾಗುವುದು. ಗುತ್ತಿಗೆದಾರರು ಈ ಕೆಳಕಾಣಿಸಿದ ಕಾಮಗಾರಿಗಳಲ್ಲಿ ಯಾವುದಾದರೂ ಅಥವಾ ಎಲ್ಲಾ ಕಾಮಗಾರಿಗಳಿಗೆ ಟೆಂಡರುಗಳನ್ನು ಸಲ್ಲಿಸಬಹುದಾಗಿರುತ್ತದೆ. ಇದಕ್ಕಾಗಿ ಗುತ್ತಿಗೆದಾರರು ಅಂತರ್ಜಾಲದ ಮೂಲಕ ವೆಬ್‌ಸೈಟ್ ವಿಳಾಸ **https://kppp.karnataka.gov.in**ವನ್ನು ಸಂದರ್ಶಿಸಬಹುದಾಗಿರುತ್ತದೆ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳ ಕಛೇರಿಯಲ್ಲಿ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.

ಸೂಚನೆ : ಕಾರಣಾಂತರಗಳಿಂದಾಗಿ ಈ ಕೆಳಗೆ ತಿಳಿಯಪಡಿಸಿದ ಟೆಂಡರ್ ದಿನಾಂಕಗಳು ಹಾಗೂ ಇನ್ನಿತರೆ ಯಾವುದೇ ಬದಲಾವಣೆಗಳಾದಲ್ಲಿ ಅಥವಾ ಮರು ಟೆಂಡರ್ ಆಹ್ವಾನಿಸಿದಲ್ಲಿ ಗುತ್ತಿಗೆದಾರರು ಕೆಪಿಪಿ ಪೋರ್ಟಲ್‌ನಲ್ಲಿ ಗಮನಿಸಬಹುದಾಗಿದೆ. ಇದಕ್ಕಾಗಿ ಪ್ರತ್ಯೇಕವಾಗಿ ಜಾಹೀರಾತು ಹೊರಡಿಸಲಾಗುವುದಿಲ್ಲ.

ಕ್ರ ಸಂ	ಕಾಮಗಾರಿಯ ವಿವರ	ಕಾಮಗಾರಿ ಅಂದಾಜು ಮೊತ್ತ (ರೂ ಲಕ್ಷಗಳಲ್ಲಿ)
	ಲೆಕ್ಕ ಶೀರ್ಷಿಕೆ : 3054–(ಯೋಜನೇತರ)–ರಾಜ್ಯ ಹೆದ್ದಾರಿಗಳ ನಿರ್ವಹಣೆ ;	
1)	PWD/2026-27/RD/WORK_INDENT35694	200.00
	ಲೆಕ್ಕ ಶೀರ್ಷಿಕೆ : 5054–ಕೆಆರ್‌ಡಿಸಿಎಲ್–ಬಂಡವಾಳ ವೆಚ್ಚ :	
2)	PWD/2025-26/BR/WORK_INDENT35171	100.00

ಟೆಂಡರಿಗಾಗಿ ನಿಗದಿಪಡಿಸಿದ ದಿನಾಂಕಗಳು ಕೆಳಗಿನಂತಿವೆ.

ಅ)ಟೆಂಡರ್ ಆಕ್ಷೇಪಣೆಗಳಿಗಾಗಿ ನಿಗದಿಪಡಿಸಲಾದ ದಿನಾಂಕ: **21–04–2026 ರಂದು 12.00 ಗಂಟೆಯ ವರೆಗೆ.**

ಆ)ಕೆಪಿಪಿ ಪೋರ್ಟಲ್ ಮುಖಾಂತರ ಟೆಂಡರುಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: **ಕ್ರಮ ಸಂಖ್ಯೆ–1 ಕಾಮಗಾರಿ – 27–04–2026 ರಂದು 16.00 ಗಂಟೆಯ ವರೆಗೆ. ಕ್ರಮ ಸಂಖ್ಯೆ–2 ಕಾಮಗಾರಿ – 02–05–2026ರಂದು 16.00 ಗಂಟೆಯ ವರೆಗೆ**

ಇ)ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ.: **ಕ್ರಮ ಸಂಖ್ಯೆ–1 ಕಾಮಗಾರಿ – 27–04–2026 ರಂದು 16.30 ಗಂಟೆಗೆ. ಕ್ರಮ ಸಂಖ್ಯೆ–2 ಕಾಮಗಾರಿ – 04–05–2026ರಂದು 11.00 ಗಂಟೆಗೆ**

ಸಹಿ/–ಕಾರ್ಯನಿರ್ವಾಹಕ ಇಂಜಿನೀಯರರು,
ಲೋಕೋಪಯೋಗಿ ಇಲಾಖೆ ವಿಭಾಗ, ಬಳ್ಳಾರಿ.

ವಾ.ಸಾ.ಸಂ.ಇ/ಬಳ್ಳಾರಿ/2026–27/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/65

ಬಾಗಲಕೋಟೆ ನಗರಾಭಿವೃದ್ಧಿ ಪ್ರಾಧಿಕಾರ, ಬಾಗಲಕೋಟೆ
ಹಳೇ ತಹಶೀಲ್ದಾರರ ಕಚೇರಿ, ಹಳೇ SBI ಕಟ್ಟಡ, ಬಾಗಲಕೋಟ–587101
ಇ–ಮೇಲ್ : pa1969bagalkot@gmail.com ದೂ: 08354–295719

ಸಂ: ಬಾನಪ್ರಾಬಾ/ಭೂ–ಬದಲಾವಣೆ/2026–27 ದಿನಾಂಕ: 18–04–2026

: ಪ್ರಕಟಣೆ :

ಸಿಸ್ಟರ್ ಕಲಿಸ್ಟ ಸಿ, ಇನಾಸಫ್ ಸೆಂಟ್ ಆನ್ಸ ಕಾನ್ವೆಂಟ್ ಸ್ಕೂಲ್, ವಿದ್ಯಾಗಿರಿ ಸಾ/ತಾ/ಜಿ/ಬಾಗಲಕೋಟೆ, ಇವರ ಜಮೀನನ್ನು ಸರ್ಕಾರದಿಂದ ಅಂತಿಮವಾಗಿ ಅನುಮೋದನೆಯಾದ ಬಾಗಲಕೋಟೆ ಪಟ್ಟಣದ ಮಹಾಯೋಜನೆಯಲ್ಲಿ(ಮಾಸ್ಟರ್ ಪ್ಲಾನ್‌ದಲ್ಲಿ) ವಸತಿ ವಲಯದಲ್ಲಿ ಕಾಯ್ದಿರಿಸಿದ್ದು, ಅರ್ಜಿದಾರರು ವಾಣಿಜ್ಯ (ಶೈಕ್ಷಣಿಕ) ಉಪಯೋಗಕ್ಕಾಗಿ ಭೂ–ಬದಲಾವಣೆಗಾಗಿ ಕೋರಿರುತ್ತಾರೆ. ಸದರಿ ಜಮೀನಿನಲ್ಲಿ ಅರ್ಜಿದಾರರು ವಾಣಿಜ್ಯ (ಶೈಕ್ಷಣಿಕ) ಬಡಾವಣೆ ರಚಿಸಲು ಉದ್ದೇಶಿಸಿದ್ದು, ಇದರಿಂದ ಸಾರ್ವಜನಿಕರಿಗೆ ವಾಣಿಜ್ಯ (ಶೈಕ್ಷಣಿಕ) ಸೌಕರ್ಯ ಕಲ್ಪಿಸಿದಂತಾಗುತ್ತದೆ. ಹಾಗೂ ಸದರಿ ವಾಣಿಜ್ಯ (ಶೈಕ್ಷಣಿಕ) ಕಟ್ಟಡಗಳಿಂದ ಸರ್ಕಾರಕ್ಕೆ ತೆರಿಗೆ ಮೂಲಕ ಆದಾಯ ಸಂಗ್ರಹವಾಗುತ್ತದೆ ಎಂದು ತಿಳಿಸಿ, ಸಾರ್ವಜನಿಕ ಹಿತಾಸಕ್ತಿ ಬಾಂಡ್ ಸಲ್ಲಿಸಿರುತ್ತಾರೆ. ಕಾರಣ ಈ ಭೂ–ಉಪಯೋಗ ಬದಲಾವಣೆ ಸಂಬಂಧ ಸಾರ್ವಜನಿಕರು ತಮ್ಮ ಯಾವುದೇ ಆಕ್ಷೇಪಣೆ/ಸಲಹೆ/ಸೂಚನೆಗಳನ್ನು ಈ ಪ್ರಕಟಣೆಯ ದಿನಾಂಕದಿಂದ 15 ದಿವಸದೊಳಗಾಗಿ ಸೂಕ್ತವಾದ ಕಾರಣಗಳೊಂದಿಗೆ ಲಿಖಿತ ಮೂಲಕ ಆಯುಕ್ತರು, ಬಾಗಲಕೋಟೆ ನಗರಾಭಿವೃದ್ಧಿ ಪ್ರಾಧಿಕಾರ ಕಾರ್ಯಾಲಯ, ಹಳೇ SBI ಕಟ್ಟಡ, ಹಳೇ ತಹಶೀಲ್ದಾರರ ಕಚೇರಿ ಹತ್ತಿರ, ಬಾಗಲಕೋಟೆ ಇವರಿಗೆ ಸಲ್ಲಿಸಲು ತಿಳಿಸಲಾಗಿದೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಸೆಕ್ಷನ್ 14(1)(ಸಿ) ಪ್ರಕಾರ ಇದು ಅಗತ್ಯವಿದ್ದು, ನಿಗದಿತ ಕಾಲಾವಧಿ ನಂತರ ಸಲ್ಲಿಸುವ ಆಕ್ಷೇಪಣೆಗಳಿಗೆ ಮಾನ್ಯತೆ ನೀಡಲಾಗುವುದಿಲ್ಲ.

ಕ್ರ.	ಗ್ರಾಮ/ಪಟ್ಟಣ	ರಿ.ಸ. ನಂ.	ಕ್ಷೇತ್ರ (ಎ–ಗುಂ)	ಸರ್ಕಾರದಿಂದ ಅಂತಿಮವಾಗಿ ಅನುಮೋದನೆಯಾದ ಬಾಗಲಕೋಟ ಪಟ್ಟಣದ ಮಹಾಯೋಜನೆಯಲ್ಲಿ ಕಾಯ್ದಿರಿಸಿರುವ ಭೂ–ಉಪಯೋಗ	ಅರ್ಜಿದಾರರು ಭೂ–ಬದಲಾವಣೆಗಾಗಿ ಕೋರಿದ ಭೂ–ಉಪಯೋಗ
1	2	3	4	5	6
01	ಬಾಗಲಕೋಟೆ ತಾಲೂಕಿನ ಮುಚಖಂಡಿ ಗ್ರಾಮ	190ಅ/2	ಕ್ಷೇತ್ರ : 04ಎ–00ಗುಂ	ವಸತಿ	ವಾಣಿಜ್ಯ(ಶೈಕ್ಷಣಿಕ)

ಸಹಿ/– ಆಯುಕ್ತರು, ಬಾಗಲಕೋಟೆ ನಗರಾಭಿವೃದ್ಧಿ ಪ್ರಾಧಿಕಾರ, ಬಾಗಲಕೋಟೆ

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜನೀಯರರು
ಲೋಕೋಪಯೋಗಿ ಇಲಾಖೆ ವಿಭಾಗ ಗದಗ
Phone No: 08372-238782 Fax No. 08372-237268
E.Mail : eepwdgad@gmail.com

ನಂ:ಕಾನಿಇಂಗಃಲೋಇ:ಪಿಬಿ– 1 2 4 5 :ವಿವಿಧ: 2026–27/201
ದಿನಾಂಕ : 17–04–2026

ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯಪಾಲರ ಪರವಾಗಿ ಈ ಕೆಳಗೆ ಸಹಿ ಮಾಡಿದ ಅಧಿಕಾರಿಯವರಿಂದ ಲೋಕೋಪಯೋಗಿ ಇಲಾಖೆ ಗದಗ ವಿಭಾಗದಡಿ ವಿವಿಧ ಲೆಕ್ಕ ಶೀರ್ಷಿಕೆ ಅನುದಾನದ ಅಡಿಯಲ್ಲಿಯ **ಒಟ್ಟು 2195.00 ಲಕ್ಷ** ಮೊತ್ತದಲ್ಲಿ ಒಟ್ಟು 11 ಕಾಮಗಾರಿಗೆ (ಕನಿಷ್ಠ ಮೊತ್ತ **ರೂ: 100.00 ಲಕ್ಷ** ಹಾಗೂ ಗರಿಷ್ಠ ಮೊತ್ತ **ರೂ: 900.00 ಲಕ್ಷ**) ಕೆಪಿಪಿ (kppp) ನಲ್ಲಿ ನೊಂದಣಿ ಮಾಡಿಸಿದ ಲೋಕೋಪಯೋಗಿ ಇಲಾಖೆಯ ಅರ್ಹ ಗುತ್ತಿಗೆದಾರರಿಂದ ಕೆಪಿಪಿ (kppp) ಸ್ಟಾಂಡರ್ಡ್ ಬಿಡ್ ಡಾಕುಮೆಂಟ್ ಕೆ ಡಬ್ಲ್ಯೂ–I, 3, ಹಾಗೂ 4ರ ಪ್ರಕಾರ ಐಟಂವಾರು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಸಂಪೂರ್ಣ ವಿವರಗಳಿಗಾಗಿ ಅಂತರ್ ಜಾಲ ವಿಳಾಸ **http:// www. kppp. Karnataka. gov.in/** ದಲ್ಲಿ ನೋಡಿಕೊಳ್ಳಬಹುದು.

Work Indent No: Part-1 : 32770, 32773-SC, 32781-Category-I, 32783-SC, 32780-Category-2A, 32763-SC, 32765-SC, 31697/call-2, 35034

ಮೇಲಿನ ಕಾಮಗಾರಿಗಳ ಟೆಂಡರ ವಿವರ ಪ್ರಶ್ನೋತ್ತರ ದಿನಾಂಕ : **27–04–2026** ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : **29–04–2026** ಮಧ್ಯಾಹ್ನ 4.00 ಘಂಟೆಯವರೆಗೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **30–04–2026.** ಆರ್ಥಿಕ ಬಿಡ್ ತೆರೆಯುವ ದಿನಾಂಕ : **02–05–2026.**

Work Indent No : Part-2 : 34882, 33917

ಮೇಲಿನ ಕಾಮಗಾರಿಗಳ ಟೆಂಡರ ವಿವರ ಪ್ರಶ್ನೋತ್ತರ ದಿನಾಂಕ : **02–05–2026** ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : **04–05–2026** ಮಧ್ಯಾಹ್ನ 4.00 ಘಂಟೆಯವರೆಗೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **05–05–2026.** ಆರ್ಥಿಕ ಬಿಡ್ ತೆರೆಯುವ ದಿನಾಂಕ : **06–05–2026.**

ಪರಿಶಿಷ್ಟ ಜಾತಿ ಮತ್ತು ಪಂಗಡ, ಕೆಟಗರಿ–1 ಹಾಗೂ ಕೆಟಗರಿ–2ಎ ಕ್ಕೆ ಮೀಸಲಿರಿಸಿದ ಕಾಮಗಾರಿಗಳ ಟೆಂಡರ್‌ಗಳಲ್ಲಿ ಭಾಗವಹಿಸುವ ಗುತ್ತಿಗೆದಾರರು ಕಡ್ಡಾಯವಾಗಿ ಸಕ್ಷಮ ಪ್ರಾಧಿಕಾರದಿಂದ ಪಡೆದ ಪೂರಕ ದಾಖಲೆಗಳಾದ ಜಾತಿ ಪ್ರಮಾಣ ಪತ್ರ, 10 ವರ್ಷದ ರಹವಾಸಿ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಸಲ್ಲಿಸತಕ್ಕದ್ದು.

GST shall be paid separately as per prevailing Government Order. The increase in GST shall not be paid in the extended period of contract for which the contractor alone is responsible for delay as determined by the authority while granting the extension of time.

ಸಹಿ/– ಕಾರ್ಯಪಾಲಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ, ವಿಭಾಗ,
ಗದಗ

ವಾಸಾಸಂಇ/ಗದಗ/ಕೆಎಸ್‌ಎಂಸಿಎ/31/2026–27

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ವಿಭಾಗ ವಿಜಯಪುರ

No.EE/MID/VJP/AE-1,4/4702 & 4711/TND/2026-27/167 Date:17.04.2026

ಅಲ್ಪಾವಧಿ ಟೆಂಡರ್ ಪ್ರಕಟಣೆ

ಅರ್ಹ ಗುತ್ತಿಗೆದಾರರಿಂದ ಐಟಂ ದರದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ–2000 ಮತ್ತು ಇತ್ತೀಚಿನ ತಿದ್ದುಪಡಿಗಳಂತೆ ಈ ಕೆಳಗಿನ ಕಾಮಗಾರಿಗಳಿಗಾಗಿ "ಇ–ಪ್ರೋಕ್ಯುರಮೆಂಟ್" ಮುಖಾಂತರ ಟೆಂಡರ ಕರೆಯಲಾಗಿದೆ.

4702 ಪ್ರಧಾನ ಕಾಮಗಾರಿಗಳು :– ಒಟ್ಟು 1 ಕಾಮಗಾರಿ(3ನೇ ಕರೆ), ಟೆಂಡರಿಗಿಟ್ಟ ಮೊತ್ತ **ರೂ.451.77ಲಕ್ಷಗಳು, ಕಾಮಗಾರಿಯನ್ನು ಪೂರ್ಣಗೊಳಿಸುವ ಕಾಲಾವಧಿ ಮಳೆಗಾಲ ಸಹಿತ ಹನ್ನೊಂದು(11) ತಿಂಗಳುಗಳು.**

4711 ಪ್ರವಾಹ ಸಂರಕ್ಷಣಾ ಕಾಮಗಾರಿಗಳು :– ಒಟ್ಟು 1 ಕಾಮಗಾರಿ, ಟೆಂಡರಿಗಿಟ್ಟ ಮೊತ್ತ **ರೂ.24.21ಲಕ್ಷಗಳು, ಕಾಮಗಾರಿಯನ್ನು ಪೂರ್ಣಗೊಳಿಸುವ ಕಾಲಾವಧಿ ಮಳೆಗಾಲ ಸಹಿತ ಮೂರು(3) ತಿಂಗಳುಗಳು.**

4702 ಎಸ್.ಸಿ.ಪಿ. ಕಾಮಗಾರಿಗಳು :– ಒಟ್ಟು 8 ಕಾಮಗಾರಿಗಳು, ಟೆಂಡರಿಗಿಟ್ಟ ಮೊತ್ತ **ರೂ.492.51ಲಕ್ಷಗಳು, ಕಾಮಗಾರಿಗಳನ್ನು ಪೂರ್ಣಗೊಳಿಸುವ ಕಾಲಾವಧಿ ಮಳೆಗಾಲ ಸಹಿತ ಮೂರು(3) ತಿಂಗಳುಗಳುಗಳಿಂದ ಹನ್ನೊಂದು(11) ತಿಂಗಳುಗಳು.**

ಗುತ್ತಿಗೆದಾರರು ಕರ್ನಾಟಕ ಸರಕಾರದ "ಇ–ಪ್ರೋಕ್ಯುರಮೆಂಟ್" ವೆಬ್ಸೈಟ https://kppp.karnataka.gov.in/#/portal/portal-home ನಲ್ಲಿ ಲಾಗಿನ್ ಆಗಿ ದಿನಾಂಕ: **18.04.2026** ರಿಂದ Download ಮಾಡಿಕೊಳ್ಳಬಹುದು. ಟೆಂಡರಗಳನ್ನು ಇ.ಎಂ.ಡಿ ಹಾಗೂ ಟೆಂಡರ ಶುಲ್ಕದೊಂದಿಗೆ (ವೆಬ್‌ಸೈಟನಲ್ಲಿ ನಿಗದಿತ ಮಾಡಿರುವ ಯಾವುದಾದರೂ ಒಂದು ಮಾದರಿಯಲ್ಲಿ ಆನ್‌ಲೈನ್ ಪೇಮೆಂಟ ಮಾತ್ರ) "ಇ–ಪ್ರೋಕ್ಯುರಮೆಂಟ್" ವೆಬ್ಸೈಟ https://kppp.karnataka.gov.in/#/portal/portal-home ನಲ್ಲಿ ಲಾಗಿನ್ ಆಗಿ ದಿನಾಂಕ: **27.04.2026** ರ 17–30 ಘಂಟೆವರೆಗೆ ಸ್ವೀಕರಿಸಲಾಗುವದು. ದಿನಾಂಕ: **22.04.2026** ರಂದು ಕಾರ್ಯನಿರ್ವಾಹಕ ಇಂಜನೀಯರರು ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ವಿಭಾಗ ವಿಜಯಪುರ ಇವರ ಕಛೇರಿಯಲ್ಲಿ ರೂ.1.00 ಕೋಟಿ ಮೀರಿದ ಕಾಮಗಾರಿಗಳಿಗೆ ಪ್ರಿ–ಬಿಡ್ ಸಭೆಯನ್ನು ಆಯೋಜಿಸಲಾಗಿದ್ದು ಕಾಮಗಾರಿಗಳ ಬಗ್ಗೆ ಮಾಹಿತಿ ಪಡೆಯಲು ಆಸಕ್ತಿಯುಳ್ಳ ಗುತ್ತಿಗೆದಾರರು ಹಾಜರಾಗಿ ಪಡೆಯಬಹುದು. ಕಾಮಗಾರಿ ಪಡೆಯಲು ಅರ್ಹತೆ, ಶರತ್ತುಗಳು, ಕಾಮಗಾರಿಗಳ ವಿವರ ಇತ್ಯಾದಿಗಳನ್ನು ದಿನಾಂಕ: **24.04.2026** ರ 17–30 ಘಂಟೆವರೆಗೆ ವಿಭಾಗ ಕಛೇರಿಯಲ್ಲಿ ಅಥವಾ "ಇ–ಪ್ರೋಕ್ಯುರಮೆಂಟ್" ಹೆಲ್ಪ ಡೆಸ್ಕನಿಂದ(ಫೋನಃ–080–25501216 ಮತ್ತು 080–25501227) ಪಡೆಯಬಹುದು ಹಾಗೂ ಟೆಂಡರಗಳನ್ನು ಜಿ.ಎಸ್.ಟಿ. ಹೊರತುಪಡಿಸಿ ಸಲ್ಲಿಸುವುದು.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಸ.ನೀ. ಮತ್ತು ಅಂ.ಅ.ಇಲಾಖೆ, ವಿಭಾಗ ವಿಜಯಪುರ

ವಾಸಾಸಂಇ/ವಿಜಯಪುರ/48/ಕೆಎಸ್‌ಎಂಸಿಎ/2026–27

ಕರ್ನಾಟಕ ಸರ್ಕಾರ
ಬೀದರ್ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಬೀದರ್.
(ಕರ್ನಾಟಕ ಸರ್ಕಾರದ ಸ್ವಾಯತ್ತ ಸಂಸ್ಥೆ)
ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವಾವಿದ್ಯಾಲಯ, ಕರ್ನಾಟಕ ಬೆಂಗಳೂರು ರವರಿಗೆ ಸಂಯೋಜನೆಗೊಂಡಿದ್ದು, ಭಾರತ ಸರ್ಕಾರ ನವದೆಹಲಿ ರವರಿಂದ ಅಂಗೀಕೃತಗೊಂಡಿರುತ್ತದೆ.
ದೂರವಾಣಿ ಸಂಖ್ಯೆ : 08482–228366 & ಫ್ಯಾಕ್ಸ್ : 08482–240322
Website : www.bimsbidar.karnataka.gov.in & E-mail Id : directorbrimsbidar2007@gmail.com

ಸಂಖ್ಯೆ : ಬೀವೈವಿಸಂ/ಟೆಂಡರ್/ವಾರ್ತಾ ಪತ್ರಿಕೆ/ಸಿಆರ್– /2026–27 ದಿನಾಂಕ : 18–04–2026

ಟೆಂಡರ್ ಪ್ರಕಟಣೆ

ಬೀದರ್ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಬೋಧಕ್ ಆಸ್ಪತ್ರೆ ಬೀದರ್ 2026–27 ನೇ ಸಾಲಿಗೆ ಬೇಕಾಗಿರುವ Supply of Tablets, Injections, Disposables and Liquid ointments and powders, IV Fluids & Sutures and Chemicals & Reagents to Brims Bidar ಗಳ ಸರಬರಾಜುವಿಗಾಗಿ ಇ–ಟೆಂಡರ್ ಕರೆಯಲಾಗಿದೆ. ಇಚ್ಛೆಯುಳ್ಳ ಏಜೇನ್ಸಿಯವರು ದಿನಾಂಕ: 15–05–2026 ರ ವರೆಗೆ ಇ–ಟೆಂಡರ್ ನಲ್ಲಿ ನಮೂದಿಸಿದ ಸಮಯದ ಅನುಗುಣವಾಗಿ ಟೆಂಡರ್ ಭರಿಸಲು ಅವಕಾಶವಿರುತ್ತದೆ. ಹಾಗೂ ಇ–ಸಂಗ್ರಹಣೆಯ ಪೋರ್ಟಲ್ ಮೂಲಕ ಸದರಿ ಟೆಂಡರಿನ ವಿವರ ವಿಕ್ಷೀಸಬಹುದು/ಡೌನಲೋಡ್ ಮಾಡಿಕೊಂಡು ಇ–ಪ್ರೋಕ್ಯೂರ್ಮೆಂಟ್ ಮೂಲಕ ಸಲ್ಲಿಸಬಹುದು www.kppp.karnataka.gov.in ಮತ್ತು ಟೆಂಡರಿನ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಈ ಸಂಸ್ಥೆಯ ಅಂತರ್ಜಾಲತಾಣವಾದ www.bimsbidar.karnataka.gov.in ನಲ್ಲಿ ಸಹ ನೋಡಬಹುದಾಗಿದೆ.

1) ಟೆಂಡರ್ ವಿವರ: SUPPLY OF TABLETS TO BRIMS BIDAR FOR THE YEAR 2026-27, ಇಂಡೆಂಟ್ ಸಂಖ್ಯೆ: DME/2026-27/IND2249, ಇ.ಎಂ.ಡಿ: 2,00,000.00, 2) ಟೆಂಡರ್ ವಿವರ: SUPPLY OF INJECTIONS TO BRIMS BIDAR FOR THE YEAR 2026-27, ಇಂಡೆಂಟ್ ಸಂಖ್ಯೆ: DME/2026-27/IND2252, ಇ.ಎಂ.ಡಿ: 2,00,000.00, 3)ಟೆಂಡರ್ ವಿವರ: SUPPLY OF DISPOSABLES TO BRIMS BIDAR FOR THE YEAR 2026-27,ಇಂಡೆಂಟ್ ಸಂಖ್ಯೆ: DME/2026-27/IND2254, ಇ.ಎಂ.ಡಿ: 2,00,000.00, 4)ಟೆಂಡರ್ ವಿವರ: SUPPLY OF LIQUID OINTMENTS & POWDERS TO BRIMS BIDAR FOR THE YEAR 2026-27,ಇಂಡೆಂಟ್ ಸಂಖ್ಯೆ: DME/2026-27/IND2259, ಇ.ಎಂ.ಡಿ: 2,00,000.00, 5)ಟೆಂಡರ್ ವಿವರ: SUPPLY OF IV FLUIDS & SUTURES TO BRIMS BIDAR FOR THE YEAR 2026-27,ಇಂಡೆಂಟ್ ಸಂಖ್ಯೆ: DME/2026-27/IND2264,ಇ.ಎಂ.ಡಿ: 2,00,000.00, 6)ಟೆಂಡರ್ ವಿವರ:SUPPLY OF CHEMICALS & REAGENTS TO BRIMS BIDAR FOR THE YEAR 2026-27,ಇಂಡೆಂಟ್ ಸಂಖ್ಯೆ: DME/2026-27/IND2260,ಇ.ಎಂ.ಡಿ:2,00,000.00

ಗಮನಿಸಿ:– 1) ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸುವ ವಿಳಾಸ : ನಿರ್ದೇಶಕರು, ಬೀದರ್ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಬೀದರ್, 2) ಇನ್ನು ಮುಂದೆ ಟೆಂಡರ್ ಪ್ರಕ್ರಿಯೆಗಳಲ್ಲಿ ಬದಲಾವಣೆಗಳನ್ನು ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಬದಲಾವಣೆಗಳು ಕೇವಲ ವಿದ್ಯುನ್ಮಾನ ಸಂಗ್ರಹಣೆ www.kppp.karnataka.gov. ವೇದಿಕೆಯಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/– ನಿರ್ದೇಶಕರು
ಬೀದರ್ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,ಬೀದರ್

ವಾ.ಸಾ.ಸಂ.ಇ/ಬೀದರ/15/ಕೆ.ಎಸ್.ಎಂ.ಸಿ.&ಎ/2026–27

ಕಿರುಸುದ್ದಿ

ಇನ್‌ಸ್ಟ್ರಕ್ಷನ್ ಎನ್‌ಹಾನ್ಸ್‌ಮೆಂಟ್ ಪ್ರೊಗ್ರಾಂಗೆ ಚಾಲನೆ



◆**ಹುಬ್ಬಳ್ಳಿ:** ಕೆಎಲ್‌ಇ ತಾಂತ್ರಿಕ ವಿಶ್ವವಿದ್ಯಾಲಯದ ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್ ಎಂಜಿನಿಯರಿಂಗ್ ವಿಭಾಗದಲ್ಲಿ ವತಿಯಿಂದ ''ಐಸಿ ಪ್ಯಾಕೇಜ್ ಡಿಸೈನ್'' ವಿಷಯದ ಮೇಲೆ 5 ದಿನಗಳ ಇನ್‌ಸ್ಟ್ರಕ್ಷನ್ ಎನ್‌ಹಾನ್ಸ್‌ಮೆಂಟ್ ಪ್ರೊಗ್ರಾಂ (ಐಇಪಿ) ಚಾಲನೆ ದೊರೆಯಿತು. ಈ ಕಾರ್ಯಕ್ರಮಕ್ಕೆ ಭಾರತ ಸರ್ಕಾರದ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯದ ಸಿ2ಎಸ್ ಯೋಜನೆಯ ಸಹಕಾರ ಲಭಿಸಿದೆ. ವಿವಿ ಕುಲಪತಿ ಡಾ. ಪಿ.ಜಿ.ತೆವರಿ ಚಾಲನೆ ನೀಡಿದರು. ದೇಶಪಾಂಡೆ ಫೌಂಡೇಶನ್‌ನ ಸಿಇಒ ಡಾ.ಆನಂದ ಬರಿಯಾ, ಡಾ.ನಳಿನಿ ಸಿ.ಐಯರ್ ಭಾಗವಹಿಸಿದ್ದರು. ಬಳಿಕ ಮಾತನಾಡಿದ ಡಾ.ಪಿ.ಜಿ.ತೆವರಿ, ಸೆಮಿಕಂಡಕ್ಟರ್ ತಂತ್ರಜ್ಞಾನಗಳ ಮಹತ್ವ ಮತ್ತು ಐಸಿ ಪ್ಯಾಕೇಜಿಂಗ್ ಕ್ಷೇತ್ರದಲ್ಲಿ ಸಾಮರ್ಥ್ಯ ವೃದ್ಧಿಯ ಅಗತ್ಯವನ್ನು ಒತ್ತಿ ಹೇಳಿದರು. ಇಂತಹ ಕಾರ್ಯಕ್ರಮಗಳು ಅಕಾಡೆಮಿಯಾ ಮತ್ತು ಕೈಗಾರಿಕೆ ನಡುವಿನ ಅಂತರವನ್ನು ಕಡಿಮೆ ಮಾಡಲು ಸಹಕಾರಿ ಎಂದರು. ಡಾ.ಆನಂದ ಬರಿಯಾ ಮಾತನಾಡಿ, ಉದಯೋನ್ಮುಖ ತಂತ್ರಜ್ಞಾನ ಕ್ಷೇತ್ರಗಳಲ್ಲಿ ನವೀನತೆ, ಕೌಶಲ್ಯಾಭಿವೃದ್ಧಿ ಮತ್ತು ಕೈಗಾರಿಕಾ ಸಹಕಾರದ ಮಹತ್ವವನ್ನು ವಿವರಿಸಿದರು. ಈ ಕಾರ್ಯಕ್ರಮವು ಭಾಗವಹಿಸುವ ಅಧ್ಯಾಪಕರಿಗೆ ಐಸಿ ಪ್ಯಾಕೇಜ್ ಡಿಸೈನ್‌ನಲ್ಲಿ ತಾತ್ವಿಕ ಮತ್ತು ಪ್ರಾಯೋಗಿಕ ಜ್ಞಾನವನ್ನು ನೀಡುವ ಉದ್ದೇಶ ಹೊಂದಿದೆ. ಮುಂದಿನ ಐದು ದಿನಗಳಲ್ಲಿ ತಜ್ಞರ ಉಪನ್ಯಾಸಗಳು ಹಾಗೂ ಕೈಗೆಟುಕುವ ತರಬೇತಿ ನಡೆಯಲಿವೆ.

ಪಿಡಿಎ ಎಂಜಿನಿಯರಿಂಗ್ ಕಾಲೇಜಿಗೆ ಮಾನ್ಯತೆ

◆**ಕಲಬುರಗಿ:** ಹೈದರಾಬಾದ್ ಕರ್ನಾಟಕ ಶಿಕ್ಷಣ ಸಂಸ್ಥೆಯ ಪಿಡಿಎ ಎಂಜಿನಿಯರಿಂಗ್ ಕಾಲೇಜು ಮತ್ತೊಂದು ಮಹತ್ವದ ಸಾಧನೆ ಮಾಡಿದ್ದು, ಎಐಸಿಟಿಇ ವತಿಯಿಂದ ಸಾರ್ವತ್ರಿಕ ಮಾನವ ಮೌಲ್ಯಗಳು (ಯುಎಚ್‌ವಿ) ನೋಡಲ್ ಕೇಂದ್ರವಾಗಿ ಮಾನ್ಯತೆ ಪಡೆದ ರಾಜ್ಯದ ಏಕೈಕ ಸಂಸ್ಥೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.

ಸಂಸ್ಥೆಯ ಅಧ್ಯಕ್ಷ ಶಶೀಲ್ ನಮೋಶಿ, ಉಪಾಧ್ಯಕ್ಷ ರಾಜಾ ಭೀಮಳ್ಳಿ, ಕಾರ್ಯದರ್ಶಿ ಉದಯಕುಮಾರ್ ಚಿಂಚೋಳಿ, ಜಂಟಿ ಕಾರ್ಯದರ್ಶಿ ಡಾ.ಕೈಲಾಶ್ ಪಾಟೀಲ್ ಸೇರಿದಂತೆ ಈ ಸಾಧನೆಗೆ ಸಂಸ್ಥೆಯ ಅಧ್ಯಕ್ಷರು ಹಾಗೂ ಆಡಳಿತ ಮಂಡಳಿ ಕಾಲೇಜಿನ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳನ್ನು ಅಭಿನಂದಿಸಿದ್ದಾರೆ.

ಹುಬ್ಬಳ್ಳಿ ಇಂದಿನ ಉತ್ಪನ್ನವಾರು ದರ

ಉತ್ಪನ್ನಗಳು	₹ಕನಿಷ್ಠ (ಕ್ವಿಂ)	₹ಗರಿಷ್ಠ (ಕ್ವಿಂ)
ಅಲಸಂದೆ ಕಾಳು	3021	5689
ಕಡಲೆಬೇಳೆ	6850	6850
ಕಡಲೆಕಾಳು	2039	5679
ಉದ್ದಿನಬೇಳೆ	13600	13600
ಉದ್ದಿನಕಾಳು	4010	7473
ತೆಂಗಿನಕಾಯಿ	34000	36000
ಧನಿಯಾ	9721	9721
ಹತ್ತಿ	6700	8225
ಒಣ ಮೆಣಸಿನಕಾಯಿ	3500	55200
ಅವರೇಕಾಯಿ	1510	1510
ಹೆಸರುಬೇಳೆ	9000	9000
ಹೆಸರುಕಾಳು	501	6100
ನೆಲಗಡಲೆ (ಶೇಂಗಾ)	3400	7670
ಹುರುಳಿ ಕಾಳು	3450	3800
ಬೆಲ್ಲ	4476	5350
ಜೋಳ	1511	4600
ಅರಳೆ	9500	9800
ಮೆಕ್ಕೆಜೋಳ	1519	1851
ಮಡಿಕೆ (ಮಟಕಿ)	5055	13555
ಸಾಸುವೆ	4229	5239
ಈರುಳ್ಳಿ	500	1900
ಆಲೂಗಡ್ಡೆ	1100	1400
ಅಕ್ಕಿ	5310	5310
ಕುಸುಬೆ	3635	5707
ಸೋಯಾಬಿನ್	3800	5629
ತೊಗರಿ	3829	5565
ತೊಗರಿ ಬೇಳೆ	9911	10800
ಗೋಧಿ	1689	5210

ಅಂಬೇಡ್ಕರ್, ಮೋದಿ ಆಶಯಕ್ಕೆ ಕಾಂಗ್ರೆಸ್ ಅಡ್ಡಗಾಲು: ಡಾ.ಸುಧಾ



◆**ಕಲಬುರಗಿ:** 1952ರಲ್ಲಿ ಅಂಬೇಡ್ಕರ್ ಅವರು ಹಿಂದೂ ಕೋಡ್ ಬಿಲ್ ಮೂಲಕ ಮಹಿಳೆಯರಿಗೆ ಸಮಾನ ಹಕ್ಕು ನೀಡಬೇಕೆಂದಾಗಲೂ, ಇಂದು ಪ್ರಧಾನಿ ನರೇಂದ್ರ ಮೋದಿಯವರು ಮಹಿಳೆಯರಿಗೆ 33 ಪ್ರತಿಶತ ಮಹಿಳಾ ಮೀಸಲಾತಿ ನೀಡಬೇಕೆಂದಾಗಲೂ ಅಡ್ಡಿ ಪಡಿಸುವ ಮೂಲಕ ಕಾಂಗ್ರೆಸ್ ಅಂಬೇಡ್ಕರ್ ಹಾಗೂ ಮೋದಿ ಒಳ್ಳೆಯ ಆಶಯುಗಳಿಗೆ ಅಡ್ಡಗಾಲು ಹಾಕಿದೆ ಎಂದು ಬಿಜೆಪಿ ರಾಜ್ಯ ವಕ್ತಾರೆ ಡಾ.ಸುಧಾ ಹಾಲಕಾಯಿ ಆಕ್ರೋಶ ವ್ಯಕ್ತಪಡಿಸಿದರು.

ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಅಂಬೇಡ್ಕರ್ ಹಿಂದೂ ಕೋಡ್ ಬಿಲ್ ತಂದಾಗಲೂ ಮಾಜಿ ಪ್ರಧಾನಿ ಪಂಡಿತ್ ಜವಾಹರಲಾಲ್ ನೆಹರು ವಿರೋಧ ಮಾಡಿದ್ದರು. ಇದೀಗ ಪ್ರಧಾನಿ ನರೇಂದ್ರ ಮೋದಿ ಸರ್ಕಾರ ಮಹಿಳೆಯರಿಗೆ ರಾಜಕೀಯವಾಗಿ ಶಕ್ತಿ ತುಂಬಲು ತಂದ ಮಹಿಳಾ ಮೀಸಲಾತಿ ಮಸೂದೆಯನ್ನು ವಿಫಲಗೊಳಿಸಿ ತನ್ನ ಹಳೆ ಛಾಳಿ ಪುನಃ ಪ್ರದರ್ಶನ ಮಾಡಿದೆ ಎಂದು ಕಾಂಗ್ರೆಸ್ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ನಾರೀಶಕ್ತಿ ವಂದನ್ ಮಸೂದೆಯನ್ನು ನಾವು ಸೋಲಿಸಿದ್ದೇವೆ ಎಂದು ಜಂಬದಿಂದ ಹೇಳಿಕೊಂಡು ಐತಿಹಾಸಿಕ ಜಯ ಸಾಧಿಸಿದವರಂತೆ ಸಂಭ್ರಮಾಚರಣೆ ಮಾಡುವ ಕಾಂಗ್ರೆಸ್ ಪಕ್ಷದ ನಡೆ ಅತ್ಯಂತ ನಾಚಿಕೆಗೇಡಿನ ಸಂಗತಿ. ಮಹಿಳೆಯರಿಗೆ ಸಿಗಬೇಕಿದ್ದ ಸಾಂವಿಧಾನಿಕ ಮಾನ್ಯತೆ ಮತ್ತು ಅಧಿಕಾರವನ್ನು ಕಿತ್ತುಕೊಂಡು ಅದನ್ನು ಗೆಲುವು ಎಂದು ಆಚರಿಸುತ್ತಿರುವುದು ಈ ದೇಶದ ನಾರಿಯರಿಗೆ ಮಾಡಿದ ಅವಮಾನವಾಗಿದೆ ಎಂದು ಹೇಳಿದರು.

2011ರ ಜನಗಣತಿಯ ಆಧಾರದಲ್ಲಿ ಮಹಿಳೆಯರಿಗೆ ಮುಂದಿನ ಲೋಕಸಭಾ ಚುನಾವಣೆಯಲ್ಲಿ ಪ್ರಾತಿನಿಧ್ಯ ಕೊಡಬೇಕು. ಎಲ್ಲಾ ರಾಜ್ಯಗಳ ಸಂಸತ್ ಸ್ಥಾನಗಳಿಗೆ ಶೇ.50ರಷ್ಟು ಹೆಚ್ಚಿನ ಸ್ಥಾನಗಳನ್ನು ಸೇರಿಸಿ ಎಲ್ಲರ ಪಾಲ್ಗೊಳ್ಳುವಿಕೆಯ ಮೂಲಕ ಬಹುದೊಡ್ಡ ಬದಲಾವಣೆ ಪ್ರಪಂಚಕ್ಕೆ ತೋರಿಸುವ ಅವಕಾಶಕ್ಕೆ ಕಾಂಗ್ರೆಸ್ ತಾತ್ಕಾಲಿಕ ತಣ್ಣೀರು ಎರಚಿದ್ದು, ಕಾಂಗ್ರೆಸ್ ಧೋರಣೆ ಎಂತಹದ್ದು ಎಂದು ತೋರಿಸುತ್ತದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಬಿಜೆಪಿ ರಾಜ್ಯ ಮಹಿಳಾ ಮೋರ್ಚಾದ ಉಪಾಧ್ಯಕ್ಷೆ ಚಂದಮ್ಮ ಪಾಟೀಲ್, ನಗರ ಉಪಾಧ್ಯಕ್ಷ ಸಾವಿತ್ರಿ ಕುಳಗೇರಿ, ಕ.ಗ್ರಾಂ. ಮಹಿಳಾ ಮೋರ್ಚಾ ಅಧ್ಯಕ್ಷೆ ಗೌರಿ ಚಿಚಕೋಟಿ,

ಜಿಲ್ಲಾ ಕಾರ್ಯದರ್ಶಿ ಸವಿತಾ ಪಾಟೀಲ್, ಮಹಿಳಾ ಮೋರ್ಚಾ ಪದಾಧಿಕಾರಿಗಳಾದ ಶೋಭಾ ಭಾಗೇವಾಡಿ, ಸುವರ್ಣ ವಾಡೆ, ಜ್ಯೋತಿ ಪಾಟೀಲ್, ಸಪ್ನಾ ಮಂಗಲಗಿ, ನಂದಾ ವಿಜಯಕುಮಾರ್, ಶರಣಮ್ಮ ಹಿರೇಮಠ ಸೇರಿದಂತೆ ಇತರರು ಇದ್ದರು.

ಉತ್ತರಕ್ಕೆ ಹೆಚ್ಚಿನ ಕೈಗಾರಿಕೆ ಬರಲಿ: ಟೆಂಗಿನಕಾಯಿ



◆**ಹುಬ್ಬಳ್ಳಿ:** ಕರ್ನಾಟಕ ವಾಣಿಜ್ಯೋದ್ಯಮ ಸಂಸ್ಥೆ ವತಿಯಿಂದ ನಡೆಯುತ್ತಿರುವ ಬೃಹತ್ ಕೈಗಾರಿಕಾ ವಸ್ತು ಪ್ರದರ್ಶನ ಹಾಗೂ ಕಾರ್ಯಾಗಾರದಲ್ಲಿ ಉತ್ತರ ಕರ್ನಾಟಕ ಭಾಗದಲ್ಲಿ ಕೈಗಾರಿಕೋದ್ಯಮ ಅಭಿವೃದ್ಧಿ ಕುರಿತು ಚರ್ಚೆ ನಡೆಯಲಿ. ಈ ಭಾಗಕ್ಕೆ ಹೆಚ್ಚಿನ ಕೈಗಾರಿಕೆ ಬರಲಿ ಎಂದು ಶಾಸಕ ಮಹೇಶ ಟೆಂಗಿನಕಾಯಿ ಹೇಳಿದರು.

ಇಲ್ಲಿನ ಕರ್ನಾಟಕ ವಾಣಿಜ್ಯೋದ್ಯಮ ಸಂಸ್ಥೆಯಲ್ಲಿ ಶನಿವಾರ ಆಯೋಜಿಸಿದ್ದ ಇನ್ ಕಾಮೆಕ್ಸ್ ಪೂರ್ವಸಿದ್ಧತೆ ಸಭೆಯಲ್ಲಿ ಅವರು ಮಾತನಾಡಿದ ಅವರು, ಸಮಾರಂಭ ಯಶಸ್ವಿಗೆ ಎಲ್ಲ ಇಲಾಖೆಗಳು ಪರಸ್ಪರ ಸಮನ್ವಯತೆಯಿಂದ ಕಾರ್ಯನಿರ್ವಹಿಸಬೇಕು. ಇನ್ ಕಾಮೆಕ್ಸ್ 2026 ಏ.25ರಿಂದ 29ರ ವರೆಗೆ ಐದು ದಿನ ನಡೆಯಲಿದ್ದು,

ಎಲ್ಲ ಜನಪ್ರತಿನಿಧಿಗಳು, ಇಲಾಖೆಗಳು, ಸರ್ಕಾರೇತರ ಸಂಸ್ಥೆಗಳು ಸೇರಿ ಒಂದು ತಂಡವಾಗಿ ಕೆಲಸ ಮಾಡೋಣ ಎಂದರು.

ತೋಟಗಾರಿಕೆ ಇಲಾಖೆಯವರು ಸುಂದರ ಸಸಿಗಳಿರುವ 500ಕ್ಕೂ ಹೆಚ್ಚು ಪಾಟ್‌ಗಳನ್ನು ಇಡಬೇಕು. ಬಿಆರ್‌ಟಿಎಸ್ ಹೆಚ್ಚು ಬಸ್ ಸಂಚಾರಗಳನ್ನು ಆರಂಭಿಸಬೇಕು ಹಾಗೂ ಇನ್‌ಕಾಮೆಕ್ಸ್ ನಡೆಯಲಿರುವ ಅಮರಗೋಳ ಎಪಿಎಂಸಿ ಯಾರ್ಡ್‌ನ ಹುಬ್ಬಳ್ಳಿ ಧಾರವಾಡ ಮಲ್ಟಿಪರಪೋಸ್ ಸೆಂಟರ್ ಬಳಿ ಎಲ್ಲ ಬಸ್‌ಗಳಿಗೆ ತಾತ್ಕಾಲಿಕ ನಿಲುಗಡೆ ಸೌಲಭ್ಯ ಒದಗಿಸಬೇಕು ಎಂದು ಹೇಳಿದರು.

ಬಿಸಿಲು ಹೆಚ್ಚು ಇರುವುದರಿಂದ ಕುಡಿಯುವ ನೀರಿಗೆ ಕೊರತೆ ಆಗಬಾರದು. ಸಾಧ್ಯವಾದರೆ ಪೈಪ್ ಲೈನ್ ಅಳವಡಿಸಬೇಕು ಎಂದು ಎಲ್ ಆ್ಯಂಡ್ ಟಿ ಅಧಿಕಾರಿಗಳಿಗೆ ಸೂಚನೆ ನೀಡಿದರು. ಎಪಿಎಂಸಿ ಯಾರ್ಡ್ ಬಳಿಯ ಡಬ್ಬಿ ಅಂಗಡಿಗಳನ್ನು ತಾತ್ಕಾಲಿಕವಾಗಿ ತೆರವುಗೊಳಿಸಬೇಕು. ಇನ್ ಕಾಮೆಕ್ಸ್ ಮುಗಿದ ನಂತರ ಡಬ್ಬಿ ಅಂಗಡಿ ಮಾಲೀಕರಿಗೆ ಮರಳಿ ವ್ಯಾಪಾರ ಆರಂಭಿಸಲು ಅನುಕೂಲ ಮಾಡಿಕೊಡಬೇಕು ಎಂದು ತಿಳಿಸಿದರು.

ಇನ್‌ಕಾಮೆಕ್ಸ್‌ಗೆ ನಿರಂತರ ವಿದ್ಯುತ್ ಪೂರೈಕೆಯಾಗಬೇಕು. ಸಮರ್ಪಕ ವಾಹನ ದಟ್ಟಣೆ ನಿರ್ವಹಣೆ ಮಾಡಲು ಪೊಲೀಸ್ ಇಲಾಖೆ ಹೆಚ್ಚು ಸಿಬ್ಬಂದಿಯನ್ನು ನಿಯೋಜಿಸಬೇಕು ಎಂದು ಹೇಳಿದರು.

ಕರ್ನಾಟಕ ವಾಣಿಜ್ಯೋದ್ಯಮ ಸಂಸ್ಥೆಯ ಕಾರ್ಯದರ್ಶಿ ಉದಯ ರೇವಣಕರ್ ಮಾತನಾಡಿ, ಮುಖ್ಯಮಂತ್ರಿ ಸಿದ್ದರಾಮಯ್ಯ, ಕೇಂದ್ರ ಸಚಿವರಾದ ಪಿಯುಷ್ ಗೋಯಲ್, ಶೋಭಾ ಕರಂದ್ಲಾಜೆ, ರಾಜ್ಯ ಸರ್ಕಾರದ ಸಚಿವರಾದ ಎಂ.ಬಿ. ಪಾಟೀಲ, ಸಂತೋಷ ಲಾಡ್‌ಸೇರಿದಂತೆ ಇನ್‌ಕಾಮೆಕ್ಸ್‌ಗೆ ಆಗಮಿಸಲಿರುವ ಇತರ ಅತಿಥಿಗಳು ಹಾಗೂ ಭಾಗವಹಿಸಲಿದ್ದಾರೆ ಎಂದು ಹೇಳಿದರು.

ಸಂಸ್ಥೆಯ ಅಧ್ಯಕ್ಷ ಜಿ.ಕೆ. ಆದಪ್ಪನವರ, ವಿಜಯ ಜವಳಿ, ಜಯಪ್ರಕಾಶ ಟೆಂಗಿನಕಾಯಿ, ವೀರಣ್ಣ ಕಲ್ಲೂರ, ಶಶಿಧರ ಶೆಟ್ಟರ ಹಾಗೂ ಇತರರು ಇದ್ದರು.

ಅನುದಾನ ದುರುಪಯೋಗ ಕನವಳ್ಳಿ ಗ್ರಾಪಂ ಪಿಡಿಒ, ಅಧ್ಯಕ್ಷರಿಗೆ 6.97 ಲಕ್ಷ ರೂ. ದಂಡ

◆**ಹಾವೇರಿ:** ತಾಲೂಕಿನ ಕನವಳ್ಳಿ ಗ್ರಾಪಂನಲ್ಲಿ ನರೇಗಾ ಯೋಜನೆಯಡಿ ಕೈಗೊಂಡ ಕಾಮಗಾರಿಗಳಲ್ಲಿ ಅನುದಾನ ದುರುಪಯೋಗ ಪಡಿಸಿಕೊಂಡಿರುವುದು ದೃಢಪಟ್ಟ ಹಿನ್ನೆಲೆಯಲ್ಲಿ ಗ್ರಾಪಂ ಪಿಡಿಒ, ತಾಂತ್ರಿಕ ಸಹಾಯಕರು ಹಾಗೂ ಅಧ್ಯಕ್ಷರಿಗೆ 6.97ಲಕ್ಷ ರೂ. ದಂಡ ವಿಧಿಸಲಾಗಿದೆ ಎಂದು ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಅಧ್ಯಕ್ಷ ಎಂ.ಎನ್.ನಾಯಕ ಹೇಳಿದರು.

ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕನವಳ್ಳಿ ಗ್ರಾಪಂನಲ್ಲಿ ಕೈಗೊಂಡ ವಿವಿಧ 24 ಕಾಮಗಾರಿಗಳಲ್ಲಿ ಸುಮಾರು ಒಂದು ಕೋಟಿಗೂ ಅಧಿಕ ಅವ್ಯವಹಾರ ಆಗಿದ್ದು, ಈ ಕುರಿತು ತನಿಖೆ ನಡೆಸುವಂತೆ ಜಿಪಂ ಓಂಬುಡ್ಸ್‌ಮನ್ ಕಚೇರಿಗೆ ದೂರು ನೀಡಲಾಗಿತ್ತು.

ಈ ಬಗ್ಗೆ ಅಧಿಕಾರಿಗಳು ತನಿಖೆ ಕೈಗೊಂಡು ಕನವಳ್ಳಿ ಗ್ರಾಪಂನಲ್ಲಿ ನರೇಗಾ ಯೋಜನೆಯಡಿ ಕೈಗೊಂಡ ಕಚ್ಚಾ ಕಾಲುವೆ ನಿರ್ಮಾಣ, ಸಿ.ಸಿ ಚರಂಡಿ ನಿರ್ಮಾಣ, ಸಿ.ಸಿ.ರಸ್ತೆ ಮತ್ತು ಪೇವರ್ಸ್ ಸೇರಿದಂತೆ 24 ಕಾಮಗಾರಿಗಳಲ್ಲಿ ಸರ್ಕಾರದ ಅನುದಾನ ದುರುಪಯೋಗ ಪಡಿಸಿಕೊಂಡಿರುವುದು ದೃಢಪಟ್ಟಿದೆ.

ಈ ಹಿನ್ನೆಲೆಯಲ್ಲಿ ಗ್ರಾಪಂ ಈ ಹಿಂದಿನ ಪಿಡಿಒ ಸೇರಿದಂತೆ ತಾಂತ್ರಿಕ ಸಹಾಯಕರು, ಅಧ್ಯಕ್ಷರಿಗೆ 6,97 ಲಕ್ಷ ರೂ., ದಂಡ ವಿಧಿಸಿ ಆದೇಶಿಸಿದ್ದಾರೆ ಎಂದರು.

ಕನವಳ್ಳಿ ಗ್ರಾಪಂ ಹಿಂದಿನ ಪಿಡಿಒಗಳಾದ ನಾಗರಾಜ ಮಣ್ಣವಡ್ಡರ, ಪ್ರದೀಪ ಮುಳ್ಳೂರು, ಅಲ್ಲಾಭಕ್ಷ ವಡವಿ, ಈ ಹಿಂದಿನ ತಾಂತ್ರಿಕ ಸಹಾಯಕರಾದ ಸಂತೋಷ ಸಿ., ರೇಣುಕಾ ಕೊಪ್ಪದ ಹಾಗೂ ಗ್ರಾಪಂ ಈ ಹಿಂದಿನ ಅಧ್ಯಕ್ಷರಾದ ನೀಲವ್ವ ಮುದಕಣ್ಣನವರ, ಕವಿತಾ ಎರಿಮನಿ, ಅಬ್ದುಲ್ ಖಾದರ ಮೀರಸಾಬ್ ಗಡ್ಡದ ಅವರಿಗೆ ಒಟ್ಟು 6,97,447 ರೂ.,ದಂಢ ವಿಧಿಸಿ ಆದೇಶಿಸಲಾಗಿದೆ. ಇದು ನಮ್ಮ ಹೋರಾಟಕ್ಕೆ ಸಿಕ್ಕ ಜಯವಾಗಿದೆ. ಈ ಕೂಡಲೇ ಸರ್ಕಾರದ ಅನುದಾನ ದುರುಪಯೋಗ ಪಡಿಸಿಕೊಂಡ ಪಿಡಿಒ ಅಧಿಕಾರಿಗಳನ್ನು ಅಮಾನತುಗೊಳಿಸಬೇಕು ಎಂದು ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ನಾಗರಾಜ ಬಂಕಾಪೂರ, ಮುಸ್ತಾಫ್ ಅಗಸನಹಳ್ಳಿ, ಆನಂದಯ್ಯ ಹಿರಿಯಾಳಮಠ, ಸಾಧಿಕ್ ಕಲ್ಲಾಪೂರ, ದಾದಾಪೀರ್ ಸೂಡಂಬಿ ಇದ್ದರು.

ಸರ್ಕಾರಿ ನೌಕರಿ ಕೊಡಿಸುವುದಾಗಿ ಕೋಟಿ ರೂ.ವಂಚನೆ: ಆರೋಪ

◆**ಹಾವೇರಿ:** ಕೇಂದ್ರ ಮತ್ತು ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಗುತ್ತಿಗೆ ಆಧಾರದಲ್ಲಿ ನೌಕರು ಕೊಡಿಸುವುದಾಗಿ ಹೇಳಿ ಶಿರಸಿ ಮೂಲದ ವಾಸೀಂ ಚೌಧರಿ ಎಂಬಾತ ಜಿಲ್ಲೆಯ ಹಲವು ನಿರುದ್ಯೋಗಿಗಳಿಂದ ಒಂದು ಕೋಟಿ ರೂ.ಗೂ ಅಧಿಕ ಹಣ ಪಡೆದು ವಂಚಿಸಿದ್ದಾರೆ ಎಂದು ಬ್ಯಾಡಗಿ ಮೂಲದ ಕರಬಸಪ್ಪ ಎಲಿ ಆರೋಪಿಸಿದರು.

ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಾನು ಸವಣೂರಿನಲ್ಲಿ ಕೆಲಸ ಮಾಡುತ್ತಿದ್ದು, ಸವಣೂರ ತಾಲೂಕಿನ ನದಿನೀರಲಗಿ ಗ್ರಾಮದ ಸರ್ಕಾರಿ ಉರ್ದು ಶಾಲೆಯ ಶಿಕ್ಷಕಿ ಸಮೀನಾ ಶೇಖ್ ಎಂಬುವರ ಪರಿಚಯವಾಗಿತ್ತು. ಅವರ ಮೂಲಕ 2018ರಲ್ಲಿ ಅವರ ಪತಿ ವಾಸೀಂ ಚೌಧರಿ ಪರಿಚಯವಾಗಿತ್ತು. ನಾನು ರಾಜಕಾರಣಿಯಾಗಿದ್ದು, ಏನಾದರೂ ಸಮಸ್ಯೆಗಳು ಇದ್ದಲ್ಲಿ ನನ್ನನ್ನು ಭೇಟಿ ಮಾಡಿ ನಾನು ಹುಬ್ಬಳ್ಳಿಯ ಹಿಂಡಸಗೇರಿ ಕುಟುಂಬದವನು ಎಂದು ಹೇಳಿದ್ದರು.

ನಂತರ ಆತ್ಮೀಯತೆ ಬೆಳೆಯಿತು. ಯಾವುದಾದರೂ ಕೆಲಸ ಕೊಡಿಸಿ ಎಂದು ಕೇಳಿಕೊಂಡಿದ್ದೆ. ಆಗ ರೈಲ್ವೆ ಇಲಾಖೆಯಲ್ಲಿ ಗುತ್ತಿಗೆ ಆಧಾರದಲ್ಲಿ ಕೆಲಸ ಕೊಡಿಸುವುದಾಗಿ ಹೇಳಿದ್ದರು. ವಾಸೀಂ ಹೆಂಡತಿ ಸಮೀನಾ ಶೇಖ್, ಸವಣೂರ ತಾಲೂಕಿನ ನದಿ ನೀರಲಗಿ ಗ್ರಾಮದ ಸರ್ಕಾರಿ ಉರ್ದು ಶಾಲೆಯ ಶಿಕ್ಷಕ ರವಿ ಬಾರ್ಕಿ ಹಾಗೂ ವಾಸೀಂ ಸ್ನೇಹಿತ ಅನೀಸ್ ತಹಶೀಲ್ದಾರ್ ಅವರ ಮೂಲಕ ಹಂತ ಹಂತವಾಗಿ 5 ಲಕ್ಷ ರೂ. ಪಡೆದಿದ್ದರು.

ಶಿಕ್ಷಣ ಇಲಾಖೆ, ಆರೋಗ್ಯ ಇಲಾಖೆ, ಸೇರಿದಂತೆ ಹಲವು ಇಲಾಖೆಗಳಲ್ಲಿ ಕೆಲಸ ಇವೆ. ನಿಮ್ಮ ಸ್ನೇಹಿತರಿದ್ದರೆ ತಿಳಿಸಿ ಅವರಿಗೂ ಕೆಲಸ ಕೊಡಿಸುತ್ತೇನೆ ಎಂದು ನಂಬಿಸಿ, ನನ್ನ ಐವರು ಸ್ನೇಹಿತರಿಂದಲೂ ಲಕ್ಷಾಂತರ ರೂ. ಕೊಡಿಸಿದ್ದೆ ಎಂದರು.

ನಂತರ ಕೆಲಸದ ಬಗ್ಗೆ ಕೇಳಿದಾಗ ವಾಸೀಂ ಅವರು ನಿಮ್ಮ ಕೆಲಸದ ಸಲುವಾಗಿ ಬೆಂಗಳೂರು, ದೆಹಲಿಯಲ್ಲಿ ಓಡಾಡುತ್ತಿದ್ದೇನೆ ಎಂದು ಕಾಲಹರಣ ಮಾಡುತ್ತಿದ್ದರು. ತಿಂಗಳಿಗೆ ಒಂದು ಸಿಮ್ ಕಾರ್ಡ್ ಬದಲಾಯಿಸುತ್ತಿದ್ದರು. ಒಮ್ಮೆ ವಿಧಾನಸೌಧ, ವಿಕಾಸಸೌಧಕ್ಕೆ ಕರೆದುಕೊಂಡು ಹೋಗಿ ನಿಮ್ಮ ಕೆಲಸ ಇಲ್ಲೇ ಆಗುತ್ತದೆ. ನಿಮ್ಮ ಹೆಸರು ಆಯ್ಕೆ ಪಟ್ಟಿಯಲ್ಲಿ ಇದೆ ಎಂದು ನಕಲಿ ಆಯ್ಕೆ ಪಟ್ಟಿ ತೋರಿಸಿದ್ದ. ಬಳಿಕ ಕೋವಿಡ್, ಇತರ ಕಾರಣ ಹೇಳಿ ವಂಚಿಸಿದ್ದಾನೆ ಎಂದು ದೂರಿದರು.

ನೊಂದ ಕುಟುಂಬಗಳ ಮಹಿಳೆಯರು ಮಾತನಾಡಿ, ನೌಕರಿ ಆಸೆಗಾಗಿ ನಮ್ಮ ಸಹೋದರರು, ಮಕ್ಕಳು ಸಾಲ ಮಾಡಿ, ಚಿನ್ನ ಅಡ ಇಟ್ಟು ಲಕ್ಷಾಂತರ ರೂ., ಕೊಟ್ಟು ವಂಚನೆಗೆ ಒಳಗಾಗಿದ್ದಾರೆ. ವಿವಿಧ ಬ್ಯಾಂಕ್ ಖಾತೆಗಳಿಗೆ ಹಣ ಜಮೆ ಮಾಡಿರುವ ದಾಖಲೆಗಳು ಇವೆ. ದಯವಿಟ್ಟು ಸರ್ಕಾರ, ಪೊಲೀಸರು ನಮಗೆ ನ್ಯಾಯ ಕೊಡಿಸಬೇಕು. ನಮ್ಮ ಹಣ ವಾಪಸ್ ಕೊಡಿಸಬೇಕು ಎಂದು ಅಳಲು ತೋಡಿಕೊಂಡರು. ಸುದ್ದಿಗೋಷ್ಠಿಯಲ್ಲಿ ವಂಚನೆಗೀಡಾದ ನಾಜರೀನ್, ಸಿಮ್ರುನ್, ಶಾಹೀನ್ ಬಾನು, ಮೊಹಿಸಿನ್, ಮೊಹಮ್ಮದ್ ಅಲಿ, ಇತರರಿದ್ದರು.

ಪ್ರಕರಣ ದಾಖಲು

ನಾನು, ನನ್ನ ಐವರು ಸ್ನೇಹಿತರು ಸೇರಿದಂತೆ ಹಲವು ಜನರಿಗೆ ನೌಕರಿ ಕೊಡಿಸುವುದಾಗಿ ನಂಬಿಸಿ ವಾಸೀಂ ಚೌಧರಿ 95,50,000 ರೂ. ಪಡೆದು ವಂಚಿಸಿದ್ದಾನೆ ಎಂದು ಜನವರಿ 21, 2026ರಲ್ಲಿ ಹಾವೇರಿ ಶಹರ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದೇವೆ. ವಾಸೀಂ, ಸಮೀನಾ ಶೇಖ್, ರವಿ ಬಾರ್ಕಿ ಹಾಗೂ ಅನೀಶ್ ತಹಸೀಲ್ದಾರ್ ವಿರುದ್ಧ ಪ್ರಕರಣ ದಾಖಲಾಗಿದೆ. ಪೊಲೀಸರು ಸಮಗ್ರವಾಗಿ ತನಿಖೆ ನಡೆಸಿ, ನಮಗೆ ನ್ಯಾಯ ಕೊಡಿಸಬೇಕು ಎಂದು ಕರಬಸಪ್ಪ ಎಲಿ ಹಾಗೂ ನೊಂದ ಕುಟುಂಬಗಳ ಮಹಿಳೆಯರು ಒತ್ತಾಯಿಸಿದರು.

ಏ.21ರಂದು ಶಂಕರಾಚಾರ್ಯರ ಜಯಂತಿ

◆**ಬೆಳಗಾವಿ:** ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಮಹಾನಗರ ಪಾಲಿಕೆ ಬೆಳಗಾವಿ ಇವರ ಸಂಯುಕ್ತ ಆಶ್ರಯದಲ್ಲಿ ಶಂಕರಾಚಾರ್ಯರ ಜಯಂತಿ ಉತ್ಸವ ಅಂಗವಾಗಿ ಏ.21 ರಂದು ಬೆಳಗ್ಗೆ 10:30 ಗಂಟೆಗೆ ಬೆಳಗಾವಿ ಗುರುಪ್ರಸಾದ ನಗರದ ದತ್ತ ಮಂದಿರದಲ್ಲಿ ಶಂಕರಾಚಾರ್ಯರ ಭಾವಚಿತ್ರಕ್ಕೆ ಪೂಜೆ ಸಲ್ಲಿಸುವುದರೊಂದಿಗೆ ವೇದಿಕೆ ಕಾರ್ಯಕ್ರಮ ನಡೆಯಲಿದೆ.

ಲೋಕೋಪಯೋಗಿ ಸಚಿವರಾದ ಸತೀಶ ಜಾರಕಿಹೊಳಿ ಉದ್ಘಾಟಿಸಲಿದ್ದು, ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ. ಬೆಳಗಾವಿ ದಕ್ಷಿಣ ಶಾಸಕ ಅಭಯ ಪಾಟೀಲ ಅಧ್ಯಕ್ಷತೆಯನ್ನು ವಹಿಸಲಿದ್ದು, ಬೆಳಗಾವಿ ಸಿಂಡಿಕೇಟ್ ಬ್ಯಾಂಕ್‌ನ ನಿವೃತ್ತ ಸಹಾಯಕ ಮಹಾ ವ್ಯವಸ್ಥಾಪಕರಾದ ಚಿದಂಬರ ಮುನವಳ್ಳಿ ಅವರು ವಿಶೇಷ ಉಪನ್ಯಾಸ ನೀಡಲಿದ್ದಾರೆ.

ಸರ್ಕಾರಿ ಮುಖ್ಯ ಸಚೇತಕರಾದ ಅಶೋಕ ಪಟ್ಟಣ, ಕರ್ನಾಟಕ ಸರ್ಕಾರದ ಮಾನ್ಯ ವಿಶೇಷ ಪ್ರತಿನಿಧಿ 2 ನವದೆಹಲಿ ಪ್ರಕಾಶ ಹುಕ್ಕೇರಿ, ವಾಯುವ್ಯ ಸಾರಿಗೆ ನಿಗಮ ನಿಯಮಿತ ಅಧ್ಯಕ್ಷರಾದ ಭರಮಗೌಡ ಕಾಗೆ ಮತ್ತು ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ ಅಧ್ಯಕ್ಷರಾದ ಮಹಾಂತೇಶ ಕೌಜಲಗಿ ಅವರುಗಳು ವಿಶೇಷ ಆಮಂತ್ರಿತರಾಗಿ ಆಗಮಿಸಲಿದ್ದಾರೆ.

ರಾಜ್ಯ ಸಭೆ ಸಂಸದರಾದ ಈರಣ್ಣ ಕಡಾಡಿ, ಚಿಕ್ಕೋಡಿ ಲೋಕಸಭಾ ಸಂಸದರಾದ ಪ್ರಿಯಾಂಕಾ ಜಾರಕಿಹೊಳಿ, ಜಿಲ್ಲಾ ಲೋಕಸಭಾ ಸಂಸದರಾದ ಜಗದೀಶ್ ಶೆಟ್ಟರ, ಉತ್ತರ ಕನ್ನಡ ಲೋಕಸಭಾ ಸಂಸದರಾದ ವಿಶ್ವೇಶ್ವರ ಹೆಗಡೆ ಕಾಗೇರಿ ಅವರುಗಳು ಗೌರವಾನ್ವಿತ ಅತಿಥಿಗಳಾಗಿ ಆಗಮಿಸಲಿದ್ದಾರೆ.

ಜಿಲ್ಲೆಯ ಎಲ್ಲ ಸಂಸದರು, ಶಾಸಕರು, ಪರಿಷತ್ ಸದಸ್ಯರು, ಜನಪ್ರತಿಧಿಗಳು ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳು ಸಮಾರಂಭದಲ್ಲಿ ಭಾಗವಹಿಸಲಿದ್ದಾರೆ.

ವಿಶೇಷ ಎಕ್ಸ್‌ಪ್ರೆಸ್ ರೈಲು ಅವಧಿ ವಿಸ್ತರಣೆ

◆**ಹುಬ್ಬಳ್ಳಿ:** ಬೇಸಿಗೆ ರಜೆ ಅವಧಿಯಲ್ಲಿ ಪ್ರಯಾಣಿಕರ ಹೆಚ್ಚಿದ ದಟ್ಟಣೆ ಗಮನದಲ್ಲಿಟ್ಟುಕೊಂಡು, ಪ್ರಯಾಣಿಕರಿಗೆ ಅನುಕೂಲ ಕಲ್ಪಿಸುವ ಉದ್ದೇಶದಿಂದ ಎಸ್‌ಎಸ್‌ಎಸ್ ಹುಬ್ಬಳ್ಳಿ ಹಾಗೂ ಪಶ್ಚಿಮ ಬಂಗಾಳದ ಅಲಿಪುರ್ ದ್ವಾರ್ ನಿಲ್ದಾಣಗಳ ನಡುವೆ ಸಂಚರಿಸುವ ವಿಶೇಷ ಎಕ್ಸ್‌ಪ್ರೆಸ್ ರೈಲು ಈಗ ಹೆಚ್ಚುವರಿಯಾಗಿ ಒಂದು ಟ್ರಿಪ್ ವಿಸ್ತರಣೆ ಮಾಡಲಾಗಿದೆ. ಈ ವಿಶೇಷ ರೈಲು ಬೆಂಗಳೂರು ಎಸ್‌ಎಂವಿಟಿ ಹಾಗೂ ಯಲಹಂಕ ಮಾರ್ಗವಾಗಿ ಸಂಚರಿಸಲಿದೆ.

ರೈಲು ಸಂಖ್ಯೆ 07323 ಎಸ್‌ಎಸ್‌ಎಸ್ ಹುಬ್ಬಳ್ಳಿ-ಅಲಿಪುರ್ ದ್ವಾರ್ ವಿಶೇಷ ಎಕ್ಸ್‌ಪ್ರೆಸ್ 2026ರ ಏಪ್ರಿಲ್ 22ರ ಬುಧವಾರ ರಾತ್ರಿ 11.15ಕ್ಕೆ ಹುಬ್ಬಳ್ಳಿಯಿಂದ ಹೊರಟು, ಶನಿವಾರ ಮಧ್ಯಾಹ್ನ 1. 50ಕ್ಕೆ ಅಲಿಪುರ್ ದ್ವಾರ್ ತಲುಪಲಿದೆ. ಮರು ಪ್ರಯಾಣದಲ್ಲಿ ರೈಲು ಸಂಖ್ಯೆ 07324 ಅಲಿಪುರ್ ದ್ವಾರ್-ಹುಬ್ಬಳ್ಳಿ ವಿಶೇಷ ಎಕ್ಸ್‌ಪ್ರೆಸ್ ಏಪ್ರಿಲ್ 26ರ ಭಾನುವಾರ ಸಂಜೆ 4.25ಕ್ಕೆ ಅಲಿಪುರ್ ದ್ವಾರ್‌ನಿಂದ ಹೊರಟು, ಬುಧವಾರ ಬೆಳಗ್ಗೆ 9.45ಕ್ಕೆ ಹುಬ್ಬಳ್ಳಿ ನಿಲ್ದಾಣ ತಲುಪಲಿದೆ. ಈ ವಿಶೇಷ ರೈಲು ತನ್ನ ಪ್ರಯಾಣದ ಅವಧಿಯಲ್ಲಿ ದಾವಣಗೆರೆ, ಅರಸೀಕೆರೆ, ತುಮಕೂರು, ಎಸ್‌ಎಂವಿಟಿ ಬೆಂಗಳೂರು, ಯಲಹಂಕ, ಧರ್ಮಾವರಂ, ಡೋನ್, ನಂದ್ಯಾಲ, ಗುಂಟೂರು, ವಿಜಯವಾಡ, ರಾಜಮಂಡ್ರಿ, ಕೊಟ್ಟವಲಸ, ವಿಜಯನಗರಂ, ಶ್ರೀಕಾಕುಳಂ ರೋಡ್, ಪಲಾಸ, ಬ್ರಹ್ಮಪುರ, ಖುರ್ದಾ ರೋಡ್, ಭುವನೇಶ್ವರ, ಕಟಕ್, ಭದ್ರಾಕ್, ಖರಗ್ಪುರ, ಅಂದುಲ್, ದನಕುಣಿ, ಬರ್ಧಮಾನ್, ಬೋಲ್ಪುರ್ (ಶಾಂತಿನಿಕೇತನ), ರಾಂಪುರ್ ಹಾಟ್, ನ್ಯೂ ಫರಕ್ಕಾ, ಮಾಲ್ಡಾ ಟೌನ್, ಬರಸೋಯಿ, ಕಿಶನ್‌ಗಂಜ್, ನ್ಯೂ ಜಲ್ಪೈಗುರಿ, ಸಿಲಿಗುರಿ, ಬಿನ್ನಗುರಿ ಹಾಗೂ ಹಸಿಮಾರಾ ನಿಲ್ದಾಣಗಳಲ್ಲಿ ನಿಲುಗಡೆ ಹೊಂದಿರಲಿದೆ.

20 ಎಲ್‌ಎಚ್‌ಬಿ ಬೋಗಿಗಳನ್ನು ಹೊಂದಿರುವ ಈ ವಿಶೇಷ ರೈಲು ಎಸಿ 2-ಟೈರ್, ಎಸಿ 3-ಟೈರ್, ಸ್ಲೀಪರ್ ಕ್ಲಾಸ್, ಸಾಮಾನ್ಯ ದ್ವಿತೀಯ ದರ್ಜೆ ಹಾಗೂ ಲಗೇಜ್-ಕಮ್-ಬ್ರೇಕ್ ವ್ಯಾನ್ ಬೋಗಿಗಳನ್ನು ಒಳಗೊಂಡಿರುತ್ತದೆ. ಪ್ರಯಾಣಿಕರು ಈ ವಿಶೇಷ ರೈಲು ಸೇವೆಯನ್ನು ಬಳಸಿಕೊಂಡು ತಮ್ಮ ಪ್ರಯಾಣವನ್ನು ಮುಂಚಿತವಾಗಿ ಯೋಜಿಸಿಕೊಳ್ಳುವಂತೆ ತಿಳಿಸಲಾಗಿದೆ.

ಆಸ್ಪತ್ರೆ ಸಿಬ್ಬಂದಿ ನಿರ್ಲಕ್ಷ್ಯದಿಂದ ಮಗು ಸಾವು: ಪ್ರತಿಭಟನೆ



◆**ಗಾದಿಗನೂರು:** ಗಾದಿಗನೂರಿನ ಪ್ರಾಥಮಿಕ ಆರೋಗ್ಯ ಕೇಂದ್ರದ ಸಿಬ್ಬಂದಿ ನಿರ್ಲಕ್ಷ್ಯದಿಂದ ಮಗು ಮೃತಪಟ್ಟಿದೆ ಎಂದು ಪೋಷಕರು ಆರೋಪಿಸಿ ಆಸ್ಪತ್ರೆ ಎದುರು ಪ್ರತಿಭಟನೆ ನಡೆಸಿದ್ದಾರೆ.

ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಶನಿವಾರ ಬೆಳಗಿನ ಜಾವ ಉಮಾದೇವಿ ಕೆ.ಸ್ವಾಮಿ ಎಂಬವರಿಗೆ ಹೆರಿಗೆಯಾಗಿದೆ. ಬಳಿಕ ಮಗುವಿಗೆ ಉಸಿರಾಟದ ತೊಂದರೆಯಾಗಿದ್ದು, ಕೂಡಲೇ ಮಗುವನ್ನು ಹತ್ತಿರದ ಜಿಂದಲ್ ಸಂಜೀವಿನಿ ಆಸ್ಪತ್ರೆಗೆ ಕಳುಹಿಸಿದ್ದಾರೆ. ಆದರೆ ದಾರಿ ಮಧ್ಯದಲ್ಲಿ ಮಗುವಿನ ಜೀವ ಹೋಗಿದೆ ಎಂದು ಅಲ್ಲಿನ ವೈದ್ಯಾಧಿಕಾರಿ ತಿಳಿಸಿದ್ದಾರೆ. ಮಗುವಿನ ತಂದೆ ಕೂಡಲೇ ಮೃತ ಮಗುವನ್ನು ಗಾದಿಗನೂರಿನ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ತಂದು ನನ್ನ ಮಗುವಿನ ಸಾವಿಗೆ ಆಸ್ಪತ್ರೆ ಸಿಬ್ಬಂದಿಯ ನಿರ್ಲಕ್ಷ್ಯವೇ ಕಾರಣ ಎಂದು ಆಪಾದಿಸಿ ಪ್ರತಿಭಟನೆ ನಡೆಸಿದರು. ಕೂಡಲೇ ಸ್ಥಳಕ್ಕೆ ಆಗಮಿಸಿದ ಹೊಸಪೇಟೆ ತಾಲೂಕು ವೈದ್ಯಾಧಿಕಾರಿ ಡಾ. ವಿನೋದ್‌ಕುಮಾರ್ ಅವರು ಬಂದು ಆಸ್ಪತ್ರೆಯಲ್ಲಿ ನಡೆದಿರುವ ಘಟನೆಯನ್ನು ಕೂಲಂಕುಶವಾಗಿ ಪರಿಶೀಲಿಸಿ ಇಲ್ಲಿನ ಸಮಸ್ಯೆ ಪರಿಹರಿಸುತ್ತೇನೆ ಎಂದು ತಿಳಿಸಿದರು. ಆಸ್ಪತ್ರೆಯಲ್ಲಿನ ಮೂಲ ಸೌಲಭ್ಯಗಳ ಕೊರತೆಯೇ ಈ ಘಟನೆಗೆ ಕಾರಣವಾಗಿದ್ದು, ಇಂತಹ ಘಟನೆ ಮರುಕಳಿಸಿದರೆ ತೀವ್ರ ಪ್ರತಿಭಟನೆ ಮಾಡುತ್ತೇವೆ ಎಂದು ಗ್ರಾಮದ ಯುವಕರು ಎಚ್ಚರಿಸಿದ್ದಾರೆ.

ರಾಷ್ಟ್ರೀಯ ಅಗ್ನಿ ಸುರಕ್ಷತಾ ಸಪ್ತಾಹ



◆**ಮೂಡಲಗಿ:** ಇಂಧನ, ಆಮ್ಲಜನಕ, ತಾಪಮಾನ ಎಂಬ ಮೂರು ಅಂಶಗಳ ಸಂಯೋಗದಿಂದ ಉಂಟಾಗುವ ಅಗ್ನಿಜ್ವಾಲೆಯನ್ನು ಅದೇ ಇಂಧನ, ಆಮ್ಲಜನಕ, ತಾಪಮಾನಗಳಲ್ಲಿ ಒಂದನ್ನು ತೆಗೆದುಹಾಕುವ ಮೂಲಕ ಅಗ್ನಿಯನ್ನು ಆರಿಸಬಹುದು ಎಂದು ಯಾದವಾಡ ದಾಲ್ಮಿಯಾ ಸಿಮೆಂಟ್ ಕಾರ್ಖಾನೆಯ ಅಗ್ನಿ ಸುರಕ್ಷತಾ ತಜ್ಞ ಹಾಗೂ ಸೆಕ್ಯುರಿಟಿ ವಿಭಾಗದ ಮುಖ್ಯಸ್ಥ ಆನಂದ್ ಕುಮಾರ್ ತಿವಾರಿ ಹೇಳಿದರು.


ಯಾದವಾಡ ದಾಲ್ಮಿಯಾ ಸಿಮೆಂಟ್ ಕಾರ್ಖಾನೆಯ ದಾಲ್ಮಿಯಾ ಭಾರತ್ ಫೌಂಡೇಶನ್ ಹಾಗೂ ಮೂಡಲಗಿ ಶಿಕ್ಷಣ ಸಂಸ್ಥೆಯ ಒಕ್ಕೂಟಗಳ ಸಂಯುಕ್ತ ಆಶ್ರಯದಲ್ಲಿ ಏರ್ಪಡಿಸಿದ್ದ ರಾಷ್ಟ್ರೀಯ ಅಗ್ನಿ ಸುರಕ್ಷತಾ ಸಪ್ತಾಹ 2026ರ ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಮಾತನಾಡಿದರು.

ಯಾದವಾಡ ದಾಲ್ಮಿಯಾ ಸಿಮೆಂಟ್ ಕಾರ್ಖಾನೆಯ ದಾಲ್ಮಿಯಾ ಭಾರತ್ ಫೌಂಡೇಶನ್‌ನ ಸಿಎಸ್‌ಆರ್ ವಿಭಾಗದ ಮುಖ್ಯಸ್ಥ ರಾಮನಗೌಡ ಬಿರಾದರ್, ಸಮುದಾಯ ಅಭಿವೃದ್ಧಿ ಅಧಿಕಾರಿ ಶ್ರೀಧರ್ ಪಾಟೀಲ ಹಾಗೂ ಸೆಕ್ಯುರಿಟಿ ವಿಭಾಗದ ಮಹಾಂತೇಶ ಲಂಬಾಣಿ ಅವರು ಅಗ್ನಿ ಅವಘಡಗಳ ಮುನ್ನೆಚ್ಚರಿಕಾ ಕ್ರಮಗಳ ಬಗ್ಗೆ ಪ್ರಾಯೋಗಿಕವಾಗಿ ಪ್ರದರ್ಶನ ನೀಡಿ ವಿದ್ಯಾರ್ಥಿಗಳಿಗೆ ಅರಿವು ಮೂಡಿಸಿದರು. ಕಾಲೇಜಿನ ಕನ್ನಡ ಪ್ರಾಧ್ಯಾಪಕ ಹಾಗೂ ರೆಡ್ ಕ್ರಾಸ್ ಘಟಕದ ಸಂಯೋಜಕ ಪ್ರೊ. ಕೆ.ಪಿ. ಡೋಣಿ ಅಧ್ಯಕ್ಷತೆ ವಹಿಸಿದ್ದರು.

ದಾಲ್ಮಿಯಾ ಭಾರತ ಫೌಂಡೇಶನ್‌ನ ಟ್ರೇನರ್ ಆಯ್ ಎಸ್ ಜಾದವ ಸಂಘಟಿಸಿದ್ದರು.

ಕಾರ್ಯಕ್ರಮದಲ್ಲಿ ಎನ್‌ಎಸ್‌ಎಸ್ ಕಾರ್ಯಕ್ರಮ ಅಧಿಕಾರಿಗಳಾದ ಡಾ. ಪವನ್ ಕುಮಾರ್ ಕೆ., ಪ್ರೊ. ಎಲ್. ಪಿ. ಹಿಡಕಲ್, ಪ್ರೊ. ಪಿ. ಬಿ. ಚೌಡಕಿ, ಪ್ರೊ. ಎ. ಎಸ್. ಮಿಸಿ ನಾಯಿಕ, ಪ್ರೊ. ಎಂ. ಎಸ್. ಕುಂದರಗಿ, ಪ್ರೊ. ಕೆ. ಪಿ. ಡೋಣಿ, ಡಾ. ಬಸವಂತ ಬರಗಾಲಿ, ಪ್ರೊ. ವೇದಾ. ಆರ್. ದೇಶಪಾಂಡೆ ಬಿ. ಎಂ. ತಳವಾರ, ಪ್ರೊ. ಸವಿತಾ ಕೊತ್ತಲ, ಪ್ರೊ. ಪಿ. ಬಿ. ಬೆಳಗಲಿ, ಮನೋಹರ ಲಮಾನಿ ರಮೇಶ ಉಪಸ್ಥಿತರಿದ್ದರು. ದಾಲ್ಮಿಯಾ ಭಾರತ ಪೌಂಡೇಶನ್ ಟ್ರೇನರ್ ಐ.ಎಸ್. ಜಾದವ ಸ್ವಾಗತಿಸಿದರು, ಪ್ರೊ. ಎಸ್. ಕೆ. ಅಂಗಡಿ ನಿರೂಪಿಸಿದರು. ಪ್ರೊ. ಎ. ಎಸ್. ಮಿಸಿ ನಾಯಿಕ ವಂದಿಸಿದರು.

೧೨
ಹೊಸದಿಗಂತ
ರಾಷ್ಟ್ರ ಜಾಗೃತಿಯ ದೈನಿಕ
ಭಾನುವಾರ, 19 ಏಪ್ರಿಲ್ 2026
ಹುಬ್ಬಳ್ಳಿ



ಐಪಿಎಲ್-2026 ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ಪಂಜಾಬ್	5	4	0	1	9	+1.067
ಆರ್‌ಸಿಬಿ	6	4	2	0	8	+1.171
ರಾಜಸ್ಥಾನ	5	4	1	0	8	+0.889
ದಿಲ್ಲಿ	5	3	2	0	6	+0.310
ಗುಜರಾತ್	5	3	2	0	6	+0.018
ಹೈದರಾಬಾದ್	5	2	3	0	4	+0.576
ಲಖನೌ	5	2	3	0	4	-0.804
ಚೆನ್ನೈ	5	2	3	0	4	-0.846
ಮುಂಬೈ	5	1	4	0	2	-1.076
ಕೆಕೆಆರ್	6	0	5	1	1	-1.149

ಕಿರುಸುದ್ದಿ

10ಕೆಗೆ ಬೆಂಗಳೂರು ಸಿದ್ಧ



ಬೆಂಗಳೂರು: ಪ್ರೋಕ್ಯಾಮ್ ಇಂಟರ್ ನ್ಯಾಷನಲ್ ನಿಂದ ಪ್ರಚಾರ ಪಡೆದ ಟಿಸಿಎಸ್ ವರ್ಲ್ಡ್ 10 ಕೆ ಬೆಂಗಳೂರಿನ 18ನೇ ಆವೃತ್ತಿಯು 2026 ರ ಏಪ್ರಿಲ್ 26, ಭಾನುವಾರದಂದು ಆನ್-ಗ್ರೌಂಡ್ ಮತ್ತು ವರ್ಚುವಲ್ ರೇಸ್ ಗಳಲ್ಲಿ ದಾಖಲೆಯ 35,000ಕ್ಕೂ ಹೆಚ್ಚು ಸ್ಪರ್ಧಿಗಳನ್ನು ಸ್ವಾಗತಿಸಲು ಸಜ್ಜಾಗಿದೆ. ಒಟ್ಟು 210,000 ಡಾಲರ್ ಬಹುಮಾನದೊಂದಿಗೆ, ವಿಶ್ವ ಅಥ್ಲೆಟಿಕ್ಸ್ ಗೋಲ್ಡ್ ಲೇಬಲ್ ರೇಸ್ ನಲ್ಲಿ ಉಗಾಂಡಾದ ಹಾರ್ಬರ್ಟ್ ಕಿಬೆಟ್ ಮತ್ತು ಹಾಲಿ ಚಾಂಪಿಯನ್ ಸಾರಾ ಚೆಲಂಗಟ್, ಹಾಲಿ ಚಾಂಪಿಯನ್ ಮತ್ತು ಕೂಟದ ದಾಖಲೆ ಹೋಲ್ಡರ್ ಭಾರತದ ಅಭಿಷೇಕ್ ಪಾಲ್ ಮತ್ತು ಸಂಜೀವಿನಿ ಜಾಧವ್ ಸೇರಿದಂತೆ ಪ್ರಮುಖ ಅಥ್ಲೀಟ್ ಗಳು ಓಟಕ್ಕೆ ಸಜ್ಜಾಗುತ್ತಿದ್ದಾರೆ. ಕಬ್ಬನ್ ರಸ್ತೆಯಲ್ಲಿ ನಡೆಯುವ ಫ್ಲ್ಯಾಗ್ ಆಫ್ ನಲ್ಲಿ ವಿಶ್ವ ಚಾಂಪಿಯನ್ ಮತ್ತು ಒಲಿಂಪಿಕ್ ಪದಕ ವಿಜೇತೆ ಬ್ಲಾಂಕಾ ವ್ಲಾಸಿಕ್ ಅವರು ಅಂತಾರಾಷ್ಟ್ರೀಯ ಕೂಟದ ರಾಯಭಾರಿಯಾಗಿ ಅವರೊಂದಿಗೆ ಸೇರಿಕೊಳ್ಳಲಿದ್ದಾರೆ.

ಸ್ಕ್ವಾಷ್: ಚೋಟ್ರಾನಿಗೆ ಸೋಲು

ಹೊಸದಿಲ್ಲಿ: ಭಾರತದ ಭರವಸೆಯ ಸ್ಕ್ವಾಷ್ ಆಟಗಾರ ವೀರ್ ಚೋಟ್ರಾನಿ ಫ್ರೆಂಚ್‌ನ ಬಾಪ್ಟಿಸ್ಟ್ ಅವರೊಂದಿಗೆ ಸೋತ ನಂತರ ಹ್ಯಾಂಬರ್ಗ್ ಓಪನ್ ಸ್ಕ್ವಾಷ್ ಪಂದ್ಯಾವಳಿಯಿಂದ ಹೊರಬಿದ್ದರು. ಇದರೊಂದಿಗೆ ನಿರೀಕ್ಷಿತ ಟೂರ್ನಿಯಲ್ಲಿ ಭಾರತದ ಅಭಿಯಾನ ಅಂತ್ಯಗೊಂಡಿದೆ. ನಾಕೌಟ್ ಪಂದ್ಯಗಳಲ್ಲಿ ಉತ್ತಮ ಪ್ರದರ್ಶನ ನೀಡಿದ್ದ ಅವರು, ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ನಾಲ್ಕನೇ ಶ್ರೇಯಾಂಕಿತ ಬಾಪಿಸ್ಟ್ ಮಾಸೊಟ್ಟಿ ಅವರನ್ನು ಎದುರಿಸಿದ್ದರು. ಶನಿವಾರದ ಪಂದ್ಯದಲ್ಲಿ 12-10, 9-11, 14-12, 9-11, 11-6 ರಿಂದ ಸೋತರು. ಪಿಎಸ್‌ಎ ಕೂಟದ ಕಂಚು ಪದಕ ಮಟ್ಟದ ಪಂದ್ಯಾವಳಿ ಇದಾಗಿದೆ. ಇಲ್ಲಿ ಗೆದ್ದವರು ಹೆಚ್ಚಿನ ಶ್ರೇಯಾಂಕ ಪಡೆಯಲಿದ್ದಾರೆ. ನಾಕೌಟ್ ಮಾದರಿಯಲ್ಲಿ ನಡೆಯುವ ಈ ಕೂಟದಲ್ಲಿ ಆದೆಲ್ಲಾ ಚೋಟ್ರಾನಿ ಉತ್ತಮ ಪ್ರದರ್ಶನವೇ ನೀಡಿದ್ದರು. ಕ್ವಾರ್ಟರ್‌ಫೈನಲ್ ಪಂದ್ಯದಲ್ಲೂ ನಿರೀಕ್ಷಿತ ಪೈಪೋಟಿಯನ್ನು ನೀಡಿದ್ದಾರೆ. ಪಂದ್ಯದ ಸೆಟ್‌ಗಳಲ್ಲಿ ಹಲವು ಬಾರಿ ಅವರು ಕಂಬ್ಯಾಕ್ ಮಾಡಿದರು. ಆದಾಗ್ಯೂ ಪಂದ್ಯ ಗೆಲ್ಲಲಾಗಲಿಲ್ಲ. ಪಂದ್ಯಾವಳಿಯಲ್ಲಿ ಭಾಗವಹಿಸಿದ್ದ ಅಭಯ್ ಸಿಂಗ್, ರಮೀತ್ ಟಂಡನ್, ಜೋಶ್ನಾ ಚಿನ್ನಪ್ಪಾ ಈ ಮೊದಲೇ ಹೊರಬಿದ್ದಿದ್ದಾರೆ.

ಜೂಡೋ ಚಾಂಪಿಯನ್‌ಶಿಪ್: ಇನುಂಗಾನ್ಬಿಗೆ ಕಂಚು

ಹೊಸದಿಲ್ಲಿ: ಚೀನಾದ ಒರ್ಡೋಸ್ ನಗರದಲ್ಲಿ ನಡೆದ ಏಷ್ಯನ್ ಜೂಡೋ ಚಾಂಪಿಯನ್ಶಿಪ್ 2026ರಲ್ಲಿ ಭಾರತದ ತಖೆಲ್ಲಾಂಬಮ್ ಇನುಂಗಾನ್ಬಿ ಮಹಿಳೆಯರ ಮೈನಸ್ 70 ಕೆಜಿ ವಿಭಾಗದಲ್ಲಿ ಕಂಚಿನ ಪದಕ ಗೆದ್ದಿದ್ದಾರೆ. 27 ವರ್ಷದ ಇನುಂಗಾನ್ಬಿಯ ಈ ಸಾಧನೆಯಿಂದ ಭಾರತಕ್ಕೆ ಈ ಸ್ಪರ್ಧೆಯಲ್ಲಿ 13 ವರ್ಷಗಳ ಬಳಿಕ ಪದಕ ಸಿಕ್ಕಿದೆ. ಕಂಚಿನ ಪದಕ ಪಂದ್ಯದಲ್ಲಿ ಅವರು ಮಂಗೋಲಿಯಾದ ಲ್ಯಾಗ್ವದುಲಮ್ ಸರಾಂತ್ಸೆತ್ಸೆಗ್ ಅವರನ್ನು 'ಇಪ್ಪೋನ್' ಮೂಲಕ ಸೋಲಿಸಿ ಜಯ ಸಾಧಿಸಿದರು. ಇದಕ್ಕೂ ಮೊದಲು 2013ರಲ್ಲಿ ಬ್ಯಾಂಕಾಕ್ನಲ್ಲಿ ನಡೆದ ಈ ಸ್ಪರ್ಧೆಯಲ್ಲಿ ಅಂಗೋಮ್ ಅನಿತಾ ಚಾನು ಮಹಿಳೆಯರ ಮೈನಸ್ 52 ಕೆಜಿ ವಿಭಾಗದಲ್ಲಿ ಕಂಚು ಗೆದ್ದಿದ್ದರು. ಇನ್ನೂ ಕಾಮನ್ವೆಲ್ತ್ ಕ್ರೀಡಾಕೂಟದ ಕಂಚಿನ ಪದಕ ವಿಜೇತೆ ತುಲಿಕಾ ಮಾನ್ ಮಹಿಳೆಯರ ಪ್ಲಸ್ 78 ಕೆಜಿ ವಿಭಾಗದಲ್ಲಿ ಅಂತಿಮ ದಿನದ ಸ್ಪರ್ಧೆಯಲ್ಲಿ ಭಾಗವಹಿಸಲಿದ್ದಾರೆ.

ಬೆಂಗಳೂರು ಗೆಲುವಿನೋಟಕ್ಕೆ ದಿಲ್ಲಿ ಬ್ರೇಕ್ | ರಾಹುಲ್, ಸ್ಟಬ್ಸ್ ಅರ್ಧಶತಕ | ಮಿಲ್ಲರ್ ಮಿಂಚಿನಾಟ

ಬೆಂಗಳೂರಲ್ಲಿ ಕ್ಯಾಪಿಟಲ್ಸ್ ಕಮಾಲ್

ಪೃಥ್ವಿರಾಜ್ ಕುಲಕರ್ಣಿ

ಬೆಂಗಳೂರು: ವಾರಾಂತ್ಯದ ಮಜೆ ಸವಿಯಲು ಬಂದ ಸಮಸ್ತ ಬೆಂಗಳೂರು ಅಭಿಮಾನಿಗಳಿಗೆ ಕೊನೆ ಓವರ್ ಥ್ರಿಲ್ ಸಿಕ್ಕರೂ ಗೆಲುವಿನ ಸಂತಸ ಸಿಗಲಿಲ್ಲ. ಕೆ.ಎಲ್. ರಾಹುಲ್ ಮತ್ತು ಟ್ರಿಸ್ಟನ್ ಸ್ಟಬ್ಸ್ ಕಟ್ಟಿದ ಇನ್ನಿಂಗ್ಸ್‌ಗೆ ಡೆವಿಡ್ ಮಿಲ್ಲರ್ ಕಳಶ ಇಟ್ಟ ನಂತರ ದಿಲ್ಲಿ ಕ್ಯಾಪಿಟಲ್ಸ್ ಆರ್‌ಸಿಬಿಯನ್ನು 6 ವಿಕೆಟ್‌ಗಳಿಂದ ಸೋಲಿಸಿತು.

ಐತಿಹಾಸಿಕ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ 100 ಪಂದ್ಯವಾಡಿದ ರಾಯಲ್ ಚಾಲೆಂಜರ್ಸ್ ಬೆಂಗಳೂರು ಬ್ಯಾಟಿಂಗ್ ಆಹ್ವಾನ ಪಡೆಯಿತು. ಫಿಲ್ ಸಾಲ್ಟ್ (63, 38ಎ, 4ಬೌ, 3ಸಿ) ಹಾಗೂ ಟೀಮ್ ಡೆವಿಡ್(26, 18ಎ, 3ಬೌ, 1ಸಿ) ಬ್ಯಾಟಿಂಗ್ ನೆರವಿನಿಂದ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 175 ರನ್ ಗಳಿಸಿತು. ದಿಲ್ಲಿ ಕ್ಯಾಪಿಟಲ್ಸ್ ಪರ ಸ್ಪಿನ್ನರ್ ಅಕ್ಷರ್ ಪಟೇಲ್(3-0-18-2), ಕುಲ್ದೀಪ್ ಯಾದವ್ (4-0-32-2) ಮಿಂಚಿದರು. ಗುರಿ ಬೆನ್ನತ್ತಿದ ದಿಲ್ಲಿ ರಾಹುಲ್ (57, 34ಎ, 6ಬೌ, 2ಸಿ) ಹಾಗೂ ಟ್ರಿಸ್ಟನ್ ಸ್ಟಬ್ಸ್*(60, 47ಎ, 4ಬೌ, 1ಸಿ) ಅವರ ಆಸರೆ ಪಡೆದು ಕೊನೆಯ ಓವರ್‌ನ ಥ್ರಿಲ್ಲಿಂಗ್‌ನಲ್ಲಿ ಡೆವಿಡ್(22, 10ಎ, 1ಬೌ, 2ಸಿ) ಅವರ ಅಬ್ಬರದರೊಂದಿಗೆ 19.5 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 179 ರನ್‌ಗಳಿಸಿ ಪಂದ್ಯ ಗೆದ್ದಿತು. ಆರ್‌ಸಿಬಿ ಪರ ಭುವನೇಶ್ವರ್ ಕುಮಾರ್ (4-0-26-3) ಹೋರಾಟ ನಡೆಸಿದರು.

ಬರ್ತ್‌ಡೇ ಬಾಯ್ ಕೆಎಲ್ ರಾಹುಲ್ ದಿಲ್ಲಿ ಪಾಲಿನ ಹೀರೋ. ಸ್ಟಬ್ಸ್ ಪಂದ್ಯದ ವಿನ್ನರ್ ಅನ್ನಿಸಿಕೊಂಡರು. ಆರ್‌ಸಿಬಿ ಪರ ಸಾಲ್ಟ್ ಮಿಂಚಿನಾಟ ಪ್ರದರ್ಶಿಸಿದರೆ, ಭುವನೇಶ್ವರ್ ಕುಮಾರ್ ಹೋಪ್ ಉಳಿಸಿದ ಆಪತ್ಬಾಂಧವ ಅನ್ನಿಸಿಕೊಂಡರು. ಈ ಗೆಲುವಿನೊಂದಿಗೆ ಆರ್‌ಸಿಬಿ ಐಪಿಎಲ್ ನಲ್ಲಿ 2ನೇ, ತವರಲ್ಲಿ ಮೊದಲನೇ ಸೋಲು ಎದುರಿಸಿತು.

ಆರ್‌ಸಿಬಿಗೆ ಉತ್ತಮ ಆರಂಭ: ಕೊಹ್ಲಿ ಸ್ಫೋಟಕ ಬ್ಯಾಟಿಂಗ್ ಶುರು ಮಾಡಿದ್ದಾದರೂ 18 ರನ್ ಗಳಿಸಿದ್ದಾಗ, ಎನ್‌ಗಿಡಿಗೆ ಕ್ಯಾಚ್ ಆದರು. ಅತ್ತ ಇನ್ನೊಂದು ಬದಿಯಲ್ಲಿ ಸಾಲ್ಟ್ ಬೌಂಡರಿ ಸಿಕ್ಸರ್‌ಗಳೊಂದಿಗೆ ಮಿಂಚಿದರು. ಪಡಿಕ್ಕಲ್ ಸಿಂಗಲ್‌ಗಳ ಮೂಲಕ ಸೆಟ್ ಆಗುವ ಔಪಚಾರಿಕತೆಗೆ ಬಿದ್ದರು. ಪವರ್‌ಪ್ಲೇನಲ್ಲಿ ಆರ್‌ಸಿಬಿ 59 ರನ್ ಗಳಿಸಿತು. ಮಧ್ಯಮ ಓವರ್ ಆರಂಭದಲ್ಲಿ ಸಾಲ್ಟ್ ಬಿರುಸಿನ ಬ್ಯಾಟಿಂಗ್ ಮಾಡಿದರು. ಆದರೆ ಅರ್ಧಶತಕ ಮುಗಿಸುತ್ತಲೇ ಕುಲ್ದೀಪ್‌ಗೆ ಕ್ಯಾಚ್ ಆದರು. ಟೀಮ್ ಡೆವಿಡ್ 26 ರನ್‌ಗೆ, ಶೇಫರ್ಡ್ 1 ರನ್‌ಗೆ ವಿಕೆಟ್ ಒಪ್ಪಿಸಿದರು. ಜಿತೇಶ್ ಶರ್ಮ ಸೆಟ್ ಆಗುವತ್ತ ಸಾಗಿದರು. ಮಧ್ಯಮ ಓವರ್‌ಗಳು ಮುಕ್ತಾಯಗೊಂಡವು ಆರ್‌ಸಿಬಿ 84 ರನ್‌ಗಳಿಗೆ 4 ವಿಕೆಟ್ ಕಳೆದುಕೊಂಡಿತ್ತು. ಡೆತ್ ಓವರ್‌ನಲ್ಲಿ ಜಿತೇಶ್ ಹೆಚ್ಚಿನ ಬಾಲ್ ಎದುರಿಸಿದರೂ ಸ್ಕೋರ್ ಹಿಗ್ಗಿಸುವ ರನ್ ಮಾಡಲಿಲ್ಲ. ಪರಿಣಾಮ ಆರ್‌ಸಿಬಿ ಡೆತ್ ಓವರ್‌ನಲ್ಲಿ 27 ರನ್ ಮಾತ್ರ ಗಳಿಸಿತು. ಒಟ್ಟು ಇನ್ನಿಂಗ್ಸ್‌ನಲ್ಲಿ ಸಾಲ್ಟ್ ಅವರದ್ದೆ ಹೆಚ್ಚಿನ ಕೊಡುಗೆಯಿತ್ತು.

ರಾಹುಲ್ ಕಮಾಲ್: ಇತ್ತ ದಿಲ್ಲಿಗೆ ಆರಂಭದಲ್ಲೇ ಭಾರೀ ಆಘಾತ ಎದುರಾಯಿತು. ಭುವನೇಶ್ವರ್ ಕುಮಾರ್ ಕರಾರುವಾಕ್ ದಾಳಿ ಸಂಘಟಿಸಿ ನಿಸ್ಸಂಕಾ, ರಿಜ್ವಿ ಹಾಗೂ ಕರುಣ್ ನಾಯರ್ ವಿಕೆಟ್ ಕಿತ್ತರು. ಆದರೆ ಒಂದು ಬದಿಯಲ್ಲಿ ರಾಹುಲ್ ನಿಂತುಕೊಂಡರು. ತಮ್ಮ ಕ್ಲಾಸಿಕಲ್ ಆಟದೊಂದಿಗೆ ದಿಲ್ಲಿಗೆ ಆಸರೆಯಾದರು. ಅವರಿಗೆ ಸ್ಟಬ್ಸ್ ಸಾಥ್ ಸಿಕ್ಕಿತು. ಅಲ್ಲಿಗೆ ಪವರ್ ಪ್ಲೇ ಮುಕ್ತಾಯ. ದಿಲ್ಲಿ 50/3. ಮಧ್ಯಮ ಓವರ್‌ಗಳಲ್ಲಿ ರಾಹುಲ್ ಇನ್ನಷ್ಟು ಮಿಂಚಿನಾಟ ಪ್ರದರ್ಶಿಸಿ 30 ಬಾಲ್‌ಗಳಲ್ಲಿ ಅರ್ಧಶತಕ ಬಾರಿಸಿದರು. ಹುಟ್ಟುಹಬ್ಬದಂದು ತವರಲ್ಲಿ ಅರ್ಧಶತಕ ಬಾರಿಸಿದ ಕನ್ನಡಿಗ ರಾಹುಲ್ ಆಟಕ್ಕೆ ಮೈದಾನವೇ ಸಂಭ್ರಮಿಸಿತು.

ಸ್ಟಬ್ಸ್ ಕೂಡಾ ಪಿಚ್‌ಗೆ ಹೊಂದಿಕೊಂಡಿದ್ದರು. ಇನ್ನೇನು ಪಂದ್ಯ ಮುಗಿಯಿತು, ದಿಲ್ಲಿಯತ್ತ ಸಾಗಿತು ಅನ್ನುವಷ್ಟರಲ್ಲಿ ದಾಳಿಗಿಳಿದ ಕೃಣಾಲ್ ಪಾಂಡ್ಯ ಆರ್‌ಸಿಬಿಗೆ ಮತ್ತೊಮ್ಮೆ ಆಪತ್ಬಾಂಧವರಾಗಿ ಕಾಣಿಸಿಕೊಂಡರು. 57 ರನ್‌ಗಳಿಸಿ ಆಕ್ರಮಣಕಾರಿಯಾಗಿ ಕಾಣಿಸಿಕೊಳ್ಳುತ್ತಿದ್ದ ರಾಹುಲ್ ಕೊಹ್ಲಿಗೆ ಕ್ಯಾಚ್ ಆದರು.

ಅಕ್ಷರ್ ಬರುತ್ತಲೇ ಸೆಟ್ ಆಗುವ ಔಪಚಾರಿಕತೆಗೆ ಬಿದ್ದರು. ಪಂದ್ಯ ನಿಧಾನಗತಿ ಪಡೆದುಕೊಂಡಿತು. ಕೊನೆಯ 3 ಓವರ್‌ಗಳಲ್ಲಿ ದಿಲ್ಲಿಗೆ 37 ರನ್ ಬೇಕಿದ್ದವು. ಅಲ್ಲಿಗೆ ಬಂದ ಹ್ಯಾಜೆಲ್ವುಡ್ 4 ರನ್ ಮಾತ್ರ ಬಿಟ್ಟುಕೊಟ್ಟರು. ಮುಂದಿನ ಓವರ್‌ನಲ್ಲಿ ಭುವನೇಶ್ವರ್ ಕುಮಾರ್ 12 ರನ್ ಬಿಟ್ಟುಕೊಟ್ಟರು. 2 ಓವರ್‌ಗಳಲ್ಲಿ 25 ರನ್ ಬೇಕಿದ್ದಾಗ ರಸಿಖ್ 10 ರನ್ ಬಿಟ್ಟುಕೊಟ್ಟರು.

ಚಿತ್ರ: ಮೋಹನ್ ಕುಮಾರ್ ಬಿ.ಎನ್.



ಸಂಕ್ಷಿಪ್ತ ಸ್ಕೋರ್

ಆರ್‌ಸಿಬಿ 20 ಓವರ್‌ಗಳಲ್ಲಿ 175/8: ಸಾಲ್ಟ್ 63, ಡೆವಿಡ್ 26; ಅಕ್ಷರ್ 18/2
ದಿಲ್ಲಿ 19.5 ಓವರ್‌ಗಳಲ್ಲಿ 179/4: ಸ್ಟಬ್ಸ್ 60★, ರಾಹುಲ್ 57; ಭುವನೇಶ್ವರ್ 26/3

ಡೆತ್ ಓವರ್‌ನಲ್ಲಿ ಆರ್‌ಸಿಬಿಗೆ ನಷ್ಟ

ಪವರ್‌ಪ್ಲೇನಲ್ಲಿ ಆರ್‌ಸಿಬಿ 1 ವಿಕೆಟ್ ಮಾತ್ರಕ್ಕೆ 59 ಗಳಿಸಿತು. ದಿಲ್ಲಿ 3 ವಿಕೆಟ್‌ಗೆ 50 ರನ್ ಮಾತ್ರ ಗಳಿಸಿತು. ಮಧ್ಯಮ ಓವರ್‌ಗಳಲ್ಲಿ ಸಾಲ್ಟ್ ಆಸರೆಯೊಂದಿಗೆ ಆರ್‌ಸಿಬಿ 4 ವಿಕೆಟ್‌ಗೆ 89 ರನ್ ಗಳಿಸಿದರೆ, ದಿಲ್ಲಿ 1 ವಿಕೆಟ್‌ಗೆ 85 ರನ್ ಗಳಿಸಿತು. ಇನ್ನು ಡೆತ್ ಓವರ್‌ನಲ್ಲಿ ಭಾರೀ ಆಘಾತ ಎದುರಿಸಿ 27 ರನ್ ಮಾತ್ರ ಗಳಿಸಿ 3 ವಿಕೆಟ್ ಕಳೆದುಕೊಂಡಿತು. ಅತ್ತ ದಿಲ್ಲಿ ಅದೇ ಓವರ್ ಗಳಲ್ಲಿ ಯಾವುದೇ ವಿಕೆಟ್ ಇಲ್ಲದೆ 44 ರನ್‌ಗಳಿಸಿತು. ಬ್ಯಾಟಿಂಗ್ ವೇಳೆ ವಿಕೆಟ್‌ಗಳನ್ನು ಕಳೆದುಕೊಂಡ ಆರ್‌ಸಿಬಿ ಬೌಲಿಂಗ್ ಸಮಯದಲ್ಲಿ ಹೆಚ್ಚಿನ ರನ್ ಬಿಟ್ಟುಕೊಟ್ಟು ಡೆತ್ ಓವರ್‌ನಲ್ಲೇ ಸೋಲನುಭವಿಸಿತು.

ಗೆಲ್ಲಿಸಿದ ಮಿಲ್ಲರ್

ದಿಲ್ಲಿಗೆ ಕೊನೆಯ ಓವರ್‌ನಲ್ಲಿ 15 ರನ್ ಬೇಕು. ಕೊನೆಯ ಓವರ್ ಮಾಡಲು ಶೇಫರ್ಡ್ ಬಂದರು. ಅವರಿಗದು ಮೊದಲನೇ ಓವರ್. ಮೊದಲೆರಡು ಬಾಲ್‌ಗಳಲ್ಲಿ 2 ರನ್ ಮಾತ್ರ ಬಂದವು. ಪಂದ್ಯ ತೀರಾ ರೋಚಕ ಹಂತಕ್ಕೆ ಹೋಯಿತು. ಮಿಲ್ಲರ್ ಮುಂದಿನ ಮೂರು ಬಾಲ್‌ಗಳಲ್ಲಿ 2 ಸಿಕ್ಸರ್ ಹಾಗೂ 1 ಬೌಂಡರಿ ಬಾರಿಸಿ ಗೆಲ್ಲಿಸಿದರು.

ಚಿನ್ನಸ್ವಾಮಿಯಲ್ಲಿ ಆರ್‌ಸಿಬಿಗೆ 100ನೇ ಪಂದ್ಯ

ಅಂದು ಏಪ್ರಿಲ್ 18, 2008. ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣವನ್ನು ತವರು ಮೈದಾನವಾಗಿ ಆರಿಸಿಕೊಂಡಿದ್ದ ಆರ್‌ಸಿಬಿ, ತನ್ನ ಮೊದಲ ಪಂದ್ಯವನ್ನು ಕೆಕೆಆರ್ ವಿರುದ್ಧಬ ಆಡಿತ್ತು. ವಿಶೇಷ ಕಾಕತಾಳಿಯೊಂದರಲ್ಲಿ ಶನಿವಾರದಂದು ಅದೇ ದಿನಾಂಕದಂದೇ ಆರ್‌ಸಿಬಿ ತನ್ನ ನೂರನೇ ತವರು ಪಂದ್ಯವಾಡಿದೆ. ಶನಿವಾರ ದಿಲ್ಲಿ ವಿರುದ್ಧ ನಡೆದಿದ್ದ ಪಂದ್ಯದ ವೇಳೆ ಆರ್‌ಸಿಬಿ ಚಿನ್ನಸ್ವಾಮಿಯಲ್ಲಿ ನೂರು ಪಂದ್ಯವಾಡುವ ಮೂಲಕ ತವರಲ್ಲಿ ಹೆಚ್ಚು ಪಂದ್ಯವಾಡಿದ ತಂಡ ಅನ್ನಿಸಿಕೊಂಡಿತು. ಇದರೊಂದಿಗೆ ತವರು ಮೈದಾನದಲ್ಲಿ ಅತಿ ಹೆಚ್ಚು ಪಂದ್ಯವನ್ನಾಡಿದ ದಾಖಲೆ ಮಾಡಿತು.

ಹೆಚ್ಚು ತವರು ಪಂದ್ಯವಾಡಿದ ತಂಡಗಳು

ತಂಡ	ಕ್ರೀಡಾಂಗಣ	ಪಂದ್ಯ
ಬೆಂಗಳೂರು	ಚಿನ್ನಸ್ವಾಮಿ	100*
ಕೆಕೆಆರ್	ಈಡನ್ ಗಾರ್ಡನ್ಸ್	98*
ಮುಂಬೈ	ವಾಂಖೆಡೆ	95*

ರಾಜಸ್ಥಾನ ರಾಯಲ್ಸ್‌ಗೆ ಆತ್ಮವಿಶ್ವಾಸ | 2ನೇ ಪಂದ್ಯ: ಪಂಜಾಬ್-ಲಖನೌ

ಇಂದಾದರೂ ಗೆಲ್ಲುತ್ತಾ ಕೆಕೆಆರ್?

ಕೋಲ್ಕತ್ತಾ: ಸತತ ಸೋಲುಗಳಿಂದ ಪಂದ್ಯಾವಳಿಯಲ್ಲಿ ಈಗಾಗಲೇ ಭಾರೀ ಹಿನ್ನಡೆ ಅನುಭವಿಸಿರುವ ಕೋಲ್ಕತ್ತಾ ನೈಟ್ ರೈಡರ್ಸ್ ಹಾಗೂ ಕಳೆದ ಪಂದ್ಯದಲ್ಲಿ ಸೋತು ಅಗ್ರಸ್ಥಾನದಿಂದ ಕೆಳಗಿಳಿದಿರುವ ರಾಜಸ್ಥಾನ ರಾಯಲ್ಸ್ ತಂಡಗಳು ಭಾನುವಾರದ ಸೂಪರ್ ವೀಕೆಂಡ್ನ ಮೊದಲ ಪಂದ್ಯದಲ್ಲಿ ಮುಖಾಮುಖಿಯಾಗಲಿವೆ.

ಶುಕ್ರವಾರವಷ್ಟೇ ತಮ್ಮ ನಾಲ್ಕನೇ ಪಂದ್ಯ ಸೋತಿರುವ ಕೋಲ್ಕತ್ತಾ ಪಡೆ ಇನ್ನೂ ಗೆಲುವಿನ ಖಾತೆ ತೆರದಿಲ್ಲ. ಪಂಜಾಬ್ ವಿರುದ್ಧ ನಡೆಯಬೇಕಿದ್ದ ಪಂದ್ಯ ರದ್ದಾದ ಬೆನ್ನಲ್ಲೇ ಒಂದು ಅಂಕ ಮಾತ್ರ ಪಡೆದಿರುವ ರಹಾನೆ ಪಡೆ ಅಂಕಪಟ್ಟಿಯಲ್ಲಿ ಕೊನೆಯ ಸ್ಥಾನದಲ್ಲಿದೆ. ಇತ್ತರ ರಾಜಸ್ಥಾನ ಪಂದ್ಯಾವಳಿಯ ಆರಂಭಿಕ ಪಂದ್ಯಗಳನ್ನು ಭರ್ಜರಿ ಗೆಲುವು ಸಾಧಿಸಿತ್ತು. ಆದರೆ ಕಳೆದ ಪಂದ್ಯದಲ್ಲಿ ಸೋಲನುಭವಿಸಿದ್ದು ಪುಟಿದೇಳುವ ತವಕದಲ್ಲಿದೆ. ಈಡನ್ ಗಾರ್ಡನ್ಸ್‌ನಲ್ಲಿ ಪಂದ್ಯ ನಡೆಯಲಿದೆ.

ಇತ್ತ ಎರಡನೇ ಪಂದ್ಯದಲ್ಲಿ ಪಂಜಾಬ್ ಕಿಂಗ್ಸ್ ಹಾಗೂ ಲಖನೌ ಸೂಪರ್ ಜೇಂಟ್ಸ್ ತಂಡಗಳು ಎದುರಾಗಲಿವೆ. ಗೆಲುವಿನ ನಾಗಾಲೋಟ ಮುಂದುವರಿಸಿರುವ ಪಂಜಾಬ್ ಕಿಂಗ್ಸ್ ಆಡಿರುವ ಎಲ್ಲಾ ಪಂದ್ಯಗಳಲ್ಲಿ ಗೆದ್ದಿದೆ. ಇತ್ತ ಲಖನೌ ಸೂಪರ್ ಜೇಂಟ್ಸ್ 3 ಪಂದ್ಯಗಳಲ್ಲಿ ಸೋತಿದ್ದು ಭಾರೀ ನಿರಾಸೆ ಮೂಡಿಸಿದೆ. ಅಗ್ರಸ್ಥಾನದಲ್ಲಿ ಮುಂದುವರಿಯುವ ವಿಶ್ವಾಸದಲ್ಲಿ ಪಂಜಾಬ್ ಕಾಣಿಸಿಕೊಂಡರೆ, ಇತ್ತ ಲಖನೌ ಗೆಲುವಿನ ಹಳಿಗೆ ಮರಳಲು ಯತ್ನಿಸಲಿದೆ. ಈ ಪಂದ್ಯವು ಚಂಡೀಗಢದಲ್ಲಿ ನಡೆಯಲಿದೆ.

ಪಂದ್ಯದ ವಿವರ

ಆರ್‌ಆರ್-ಕೋಲ್ಕತ್ತಾ
ಎಲ್ಲಿ: ಕೋಲ್ಕತ್ತಾ
ಯಾವಾಗ: ಭಾನುವಾರ
ಸಮಯ: ಮಧ್ಯಾಹ್ನ 3:30

ಪಂಜಾಬ್-ಲಖನೌ
ಎಲ್ಲಿ: ಚಂಡೀಗಢ
ಯಾವಾಗ: ಭಾನುವಾರ
ಸಮಯ: ಸಂಜೆ 7:30



ಆರ್‌ಆರ್ VS ಕೋಲ್ಕತ್ತಾ

ಪ್ರತಿಷ್ಠಿತ ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯಲ್ಲಿ ಭಾನುವಾರ ಎದುರಾಗುತ್ತಿರುವ ತಂಡಗಳ ಪೈಕಿ ಒಂದು ತಂಡ ಗೆಲುವಿನ ಲಯದಲ್ಲಿದೆ. ಅಗ್ರಸ್ಥಾನಕ್ಕಾಗಿ ಪೈಪೋಟಿ ನಡೆಸುತ್ತಿದೆ. ಇನ್ನು ಎರಡನೇ ತಂಡಕ್ಕೆ ಈವರೆಗೂ ಗೆಲುವಿಲ್ಲ. ಬ್ಯಾಟಿಂಗ್ ವೈಫಲ್ಯ ಅನುಭವಿಸುತ್ತಿರುವ ಕೆಕೆಆರ್ ಬೌಲಿಂಗ್‌ನಲ್ಲಿ ಅನುಭವದ ಕೊರತೆ ಎದುರಿಸುತ್ತಿದೆ. ತಂಡದಲ್ಲಿ ಫಿನ್, ಸೈಫರ್ಟ್, ರಹಾನೆ, ರಿಂಕು, ಗ್ರಿನ್ ಅಂಥವರಿದ್ದರೂ ಯಾರೊಬ್ಬರೂ ಲಯದಲ್ಲಿಲ್ಲ. ಕಳೆದ ಪಂದ್ಯದಲ್ಲಿ ಗ್ರೀನ್ ಉತ್ತಮ ಬ್ಯಾಟಿಂಗ್ ಮಾಡಿದ್ದಾದರೂ ಡೆತ್ ಓವರ್‌ನಲ್ಲಿ ರನ್ ಮಾಡಲಾಗಿಲ್ಲ. ಬೌಲಿಂಗ್ ವಿಭಾಗದಲ್ಲಿ ನರೈನ್, ವರುಣ್, ವೈಭವ್ ಹಾಗೂ ವರುಣ್ ಅಂಥವರಿದ್ದರೂ ಲಯದಲ್ಲಿಲ್ಲ. ಇತ್ತ ರಜಸ್ಥಾನ ಪರ ಪ್ರತಿಯೊಬ್ಬರೂ ಅಬ್ಬರಿಸಿದ್ದಾರೆ. ಕಳೆದ ಪಂದ್ಯಗಳಲ್ಲಿ ವೈಭವ್ ಸೂರ್ಯವಂಶಿ ಸ್ಫೋಟಕ ಬ್ಯಾಟಿಂಗ್ ನೊಂದಿಗೆ ವಿಶ್ವದ ಗಮನ ಸೆಳೆದಿದ್ದಾರೆ, ಇತ್ತ ಜೈಸ್ವಾಲ್ ಕೂಡ ಅದೇ ಲಯದಲ್ಲಿದ್ದು ವಿಶ್ವಾಸ ಹೆಚ್ಚಿಸಿದೆ. ಮಧ್ಯಮ ಕ್ರಮಾಂಕದಲ್ಲಿ ಪರಾಗ್ ಮಿಂಚಬೇಕಿದೆ. ಇತ್ತ ಹೆಟ್ಮೇರ್ ಕಡೆಯಿಂದ ಹೆಚ್ಚಿನ ರನ್‌ಗಳು ಬಂದಿಲ್ಲ. ಫೆರಾರಿಯಾ ಕಳೆದ ಪಂದ್ಯದಲ್ಲಿ ಸ್ಫೋಟಕ ಬ್ಯಾಟಿಂಗ್ ಮಾಡಿದ್ದಾರೆ. ಜಡೇಜಾ ಕೂಡ ಉತ್ತಮ ಬ್ಯಾಟಿಂಗ್ ಮಾಡಿರುವುದು ಬಲ ಹೆಚ್ಚಿಸಿದೆ. ಬೌಲಿಂಗ್ ವಿಭಾಗದಲ್ಲಿ ಆರ್ಚರ್ ತಮ್ಮ ಅಸಲು ಬೌಲಿಂಗ್ ಪ್ರದರ್ಶನ್ ನೀಡುತ್ತಿದ್ದಾರೆ. ಬರ್ಗರ್ ಕೂಡ ಅಷ್ಟೇ ಅಚ್ಚುಕಟ್ಟಾದ ಬೌಲಿಂಗ್ ಮಾಡಿದ್ದಾರೆ. ಸ್ಪಿನ್ನರ್ ರವಿ ಬಿಷ್ಣೋಯ್ ಗೆಲುವಿನಾಟವಾಡಿದ್ದಾರೆ.



ಪಂಜಾಬ್-ಲಖನೌ ಪಂದ್ಯ

ಎರಡನೇ ಪಂದ್ಯವೂ ಸ್ಟಾರ್ ವಾರ್‌ಗೆ ಸಾಕ್ಷಿಯಾಗಲಿದೆ. ರಿಷಭ್ ಪಂತ್ ನೇತೃತ್ವದ ಲಖನೌ ಸೂಪರ್ ಜೇಂಟ್ಸ್ ಅಯ್ಯರ್ ನೇತೃತ್ವದ ಪಂಜಾಬ್ ತಂಡವನ್ನು ಎದುರಿಸಲಿದೆ. ಹಿಂದಿನ ಪಂದ್ಯಗಳಲ್ಲಿ ಪಂಜಾಬ್ ಗೆಲುವಿನ ನಗಾರಿ ಬಾರಿಸುತ್ತಾ ಬಂದಿದೆ. ಆಡಿರುವ ಎಲ್ಲಾ ಪಂದ್ಯಗಳಲ್ಲಿ ಶ್ರೇಯಸ್ ಪಡೆ ಗೆಲುವಿನ ಆಟವಾಡಿದೆ. ಇತ್ತ ಲಖನೌ ಸೋಲುಗಳಿಂದ ಕಂಗೆಟ್ಟಿದೆ. ಪಂಜಾಬ್ ಪಡೆಯಲ್ಲಿ ದೊಡ್ಡ ಹಿಟ್ಟರ್ ಗಳಿದ್ದಾರೆ. ಪ್ರಭಸಿಮ್ರನ್, ಪ್ರಿಯಾಂಶ್, ಶ್ರೇಯಸ್ ಸೇರಿದಂತೆ ಪ್ರಮುಖ ಬ್ಯಾಟರ್‌ಗಳಿದ್ದಾರೆ. ಮಧ್ಯಮ ಕ್ರಮಾಂಕದಲ್ಲಿ ಶಶಾಂಕ್, ಸ್ಟೋನಿಸ್ ಕೂಡ ಉತ್ತಮ ಲಯದಲ್ಲಿದ್ದಾರೆ. ಇತ್ತ ಬೌಲಿಂಗ್‌ನಲ್ಲಿ ಅರ್ಶದೀಪ್ ಸಿಂಗ್, ಬಾರ್ಟ್‌ಲೆಟ್, ಯಾನ್ಸನ್ ಉತ್ತಮ ಬೌಲಿಂಗ್ ಮಾಡಿದ್ದಾರೆ. ಗೆಲುವಿನ ಹಳಿಯಲ್ಲೇ ಉಳಿಯಲು ಪಂಜಾಬ್ ಅದೇ ಆಟ ಮುಂದುವರಿಸಬೇಕಿದೆ. ಇತ್ತ ಲಖನೌ ಪರ ಇಬ್ಬರೂ ಆರಂಭಿಕರು ಹೇಳಿಕೊಳ್ಳುವ ಬ್ಯಾಟಿಂಗ್ ಮಾಡಿಲ್ಲ. ನಾಯಕ ರಿಷಭ್ ಪಂತ್ ಭಾರೀ ಹಿನ್ನಡೆ ಅನುಭವಿಸಿದ್ದಾರೆ. ಲಯಕದ ಹುಡುಕಾಟದಲ್ಲಿದ್ದಾರೆ. ಪೂರಣ್ ಪ್ರತಿ ಪಂದ್ಯದಲ್ಲೂ ಹಿನ್ನಡೆ ಅನುಭವಿಸಿ ದ್ದಾರೆ. ಇನ್ನು ಬೌಲಿಂಗ್‌ನಲ್ಲಿ ಶಮಿ, ಪ್ರಿನ್ಸ್ ಬಿಟ್ಟು ಇನ್ನುಳಿದವರು ಹಿನ್ನಡೆ ಅನುಭವಿಸಿದ್ದಾರೆ. ಲಖನೌ ಪುಟಿದೇಳಬೇಕಾದರೆ ಬ್ಯಾಟಿಂಗ್ ಬಲ ಹೆಚ್ಚಿಸಿಕೊಳ್ಳಬೇಕಿದೆ.

ಚೆನ್ನೈಗೆ ಕಠಿಣ ಗುರಿ



ಹೈದರಾಬಾದ್: ಅಭಿಷೇಕ್ ಶರ್ಮ ಮತ್ತು ಹೆನ್ರಿಚ್ ಕ್ಲಾಸೆನ್ ಅವರ ಅದ್ಭುತ ಬ್ಯಾಟಿಂಗ್ ನೆರವಿನಿಂದಾಗಿ ಚೆನ್ನೈ ವಿರುದ್ಧದ ಪಂದ್ಯದಲ್ಲಿ ಹೈದರಾಬಾದ್ ಸ್ಪರ್ಧಾತ್ಮಕ ಗುರಿ ನೀಡಿದೆ. ಒಂದು ಹಂತದಲ್ಲಿ 10ಕ್ಕೂ ಅಧಿಕ ರನ್‌ರೇಟ್ ಉಳಿಸಿಕೊಂಡಿದ್ದ ಹೈದರಾಬಾದ್ ಕೊನೆಯಲ್ಲಿ ಅಲ್ಪ ಎಡವಿತು. ಆದಾಗ್ಯೂ ಮೊದಲು ಬ್ಯಾಟಿಂಗ್ ಆಹ್ವಾನ ಪಡೆದ ನಂತರ 20 ಓವರ್‌ಗಳಲ್ಲಿ 9 ವಿಕೆಟ್ ನಷ್ಟಕ್ಕೆ 194 ರನ್ ಗಳಿಸಿದೆ.

ಪವರ್‌ಪ್ಲೇನ ಕೊನೆ ಎರಡು ಬಾಲ್‌ಗಳಲ್ಲಿ ಎರಡು ವಿಕೆಟ್ ಬೀಳುವ ಮುನ್ನ ಚೆನ್ನೈ ತಂಡವನ್ನು ಹೈದರಾಬಾದ್ ದಂಡಿಸಿತು. ಅಭಿಷೇಕ್ ಶರ್ಮ ಸಿಕ್ಸರ್‌ಗಳ ಸುರಿಮಳೆಗೈದರೆ ಟ್ರಾವಿಸ್ ಹೆಡ್ ಚೆನ್ನೈನ ಹಡೆಮುರಿ ಕಟ್ಟಿದರು. ಶುರುವಿನಿಂದಲೇ ರನ್‌ರೇಟ್ ಹೆಚ್ಚಿಸಿದ ಈ ಜೋಡಿ ಚೆನ್ನೈ ಮೇಲೆ ಒತ್ತಡ ಹೇರಿತು. 4 ಸಿಕ್ಸರ್, 5 ಬೌಂಡರಿ ಬಾರಿಸಿದ ಅಭಿಷೇಕ್ ಶರ್ಮ 15 ಬಾಲ್ ಗಳಲ್ಲಿ ಅರ್ಧಶತಕ ಬಾರಿಸಿದುರು. ಇತ್ತ ಹೆಡ್ ಕೂಡ 20 ರನ್ ದಾಟಿದರು. 5.4 ಓವರ್‌ಗಳಲ್ಲಿ ಹೈದರಾಬಾದ್ 75 ರನ್ ಗಳಿಸಿತ್ತು. ಮುಖೇಶ್ ಚೌಧರಿ ಪವರ್‌ಪ್ಲೇನ ಕೊನೆಯ ಓವರ್ ಮಾಡಲು ಬಂದರು. ಮೊದಲಿನ ನಾಲ್ಕು ಬಾಲ್‌ಗಳಲ್ಲಿ ದಂಡಿಸಿಕೊಂಡ ಅವರು, ಸರಸರನೇ ಹೆಡ್ ಹಾಗೂ ಕಿಶನ್ ವಿಕೆಟ್ ಪಡೆದರು. ಪವರ್‌ಪ್ಲೇ 75/2ಕ್ಕೆ ಮುಕ್ತಾಯಗೊಂಡಿತು.

ಮಧ್ಯಮ ಓವರ್‌ಗಳಲ್ಲಿ ಅಭಿಷೇಕ್ ಆರ್ಭಟ ನಿಂತಿತು. ಓವರ್‌ಟನ್ ಅವರಿಗೆ ಖೆಡ್ಡಾ ತೋಡಿದರು. ಕ್ಲಾಸೆನ್ ನಿಂತು ಆಡುವ ಜವಾಬ್ದಾರಿ ಹೊತ್ತಿಕೊಂಡರು. ಸೆಟ್ ಆಗುತ್ತಲೇ ದಂಡಿಸಲಾರಂಭಿಸಿದ ಅವರು 32 ಬಾಲ್ ಗಳಲ್ಲಿ ಅರ್ಧಶಕತ ಪೂರೈಸಿದರು. 14.3 ಓವರ್‌ಗಳಲ್ಲಿ ಹೈದರಾಬಾದ್ 150 ರನ್ ದಾಟಿತ್ತು. ದೊಡ್ಡ ಸ್ಕೋರ್‌ನತ್ತ ಸಾಗಿತ್ತು. ಆದರೆ ಈ ಹಂತದಲ್ಲಿ ಪುಟಿದೆದ್ದ ಚೆನ್ನೈ ಬೌಲರ್‌ಗಳು ಹೈದರಾಬಾದ್‌ನ ಮಧ್ಯಮ ಕ್ರಮಾಂಕವನ್ನು ಪೆವಿಲಿಯನ್‌ಗಟ್ಟಿತು. ಅನಿಕೇತ್ 2, ರೆಡ್ಡಿ 12, ಅರೋರಾ 13 ರನ್‌ಗೆ ವಿಕೆಟ್ ಕೊಟ್ಟರು. ರನ್‌ರೇಟ್ ಇಳಿಯಿತು. ಮಧ್ಯಮ ಓವರ್‌ಗಳಲ್ಲಿ ಹೈದರಾಬಾದ್ 88 ರನ್‌ಗಳಿಸಿತು.

ಇನ್ನು ಡೆತ್ ಓವರ್‌ನಲ್ಲಿ ತೀರಾ ಹಿನ್ನಡೆ ಅನುಭವಿಸಿದ ಹೈದರಾಬಾದ್ 4 ವಿಕೆಟ್ ಕಳೆದುಕೊಂಡಿತು. ಯಾರೊಬ್ಬರೂ ನಿಲ್ಲಲಿಲ್ಲ. ಕ್ಲಾಸೆನ್ 59 ರನ್‌ಗೆ ವಿಕೆಟ್ ಒಪ್ಪಿಸಿದರು. ಶಿವಾಂಗ್ ಕುಮಾರ್ 12 ರನ್ ಗಳಿಸಿ ಸ್ಕೋರ್ ಹಿಗ್ಗಿಸಿದ್ದಾದರೂ 200 ರನ್ ಮುಟ್ಟಲಾಗಲಿಲ್ಲ.

ಕೆಕೆಆರ್ ವಿರುದ್ಧ ಗುಜರಾತ್‌ಗೆ ಗೆಲುವು

ಅಹಮದಾಬಾದ್: ತಮ್ಮ ಅಸಲು ಲಯಕ್ಕೆ ಮರಳಿರುವ ಗುಜರಾತ್ ತಂಡದ ನಾಯಕ ಶುಭಮನ್ ಗಿಲ್ ಸೋಲಿನಲ್ಲಿ ಸಿಲುಕಿರುವ ಕೆಕೆಆರ್‌ಗೆ ಮತ್ತಷ್ಟು ಆಘಾತ ನೀಡಿದರು. ಅಹಮದಾಬಾದ್ ಅಂಗಳದಲ್ಲಿ 181 ಸ್ಪರ್ಧಾತ್ಮಕ ಗುರಿ ಪಡೆದ ಗುಜರಾತ್ 19.4 ಓವರ್‌ಗಳಲ್ಲಿ ಪಂದ್ಯ ಮುಗಿಸಿತು. ಇದರೊಂದಿಗೆ ಐದನೇ ಸೋಲು ಕಂಡಿರುವ ಕೆಕೆಆರ್ ಪಂದ್ಯಾವಳಿಯಲ್ಲಿ ಭಾರೀ ಹಿನ್ನಡೆ ಅನುಭವಿಸತು.

ಬ್ಯಾಟಿಂಗ್ ಆಹ್ವಾನ ಪಡೆದ ಕೆಕೆಆರ್ 180 ರನ್‌ಗಳಿಗೆ ಆಲೌಟ್ ಆಯಿತು. ಗ್ರೀನ್ 79 ರನ್‌ಗಳಿಸಿ ಹೋರಾಡಿದರು. ರಬಾಡ 3 ವಿಕೆಟ್ ಪಡೆದು ಮಿಂಚಿದರು. ಗುರಿ ಬೆನ್ನತ್ತಿದ ಗುಜರಾತ್ 19.4 ಓವರ್ ಅನ್ನುವಷ್ಟರಲ್ಲಿ 181 ರನ್ ಗಳಿಸಿ ಗುರಿ ಮುಟ್ಟಿತು. ಗಿಲ್ 86 ರನ್ ಗಳಿಸಿದರು, ಬಟ್ಲರ್ 25, ಸುದರ್ಶನ್ 22 ರನ್ ಗಳಿಸಿ ಸಾಥ್ ಕೊಟ್ಟರು. ಕೆಕೆಆರ್ ಪರ ವರುಣ್ 2 ವಿಕೆಟ್ ಪಡೆದರು.

ಉಭಯ ತಂಡಗಳ ರನ್ ಮಟ್ಟ ಗಮನಿಸಿದಾಗ ಆರಂಭಿಕ ಓವರ್‌ಗಳಲ್ಲಿ ಕೆಕೆಆರ್ 37 ರನ್ ಗಳಿಸಿತು. ಅತ್ತ ಗುಜರಾತ್ 71 ರನ್ ಬಾರಿಸಿತು. ಮಧ್ಯಮ ಓವರ್‌ಗಳಲ್ಲಿ ಗ್ರೀನ್ ಅತ್ಯುತ್ತಮ ಬ್ಯಾಟಿಂಗ್ ಮಾಡಿದ ಪರಿಣಾಮ ಪುಟಿದೆದ್ದ ಕೆಕೆಆರ್ 7-15 ಓವರ್‌ಗಳಲ್ಲಿ 120 ರನ್‌ಗಳಿಸಿತು, 3ವಿಕೆಟ್ ಕಳೆದುಕೊಂಡಿತು. ಇತ್ತ ಗುಜರಾತ್ ಗಿಲ್ ಅವರ ಅಬ್ಬರದ ಬ್ಯಾಟಿಂಗ್‌ನೊಂದಿಗೆ ಮಧ್ಯಮ ಓವರ್‌ಗಳಲ್ಲಿ ಮಿಂಚಿತು.




ಅರ್ಧಶತಕ ಪೂರೈಸಿಕೊಂಡ ಅವರು, ಪಂದ್ಯ ಗತಿ ಬದಲಾಯಿಸಿದರು. ಕೆಕೆಆರ್‌ಗೆ ಯಾವುದೇ ಅವಕಾಶ ಸಿಗಲಿಲ್ಲ. 7-15 ಓವರ್‌ಗಳಲ್ಲಿ ಗುಜರಾತ್ 78 ರನ್‌ಗಳಿಸಿತು.

ಡೆತ್ ಓವರ್‌ಗಳಲ್ಲಿ ಕೆಕೆಆರ್ ತೀರಾ ಹಿನ್ನಡೆ ಅನುಭವಿಸಿತು. ಕರಾರುವಾಕ್ ದಾಳಿ ಮಾಡಿದ ರಬಾಡ ಡೆತ್‌ನಲ್ಲಿ ಹೆಚ್ಚಿನ ರನ್ ಬಿಟ್ಟುಕೊಡಲೇ ಇಲ್ಲ. ಅಲ್ಲಿ ಕೇವಲ 24 ರನ್‌ಗಳಿಸಿದ ಕೆಕೆಆರ್ 4 ವಿಕೆಟ್ ಕಳೆದುಕೊಂಡಿತು. ಇನ್ನು ಗುಜರಾತ್‌ಗೆ ಒತ್ತಡ ಇರಲಿಲ್ಲ. ಗಿಲ್ 86 ರನ್‌ಗಳಿಸಿ ವಿಕೆಟ್ ಒಪ್ಪಿಸಿದ್ದಾದರೂ ಹೆಚ್ಚಿನ ರನ್ ಗಳಿಸಬೇಕಿರಲಿಲ್ಲ. ಬೇಕಿದ್ದ 32 ರನ್‌ಗಳನ್ನು ಸುಂದರ್ ಮತ್ತು ಫಿಲಿಪ್ಸ್ ಗಳಿಸಿದರು.

ಪದಬಂಧ

ರಾಜಾ ಸಂಗಮೇಶ ಹಿರೇಮಠ



5958

ಎಡದಿಂದ ಬಲಕ್ಕೆ
2.ಕೃಪೆ ಮಾಡಿ ಕೊಡು-ಕರುಣೆಯಿಂದ ನೀಡು (5)
5. ವಾಯುದೇವತೆ, ಗಾಳಿ (3)
6. ಬರೆಹ ರೂಪದಲ್ಲಿರುವಂಥಹದ್ದು (3)
7. ನಿಗದಿತ ದಿನದಂದು ಹೊರಟದ್ದು ಈ ಹೊಳೆಯೆಡೆಗೆ (2)
9. ಈತ ಸಾತ್ವಿಕ ಸ್ವಭಾವದ ವ್ಯಕ್ತಿ (2)
11. ವ್ಯತ್ಯಾಸ ತಿಳಿಸಲು ಆನೆಯೊಂದಿಗೆ ಬಂದ ಪ್ರಾಣಿ (2)
12. ಸೈನ್ಯ-ಗುಂಪಿನ ಒಂದು ಭಾಗ (2)
15. ನರನಿಗೆ ವಾರ ಕೇಳಿದ ಕಪಿ (3)
16. ತುಂಬಾ ಶಿಥಿಲಗೊಂಡದ್ದು (3)
17. ಆತುರ ಪಡು, ಗಡಿಬಿಡಿ ಮಾಡು (5)

ಮೇಲಿನಿಂದ ಕೆಳಕ್ಕೆ
1.ತಾಳೆಯ ಮರದ ಎಲೆಯಿದು (4)
2. ರಾವಣನ ಒಂದು ಹೆಸರು (4)
3. ಸುಲಭ ಎಂಬರ್ಥದ ಸುಂದರವಾದದ್ದು (4)
4. ನ್ಯಾಯಬೆಲೆ ಅಂಗಡಿಯಲ್ಲಿ ಸಿಗುವ ದಿನಸಿ (4)
8. ವಿಜಯ ಪಡೆದ ದೇವತೆ (3)
9. ಸಾದೃಶ್ಯವಾದ ಸಂಭಾಷಣೆ (3)
10. ಚಿಕಿತ್ಸಾಲಯವಿದು (4)
11. ಹೂವಿನ ರಾಜ, ಈ ಕಮಲ (4)
13. ಆನಂದ ಭಾಷ್ಪವಿಲ್ಲಿ ತಲೆಕೆಳಗಾಗಿದೆ (4)
14. ಬಾಗಿಲಿಗೆ ಆಸರೆಯಾದ ಚೌಕಟ್ಟು (4)

5957 ಉತ್ತರ

ಎಡದಿಂದ ಬಲಕ್ಕೆ:
2.ಕೊಡುಗೈ
5.ರತ್ನಾಕರ 6.ರಹದಾರಿ
7.ಪುದೀನ 9.ಆಧಾರ
10.ತೇಲಿಸು 11.ಮಶಕ
15.ಮಾತುಮೀರು
16.ವಕ್ರತುಂಡ 17.ಹಗಲು

ಮೇಲಿನಿಂದ ಕೆಳಕ್ಕೆ :
1.ಸುರರಿಪು 2.ಕೊರಡು
3.ಗೈರತ್ತು 4.ಹರಿಹರ
8.ನನಸು 9.ಆಯಾಮ
10.ತೇಲುಮಾತು
12.ಕನ್ನಡಕ 13.ಹರುಷ
14.ಕವಲು

ಕಿರುಸುದ್ದಿ

ಉನ್ನತಿಗೆ ಅಡ್ಡಗಾಲು



◆**ಗದಗ:** ಲೋಕಸಭಾ ವಿಶೇಷ ಅಧಿವೇಶನದಲ್ಲಿ ಮಂಡನೆಯಾಗಿದ್ದ ಬಹುನಿರೀಕ್ಷಿತ ಮಹಿಳಾ ಮೀಸಲಾತಿ ಮಸೂದೆ ಮತ ವಿಭಜನೆಯಲ್ಲಿ 278-211 ಅಂತರದಲ್ಲಿ ಸೋಲನುಭವಿಸಿದೆ. ಸಾಂವಿಧಾನಿಕ ತಿದ್ದುಪಡಿಯಾದ ಮಹಿಳಾ ವಿಧೇಯಕಕ್ಕೆ ಬೆಂಬಲವನ್ನು ನೀಡಬೇಕಾದ ವಿರೋಧ ಪಕ್ಷವು ಇಂದು ಲೋಕಸಭೆಯಲ್ಲಿ ಬೆಂಬಲ ನೀಡದೆ ಐತಿಹಾಸಿಕ ಮಸೂದೆ ಸೋಲಿಸಿದ ಕೀರ್ತಿ ವಿರೋಧ ಪಕ್ಷದವರಾದ್ದಾಗಿದೆ ಎಂದು ಬಿಜೆಪಿ ಯುವ ಮುಖಂಡ ವಸಂತ ಪಡಗದ ಆರೋಪಿಸಿದ್ದಾರೆ.

ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿದ ಅವರು, ಮಹಿಳೆಯರಿಗೆ ಶೇ.33ರಷ್ಟು ಮೀಸಲಾತಿ ಒದಗಿಸುವ ಐತಿಹಾಸಿಕ ಮಸೂದೆಯನ್ನು ಕಾಂಗ್ರೆಸ್ ನೇತೃತ್ವದ ಇಂಡಿ ಒಕ್ಕೂಟ ಸೋಲಿಸಿದೆ. ಮಹಿಳೆಯರ ಉನ್ನತಿಗೆ ಅಡ್ಡಗಾಲು ಹಾಕಿದ ವಿಪಕ್ಷಗಳನ್ನು ದೇಶದ ನಾರಿಶಕ್ತಿ ಎಂದಿಗೂ ಕ್ಷಮಿಸದು. ದೇಶದ ಹಿತದೃಷ್ಟಿಯಿಂದ, ಮಹಿಳೆಯರ ಸಬಲೀಕರಣಕ್ಕಾಗಿ ಸ್ವತಃ ದೇಶದ ಪ್ರಧಾನಿಯೇ ಮಸೂದೆಯನ್ನು ಪಕ್ಷಾತೀತವಾಗಿ ಬೆಂಬಲಿಸುವಂತೆ ಕೋರಿಕೊಂಡರೂ ರಾಜಕೀಯ ಜಿದ್ದಿಗೆ ಬಿದ್ದ ಮಹಿಳಾ ವಿರೋಧಿಗಳು ಮಸೂದೆಗೆ ಸೋಲುಣಿಸಿದ್ದಾರೆ. ಇದು ಮಸೂದೆಯ ಸೋಲಲ್ಲ, ದೇಶದ ಸೋಲು ಎಂದು ದೂರಿದರು.

ಉಪನ್ಯಾಸ ಇಂದು

◆**ಗದಗ:** ಇಲ್ಲಿನ ಶಿವಾನಂದ ನಗರದ ಬಸವ ಸಮುದಾಯ ಭವನದಲ್ಲಿ ಏ.19 ರಂದು ಬೆಳಗ್ಗೆ 10ಕ್ಕೆ ನಡೆಯಲಿರುವ ಬಸವದಳದ 1694ನೇ ಶರಣ ಸಂಗಮದಲ್ಲಿ ಕರ್ನಾಟಕದ ಸಾಂಸ್ಕೃತಿಕ ನಾಯಕ, ವಿಶ್ವಗುರು ಬಸವಣ್ಣನವರ 921ನೇ ಜಯಂತಿ ಕುರಿತು ಉಪನ್ಯಾಸ ಕಾರ್ಯಕ್ರಮ ಏರ್ಪಡಿಸಲಾಗಿದೆ. ಅಧ್ಯಕ್ಷತೆ ವಿ.ಕೆ. ಕರೇಗೌಡ್ರ ವಹಿಸುವರು. ಡಾ.ಆರ್.ಎಂ. ಕಲ್ಲನಗೌಡರ ಉಪನ್ಯಾಸ ಮಾಡುವರು. ಶ್ರೀದೇವಿ ಶೆಟ್ಟರ ಆಗಮಿಸುವರು ಎಂದು ಪ್ರಕಾಶ ಅಸುಂಡಿ ತಿಳಿಸಿದ್ದಾರೆ.

ಏ.23ಕ್ಕೆ ಅಪ್ರೆಂಟಿಸ್ ಮೇಳ

◆**ಗದಗ:** ಜಿಲ್ಲೆಯ ಮುಂಡರಗಿ ತಾಲೂಕಿನ ಡಂಬಳದ ಶ್ರೀ ಜಗದ್ಗುರು ತೋಂಟದಾರ್ಯ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆ ಸಹಯೋಗದಲ್ಲಿ ಪ್ರಧಾನ ಮಂತ್ರಿ ರಾಷ್ಟ್ರೀಯ ಅಪ್ರೆಂಟಿಸ್ ಮೇಳ ಏ. 23ರಂದು ಜರುಗಲಿದೆ. ಈ ಮೇಳದಲ್ಲಿ ಯಾವುದೇ ವೃತ್ತಿಯ ಐಟಿಐ ತೇರ್ಗಡೆಯಾದ ಮತ್ತು 2ನೇ ವರ್ಷದಲ್ಲಿರುವ 1 ವರ್ಷದ ವೃತ್ತಿಗಳ ಐ.ಟಿ.ಐ ತರಬೇತಿಯಲ್ಲಿರುವ ತರಬೇತಿದಾರರು ಭಾಗವಹಿಸಬಹುದಾಗಿದೆ. ಮೇಳದಲ್ಲಿ ರಾಜ್ಯದ 15ಕ್ಕಿಂತ ಹೆಚ್ಚು ಸುಪ್ರಸಿದ್ಧ ಕೈಗಾರಿಕೆಗಳು ತಮ್ಮ ಘಟಕಗಳಿಗೆ ಬೇಕಾದ ಅಪ್ರೆಂಟಿಸ್ ತರಬೇತಿಗೆ ಆಯ್ಕೆ ಮಾಡಿಕೊಳ್ಳಲು ಬರುತ್ತಿದ್ದು, ವೆಬ್‌ಸೈಟ್ https://forms.gle/18kfxRwFbwHB44m6ನಲ್ಲಿ ನೋಂದಣಿ ಮಾಡಿಕೊಳ್ಳಬಹುದು ಎಂದು ಪ್ರಾಚಾರ್ಯರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸುಮಿತ್ರ ಪೂಜಾರ ನಿಧನ



◆**ಮುಂಡರಗಿ:** ಇಲ್ಲಿಯ ಪಂಚಮಸಾಲಿ ಹಿರಿಯರಾದ ಸುಮಿತ್ರ ಮಲ್ಲಿಕಾರ್ಜುನ ಪೂಜಾರ ಅವರು ಶನಿವಾರ ನಿಧನರಾದರು. ಮೃತರು ಇಬ್ಬರು ಪುತ್ರರು ಹಾಗೂ ಮೂವರು ಪುತ್ರಿಯರನ್ನು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳನ್ನು ಅಗಲಿದ್ದಾರೆ. ಇವರ ಅಂತ್ಯ ಸಂಸ್ಕಾರವು ಏ.19 ರಂದು ಬೆಳಗ್ಗೆ 11 ಕ್ಕೆ ಮುಂಡರಗಿಯ ರುದ್ರಭೂಮಿಯಲ್ಲಿ ಜರಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಗದಗ ಮಾರುಕಟ್ಟೆ ಧಾರಣೆ (ಕ್ವಿಂಟಲ್)

ಗೆಜ್ಜಿ ಶೇಂಗಾ	3269-7099
ಅಜವಾನ	7669-9819
ಅಲಸಂದಿ	2619-6111
ಅವರೆ	2719-2719
ಕಡಲೆ	2289-5472
ಉದ್ದು	1612-5644
ಹವೀಜ	6869-10500
ಒಣಮೆಣಸಿಕಾಯಿ	1099-56199
ಹೆಸರು	1066-9669
ಹುರಳಿ	2314-4364
ಜೋಳ	1377-4437
ಗೋವಿನಜೋಳ	1489-1750
ಮಡಕಿ	9001-9001
ಸಾಸವಿ	4144-4319
ನವನಿ	2823-2823
ಕುಸಬಿ	4605-5729
ಸೂರ್ಯಕಾಂತಿ	5006-6122
ತೊಗರಿ	3317-5789
ಗೋಧಿ	1044-5319
ಒಟಾಣಿ	5525-5525



ಗದಗ: ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್‌ನಿಂದ ತೋಂಟದ ಸಿದ್ಧಲಿಂಗ ಶ್ರೀಗಳ ಕನ್ನಡ ಭವನದಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಜಯಂತ್ಯುತ್ಸವ ನಡೆಯಿತು. ಡಾ.ಆರ್.ಎಲ್. ಹಂಸನೂರ ಮಾತನಾಡಿದರು. ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್‌ನ ಅಧ್ಯಕ್ಷ ವಿವೇಕಾನಂದಗೌಡ ಪಾಟೀಲ ಅಧ್ಯಕ್ಷತೆ ವಹಿಸಿದ್ದರು. ಪ್ರೊ. ಕೆ.ಎಚ್.ಬೇಲೂರ, ಅನ್ನದಾನಿ ಹಿರೇಮಠ, ಬಿ.ಎಲ್.ಚವ್ಹಾಣ, ರತ್ನಕ್ಕ ಪಾಟೀಲ, ಎಸ್.ಯು.ಸಜ್ಜನಶೆಟ್ಟರ, ರಾಜಶೇಖರ ದಾನರಡ್ಡಿ, ಸಿ.ಎಂ. ಮಾರನಬಸರಿ, ಬಿ.ಬಿ.ಹೊಳಗುಂದಿ, ಎಂ.ಎಚ್.ಸವದತ್ತಿ, ಬೂದೇಶ ಮಜ್ಜಿಗುಡ್ಡ, ಆರ್.ಎಚ್.ತೋಟದ, ರೇಣುಕಾ ಹಂಸನೂರ, ಪರಿಮಳ ಕಲಕಂಬಿ, ಸಮತಾ ಹಂಸನೂರ ಇತರರಿದ್ದರು.

ಜನರಲ್ಲಿ ಜ್ಞಾನದ ಹಸಿವು ಹೆಚ್ಚಿಸುವ ಉದ್ದೇಶ

◆**ನರೇಗಲ್ಲ:** ಇಂದು ಎಲ್ಲರೂ ತಮ್ಮ ತಮ್ಮ ಮನೆಯಲ್ಲಿ ದೇವರಿಗೆ ಪ್ರಾತಿನಿಧ್ಯ ಕೊಟ್ಟಂತೆ ಗ್ರಂಥಾಲಯಕ್ಕೆ ಕೊಡುವುದು ಅವಶ್ಯವಾಗಿದೆ. ಅದಕ್ಕಾಗಿ ಪ್ರತಿಯೊಬ್ಬರೂ ಮನೆಯಲ್ಲಿ ಗ್ರಂಥಾಲಯವೆಂಬ ದೀಪವನ್ನು ಬೆಳಗಿಸಿ ಜ್ಞಾನಾರ್ಜನೆಗೆ ಮುಂದಾದರೆ ಮನೆಗೊಂದು ಗ್ರಂಥಾಲಯದ ಕನಸು ನನಸಾಗುತ್ತದೆ ಎಂದು ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾ. ಮಾನಸ ಹೇಳಿದರು.

ಸ್ಥಳೀಯ ಈಶ್ವರೀಯ ವಿವಿಯಲ್ಲಿ ಕನ್ನಡ ಪುಸ್ತಕ ಪ್ರಾಧಿಕಾರ, ಜಿಲ್ಲಾ ಜಾಗೃತಿ ಸಮಿತಿ, ಬೀಚಿ ಬಳಗ, ಶರಣ ಸಾಹಿತ್ಯ ಪರಿಷತ್ ಹಾಗೂ ತಾಲೂಕು ಜಾನಪದ ಪರಿಷತ್, ನಿರಂತರ ಪ್ರಕಾಶನ ಗದಗ ಇವರ ಸಹಯೋಗದಲ್ಲಿ ಆಯೋಜಿಸಿದ್ದ ಮನೆಗೊಂದು ಗ್ರಂಥಾಲಯ ಅನುಷ್ಠಾನ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿ, ಡಾ. ಬಿ.ಆರ್. ಅಂಬೇಡ್ಕರ್ ಅವರ ಜ್ಞಾನ ದಾಹದ ದಾರಿಯಲ್ಲಿ ಸಾಗಿರುವ ಪುಸ್ತಕ ಪ್ರಾಧಿಕಾರವು ಜನಸಾಮಾನ್ಯರಲ್ಲಿ ಜ್ಞಾನದ ಹಸಿವನ್ನು ಹೆಚ್ಚಿಸುವ ಉದ್ದೇಶದಿಂದ ಮನೆಗೊಂದು ಗ್ರಂಥಾಲಯ ಎಂಬ ವಿನೂತನ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ ಎಂದರು. ಡಾ. ಮಾನಸ ಅವರು ಪುಸ್ತಕ ಬಿಡುಗಡೆಗೊಳಿಸುವ ಮೂಲಕ ಉದ್ಘಾಟಿಸಿದರು. ರವೀಂದ್ರನಾಥ ದೊಡ್ಡಮೇಟಿ, ಎಂ.ಎಸ್. ಧಡೇಸೂರಮಠ, ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ಸಂಚಾಲಕಿ ಸವಿತಕ್ಕ, ಕಾಶಿನಾಥ ಸಾಲಿಮಠ ಮಾತನಾಡಿದರು. ಬೀಚಿ ಬಳಗದ ಅಧ್ಯಕ್ಷ ಶಿವಯೋಗಿ ಜಕ್ಕಲಿ, ನಿರಂತರ ಪ್ರಕಾಶನದ ಎ.ಎಸ್.ಮಕಾನದಾರ, ದೊಡ್ಡಯ್ಯ ಅರವಟಗಿಮಠ, ಕಲ್ಲಯ್ಯ ಹಿರೇಮಠ, ಭರಮಪ್ಪ ತಾಳಿ, ಗುರುಪಾದಪ್ಪಬೆಲ್ಲದ, ಸುರೇಶ ಹಳ್ಳಿಕೇರಿ ಇತರರಿದ್ದರು.



ನರೇಗಲ್ಲ: ಸ್ಥಳೀಯ ಈಶ್ವರೀಯ ವಿವಿಯಲ್ಲಿ ಕನ್ನಡ ಪುಸ್ತಕ ಪ್ರಾಧಿಕಾರ, ಜಿಲ್ಲಾ ಜಾಗೃತಿ ಸಮಿತಿ, ಬೀಚಿ ಬಳಗ, ಶರಣ ಸಾಹಿತ್ಯ ಪರಿಷತ್ ಹಾಗೂ ತಾಲೂಕು ಜಾನಪದ ಪರಿಷತ್, ನಿರಂತರ ಪ್ರಕಾಶನ ಗದಗ ಇವರ ಸಹಯೋಗದಲ್ಲಿ ಆಯೋಜಿಸಲಾಗಿತ್ತು. ಶಿಕ್ಷಕ ವಿ.ಎ. ಕುಂಬಾರ ನಿರೂಪಿಸಿದರು. ಮಹಾದೇವಪ್ಪ ಬೇವಿನಕಟ್ಟಿ ಸ್ವಾಗತಿಸಿದರು. ರವಿ ದೇವರೆಡ್ಡಿ ಪ್ರಾಸ್ತಾವಿಸಿದರು. ಕಳಕಪ್ಪ ಕಳಕಣ್ಣವರ ವಂದಿಸಿದರು.

ಲೋಕಾಯುಕ್ತ ಜನಸಂಪರ್ಕ ಸಭೆ | ಅಹವಾಲು ಸ್ವೀಕಾರ | ಕವಟಗಿ ಸೂಚನೆ

ಕಚೇರಿಗಳಲ್ಲಿ ಆನ್‌ಲೈನ್‌ನಲ್ಲೇ ವ್ಯವಹರಿಸಿ

◆**ಲಕ್ಷ್ಮೇಶ್ವರ:** ಅಧಿಕಾರಿಗಳು ಜನರ ಕೆಲಸವನ್ನು ಸರಿಯಾದ ಸಮಯಕ್ಕೆ ಮಾಡಿ ಕೊಡಬೇಕು. ಭ್ರಷ್ಟಾಚಾರವನ್ನು ತಡೆಯಲು ಸರ್ಕಾರಿ ಕಚೇರಿಗಳಲ್ಲಿ ಜನರು ಆನ್‌ಲೈನ್‌ನಲ್ಲಿ ವ್ಯವಹರಿಸಿ ಎಂದು ಗದಗ ಲೋಕಾಯುಕ್ತ ಪೊಲೀಸ್ ಇನ್ಸ್‌ಪೆಕ್ಟರ್ ಪರಮೇಶ್ವರ ಜಿ. ಕವಟಗಿ ಹೇಳಿದರು.

ಅವರು ತಾಲೂಕಿನ ರಾಮಗೇರಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಲೋಕಾಯುಕ್ತ ಜನಸಂಪರ್ಕ ಸಭೆ ಮತ್ತು ಸಾರ್ವಜನಿಕ ಅರ್ಜಿ ಅಹವಾಲು ಸ್ವೀಕಾರ ಕಾರ್ಯಕ್ರಮದಲ್ಲಿ ಸಾರ್ವಜನಿಕರಿಂದ ಅರ್ಜಿ ಸ್ವೀಕರಿಸಿ ಮಾತನಾಡಿ, ಅಂಗನವಾಡಿ ಕೇಂದ್ರದ ಸುತ್ತಲೂ ಸಸಿ ನೆಡಲು ಅನುದಾನವಿದ್ದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಅಧಿಕಾರಿಗಳು ಸದುಪಯೋಗ ಪಡೆದುಕೊಂಡು ಸಸಿ ನೆಡಲು ಮುಂದಾಗಬೇಕು ಎಂದು ಗ್ರಾಮದ ಆಡಳಿತ ಅಧಿಕಾರಿ ಹಾಗೂ ಸಿಡಿಪಿಓ ಮೃತ್ಯುಂಜಯ ಗುಡ್ಡದ ಅನ್ವೇರಿಗೆ ಸೂಚಿಸಿದರು. ಶಾಲೆ ಮತ್ತು ಅಂಗನವಾಡಿ ಕೇಂದ್ರಗಳಲ್ಲಿ ಅವಧಿ ಮೀರಿದ ಆಹಾರ ಪದಾರ್ಥಗಳು ಕಂಡು ಬಂದಲ್ಲಿ ಕ್ರಮ ಕೈಗೊಳ್ಳಲಾಗುವುದು. ವಿದ್ಯಾರ್ಥಿಗಳಿಗೆ ಮೇನ್ಯೂ ಪ್ರಕಾರ ಊಟ ನೀಡಿ ಎಂದರು.

ಹಿರಿಯರಾದ ಬಸಣ್ಣ ಬೆಟಗೇರಿ, ಗ್ರಾಪಂ ಆಡಳಿತ ಅಧಿಕಾರಿ ಮೃತ್ಯುಂಜಯ ಗುಡ್ಡದಅನ್ವೇರಿ, ಪಿಎಸ್‌ಐ ನಾಗರಾಜ ಗಡದ, ಕೃಷಿ ಅಧಿಕಾರಿ ಚಂದ್ರಶೇಖರ ನರಸಮ್ಮನವರ, ಪಿಡಿಓ ತನುಜಾ ಬೆನಕಟ್ಟಿ, ಗ್ರಾಪಂ ಕಾರ್ಯದರ್ಶಿ ಎಂ.ಎಚ್. ನದಾಫ, ಇಸಿಓ ರಾಘವೇಂದ್ರ ಜೋಶಿ, ಕಂದಾಯ ಇಲಾಖೆ ನದಾಫ, ಹೆಸ್ಕಾಂ ಇಲಾಖೆಯ ಕಿರಣ ಪಮ್ಮಾರ, ರಘುಪತಿ ನಾಯಕ, ಅರಣ್ಯ, ಸಮಾಜ ಕಲ್ಯಾಣ, ಪೊಲೀಸ್ ಇಲಾಖೆ, ಲೋಕಾಯುಕ್ತ ಪೊಲೀಸ್ ಸಿಬ್ಬಂದಿ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು, ಗ್ರಾಮಸ್ಥರು ಇದ್ದರು.



ಜನರು ಧೈರ್ಯದಿಂದ ದೂರು ನೀಡಲಿ

ಭ್ರಷ್ಟಾಚಾರ ನಡೆಯುತ್ತಿದ್ದರೆ ಜನರು ಧೈರ್ಯದಿಂದ ಮುಂದೆ ಬಂದು ದೂರ ಕೊಡಬೇಕು. ಭ್ರಷ್ಟಾಚಾರ ತಡೆಯಲು ಜನರ ಸಹಕಾರ ಅವಶ್ಯಕ. ಅರಿವು ಗ್ರಂಥಾಲಯಗಳು ವಿದ್ಯಾರ್ಥಿಗಳಿಗೆ ಉಪಯೋಗವಾಗಬೇಕು. ಅಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗೆ ಸಹಾಯಕವಾಗುವ ಬುಕ್‌ಗಳನ್ನು ಇಡಿ ಎಂದು ಗ್ರಾಮದ ಗ್ರಂಥಾಲಯ ಮೇಲ್ವಿಚಾರಕರು ತಿಳಿಸಿದ್ದಾರೆ. ರೈತರಿಗೆ ಸರ್ಕಾರದಿಂದ ಬರುವ ಪರಿಹಾರಗಳನ್ನು ಅಧಿಕಾರಿಗಳು ಸರಿಯಾಗಿ ರೈತರಿಗೆ ಮುಟ್ಟಿಸಬೇಕು ಎಂದು ಗದಗ ಲೋಕಾಯುಕ್ತ ಪೊಲೀಸ್ ಇನ್ಸ್‌ಪೆಕ್ಟರ್ ಪರಮೇಶ್ವರ ಜಿ. ಕವಟಗಿ ಹೇಳಿದರು.

ಸಮಸ್ಯೆ ಸರಿಪಡಿಸಲು ಒತ್ತಾಯ

ಆರೋಗ್ಯ ಇಲಾಖೆಯವರು ಗ್ರಾಮದಲ್ಲಿ ವಾಸ್ತವ್ಯ ಇರುವುದಿಲ್ಲ. ಇದರಿಂದ ಜನರಿಗೆ ತೊಂದರೆ ಆಗುತ್ತಿದೆ ಎಂದು ಯುವ ಮುಖಂಡ ಬಸವರಾಜ ಬೆಟಗೇರಿ ಆರೋಪಿಸಿದರು. ಜಾನುವಾರುಗಳಿಗೆ ಕುಡಿಯಲು ನೀರಿನ ತೊಟ್ಟಿ ನಿರ್ಮಿಸಿ ಎಂದು ಸ್ಥಳೀಯ ನಿವಾಸಿಯೊಬ್ಬರು ಆಗ್ರಹಿಸಿದರು. ಶುದ್ಧನೀರಿನ ಘಟಕವಿಲ್ಲ ಎಂದು ನಿವಾಸಿಯೊಬ್ಬರು ದೂರಿದರು. ಗ್ರಾಮದ ನಿವಾಸಿ ಅಶೋಕ ಎನ್. ಬೆಟಗೇರಿ ತಮ್ಮ ಮನೆಯು ಗ್ರಾಮದ ಕೊನೆಯ ಭಾಗದಲ್ಲಿದ್ದು ಗ್ರಾಮದ ಎಲ್ಲಾ ಕಡೆಯಿಂದ ಚರಂಡಿಯ ಗಲೀಜು ನೀರು ಬಂದು ಮನೆ ಹತ್ತಿರ ನಿಲ್ಲುತ್ತಿದ್ದು ಇದರಿಂದ ರೋಸಿಹೋಗಿದ್ದು, ಸಮಸ್ಯೆ ಸರಿಪಡಿಸಿ ಎಂದರು. ಗ್ರಾಮದ ಹಿರಿಯ ಮುಖಂಡ ಶೇಕಣ್ಣ ಕಾಳೆ ಮೌಖಿಕವಾಗಿ ತಹಶೀಲ್ದಾರ್ ಕಚೇರಿಯಲ್ಲಿ ವಾರಸಾ ಹಾಗೂ ಬೋನೋ ಪ್ಯಾಡ್ ಕೊಡಲು ಸತಾಯಿಸುತ್ತಾರೆ ಎಂದು ಲೋಕಾಯುಕ್ತ ಅಧಿಕಾರಿಗಳ ಮುಂದೆ ಅಳಲನ್ನು ತೋಡಿಕೊಂಡರು. ಸಾರ್ವಜನಿಕರಿಂದ 3 ಅರ್ಜಿಗಳ ದೂರು ಸಲ್ಲಿಕೆಯಾದವು.

ಮಹಿಳಾ ಮೀಸಲಾತಿ ವಿರೋಧಕ್ಕೆ ಬಿಜೆಪಿ ಖಂಡನೆ

◆**ಗದಗ:** ಬಿಜೆಪಿ ಜಿಲ್ಲಾ ಹಾಗೂ ನಗರ ಮಂಡಲ ಮಹಿಳಾ ಮೋರ್ಚಾ ವತಿಯಿಂದ ನಾರಿ ಶಕ್ತಿ ವಂದನಾ ಅಧಿನಿಯಮ ವಿರೋಧಿಸಿದ ಕಾಂಗ್ರೆಸ್ ಹಾಗೂ ಅದರ ಮಿತ್ರ ಪಕ್ಷಗಳ ವಿರುದ್ಧ ಜಿಲ್ಲಾಧಿಕಾರಿಗಳ ಕಚೇರಿ ಎದುರಿಗೆ ಬೃಹತ್ ಪ್ರತಿಭಟನೆ ಮಾಡಲಾಯಿತು.

ಬಿಜೆಪಿ ಜಿಲ್ಲಾ ಅಧ್ಯಕ್ಷ ರಾಜು ಕುರುಡಗಿ ಮಾತನಾಡಿ, ನಾರಿ ಶಕ್ತಿ ವಂದನಾ ಅಧಿನಿಯಮ ವಿರೋಧಿಸಿದ ಕಾಂಗ್ರೆಸ್ ಪಕ್ಷದವರು ಹಾಗೂ ಅದರ ಮಿತ್ರ ಪಕ್ಷಗಳು ಸಂಸತ್‌ನಲ್ಲಿ ಮಹಿಳಾ ಮೀಸಲಾತಿಗೆ ವಿರೋಧ ಮಾಡಿರುವುದು ಖಂಡನಾರ್ಯ ಹಾಗೂ ಮಹಿಳೆಯರ ಉನ್ನತಿಗೆ ಅಡ್ಡಗಾಲು ಹಾಕಿದ ವಿಪಕ್ಷಗಳನ್ನು ದೇಶದ ನಾರಿಶಕ್ತಿ ಎಂದಿಗೂ ಕ್ಷಮಿಸದು ಎಂದರು.

ಮಹಿಳಾ ಮೋರ್ಚಾ ರಾಜ್ಯ ಪ್ರಧಾನ ಕಾರ್ಯದರ್ಶಿ ಡಾ.ಶೋಭಾ ನರಸಿಂಹಗೌಡರ ಮಾತನಾಡಿ, ನಾರಿಶಕ್ತಿ ಅಧಿನಿಯಮ ವಿರೋಧಿಸಿದ ಕಾಂಗ್ರೆಸ್ ಸರ್ಕಾರ ದೇಶದ ಮಹಿಳೆಯರಿಗೆ ಮಾಡುವ ಅಪಮಾನ ಎಂದರು.

ಮಹಿಳಾ ಮೋರ್ಚಾ ಜಿಲ್ಲಾಧ್ಯಕ್ಷ ನಿರ್ಮಲಾ ಕೊಳ್ಳಿ ಮಾತನಾಡಿ, ದೇಶದ ಮಹಿಳೆಯರ ಸಬಲೀಕರಣ ಗೌರವ ಮತ್ತು ರಾಜಕೀಯ ಪ್ರತಿನಿಧಿತ್ವವನ್ನು ಹೆಚ್ಚಿಸುವ ಮಹತ್ವಾಕಾಂಕ್ಷಿ ದೃಷ್ಟಿಕೋನದೊಂದಿಗೆ ಕೇಂದ್ರ ಸರ್ಕಾರ ಜಾರಿಗೆ ತಂದಿರುವ ನಾರಿ ಶಕ್ತಿ ವಂದನ ಅಧಿನಿಯಮ್-2026 ದೇಶದ ಇತಿಹಾಸದಲ್ಲೆ ಸುವರ್ಣ ಅಧ್ಯಾಯವಾಗುತ್ತಿತ್ತು. ಆದರೆ ಕಾಂಗ್ರೆಸ್ ಸರ್ಕಾರ ಹಾಗೂ ಮಿತ್ರ ಪಕ್ಷಗಳ ಒಕ್ಕೂಟದವರು ಈ ಬಿಲ್‌ನ್ನು ವಿರೋಧಿಸಿ ದೇಶದ ಮಹಿಳೆಯರಿಗೆ ಅನ್ಯಾಯ ಮಾಡಿದ್ದಾರೆ ಎಂದರು.

ನಗರ ಮಂಡಲ ಮಹಿಳಾ ಮೋರ್ಚಾ ಅಧ್ಯಕ್ಷೆ ಸ್ವಾತಿ ಅಕ್ಕಿ ಮಾತನಾಡಿ, ನಾರಿ ಶಕ್ತಿ ವಂದನಾ ಅಧಿನಿಯಮವು ಮಹಿಳೆಯರಿಗೆ ರಾಜಕೀಯ ಕ್ಷೇತ್ರದಲ್ಲಿ ಹೆಚ್ಚಿನ ಅವಕಾಶಗಳನ್ನು ಒದಗಿಸುವ ಮೂಲಕ ಸಮಾನ ಹಕ್ಕುಗಳು ಮತ್ತು ಅವಕಾಶಗಳನ್ನು ಖಚಿತಪಡಿಸುವ ದಿಕ್ಕಿನಲ್ಲಿ ಮಹತ್ವದ ಹೆಜ್ಜೆಯಾಗಿರುತ್ತಿತ್ತು. ಆದರೆ ಕಾಂಗ್ರೆಸ್ ಪಕ್ಷದವರು ಈ ಬಿಲ್‌ನ್ನು ವಿರೋಧಿಸಿ ಎಲ್ಲ ಮಹಿಳೆಯರಿಗೆ ದ್ರೋಹ ಮಾಡಿದ್ದಾರೆ ಎಂದರು.

ಪಕ್ಷದ ಮುಖಂಡ ಎಂ.ಎಸ್.ಕರೀಗೌಡ್ರ, ಶ್ರೀಪತಿ ಉಡುಪಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಲಿಂಗರಾಜ ಪಾಟೀಲ, ಫಕೀರೇಶ ರಟ್ಟಿಹಳ್ಳಿ, ನಗರ ಮಂಡಲ ಅಧ್ಯಕ್ಷ ಸುರೇಶ ಮರಳಪ್ಪನವರ, ಯುವ ಮೋರ್ಚಾ ಜಿಲ್ಲಾಧ್ಯಕ್ಷ ಸಂತೋಷ ಅಕ್ಕಿ, ನಗರ ಮಂಡಲ ಪ್ರಕಾಶ ಶಂಕರ ಕಾಕಿ, ಸುರೇಶ ಚಿತ್ತರಗಿ, ಜಯಶ್ರೀ ಉಗಲಾಟದ, ಚನ್ನಮ್ಮ ಹುಳಕಣ್ಣವರ, ಕಸ್ತೂರಿ ಕಮ್ಮಾರ, ಪುಷ್ಪಾ ಪೂಜಾರ, ರೇಖಾ ಗವಳಿ ಇತರರಿದ್ದರು.



ನೈಜ ನಂಬಿಕೆ, ಸಂಸ್ಕೃತಿ ಪ್ರತಿಬಿಂಬಿಸುವ ಸಾಹಿತ್ಯ

◆**ಗದಗ:** ಸಮಕಾಲೀನ ಭಾರತೀಯ ಸಾಹಿತ್ಯವು ವೈವಿಧ್ಯಮಯವಾಗಿ ಬೆಳೆದಿದೆ. ಅದು ಭಾರತೀಯ ಜನರ ನೈಜ ನಂಬಿಕೆಗಳು ಮತ್ತು ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತಿದೆಎಂದು ಹರಿಯಾಣದಕುರುಕ್ಷೇತ್ರ ವಿಶ್ವವಿದ್ಯಾಲಯದ ಕುಲಸಚಿವ ಹಾಗೂ ಇಂಗ್ಲಿಷ್ ಪ್ರಾಧ್ಯಾಪಕ ಡಾ.ವೀರೇಂದ್ರ ಪಾಲ್ ಹೇಳಿದರು.

ನಗರದ ಕೆಎಲ್‌ಇ ಸಂಸ್ಥೆಯ ಜಗದ್ಗುರು ತೋಂಟದಾರ್ಯ ವಿದ್ಯಾಲಯದ ಮತ್ತು ಕನ್ನಡ, ಹಿಂದಿ, ಇಂಗ್ಲೀಷ್ ಭಾಷಾ ವಿಭಾಗಗಳ ಸಹಯೋಗದಲ್ಲಿ ಆಯೋಜಿಸಿದ್ದ ಸಮಕಾಲೀನ ಭಾರತೀಯ ಸಾಹಿತ್ಯದಲ್ಲಿನ ಇತ್ತೀಚಿನ ಪ್ರವೃತ್ತಿಗಳು ಎಂಬ ವಿಷಯದ ಮೇಲೆ ನಡೆದ ಒಂದು ದಿನದ ರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿಸಿ ಮಾತನಾಡಿದರು.

ಎಸ್.ಎನ್.ಬಾಲಗಂಗಾಧರ ಅವರ ಚಿಂತನೆಗಳನ್ನು ಉಲ್ಲೇಖಿಸಿದ ಅವರು, ನಾವು ಹೇಗೆ ಪಾಶ್ಚಿಮಾತ್ಯ ಕಣ್ಣುಗಳಿಂದ ನಮ್ಮ ಸಂಸ್ಕೃತಿ ನೋಡುತ್ತಿದ್ದೇವೆ ಎಂಬುದನ್ನು ವಿವರಿಸಿದರು. ನಾವು ಗಂಗೆ, ಯಮುನೆ ಪೂಜಿಸುತ್ತೇವೆ ಎಂದು ಹೇಳುವ ನಾವು ಅವುಗಳನ್ನು ಕಲುಷಿತಗೊಳಿಸಿದ್ದೇವೆ. ಆದರೆ ಮೇಘಾಲಯದ ಉಮಂಗೋಟ್ ನದಿಯ ಸ್ವಚ್ಛತೆಯು ಅಲ್ಲಿನ ಬುಡಕಟ್ಟು ಜನರು ನಿಸರ್ಗವನ್ನು ಎಷ್ಟು ಪವಿತ್ರವಾಗಿ ಕಾಣುತ್ತಾರೆ ಎಂಬುದಕ್ಕೆ ಸಾಕ್ಷಿಯಾಗಿದೆ ಎಂದರು.

ಹರಿಯಾಣದ ಗುರು ಜಂಬೇಶ್ವರ್ ವಿಶ್ವವಿದ್ಯಾಲಯದ ಕುಲಸಚಿವ ಡಾ. ವಿಜಯಕುಮಾರ್ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಸಾಹಿತ್ಯ ನಮ್ಮ ಬದುಕಿನ ವಿವಿಧ ಆಯಾಮಗಳನ್ನು ಒಳಗೊಂಡು ಜನರ ಮನಸು ಮತ್ತು ಬುದ್ಧಿಯನ್ನು ಬೆಳಗುತ್ತದೆ. ಸಾಹಿತ್ಯದಲ್ಲಿ ಸುಂದರ ಬದುಕಿಗೆ ಬೇಕಾದ ರಾಶಿ ರಾಶಿ ವಿಚಾರಗಳಿವೆ ಎಂದರು.

ಚನ್ನೈ ಮದ್ರಾಸ್ ವಿಶ್ವ ವಿದ್ಯಾಲಯದ ಕನ್ನಡ ವಿಭಾಗದಮುಖ್ಯಸ್ಥೆ ಡಾ.ತಮಿಳುಸೆಲ್ವಿಮಾತನಾಡಿ, ಇತ್ತೀಚಿನ ಭಾರತೀಯ ಸಾಹಿತ್ಯದಲ್ಲಿ ಅನುವಾದವು ಪ್ರಾಮುಖ್ಯತೆ ಪಡೆದುಕೊಳ್ಳುತ್ತಿದೆ. ಇದರಿಂದ ನಮ್ಮ ದೇಶದ ಬೇರೆ ಬೇರೆ ಭಾಷೆಗಳಲ್ಲಿನ ಸಾಹಿತ್ಯ, ಸಂಸ್ಕೃತಿಯನ್ನು ಪರಸ್ಪರ ಪರಿಚಯ ಮಾಡಿಕೊಳ್ಳಲು ನೆರವಾಗುತ್ತದೆ. ಭಾರತೀಯ ಸ್ತ್ರೀ ವಾದವು ಹೊಸ ರೂಪುರೇಷೆಗಳೊಂದಿಗೆ ಸ್ತ್ರೀಯರ ಬದುಕಿನಲ್ಲಿ ಆಮೂಗ್ರವಾದ ಬದಲಾವಣೆ ಉಂಟುಮಾಡಿದೆ ಎಂದರು. ಕರ್ನಾಟಕ ವಿಶ್ವವಿದ್ಯಾಲಯದ ಹಿಂದಿ ವಿಭಾಗದ ಮುಖ್ಯಸ್ಥ ಸೀತಾರಾಮ ಪವಾರ್ ಹಾಗೂ ಪ್ರಾಚಾರ್ಯ ಪಿ.ಜಿ. ಪಾಟೀಲ ಮಾತನಾಡಿದರು. ಬೇರೆ ಬೇರೆ ಮಹಾವಿದ್ಯಾಲಯದಿಂದ ಹಾಗೂ ರಾಜ್ಯದಿಂದ 40ಕ್ಕೂ ಹೆಚ್ಚು ವಿದ್ಯಾರ್ಥಿಗಳು, ಸಂಶೋಧನಾ ವಿದ್ಯಾರ್ಥಿಗಳು, ಪ್ರಾಧ್ಯಾಪಕರು ತಮ್ಮ ಪ್ರಬಂಧ ಮಂಡಿಸಿದರು. ಜಿ.ವಿಶ್ವನಾಥ್ ಮಾತನಾಡಿದರು. ಬಿ.ಆರ್.ಚಿನಗುಂಡಿ, ಸ್ನೇಹಾ ಕೊಡಗುಳಿ ಪರಿಚಯಿಸಿದರು. ಸಂಜನಾ ಹಾಗೂ ಸಂಗೀತಾ ವಣಗೇರಿ ನಿರೂಪಿಸಿದರು. ಸುಶ್ಮಿತಾ ಪೂಜಾರ ಪ್ರಾರ್ಥಿಸಿದರು. ಡಾ. ನಾಗರಾಜ್ ಬಳಿಗೇರ ಹಾಗೂ ಡಾ. ನಾಗರಾಜ್ ಒಬ್ಬಯ್ಯ ವಂದಿಸಿದರು.



ಕೂಡಲೇ ಹಕ್ಕಪತ್ರ ನೀಡಲು ಒತ್ತಾಯಿಸಿ ಫಲಾನುಭವಿಗಳಿಂದ ತಮಟೆ ಪ್ರತಿಭಟನೆ

◆**ಮುಂಡರಗಿ:** ಸರ್ಕಾರದಿಂದ ತಾಲೂಕಿನ ಹೊಸಡಂಬಳ ಗ್ರಾಮದ ಮಾದಿಗ ಸಮಾಜದ 61 ಫಲಾನುಭವಿಗಳಿಗೆ 2000-01ರಲ್ಲಿ ಮಂಜೂರಾದ ನಿವೇಶನದ ಹಕ್ಕಪತ್ರ ಈವರೆಗೂ ನೀಡಿಲ್ಲ, ಆದ್ದರಿಂದ ಕೂಡಲೇ ಹಕ್ಕಪತ್ರ ನೀಡಬೇಕೆಂದು ಒತ್ತಾಯಿಸಿ ತಾಲೂಕು ಅಂಬೇಡ್ಕರ್ ದಲಿತ ಚಳವಳಿ ವೇದಿಕೆ ನೇತೃತ್ವದಲ್ಲಿ ಫಲಾನುಭವಿಗಳು ತಮಟೆ ಪ್ರತಿಭಟನೆ ನಡೆಸಿ ತಹಶೀಲ್ದಾರ್‌ಗೆ ಮನವಿ ಸಲ್ಲಿಸಿದರು.

ತಾಲೂಕು ಅಂಬೇಡ್ಕರ್ ದಲಿತ ಚಳವಳಿ ವೇದಿಕೆ ಅಧ್ಯಕ್ಷ ಲಕ್ಷ್ಮಣ ತಗಡಿನಮನಿ ಮಾತನಾಡಿ, ಸರ್ಕಾರ ಹೊಸಡಂಬಳ ಗ್ರಾಮದ ಮಾದಿಗ ಸಮಾಜದ 61 ಫಲಾನುಭವಿಗಳಿಗೆ ನಿವೇಶನವನ್ನು ಮಂಜೂರು ಮಾಡಿತ್ತು. ಈಗ ಫಲಾನುಭವಿಗಳು ಅಲ್ಲಿಯೇ ವಾಸವಾಗಿದ್ದಾರೆ. ಆದರೆ 25ವರ್ಷ ಕಳೆದರೂ ಸಹ ಅವರಿಗೆ ಹಕ್ಕುಪತ್ರ ದೊರೆಯದೇಸರ್ಕಾರದಿಂದಸಿಗುವಂತಸೌಲಭ್ಯಗಳುಪಡೆಯದೇವಂಚಿತರಾಗುತ್ತಿದ್ದಾರೆ. ಕೂಡಲೇ ಹಕ್ಕುಪತ್ರ ನೀಡಬೇಕು ಎಂದು ಆಗ್ರಹಿಸಿದರು.

ಪ್ರಮುಖ ದೇವರಾಜ ಕಟ್ಟಿಮನಿ ಮಾತನಾಡಿ, ಅಧಿಕಾರಿಗಳು ಸರ್ಕಾರದಿಂದ ನೀಡಿದ ನಿವೇಶನಗಳಿಗೆ ಹಕ್ಕುಪತ್ರ ನೀಡುವಲ್ಲಿ ವಿಳಂಬ ನೀತಿ ಅನುಸರಿಸುವುದು ಸರಿಯಲ್ಲ, ಕೂಲಿ ಕೆಲಸ ಮಾಡುವ ಫಲಾನುಭವಿಗಳು ತಮ್ಮ ಕೆಲಸ ಕಾರ್ಯ ಬಿಟ್ಟು ಹಕ್ಕುಪತ್ರಕ್ಕಾಗಿ ಹೋರಾಟ ಮಾಡುವ ದುಸ್ಥಿತಿ ನಿರ್ಮಾಣವಾಗಿದೆ. ಏ.28ರೊಳಗೆ ಹಕ್ಕುಪತ್ರ ವಿತರಿಸದಿದ್ದರೆ ಬೃಹತ್ ಪ್ರತಿಭಟನೆ ನಡೆಸುತ್ತೇವೆ ಎಂದು ಎಚ್ಚರಿಸಿದರು.

ಸ್ಥಳಕ್ಕೆ ಭೇಟಿ ನೀಡಿದ ಗ್ರೇಡ್-2 ತಹಶೀಲ್ದಾರ್ ಕೆ.ರಾಧಾ, ಪಿಎಸ್‌ಐ ಚನ್ನಯ್ಯ ದೇವೂರ ಅವರು ಪ್ರತಿಭಟನೆಕಾರರೊಂದಿಗೆ ಚರ್ಚಿಸಿದರು. ಕೆ.ರಾಧಾ ಅವರು ಮನವಿ ಸ್ವೀಕರಿಸಿದರು. ಕೋಟೆಪ್ಪ ಬೆಳಗಟ್ಟಿ, ಶರಣಪ್ಪ ಆಲೂರ, ನಂದೀಶ ಹೊಳಗುಂದಿ, ಮಂಜುನಾಥ ತಳಗೇರಿ, ದಾವಲಪ್ಪ ಶಿರುಂದ, ಉಡಚವ್ವ ತಗಡಿನಮನಿ, ಗಿರಿಜವ್ವ ಬೇವಿನಮರದ, ನಾಗವ್ವ ಹೊಸಪೇಟೆ, ಪಾರವ್ವ ಹೊಳಗುಂದಿ, ಹುಲಿಗೆವ್ವ ಹೊಸಮನಿ, ಮಾಳವ್ವ ಹೊಳಗುಂದಿ, ಗಿರಿಜವ್ವ ಶಿರುಂದ, ಯಲ್ಲವ್ವ ಕಟ್ಟಿಮನಿ ಇತರರಿದ್ದರು.



ಸೂರ್ಯಕಾಂತಿ ಖರೀದಿಗೆ ಬೆಂಬಲ ಬೆಲೆ ಖರೀದಿ ಕೇಂದ್ರ ಆರಂಭಿಸಿ

◆**ನರಗುಂದ:** ಮಾರುಕಟ್ಟೆಯಲ್ಲಿ ಸೂರ್ಯಕಾಂತಿ ಬೆಲೆ ದಿಢೀರನೆ ಕುಸಿತವಾಗಿದೆ. ಆದ್ದರಿಂದ ಸರ್ಕಾರ ಬೇಗ ಸೂರ್ಯಕಾಂತಿ ಖರೀದಿ ಮಾಡಲು ಬೆಂಬಲ ಬೆಲೆ ಖರೀದಿ ಕೇಂದ್ರ ಪ್ರಾರಂಭಸಬೇಕೆಂದು ರೈತ ಸಂಘ ಹಾಗೂ ಹಸಿರು ಸೇನೆ ತಾಲೂಕಾಧ್ಯಕ್ಷ ಉಮೇಶ ಮರ್ಚಪ್ಪನವರ ಆಗ್ರಹಿಸಿದರು.

ಅವರು ಪಟ್ಟಣದ ಮಿನಿ ವಿಧಾನಸೌಧದಲ್ಲಿ ತಹಶೀಲ್ದಾರ್‌ಗೆ ಸೂರ್ಯಕಾಂತಿ ಖರೀದಿ ಮಾಡಲು ಬೆಂಬಲ ಬೆಲೆ ಕೇಂದ್ರ ಪ್ರಾರಂಭಸಬೇಕೆಂದು ಮನವಿ ನೀಡಿ ಆನಂತರ ಮಾತನಾಡಿ ಜಿಲ್ಲೆಯ ಕೃಷಿ ಪ್ರಧಾನ ತಾಲೂಕು ನರಗುಂದದಲ್ಲಿ ಮಲಪ್ರಭಾ ಜಲಾಶಯ ನೀರಾವರಿ ಕಾಲುವೆಗಳಿಗೆ ಹೊಂದಿರುವ ಜಮೀನಗಳಲ್ಲಿ ರೈತರು ಹಿಂಗಾರು ಹಂಗಾಮಿನಲ್ಲಿ ವಾಣಿಜ್ಯ ಬೆಳೆಯಾದ ಸೂರ್ಯಪಾನ ಬಿತ್ತನೆ ಮಾಡಿ ಪ್ರತಿ 1ಎಕರಗೆ 20ರಿಂದ 30 ಸಾವಿರ ಖರ್ಚು ಮಾಡಿ ಉತ್ತಮ ಬೆಳೆ ಬೆಳೆಸಿ ಪ್ರತಿ 1ಎಕರಗೆ 8ರಿಂದ 10 ಕ್ವಿಂಟಲ್ ಇಳುವರಿಯನ್ನು ರೈತರು ತೆಗೆದಿದ್ದಾರೆ. ಆದರೆ ರೈತರು ಬೆಳೆದ ಸೂರ್ಯಕಾಂತಿ ಬೆಳೆ ಕಟಾವು ಮಾಡುವ ಮೊದಲು ಮಾರುಕಟ್ಟೆಯಲ್ಲಿ ಪ್ರತಿ 1ಕ್ವಿಂಟಲ್‌ಗೆ 7 ಸಾವಿರದಿಂದ 7,500 ರೂ.ವರಗೆ ಬೆಲೆಯಿತ್ತು. ರೈತರು ಸದ್ಯ ಸೂರ್ಯಕಾಂತಿ ಬೆಳೆಯನ್ನು ಕಟಾವು ಮಾಡಿ ಮಾರುಕಟ್ಟೆಗೆ ಮಾರಾಟ ಮಾಡಲು ತಂದಾಗ ದಿಢೀರನೆ ವ್ಯಾಪಾರಸ್ಥರು ಸೂರ್ಯಕಾಂತಿ ಬೆಲೆಯನ್ನು 6 ಸಾವಿರದಿಂದ 6,300 ರೂ. ಮಾಡಿದ್ದರಿಂದ ರೈತರಿಗೆ ಭಾರೀ ಹಾನಿಯಾಗಲಿದೆ. ಆದ್ದರಿಂದ ಸರ್ಕಾರ ಸೂರ್ಯಕಾಂತಿಯನ್ನು 7,771 ರೂ.ಗಳಗೆ ಬೆಂಬಲ ಬೆಲೆಯಲ್ಲಿ ಖರೀದಿ ಮಾಡಲು ಆದೇಶ ಮಾಡಿದ ಪ್ರಕಾರ ತಾಲೂಕಿನ ರೈತರಿಗೆ ಅನುಕೂಲವಾಗುವ ರೀತಿಯಲ್ಲಿ ಬೇಗ ಸರ್ಕಾರ ತಾಲೂಕಿನಲ್ಲಿ ಸೂರ್ಯಕಾಂತಿ ಖರೀದಿ ಮಾಡಲು ಬೆಂಬಲ ಬೆಲೆ ಖರೀದಿ ಕೇಂದ್ರ ಪ್ರಾರಂಭ ಮಾಡಬೇಕು ಎಂದರು.

ತಹಶೀಲ್ದಾರ್ ಶ್ರೀಶೈಲ ತಳವಾರ ಮನವಿ ಸ್ವೀಕರಿಸಿ ಸರ್ಕಾರಕ್ಕೆ ರವಾನೆ ಮಾಡಲಾಗುವುದೆಂದು ಹೇಳಿದರು. ವೆಂಕಪ್ಪ ಹೂಲಿ, ಜಮಲಾಸಾಬ ಕೆರೂರ, ಸಂತೋಷ ಖಾನಾಪುರ, ಸುರೇಶ ಐನಾಪೂರ, ಗುರುಶಾಂತ ನರಸಾಪೂರ, ಮುತ್ತಪ್ಪ ಬದಾಮಿ ಇದ್ದರು.



ಬಂಕ್‌ಗಳಲ್ಲಿ ತೈಲ ಖರೀದಿಗೆ ಗಂಟೆಗಟ್ಟಲೇ ನಿಂತ ವಾಹನ ಸವಾರರು!

◆**ಗಜೇಂದ್ರಗಡ:** ಪಟ್ಟಣದ ಹಲವು ಕಡೆಗಳಲ್ಲಿ ಪೆಟ್ರೋಲ್ ಹಾಗೂ ಡೀಸೆಲ್ ಪೂರೈಕೆಯಲ್ಲಿ ವ್ಯತ್ಯಯವಾಗಿದ್ದು, ಬೆಳ್ಳಂಬೆಳಗ್ಗೆ ಹಲವು ಕಡೆಗಳಲ್ಲಿ ಜನರು ಅಪಾರ ಪ್ರಮಾಣದಲ್ಲಿ ಪೆಟ್ರೋಲ್ ಬಂಕ್‌ಗಳ ಮುಂದೇ ಸರತಿ ಸಾಲಿನಲ್ಲಿ ನಿಂತುಕೊಂಡು ಪರದಾಡುವ ಸ್ಥಿತಿ ನಿರ್ಮಾಣವಾಗಿತ್ತು.

ಪಟ್ಟಣದ ಕುಷ್ಟಗಿ ರಸ್ತೆಯಲ್ಲಿರುವ 4 ಪೆಟ್ರೋಲ್ ಬಂಕ್‌ಗಳಲ್ಲಿ ಒಂದರಲ್ಲಿ ಮಾತ್ರ ಪೆಟ್ರೋಲ್ ಸಿಗುತ್ತಿದ್ದು. ರೋಣ ರಸ್ತೆಯಲ್ಲಿ ಎರಡು ಬಂಕ್‌ಗಳಿದ್ದು ಒಂದು ಬಂಕ್ ಸಂಪೂರ್ಣವಾಗಿ ತೈಲ ಇಲ್ಲದೆ ಬಂದ್ ಆಗಿದೆ. ಇನ್ನೊಂದರಲ್ಲಿ ಗಂಟೆ ಗಟ್ಟಲೆ ಕಾಯುವ ಪರಿಸ್ಥಿತಿ ನಿರ್ಮಾಣವಾಗಿದ್ದು, ಈ ಬಂಕ್‌ಗಳನ್ನು ನೆಚ್ಚಿಕೊಂಡಿದ್ದ ಗ್ರಾಹಕರು ತಮ್ಮ ವಾಹನಗಳಿಗೆ ತೈಲಗಳನ್ನು ಹಾಕಿಸಲು ಪರದಾಡುತ್ತಿದ್ದಾರೆ. 4-5 ದಿನಗಳಿಂದಲೇ ಬಂಕ್‌ಗಳು ಬಂದ್ ಆಗಿದ್ದು ಪೆಟ್ರೋಲ್ ಡೀಸೆಲ್ ಇಲ್ಲ ಎಂಬ ಫಲಕಗಳನ್ನು ಹಾಕಲಾಗಿದೆ. ಇದರಿಂದಾಗಿ ಬೈಕ್ ಸವಾರರಿಗೆ ಮತ್ತು ರೈತರು ಟ್ರ್ಯಾಕ್ಟರ್‌ಗಳಿಗೆ ತೈಲಗಳನ್ನು ಹಾಕಿಸಲು ತೊಂದರೆ ಅನುಭವಿಸುವಂತಾಗಿದೆ.



ಹಳ್ಳಿಗಳಲ್ಲೂ ಸಮಸ್ಯೆ

ಗಜೇಂದ್ರಗಡ ತಾಲೂಕಿನ ಕೆಲವು ಪ್ರಮುಖ ಹಳ್ಳಿಗಳಲ್ಲಿ ತೈಲ ನಿರ್ವಹಣೆಯಲ್ಲಿ ವ್ಯತ್ಯಯವಾಗಿದ್ದು, ನಿಗದಿತ ಹಣದ ಸಮೇತ ಬೇಡಿಕೆ ಸಲ್ಲಿಸಿದರೂ ಟ್ಯಾಂಕರ್‌ಗಳು ಬರುತ್ತಿಲ್ಲ. ಇದರಿಂದ ಹೊಲಕ್ಕೆ ಹೋಗುವವರಿಗೆ, ಉದ್ಯೋಗಸ್ಥರಿಗೆ ತೊಂದರೆಯಾಗುತ್ತಿದೆ. ನಿಗದಿತ ಹಣದ ಸಮೇತ ಬೇಡಿಕೆ ಸಲ್ಲಿಸಿದರು ಟ್ಯಾಂಕರ್ ಗಳು ಬರುತ್ತಿಲ್ಲ ಎಂದು ಬಂಕ್ ಮಾಲೀಕರು ಹೇಳುತ್ತಿದ್ದಾರೆ.

"ಗಜೇಂದ್ರಗಡ ತಾಲೂಕಿನ ಯಾವುದೇ ಬಂಕ್‌ಗಳಲ್ಲಿ ತೈಲದ ಅಭಾವವಿಲ್ಲ. ಎಲ್ಲಾ ಕಡೆಯೂ ನಿಗದಿತ ಪ್ರಮಾಣದಲ್ಲಿ ಪೆಟ್ರೋಲ್ ಹಾಗೂ ಡೀಸೆಲ್ ಪೂರೈಕೆ ಆಗುತ್ತಿದೆ. ತೈಲ ಪೂರೈಕೆಯಲ್ಲಿ ಸ್ವಲ್ಪ ವ್ಯತ್ಯಯವಾಗಿದ್ದು ಇಂದು ಅಥವಾ ನಾಳೆಯೊಳಗೆ ಸಂಪೂರ್ಣವಾಗಿ ಎಲ್ಲಾ ಬಂಕ್‌ಗಳಲ್ಲೂ ತೈಲ ಪೂರೈಕೆಯಾಗುತ್ತದೆ. ಜನರು ಆತಂಕಪಡುವ ಅಗತ್ಯವಿಲ್ಲ.

■ **ಉಮೇಶ ಅರಳಿಗಿಡ,** ಉಪನಿರ್ದೇಶಕ, ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆ, ಗಜೇಂದ್ರಗಡ

"ಲಭ್ಯವಿರುವ ತೈಲ ಇಟ್ಟುಕೊಂಡು ಗ್ರಾಹಕರಿಗೆ ನೀಡಿದ್ದೇವೆ. ಹೊಸದಾಗಿ ದಾಸ್ತಾನು ಕಳುಹಿಸುವಂತೆ ತೈಲ ಸರಬರಾಜು ಕಂಪನಿಯ ಪ್ರತಿನಿಧಿಗಳಿಗೆ ತಿಳಿಸಿದ್ದೇವೆ. ಆದರೆ ಅವರು 3-4 ದಿನಗಳಿಂದ ತೈಲ ಕಳುಹಿಸಿಲ್ಲ, ಟ್ಯಾಂಕರ್ ಕೂಡಾ ಬಂದಿಲ್ಲ.

■ **ಶಂಕರ ಬಿದರೂರ, ನಯಾರ ಬಂಕ್ ಮಾಲೀಕ**

"ನಗರದಲ್ಲಿ ವಾಹನಗಳ ಓಡಾಟ ಹೆಚ್ಚಾಗಿದ್ದು, ಎಲ್ಲರೂ ಸಹ ಪೆಟ್ರೋಲ್, ಡೀಸೆಲ್‌ಗಳ ಬಂಕ್‌ಗಳ ಮುಂದೆ ಸಾಲುಗಟ್ಟಿ ನಿಂತಿದ್ದಾರೆ. ನಾನು ಕೂಡಾ 2 ಗಂಟೆ ಸರತಿ ಸಾಲಿನಲ್ಲಿ ನಿಂತು ವಾಹನಕ್ಕೆ ತೈಲ ತುಂಬಿಸಿದ್ದೇನೆ. ಸಂಬಂಧಪಟ್ಟ ಅಧಿಕಾರಿಗಳು ಸೂಕ್ತ ಕ್ರಮ ಕೈಗೊಳ್ಳಬೇಕು.

■ **ಕಳಕಪ್ಪ ದಿವಾಣದ, ಬೈಕ್ ಸವಾರ**

ರೈತರ ಭೂ ಸರ್ವೆ ಕಾರ್ಯಕ್ಕೆ ಇಲಾಖೆ ಸರ್ವೇಯರ್‌ಗಳ ನಿಯುಕ್ತಿ ಯಾವಾಗ?

◆**ನರಗುಂದ:** ಸುಮಾರು ಎರಡು ತಿಂಗಳಿಂದ ಲೈಸೆನ್ಸ್ ಸರ್ವೆರ್‌ಗಳು ಮುಷ್ಕರ ನಡೆಸುತ್ತಿದ್ದರಿಂದ ನೂರಾರು ಅರ್ಜಿಗಳು ಭೂ ಸರ್ವೇ ಆಗದೇ ಇದ್ದಲ್ಲಿಯೇ ಇವೆ. ಇದರಿಂದ ರೈತರ ಭೂ ಸರ್ವೆ ಕಾರ್ಯ ಸ್ಥಗಿತವಾಗಿದ್ದರಿಂದ ರೈತರ ಸಮಸ್ಯೆಗಳು ಸಮಸ್ಯೆಯಾಗಿಯೇ ಉಳಿದಿವೆ ಎಂದು ರೈತರು ಆರೋಪಿಸುತ್ತಿದ್ದಾರೆ.

ನರಗುಂದ ತಾಲೂಕಿನ ಹಾಗೂ ಗದಗ ಜಿಲ್ಲೆಯಾದ್ಯಂತ ರೈತರಿಗೆ 11 ಇ ನಕ್ಷೆ ಹಾಗೂ ಇತರೆ ಸರ್ವೆ ಕೆಲಸ ಕಾರ್ಯಗಳಿಗೆ ಸಾಕಷ್ಟು ತೊಂದರೆಯಾಗಿದ್ದು, ಇಲ್ಲಿಯವರೆಗೂ ಸರ್ವೆ ಇಲಾಖೆ ಇದರ ಗಮನ ಹರಿಸಿರುವುದಿಲ್ಲ ಕಾರಣ ಮಾರ್ಚ್, ಏಪ್ರಿಲ್, ಮೇ ಈ ಬೇಸಿಗೆ ಅವಧಿಯಲ್ಲಿ ಭೂಮಿಯಲ್ಲಿ ಬೆಳೆಗಳು ಇಲ್ಲದೇ ಇರುವುದರಿಂದ ಸರ್ವೆ ಕೆಲಸಕ್ಕೆ ಸೂಕ್ತ ಸಮಯವಾಗಿದೆ. ಮಳೆಗಾಲ ಪ್ರಾರಂಭವಾದರೆ ಭೂಸರ್ವೆ ಅಸಾಧ್ಯ. ಬೇಸಿಗೆ ಸಮಯದಲ್ಲಿ ಸರ್ವೆ ಕೆಲಸ ನಿಲ್ಲಿಸಿದ ಲೈಸೆನ್ಸ್ ಸರ್ವೆಯರ್ ಮೇಲೆ ಯಾವುದೇ ಸೂಕ್ತ ಕ್ರಮ ಜರುಗಿಸಿಲ್ಲ, ನರಗುಂದ ಭೂ ಸರ್ವೇ ಕಚೇರಿಯಲ್ಲಿ 9 ಜನ ಸಿಬ್ಬಂದಿ ಪರ ಒಬ್ಬರಿದ್ದಾರೆ. ಗದಗ ಮತ್ತು ರೋಣ ಇಬ್ಬರು ಸರ್ವೇಯರ್ ನರಗುಂದಕ್ಕೆ ಪೋಸ್ಟಿಂಗ್ ಮೇಲೆ ಬರುತ್ತಿದ್ದಾರೆ. ಒಟ್ಟು ಮೂವರು ಕಾರ್ಯ ನಿರ್ವಹಿಸುತ್ತಿದ್ದಾರೆ. 11 ಜನ ಖಾಸಗಿ ಸರ್ವೇಯರ್‌ಗಳು ತಮ್ಮ ಹಲವಾರು ಬೇಡಿಕೆಗಳಿಗಾಗಿ ಮುಷ್ಕರ ನಡೆಸುತ್ತಿದ್ದಾರೆ.

ಪೋಸ್ಟಿಂಗ್ ಮೇಲೆ ಕಾರ್ಯ ನಿರ್ವಹಿಸುತ್ತಿರುವ ಇಬ್ಬರಲ್ಲಿ ಒಬ್ಬರು ಕೋರ್ಟ್ ಕೇಸ್ ಮತ್ತು ಆಕಾರ ಬಂದ್ ಕೆಲಸ ಮಾಡುತ್ತಿದ್ದರೆ, ಇನ್ನೊಬ್ಬರು ಲೆವನಿ ಕೇಸ್ ಮತ್ತು ಡಾಟಾ ಎಂಟ್ರಿ ಕೆಲಸ ಮಾಡುತ್ತಿದ್ದಾರೆ. ಮುಖ್ಯವಾಗಿ ಜಮೀನು ಸರ್ವೆ ಕಾರ್ಯ ಮಾಡಬೇಕಾದ ಸರ್ವೇಯರ್‌ಗಳೇ ಇಲ್ಲದಂತಾಗಿದೆ ಎಂಬುದು ರೈತರ ಆರೋಪ.



ವಿಳಂಬವಾದರೆ ಹೋರಾಟದ ಎಚ್ಚರಿಕೆ!

ಭೂಮಿಯಲ್ಲಿ ಬೆಳೆಯಿಲ್ಲದ ಸಂದರ್ಭದಲ್ಲಿ ಭೂ-ಸರ್ವೆ ಕಾರ್ಯ ಮಾಡಬೇಕಾಗುತ್ತದೆ. ಸರ್ಕಾರವು ಸರ್ವೇಯರಗಳ ಬೇಡಿಕೆ ಈಡೇರಿಸಬೇಕು. ಇಲ್ಲವೇ ಅವರ ಮೇಲೆ ಕ್ರಮಕೈಗೊಂಡು ಸರ್ವೆ ಕಾರ್ಯಕ್ಕೆ ಇಳಿಸಬೇಕು. ವಿಳಂಬವಾದಲ್ಲಿ ಜಿಲ್ಲಾಧಿಕಾರಿಗಳ ಕಚೇರಿ ಆವರಣದಲ್ಲಿ ಹೋರಾಟ ಮಾಡಲಾಗುವುದು ಎಂದು ನರಗುಂದ ಭಾರತೀಯ ಕಿಸಾನ ಸಂಘದ ಜಿಲ್ಲಾಧ್ಯಕ್ಷ ಎಸ್ ಎಸ್ ಪಾಟೀಲ ಎಚ್ಚರಿಸಿದರು.

- ಮುಷ್ಕರದಿಂದ ಹದ್ದುಬಸ್ತು ಅರ್ಜಿಗಳು ಅಂದಾಜು 400 ರಷ್ಟು ಪೆಂಡಿಂಗ್
- ಲೇವನಿ ಅರ್ಜಿಗಳು ಅಂದಾಜು 300
- ತಾತ್ಕಾಲ ಪೋಡಿ ಅರ್ಜಿ ಅಂದಾಜು 200 ಎಂದು ಸರ್ವೆ ಇಲಾಖೆ ಮಾಹಿತಿ

"ಸರ್ವೆ ಲೈಸನ್ಸ್‌ದಾರರು ಮುಷ್ಕರ ನಡೆಸುತ್ತಿದ್ದ ಕಾರಣ ಭೂ ಸರ್ವೆ ಕೆಲಸ ಸ್ಥಗಿತವಾಗಿದೆ. ನಮ್ಮಲ್ಲಿ ಸಿಬ್ಬಂದಿ ಕೊರತೆಯಿದೆ. ಬೇರೆಕಡೆ ಹೆಚ್ಚುವರಿ ಸಿಬ್ಬಂದಿ ಇದ್ದರೆ, ಕಡಿಮೆ ಇರುವಲ್ಲಿ ನಿಯೋಜಿಸಬೇಕು. ಪೋಸ್ಟಿಂಗ್ ಮೇಲೆ ಬೇರೆ ಕಡೆಯಿಂದ ಬರುವ ಇಬ್ಬರು ಸಿಬ್ಬಂದಿ ಕಚೇರಿ ಕೆಲಸಕ್ಕೆ ಸೀಮಿತವಾಗಿದ್ದಾರೆ. ರೈತರ ಜಮೀನು ಸರ್ವೆ ಕಾರ್ಯಕ್ಕೆ ಸಿಬ್ಬಂದಿ ಕೊರತೆಯಿಂದ ತೊಂದರೆಯಾಗುತ್ತಿದೆ.

■ **ಮಂಜುನಾಥಗೌಡ ಪಾಟೀಲ,** ಭೂಮಾಪನಾ ಸರ್ವೆ ಅಧಿಕಾರಿ, ನರಗುಂದ

ಕಿರುಸುದ್ದಿ

ದೇಶಕ್ಕೆ 4ನೇ ರ್‍ಯಾಂಕ್

• **ವಿಜಯಪುರ:** ನಗರದ ಸಜ್ಜನ ಗಾಣಿಗರ ಸೇವಾ ಸಂಘದ ಏಸಿಟಿ– ಶಾರದಾ ಪಬ್ಲಿಕ್ ಶಾಲೆಯ ವಿದ್ಯಾರ್ಥಿ ಸಿಬಿಎಸ್‌ಇ 10ನೇ ತರಗತಿ ಪಬ್ಲಿಕ್ ಪರೀಕ್ಷೆಯಲ್ಲಿ ದೇಶಕ್ಕೆ 4ನೇ ರ್‍ಯಾಂಕ್ ಪಡೆದು ವಿಶೇಷ ಸಾಧನೆ ತೋರಿದ್ದಾನೆ. 2025–26 ನೇ ಸಾಲಿನ ಸಿಬಿಎಸ್‌ಇ ಪಬ್ಲಿಕ್ ಪರೀಕ್ಷೆಯಲ್ಲಿ ಶಾಲೆಯ ವಿದ್ಯಾರ್ಥಿ ಅಕ್ಷಯ ಯಮುನಪ್ಪ ಸೋಮುನಕಟ್ಟಿ ಶೇ.99 (500ಕ್ಕೆ 495) ಅಂಕ ಪಡೆಯುವುದರ ಮೂಲಕ ದೇಶಕ್ಕೆ 4ನೇ ರ್‍ಯಾಂಕ್, ರಾಜ್ಯಕ್ಕೆ ದ್ವಿತೀಯ, ಜಿಲ್ಲೆಗೆ ಪ್ರಥಮ ಸ್ಥಾನ ಪಡೆದಿದ್ದು, ವಿದ್ಯಾರ್ಥಿಯ ಸಾಧನೆಗೆ ಸಂಸ್ಥೆಯ ಅಧ್ಯಕ್ಷ ಸಂ.ಗು. ಸಜ್ಜನ, ಸೃಜನಶೀಲ ಅಧ್ಯಾಪನ ಕೇಂದ್ರದ ಡಾ.ಗುರುರಾಜ ಕರ್ಜಗಿ, ಎಸ್‌ಎಂಸಿ ಸದಸ್ಯ ನಿತಿನ್ ರುಣವಾಲ, ಪ್ರಾಂಶುಪಾಲ ಜಿಮೇಶ ಪೌಲ್, ಶೈಕ್ಷಣಿಕ ಸಂಯೋಜಕ ಎಚ್.ವಿ.ಯತೀಶ ಸೇರಿ ಶಿಕ್ಷಕರು ಹರ್ಷ ವ್ಯಕ್ತಪಡಿಸಿದ್ದಾರೆ.



40 ಸಾವಿರ ಪ್ರಕರಣ ಇತ್ಯರ್ಥ: ಬಿ.ವೆಂಕಟ್ ಸಿಂಗ್

• **ಕಲಬುರಗಿ:** ಕರ್ನಾಟಕ ಮಾಹಿತಿ ಹಕ್ಕು ಆಯೋಗವು ಕಳೆದ ಒಂದು ವರ್ಷದಲ್ಲಿ ರಾಷ್ಟ್ರದಲ್ಲಿಯೇ ದಾಖಲೆ ಪ್ರಮಾಣದಲ್ಲಿ 40 ಸಾವಿರ ಆರ್.ಟಿ.ಐ ಮೇಲ್ಮನವಿ ಪ್ರಕರಣಗಳನ್ನು ಇತ್ಯರ್ಥ ಮಾಡಿದೆ ಎಂದು ಕರ್ನಾಟಕ ಮಾಹಿತಿ ಹಕ್ಕು ಆಯೋಗ ಕಲಬುರಗಿ ಪೀಠದ ಆಯುಕ್ತ ಬಿ.ವೆಂಕಟ್ ಸಿಂಗ್ ಹೇಳಿದರು. ಶನಿವಾರ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಕರ್ನಾಟಕ ಮಾಹಿತಿ ಹಕ್ಕು ಆಯೋಗ ಕಲಬುರಗಿ ಪೀಠ ಮತ್ತು ಜಿಲ್ಲಾಡಳಿತ ಕಲಬುರಗಿ ಇವರ ಸಂಯುಕ್ತಾಶ್ರಯದಲ್ಲಿ ಜಿಲ್ಲಾ–ತಾಲೂಕು ಮತ್ತು ಗ್ರಾಮ ಪಂಚಾಯತ್ ಪಿ.ಡಿ.ಓಗಳಿಗೆ ಆಯೋಜಿಸಿದ ಮಾಹಿತಿ ಹಕ್ಕು ಕಾಯ್ದೆ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದ ಅವರು, ಸಾರ್ವಜನಿಕರಿಗೆ ಮಾಹಿತಿ ಒದಗಿಸಲು ಆಯೋಗ ಬದ್ಧವಾಗಿದೆ. ಇನ್ನು ಕಳೆದ ಅಕ್ಟೋಬರ್‌ನಲ್ಲಿ ತಾವು ಸೇರಿದಂತೆ ಆಯೋಗಕ್ಕೆ ಹೊಸದಾಗಿ ಆಯುಕ್ತರ ನೇಮಕದ ನಂತರ ವಿಲೇವಾರಿಗೆ ಮತ್ತಷ್ಟು ಬಲ ಬಂದಿದೆ ಎಂದರು.

ರಾಷ್ಟ್ರದಲ್ಲಿಯೇ ದಾಖಲೆ ಪ್ರಮಾಣ

4.28 ಲಕ್ಷ ರೂ. ವಂಚನೆ

• **ಬೆಳಗಾವಿ:** ಇಲ್ಲಿನ ಉದ್ಯಮಬಾಗ ಪ್ರದೇಶದ ಸುರೇಶ ಮುರ್ವೆ ಅವರನ್ನು ಗುರಿಯಾಗಿಸಿಕೊಂಡು ಸೈಬರ್ ಕಳ್ಳರು ಎಪಿಕೆ ಫೈಲ್ ಮೂಲಕ ಮೋಸ ನಡೆಸಿ, ಅವರ ಬ್ಯಾಂಕ್ ಖಾತೆಯಿಂದ ರೂ.4.28 ಲಕ್ಷ ದೋಚಿರುವ ಘಟನೆ ನಡೆದಿದೆ. ರಾಷ್ಟ್ರೀಕೃತ ಬ್ಯಾಂಕ್ ಹೆಸರಿನಲ್ಲಿ ಅಪರಿಚಿತರಿಂದ ಕಳುಹಿಸಲಾದ ಎಪಿಕೆ ಫೈಲ್ ಅನ್ನು ಬ್ಯಾಂಕ್ ಸಂಬಂಧಿತ ಮಹತ್ವದ ದಾಖಲೆ ಎಂದು ನಂಬಿ ಸುರೇಶ ಮುರ್ವೆ ತಮ್ಮ ಮೊಬೈಲ್‌ನಲ್ಲಿ ತೆರೆದಿದ್ದಾರೆ. ಫೈಲ್ ತೆರೆಯುತ್ತಿದ್ದಂತೆಯೇ ಮೊಬೈಲ್ ಮೇಲಿನ ನಿಯಂತ್ರಣ ಕಳ್ಳರ ಕೈಗೆ ಸೇರಿದ್ದು, ಬಳಿಕ ಕಳ್ಳರು ಖಾತೆಯಲ್ಲಿದ್ದ ಹಣವನ್ನು ಅಕ್ರಮವಾಗಿ ವರ್ಗಾಯಿಸಿಕೊಂಡಿದ್ದಾರೆ. ಘಟನೆ ತಿಳಿಯುತ್ತಿದ್ದಂತೆಯೇ ನಗರ ಸೈಬರ್ ಅಪರಾಧ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಲಾಗಿದೆ. ಪ್ರಕರಣ ದಾಖಲಿಸಿಕೊಂಡ ಪೊಲೀಸರು ತನಿಖೆ ಆರಂಭಿಸಿದ್ದು, ಕಳ್ಳರು ಯಾವ ರೀತಿಯಲ್ಲಿ ಖಾತೆ ವಿವರಗಳನ್ನು ಪಡೆದರು ಎಂಬುದರ ಕುರಿತು ತಾಂತ್ರಿಕ ಪರಿಶೀಲನೆ ನಡೆಯುತ್ತಿದೆ. ಇತ್ತೀಚಿನ ದಿನಗಳಲ್ಲಿ ಬ್ಯಾಂಕ್, ಕೊರಿಯರ್ ಹಾಗೂ ಸರ್ಕಾರಿ ಇಲಾಖೆಗಳ ಹೆಸರಿನಲ್ಲಿ ಎಪಿಕೆ ಫೈಲ್‌ಗಳು ಅಥವಾ ಅನುಮಾನಾಸ್ಪದ ಕೊಂಡಿಗಳನ್ನು ಕಳುಹಿಸಿ ಜನರನ್ನು ಮೋಸಗೊಳಿಸುವ ಪ್ರಕರಣಗಳು ಹೆಚ್ಚುತ್ತಿವೆ. ಇಂತಹ ಫೈಲ್‌ಗಳನ್ನು ಡೌನ್‌ಲೋಡ್ ಅಥವಾ ತೆರೆಯಬಾರದು ಎಂದು ಪೊಲೀಸರು ಸಾರ್ವಜನಿಕರಿಗೆ ಎಚ್ಚರಿಕೆ ನೀಡಿದ್ದಾರೆ.

ಫೈರೋಜ್ ಹತ್ಯೆ: ಮತ್ತೆ ಮೂವರ ಬಂಧನ

• **ಧಾರವಾಡ:** ಯೂಥ್ ಕಾಂಗ್ರೆಸ್ ಮುಖಂಡ ಫೈರೋಜ್ ಖಾನ್ ಪಠಾಣ ಹತ್ಯೆ ಪ್ರಕರಣ ನಿತ್ಯವೂ ರೋಚಕ ತಿರುವು ಪಡೆಯುತ್ತಿದೆ. ಈ ಪ್ರಕರಣ ಕುರಿತು ಪೊಲೀಸರು ಮತ್ತೆ ಮೂವರು ಆರೋಪಿಗಳನ್ನು ಬಂಧಿಸಿದ್ದಾರೆ. ಈ ಕುರಿತು ಮಾಹಿತಿ ನೀಡಿದ ಪೊಲೀಸ್ ಆಯುಕ್ತ ಪೊಲೀಸ್ ಆಯುಕ್ತ ಎನ್.ಶಶಿಕುಮಾರ್, ಹತ್ಯೆ ಪ್ರಕರಣದಲ್ಲಿ ನೇರವಾಗಿ ಭಾಗಿಯಾದ ಆರೋಪಿಗಳು ಬಂಧಿಸಿದ್ದು, ಇದೀಗ ಪುನಃ ಮೂವರನ್ನು ಬಂಧಿಸಲಾಗಿದೆ ಎಂದು ಹೇಳಿದರು. ಸದ್ಯ ತನಿಖೆ ಪ್ರಗತಿಯಲ್ಲಿದ್ದು, ಈ ಹತ್ಯೆ ಹಿಂದೆ ಇದ್ದವರು ಯಾರು? ಸಂಚು ರೂಪಿಸಿದ್ದು ಯಾರ? ಯಾರು? ಇದ್ದಾರೆಂದು ಮೂಲ ಬೇರು ಶೋಧಿಸುತ್ತಿದೆ. ಸಂಪೂರ್ಣ ತನಿಖೆ ಮುಗಿದ ನಂತರವೇ ಮಾಹಿತಿ ಒದಗಿಸುವುದಾಗಿಯೂ ಶಶಿಕುಮಾರ್ ತಿಳಿಸಿದರು. ಫೈರೋಜ್ ಹತ್ಯೆ ಪ್ರಕರಣದ ಎಲ್ಲ ಆಯಾಮದಲ್ಲೂ ಕೂಡ ತನಿಖೆ ನಡೆಸುತ್ತಿದೆ. ಪ್ರತ್ಯೇಕ ಹಾಗೂ ಪರೋಕ್ಷವಾಗಿ ಯಾರೇ ಭಾಗಿಯಾಗಿದ್ದರೂ, ಎಷ್ಟೇ ಪ್ರಭಾವ ಶಾಲಿಯಾಗಿದ್ದರೂ ಸಹ ಬಿಡುವುದಿಲ್ಲ. ಕಾನೂನು ಕ್ರಮ ಕೈಗೊಂಡು, ಆರೋಪಿಗಳಿಗೆ ಶಿಕ್ಷೆ ಆಗುವಂತೆ ಮಾಡುವುದಾಗಿಯೂ ತಿಳಿಸಿದರು.

ಹೆಚ್ಚುತ್ತಿರುವ ಉಷ್ಣಾಂಶ | ಮೃಗಾಲಯದಲ್ಲಿ ಪ್ರಾಣಿಗಳ ಆರೋಗ್ಯ ರಕ್ಷಣೆಗೆ ಕ್ರಮ

ತಾಪ ತಣಿಸಲು ಸ್ಪ್ರಿಂಕ್ಲರ್ ಸ್ನಾನ

▸ ರುದ್ರಗೌಡ ಪಾಟೀಲ





ದಿಗಂತ ವಿಶೇಷ

• **ಗದಗ:** ದಿನೇದಿನೆ ಬಿಸಿಲಿನ ತಾಪ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಮೂಕ ಪ್ರಾಣಿ–ಪಕ್ಷಿಗಳ ಸ್ಥಿತಿ ಹೇಳ ತೀರದಾಗಿದೆ. ಆದರೆ, ಮೃಗಾಲಯಗಳಲ್ಲಿ ಪ್ರಾಣಿ–ಪಕ್ಷಿಗಳನ್ನು ತಂಪಾಗಿಡಲು ಹಲವು ರೀತಿಯ ಕ್ರಮಗಳನ್ನು ಕೈಗೊಳ್ಳಲಾಗಿದೆ. ಬಿಸಿಲಿನಿಂದ ವನ್ಯಜೀವಿಗಳು ಬಳಲಬಾರದು ಎಂಬ ಉದ್ದೇಶದಿಂದ ಅರಣ್ಯ ಇಲಾಖೆಯು ತನ್ನ ವ್ಯಾಪ್ತಿಯಡಿ ಬರುವ ಬಿಂಕದಕಟ್ಟಿ ಮೃಗಾಲಯದಲ್ಲಿರುವ ಪ್ರಾಣಿ–ಪಕ್ಷಿಗಳಿಗೆ ಮಳೆಯಲ್ಲಿ ಮಿಂದೆದ್ದು ತಂಪಿನ ಅನುಭವ ಪಡೆಯುವ ರೀತಿಯಲ್ಲಿ ಸ್ಪ್ರಿಂಕ್ಲರ್ ಅಳವಡಿಸಿದೆ.

ಚಳಿಗಾಲ ಮುಗಿದು ಬೇಸಿಗೆ ಆರಂಭಗೊಳ್ಳುವ ನಡುವಿನ ಅವಧಿಯಲ್ಲಿ ಮೃಗಾಲಯದಲ್ಲಿನ ಸಸ್ಯಹಾರಿ ಪ್ರಾಣಿಗಳಿಗೆ ಸೋಂಕು ಬಾಧಿಸುವ ಸಾಧ್ಯತೆ ಹೆಚ್ಚಿರುತ್ತದೆ. ಬೇಸಿಗೆಯಲ್ಲಿ ಮೃಗಾಲಯದ ಪ್ರಾಣಿಗಳಿಗೆಸೋಂಕುತಗುಲುವುದು ಕಡಿಮೆಯಾದರೂ ನಿರ್ಜಲೀಕರಣದಿಂದಾಗಿ ಮೃತಪಡುವ ಸಾಧ್ಯತೆಗಳು ಜಾಸ್ತಿ. ಹಾಗಾಗಿ, ಬಿಸಿಲಿನ ಬೇಗೆಗೆ ಪ್ರಾಣಿಗಳು ನಿಶಕ್ತಿ ಹೊಂದದಂತೆ ತಡೆಯಲು ಕುಡಿಯುವ ನೀರಿನಲ್ಲಿ ಎಲೆಕ್ಟ್ರಾಲ್ ಪೌಡರ್ ಸೇರಿಸಿ ಕೊಡುವುದರ ಜತೆಗೆ ವಿವಿಧ ಉಪಕ್ರಮಗಳನ್ನು ಕೈಗೊಳ್ಳಲಾಗಿದೆ.

ಜಿಲ್ಲೆಯಲ್ಲಿ ಕಳೆದ ಒಂದು ವಾರದಿಂದ ಉಷ್ಣಾಂಶ 40ರಿಂದ 41 ಡಿಗ್ರಿ ಸೆಲ್ಸಿಯಸ್ ದಾಖಲಾಗುತ್ತಿದೆ. ಬೇಸಿಗೆ ಕಾರಣಕ್ಕೆ ಮೃಗಾಲಯದಲ್ಲಿರುವ ಪಕ್ಷಿಗಳಿಗೆ ನೀರಿನ ಅಂಶ ಹೆಚ್ಚಿರುವ ಕಲ್ಲಂಗಡಿ, ದ್ರಾಕ್ಷಿ, ಕರಬೂಜ ಹಣ್ಣನ್ನು ತಂಪಾಗಿಸಿ ಮಾಡಿದ ಪಾಪ್ಸಿಕಲ್‌ಗಳನ್ನು ಕೊಡಲಾಗುತ್ತಿದೆ. ಸಸ್ಯಾಹಾರಿ ಪ್ರಾಣಿಗಳಿರುವ ಪ್ರದೇಶದಲ್ಲಿ ಭೂಮಿಯ ತಾಪ ತಗ್ಗಿಸಲು ಸ್ಪ್ರಿಂಕ್ಲರ್ ಮೂಲಕ ನೀರು ಹಾಯಿಸಲಾಗುತ್ತಿದೆ.

ಪಕ್ಷಿಗಳಿಗೆ ತಣ್ಣೀರ ಸಿಂಚನ: ಬಿಂಕದಕಟ್ಟಿ ಮೃಗಾಲಯದಲ್ಲಿರುವ ಕಡವೆ, ಜಿಂಕೆ, ಚುಕ್ಕೆ ಜಿಂಕೆ, ಕೊಂಡು ಕುರಿ ಹಿಂಡು ಇರುವ ಆವರಣದಲ್ಲಿ ಮತ್ತು ಆಸ್ಟ್ರಿಚ್(ಉಷ್ಟ್ರಪಕ್ಷಿ) ಮತ್ತು ಎಮು ಪಕ್ಷಿಗಳ ಪಂಜರದಲ್ಲಿ 15ಕ್ಕೂ ಹೆಚ್ಚು ಸ್ಪ್ರಿಂಕ್ಲರ್‌ಗಳನ್ನು ಅಳವಡಿಸಲಾಗಿದೆ. ಪ್ರತಿ ನಿತ್ಯ ಬೆಳಗ್ಗೆ 10 ರಿಂದ ಸಂಜೆ 4ರ ವರೆಗೆ ಪ್ರಾಣಿ–ಪಕ್ಷಿಗಳು ತಂಪಾಗಿರಲು ತಣ್ಣೀರ ಸಿಂಚನ ಮಾಡಲಾಗುತ್ತಿದೆ. ಸ್ಪ್ರಿಂಕ್ಲರ್‌ನಿಂದ ಚಿಮ್ಮುವ ನೀರಿನ ಕೆಳಗೆ ಪ್ರಾಣಿಗಳು ಮೈಯೊಡ್ಡಿ ನಿಂತು ತಂಪಾದ ಅನುಭವ ಪಡೆಯುತ್ತಿವೆ.

ಅದೇ ರೀತಿ, ಮಾಂಸಾಹಾರಿ ಪ್ರಾಣಿಗಳಿಗೆ ಕೋಳಿ ಮತ್ತು ದನದ ರಕ್ತ ಸಂಗ್ರಹಿಸಿ ಅದಕ್ಕೆ ಕೋಳಿ ಮಾಂಸ, ದನದ ಮಾಂಸದ ತುಂಡುಗಳನ್ನು ಹಾಕಿ ತಂಪಾಗಿಸಿದ ಬ್ಲಡ್‌ಸಿಕಲ್‌ಗಳನ್ನು ಟ್ರೇನಲ್ಲಿಟ್ಟು ಕೊಡಲಾಗುತ್ತಿದೆ. ಎಲ್ಲ ಕಡೆಗಳಲ್ಲಿ ಪ್ರಾಣಿಗಳಿಗೆ ತಂಪಾದ ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗಿದೆ.

ಇದರ ಜತೆಗೆ ಪ್ರಾಣಿಗಳಿಗೆ ಬಿಸಿಲಿನ ಧಗೆ ತಪ್ಪಿಸಲು ಮೃಗಾಲಯದಲ್ಲಿರುವ ಸಣ್ಣ ಸಣ್ಣ ಕೊಳಗಳಿಗೆ ಮಂಜುಗಡ್ಡೆಯನ್ನು ಹಾಕಲಾಗುತ್ತಿದೆ. ಆಸ್ಟ್ರಿಚ್, ಚುಕ್ಕೆಜಿಂಕೆ, ಕಡವೆ, ನೀಲ್‌ಗಾಯ್ ಸೇರಿದಂತೆ ವಿವಿಧ ಪ್ರಾಣಿಗಳಿರುವ ಆವರಣದಲ್ಲಿ ಸ್ಪ್ರಿಂಕ್ಲರ್‌ಗಳನ್ನು ಅಳವಡಿಸಲಾಗಿದ್ದು, ತುಂತುರು ಹನಿಗೆ ಮೈಯೊಡ್ಡಿ, ಪ್ರಾಣಿಗಳು ಬಿಸಿಲಿನ ತಾಪ ನೀಗಿಸಿಕೊಳ್ಳುತ್ತಿವೆ.

ಮಾಂಸಾಹಾರಿ ಪ್ರಾಣಿಗಳಾದ ಹುಲಿ, ಸಿಂಹ ಸೇರಿದಂತೆ ವಿವಿಧ ಪ್ರಾಣಿಗಳ ಬಗ್ಗೆಯೂ ವಿಶೇಷ ಕಾಳಜಿ ವಹಿಸಲಾಗಿದೆ. ಅವು ಕಾಡಿನಲ್ಲಿದ್ದರೆ ಹೇಗೆ ತಾಪವನ್ನು ಕಡಿಮೆ ಮಾಡಿಕೊಳ್ಳುತ್ತಿದ್ದವೋ ಅಂತಹದ್ದೇ ಸಹಜ ವ್ಯವಸ್ಥೆಯನ್ನು ಮೃಗಾಲಯದಲ್ಲೂ ಕಲ್ಪಿಸಲಾಗಿದೆ. ತಂಪು ನೀರಿನ ಕಟ್ಟೆಗಳು, ಬಿಸಿಲಿನಿಂದ ರಕ್ಷಿಸಿಕೊಳ್ಳಲು ಹುಲ್ಲು ಬಳಸಿ ಪುಟ್ಟ ಪುಟ್ಟ ಗುಡಿಸಲುಗಳನ್ನು ನಿರ್ಮಿಸಲಾಗಿದೆ.


ಪ್ರಾಣಿಗಳ ಜತೆಗೆ ಅವುಗಳನ್ನು ವೀಕ್ಷಣೆ ಮಾಡಲು ಬರುವ ಪ್ರವಾಸಿಗರ ಕಾಳಜಿಗೂ ಮೃಗಾಲಯ ಕ್ರಮವಹಿಸಿದೆ. ಪ್ರವಾಸಿಗರಿಗೆ ಕುಡಿಯಲು ತಂಪು ನೀರಿನ ವ್ಯವಸ್ಥೆ, ಮೃಗಾಲಯದ ವಾತಾವರಣವನ್ನು ತಂಪಾಗಿಡಲು ಎಲ್ಲ ಕಡೆಗಳಲ್ಲಿ ಸ್ಪ್ರಿಂಕ್ಲರ್ ವ್ಯವಸ್ಥೆ ಮಾಡಿದೆ. ಹೆಚ್ಚುತ್ತಿರುವ ತಾಪಮಾನದ ನಡುವೆಯೂ ಪ್ರವಾಸಿಗರು ಆರಾಮದಾಯಕವಾಗಿ ಕಾಲ ಕಳೆಯುವಂತಹ ವಾತಾವರಣ ನಿರ್ಮಿಸಲಾಗಿದೆ.

> **ಪ್ರಾಣಿ ಪಕ್ಷಿಗಳಿಗೆ ಫ್ರೋಜನ್ ಮಾಡಿದ ಆಹಾರವನ್ನು ಕೊಡಲಾಗುತ್ತಿದ್ದು, ಅದನ್ನು ಸೇವಿಸಿದಾಗ ಅವುಗಳಿಗೆ ತಂಪಾದ ಅನುಭವ ಸಿಗುತ್ತದೆ. ದಿನವಿಡೀ ಚೈತನ್ಯದಿಂದ ಇರುತ್ತವೆ. ಇವಾಗ ಬಿಸಿಲು ಹೆಚ್ಚುತ್ತಿರುವುದರಿಂದ ಮೃಗಾಲಯದ ಪ್ರಾಣಿಗಳ ಆರೋಗ್ಯ ರಕ್ಷಣೆಗೆ ಅನೇಕ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗಿದೆ.**
> ■ **ರಾಮಪ್ಪ ಪೂಜಾರ, ಆರ್‌ಎಫ್‌ಒ**

ಅರಣ್ಯ ಇಲಾಖೆ ಯಶಸ್ವಿ ಕಾರ್ಯಾಚರಣೆ

ಖಾನಾಪುರಕ್ಕೆ ಬಂದ ಕಾಡಾನೆ

ನಿಟ್ಟುಸಿರು ಬಿಟ್ಟ ಜನತೆ



• **ಖಾನಾಪುರ:** ಅರಣ್ಯ ಪ್ರದೇಶದ ತನ್ನ ಹಿಂಡಿನಿಂದ ತಪ್ಪಿಸಿಕೊಂಡ 10–12 ವರ್ಷ ವಯಸ್ಸಿನ ಕಾಡಾನೆಯೊಂದು ಶನಿವಾರ ಪಟ್ಟಣದ ಹೊರವಲಯದ ಜನವಸತಿ ಪ್ರದೇಶಗಳ ಬಳಿ ಕಾಣಿಸಿಕೊಂಡು ಆತಂಕ ಸೃಷ್ಟಿಸಿತ್ತು.

ಶುಕ್ರವಾರ ಮಧ್ಯಾಹ್ನ ಮತ್ತು ಸಂಜೆಯ ಹೊತ್ತಿನಲ್ಲಿ ತಾಲೂಕಿನ ಜಾಂಬೋಟಿ ರಸ್ತೆಯ ನಾಗುರ್ಡಾ, ಮೋದೆಕೊಪ್ಪ, ಕಾನಸುಲಿ ಗ್ರಾಮಗಳ ವ್ಯಾಪ್ತಿಯಲ್ಲಿ ಕಾಣಿಸಿಕೊಂಡಿದ್ದ ಆನೆ ಶನಿವಾರ ನಸುಕಿನಜಾವ ಬಾಚೋಳಿ ಮೂಲಕ ಪಟ್ಟಣ ಪ್ರವೇಶಿಸಿ ಶಿವಾಜಿನಗರ, ಮಯೇಕರ ನಗರ, ಅಸೋಗಾ ರಸ್ತೆ, ರೈಲ್ವೆ ಸ್ಟೇಶನ್ ಪ್ರದೇಶದಲ್ಲಿ ಕಾಣಿಸಿಕೊಂಡಿತ್ತು.

ಕಳೆದ ಹಲವು ದಿನಗಳಿಂದ ತಾಲೂಕಿನ ನೀಲಾವಡೆ ಅರಣ್ಯದಲ್ಲಿ ತಂಗಿದ್ದ ಕಾಡಾನೆಗಳ ಹಿಂಡಿನಿಂದ ಬೇರ್ಪಟ್ಟ ಆನೆಯೊಂದು ಶನಿವಾರ ಹಗಲು ಹೊತ್ತಿನಲ್ಲೇ ಪಟ್ಟಣದ ಹೊರವಲಯದ ಜನವಸತಿ ಪ್ರದೇಶದ ಬಳಿ ಕಾಣಿಸಿಕೊಂಡಿದೆ. ಜನವಸತಿ ಪ್ರದೇಶದ ಬಳಿ ಕಾಡಾನೆ ಪತ್ತೆಯಾದ ಮಾಹಿತಿ ಲಭ್ಯವಾಗುತ್ತಲೇ ಆನೆ ಕಾಣಿಸಿಕೊಂಡ ಪ್ರದೇಶದತ್ತ ನಮ್ಮ ಇಲಾಖೆಯ ಅಧಿಕಾರಿಗಳು ಹಾಗೂ ಸಿಬ್ಬಂದಿ ಧಾವಿಸಿದ್ದಾರೆ.

ಆನೆ ಪಟ್ಟಣದಿಂದ ಹೊರನಡೆಯುವ ನಿಟ್ಟಿನಲ್ಲಿ ಗಮನ ಹರಿಸಲಾಗಿದೆ. ಮಲಪ್ರಭಾ ನದಿಯನ್ನು ದಾಟಿರುಮೇವಾಡಿ, ಶೇಡೇಗಾಳಿ ಗ್ರಾಮಗಳ ಮೂಲಕ ಅರಣ್ಯ ಪ್ರದೇಶವನ್ನು ಪ್ರವೇಶಿಸಿದೆ. ಆನೆಯ ಚಲನವಲನದ ಬಗ್ಗೆ ಗಮನಹರಿಸಲಾಗುತ್ತಿದೆ. ಇಲಾಖೆಯ ಸಿಬ್ಬಂದಿಯನ್ನು ಆನೆ ಸಾಗಿದ ಮಾರ್ಗದಲ್ಲಿ ಗಸ್ತು ಕರ್ತವ್ಯಕ್ಕೆ ನಿಯುಕ್ತಿಗೊಳಿಸಲಾಗಿದೆ ಎಂದು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಸುನೀತಾ ನಿಂಬರಗಿ ಮಾಹಿತಿ ನೀಡಿದರು.

ರುಮೇವಾಡಿ, ಕರಂಬಳ, ಶೇಡೆಗಾಳಿ ಗ್ರಾಮಗಳ ಸುತ್ತಮುತ್ತಲಿನಲ್ಲಿರುವ ಕಬ್ಬಿನ ಗದ್ದೆಗಳಲ್ಲಿ ಕೆಲಕಾಲ ತಂಗಿದ್ದ ಕಾಡಾನೆ ಮಧ್ಯಾಹ್ನದ ಬಳಿಕ ಶೇಡೆಗಾಳಿ ಗ್ರಾಮದ ವ್ಯಾಪ್ತಿಯ ತೋಟಗಾರಿಕಾ ಕ್ಷೇತ್ರದ ಅಕ್ಕಪಕ್ಕ ಕಾಣಿಸಿಕೊಂಡಿದೆ. ಬಳಿಕ ಹೊಣಕಲ್, ಗಂಗವಾಳಿ ಗ್ರಾಮಗಳ ಮೂಲಕ ಸಾಗಿ ಗಂಗವಾಳಿ ಅರಣ್ಯ ಪ್ರದೇಶದ ಒಳಗೆ ಮರೆಯಾಗಿದೆ.

ಕಾಡಾನೆತಮ್ಮೂರಿನ ಸಮೀಪಬಂದಿರುವ ಸುದ್ದಿಯನ್ನು ತಿಳಿದ ಕರಂಬಳ, ಕೌಂದಲ್, ಹೊಣಕಲ್, ರುಮೇವಾಡಿ, ಶೇಡೆಗಾಳಿ ಹಾಗೂ ಖಾನಾಪುರ ಗ್ರಾಮಗಳ ಜನತೆ ಆನೆ ಇರುವ ಸ್ಥಳದತ್ತ ಧಾವಿಸಿ ಸಮೀಪದಿಂದ ಆನೆಯನ್ನು ವೀಕ್ಷಿಸಿದರು.

ಆದರೆ, ಅರಣ್ಯ ಇಲಾಖೆಯ ಸಿಬ್ಬಂದಿ ಆನೆಗಳು ತಂಗಿರುವ ಸ್ಥಳದ ಸುತ್ತ ಪಹರೆಯನ್ನು ಕೈಗೊಂಡು ಜನರು ಆನೆಯ ಬಳಿ ಹೋಗದಂತೆ ತಡೆದರು. ಮಧ್ಯಾಹ್ನದ ಬಳಿಕ ಕಾಡಾನೆ ಅರಣ್ಯದಲ್ಲಿ ಮರೆಯಾಗಿದ್ದು, ಮುನ್ನೆಚ್ಚರಿಕೆ ಕ್ರಮವಾಗಿ ಅರಣ್ಯ ಇಲಾಖೆಯ ಸಿಬ್ಬಂದಿ ಆನೆಯ ಚಲನವಲನದ ಬಗ್ಗೆ ನಿಗಾ ವಹಿಸಿದ್ದಾರೆ.

> **ಕಾಡಾನೆ ಸದ್ಯ ಅರಣ್ಯ ಪ್ರದೇಶದ ಒಳಗೆ ಪ್ರವೇಶಿಸಿದೆ. ಸದ್ಯಕ್ಕೆ ಯಾವುದೇ ಸಮಸ್ಯೆ ಇಲ್ಲ. ಆನೆ ಮರಳಿ ಜನವಸತಿ ಪ್ರದೇಶದತ್ತ ಬರದಂತೆ ಇಲಾಖೆಯಿಂದ ಗಮನಹರಿಸಲಾಗುವುದು.**
> ■ **ಶ್ರೀಕಾಂತ ಪಾಟೀಲ, ಆರ್‌ಎಫ್‌ಒ ಖಾನಾಪುರ ವಲಯ**

ವಿಪ ಸದಸ್ಯೆ ಹೇಮಲತಾ ನಾಯಕ ಆರೋಪ

ಕಾಂಗ್ರೆಸ್‌ನ ಕರಾಳ ಮುಖ ಬಯಲು



• **ಕೊಪ್ಪಳ:** ಲೋಕಸಭೆ ಹಾಗೂ ವಿಧಾನಸಭೆಯಲ್ಲಿ ಶೇ.33ರಷ್ಟು ಮೀಸಲಾತಿ ಒದಗಿಸುವ ನಾರೀಶಕ್ತಿ ವಂದನ್ ಮಸೂದೆಯನ್ನು ವಿಪಕ್ಷಗಳು ವಿರೋಧಿಸುವ ಮೂಲಕ ಕಾಂಗ್ರೆಸ್ ತನ್ನ ಕರಾಳ ಮುಖವನ್ನು ಬಯಲು ಮಾಡಿದೆ ಎಂದು ವಿಧಾನ ಪರಿಷತ್ ಸದಸ್ಯೆ ಹೇಮಲತಾ ನಾಯಕ ಆರೋಪಿಸಿದರು.

ನಗರದ ಬಿಜೆಪಿ ಕಾರ್ಯಾಲಯದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಹಿಳೆಯರಿಗೆ ಶೇ.33ರಷ್ಟು ಮೀಸಲಾತಿಯೊಂದಿಗೆ ರಾಜಕೀಯ ಪ್ರಾತಿನಿಧ್ಯ ನೀಡಲು ಬಿಜೆಪಿ ಮುಂದಾಗಿತ್ತು. ಕಾಂಗ್ರೆಸ್ ನಿಂದ ಮಸೂದೆಗೆ ಸೋಲಾಗಿದೆ. ಭಾರತವನ್ನು ಹಿನ್ನಡೆಗೆ ಕೊಂಡೊಯ್ಯಲಾಗಿದೆ ಎಂದರು.

ಕಾಂಗ್ರೆಸ್ ಎಲ್ಲರನ್ನೂ ಓಲೈಕೆ ಮಾಡುತ್ತಾ, ವಿತಂಡ ವಾದ ಮಾಡುತ್ತಿದೆ. ಜಿಎಸ್ಟಿ, ತಲಾಖ್, ನೋಟು ಅಮಾನೀಕರಣ, ಪೌರತ್ವ ತಿದ್ದುಪಡಿ, ಕಾರ್ಮಿಕ, ಕೃಷಿ ಕಾಯ್ದೆ ಸೇರಿ ಹಲವು ಬಿಲ್‌ಗಳನ್ನು ವಿರೋಧ ಮಾಡಿದ್ದರು. ಈಗ ನಾರಿ ಶಕ್ತಿ ವಂದನ್ ಮಸೂದೆಯನ್ನು ವಿರೋಧಿಸಿ ಮಹಿಳೆಯರು ವಿರೋಧಿಯಾಗಿದ್ದಾರೆ ಎಂದು ಟೀಕಿಸಿದರು.

ಸಂಸದ ರಾಜಶೇಖರ ಹಿಟ್ನಾಳ್ ಅವರು ಮಸೂದೆಯ ವಿರುದ್ಧ ಮತ ಚಲಾಯಿಸಿದರು. ತಮ್ಮ ಪತ್ನಿಯನ್ನು ಎಂಎಲ್‌ಎ ಅಭ್ಯರ್ಥಿ ಮಾಡಲು ಪ್ರಚಾರ ಆರಂಭಿಸಿದ್ದಾರೆ. ಇವರಿಗೆ ಏನು ನೈತಿಕತೆ ಇದೆ ಎಂದು ಪ್ರಶ್ನಿಸಿದರು.

> **ಎಸ್ಪಿ ಡಾ.ರಾಮ್ ಅರಸಿದ್ಧಿ ಅವರು ಕಾಂಗ್ರೆಸ್ ಹಾಗೂ ಹಿಟ್ನಾಳ್ ಕುಟುಂಬದ ಆಡಿಯಾಳಾಗಿ ಕೆಲಸ ಮಾಡುತ್ತಿದ್ದಾರೆ. ಎಸ್ಪಿ ಅಧಿಕಾರ ವಹಿಸಿಕೊಂಡ ಬಳಿಕ ಇಸ್ಪೀಟು, ಮರಳು ಮಾಫಿಯಾ ಸೇರಿ ಅಕ್ರಮ ಚಟುವಟಿಕೆ ನಡೆಯುತ್ತಿವೆ. ಇವರು ಇಲ್ಲಿ ಇರುವುದು ಬೇಡ.**
> ■ **ಹೇಮಲತಾ ನಾಯಕ, ವಿಧಾನ ಪರಿಷತ್ ಸದಸ್ಯೆ**

ರಾಜ್ಯ ಬಿಜೆಪಿ ಪ್ರಧಾನ ಕಾರ್ಯದರ್ಶಿ ಶರಣು ತಳ್ಳಿಕೇರಿ ಮಾತನಾಡಿ, ಕಾಂಗ್ರೆಸ್ ಹಿಂದಿನಿಂದಲೂ ಮಹಿಳಾ ವಿರೋಧ ನೀತಿ ಅನುಸರಿಸಿಕೊಂಡು ಬಂದಿದೆ. ತಮ್ಮ ನಿಲುವನ್ನು ಸ್ಪಷ್ಟಪಡಿಸಿದೆ. ಎಂದು ಆರೋಪಿಸಿದರು.

ಬಿಜೆಪಿ ರಾಜ್ಯ ಕಾರ್ಯಕಾರಿಣಿ ಸದಸ್ಯ ಡಾ. ಬಸವರಾಜ ಕ್ಯಾವಟರ್, ಬಿಜೆಪಿ ಜಿಲ್ಲಾಧ್ಯಕ್ಷ ನವೀನ್ ಗುಳಗಣ್ಣನವರ್, ಕೊಪ್ಪಳ ನಗರ ಹಾಗೂ ಗ್ರಾಮೀಣದ ವಿರೇಶ್ ಸಜ್ಜನ್, ರಮೇಶ್ ಇದ್ದರು.

ನಾರೀಶಕ್ತಿ ವಂದನ್ ಮೀಸಲಾತಿ ಮಸೂದೆ

ಪಾಲಿಕೆ ಸಭೆಯಲ್ಲಿ ಕಾಂಗ್ರೆಸ್ ನಡೆಗೆ ಖಂಡನಾ ನಿರ್ಣಯ

• **ಬೆಳಗಾವಿ:** ಕೇಂದ್ರ ಸರ್ಕಾರದ ನಾರಿ ಶಕ್ತಿ ವಂದನ್ ಮೀಸಲಾತಿ ಮಸೂದೆ ವಿರೋಧಿಸಿದ ಕಾಂಗ್ರೆಸ್ ನಡೆ ವಿರುದ್ಧ ಬೆಳಗಾವಿ ಮಹಾನಗರ ಪಾಲಿಕೆ ಸಾಮಾನ್ಯ ಸಭೆಯಲ್ಲಿ ಖಂಡನಾ ನಿರ್ಣಯ ಅಂಗೀಕರಿಸಲಾಯಿತು.

ಶನಿವಾರ ಪಾಲಿಕೆ ಸಭಾಂಗಣದಲ್ಲಿ ಮೇಯರ್ ಪ್ರೀತಿ ಕಾಮಕರ ಅಧ್ಯಕ್ಷತೆಯಲ್ಲಿ ನಡೆದ ಸಾಮಾನ್ಯ ಸಭೆಯಲ್ಲಿ ನಿರ್ಣಯ ಅಂಗೀಕರಿಸಲಾಯಿತು.

ಮೀಸಲಾತಿ ಮಸೂದೆಯನ್ನು ಸಮರ್ಥಿಸಿದ ಬಿಜೆಪಿ ಸದಸ್ಯರು ಮಹಿಳೆಯರಿಗೆ ಶೇ.33ರಷ್ಟು ಮೀಸಲಾತಿ ನೀಡುವ ಕೇಂದ್ರದ ನಿರ್ಧಾರವನ್ನು ಕಾಂಗ್ರೆಸ್ ವಿರೋಧಿ ನಡೆಯನ್ನು ತೀವ್ರವಾಗಿ ಖಂಡಿಸಿದರು. ಹೀಗಾಗಿ, ಮಸೂದೆ ಕುರಿತು ಚರ್ಚೆಗೆ ವಿರೋಧ ವ್ಯಕ್ತಪಡಿಸಿದ ಪ್ರತಿಪಕ್ಷ ಕಾಂಗ್ರೆಸ್ ಸದಸ್ಯರು ಸಭಾತ್ಯಾಗ ಮಾಡಿ ಹೊರ ನಡೆದರು.

ಬೆಳಗಾವಿ ದಕ್ಷಿಣ ಶಾಸಕ ಅಭಯ ಪಾಟೀಲ ಮಾತನಾಡಿ, ನಾರೀಶಕ್ತಿ ವಂದನ್ ಮಸೂದೆ ಲೋಕಸಭೆಯಲ್ಲಿ ಪಾಸ್ ಆಗಬೇಕಾಗಿತ್ತು. ಆದರೆ, ಅದು ಸಾಧ್ಯವಾಗಲಿಲ್ಲ. ಪ್ರಧಾನಿ ನರೇಂದ್ರ ಮೋದಿ ಮಹಿಳೆಯರು ರಾಜಕಾರಣದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಭಾಗವಹಿಸಬೇಕೆಂಬ ಉದ್ದೇಶದಿಂದ ಲೋಕಸಭೆ, ವಿಧಾನಸಭೆಯಲ್ಲಿ ಮಹಿಳೆಯರಿಗೆ ಶೇ.33ರಷ್ಟು ಮೀಸಲಾತಿ ಒದಗಿಸುವ ಮಸೂದೆ ಜಾರಿಗೆ ಮುಂದಾಗಿದ್ದರು. ಆದರೆ, ಇದಕ್ಕೆ ಕಾಂಗ್ರೆಸ್ ವಿರೋಧ ವ್ಯಕ್ತಪಡಿಸಿದೆ.

ಪಾಲಿಕೆ ಸಭೆಯಲ್ಲಿ ಕಾಂಗ್ರೆಸ್ ವಿರುದ್ಧ ಖಂಡನಾ ನಿರ್ಣಯ ಅಂಗೀಕರಿಸಬೇಕು. ಬಿಲ್ ಪಾಸ್ ಆಗಿದ್ದರೆ, ಅದು ಐತಿಹಾಸಿಕ ನಿರ್ಣಯವಾಗುತ್ತಿತ್ತು. ಈಗಾಗಲೇ ಪಾಲಿಕೆಯಲ್ಲಿ ಶೇ.33ರಷ್ಟು ಮಹಿಳಾ ಮೀಸಲಾತಿ ಜಾರಿಯಲ್ಲಿದೆ. ಇದೇ ಮಾದರಿಯಲ್ಲಿ ಲೋಕಸಭೆ ಹಾಗೂ ವಿಧಾನಸಭೆಯಲ್ಲಿಯೂ ಮಹಿಳೆಯರಿಗೆ ಶೇ.33ರಷ್ಟು ಮೀಸಲಾತಿ ನೀಡುವ ಉದ್ದೇಶವಿತ್ತು. ಆದರೆ, ಕಾಂಗ್ರೆಸ್ ಮಹಿಳೆಯರ ವಿರುದ್ಧದ ನಿಲುವು ತೋರಿಸಿದೆ ಎಂದು ಟೀಕಿಸಿದರು. ವಿಧಾನ ಪರಿಷತ್ ಸದಸ್ಯ ಸಾಬಣ್ಣ ತಳವಾರ ಮಾತನಾಡಿ, ದೇಶ ನಾರಿ ಶಕ್ತಿ ವಂದನ್ ಮಸೂದೆ ಪಾಸ್ ಆಗುವುದಕ್ಕಾಗಿ ಕಾಯುತ್ತಿತ್ತು. ಈ ಮಸೂದೆ ಜಾರಿಗೆ ಬಂದಿದ್ದರೆ, ದೀರ್ಘಕಾಲದಿಂದ ರಾಜಕೀಯದಿಂದ ದೂರ ಉಳಿದಿದ್ದ ಮಹಿಳೆಯರಿಗೆ ಹೆಚ್ಚಿನ ಅವಕಾಶ ಸಿಗುತ್ತಿತ್ತು. ಸಂವಿಧಾನಬದ್ಧ ಹಕ್ಕಿನ ಆಧಾರದ ಮೇಲೆ ಮಹಿಳೆಯರಿಗೆ ಅಧಿಕಾರ ನೀಡಬೇಕೆಂಬ ಉದ್ದೇಶದಿಂದ ಪ್ರಧಾನಿ ನರೇಂದ್ರ ಮೋದಿ ಈ ಬಿಲ್ ತಂದಿದ್ದರು. ಆದರೆ, ದುರಾದೃಷ್ಟವಶಾತ್ ಯಾವುದೋ ತಪ್ಪು ಕಲ್ಪನೆಯಿಂದ ಪ್ರತಿಪಕ್ಷದವರು ಈ ಮಸೂದೆ ಪಾಸ್ ಆಗದಂತೆ ಮಾಡಿದ್ದಾರೆ. ಇಂತಹ ನಡೆಯನ್ನು ನಾವು ಸಹಿಸುವುದಿಲ್ಲ. ಪಾಲಿಕೆ ಸಭೆಯಲ್ಲಿ ಕಾಂಗ್ರೆಸ್ ನಡೆ ವಿರುದ್ಧ ಖಂಡನಾ ನಿರ್ಣಯ ಅಂಗೀಕರಿಸಬೇಕು ಎಂದು ಮನವಿ ಮಾಡಿದರು. ಉಪಮೇಯರ್ ಹನುಮಂತ ಕೊಂಗಾಲಿ, ಸದಸ್ಯರಾದ ರಾಜಶೇಖರ ಡೋಣಿ, ಸಾರಿಕಾ ಪಾಟೀಲ, ವೀಣಾ ವಿಜಾಪುರೆ, ಶ್ರೇಯಸ್ ನಾಕಾಡಿ ಇತರರು ಪ್ರತಿಪಕ್ಷಗಳ ನಡೆಯನ್ನು ಖಂಡಿಸಿದರು. ಸಭೆ ಆರಂಭದ ವೇಳೆ ಇತ್ತೀಚೆಗೆ ನಿಧನರಾದ ಖ್ಯಾತ ಗಾಯಕಿ ಆಶಾ ಬೋಸ್ಲೆ ನಿಧನಕ್ಕೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಕಾಂಗ್ರೆಸ್ ವಿರೋಧಕ್ಕೆ ಜ್ಯೋತಿ ಪಾಟೀಲ ಆಕ್ರೋಶ



• **ಧಾರವಾಡ:** ಮಹಿಳೆಯರಿಗೆ ಶೇ.33ರಷ್ಟು ರಾಜಕೀಯ ಪ್ರಾತಿನಿಧ್ಯ ನೀಡುವ ವಿಧೇಯಕಕ್ಕೆ ವಿರೋಧ ವ್ಯಕ್ತ ಪಡಿಸಿರುವ ಕಾಂಗ್ರೆಸ್‌ಗೆ ಸೋಲಿನ ಭಯ ಕಾಡುತ್ತಿದೆ ಎಂದು ಹು–ಧಾ ಮಹಾನಗರ ಪಾಲಿಕೆ ಮೇಯರ್ ಜ್ಯೋತಿ ಪಾಟೀಲ ಹೇಳಿದರು.

ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮಹಿಳೆಯರಿಂದಲೇ ನಡೆಸಲ್ಪಟ್ಟ ಮತ್ತು ಒಂದೇ ಕುಟುಂಬ ರಾಜಕಾರಣ ಮಾಡುತ್ತ ಬಂದಿರುವ ಕಾಂಗ್ರೆಸ್ ಪಕ್ಷಕ್ಕೆ ಮುಂದಿನ ದಿನಗಳಲ್ಲಿ ಸ್ಪರ್ಧಿಸಲು ಮಹಿಳೆಯರು ಇಲ್ಲ ಎನ್ನುವ ಕಾರಣಕ್ಕೆ ಈ ವಿಧೇಯಕವನ್ನು ವಿರೋಧ ಮಾಡುತ್ತಿದೆ ಎಂದು ಜ್ಯೋತಿ ಪಾಟೀಲ ಛೇಡಿಸಿದರು.

ನಾರೀಶಕ್ತಿ ವಂದನ್ ಕಾಯಿದೆಗೆ ಸೋಲುಂಟಾಗಲು ಕಾರಣವಾಗಿರುವ ಕಾಂಗ್ರೆಸ್‌ಗೆ ಮುಂದಿನ ದಿನಗಳಲ್ಲಿ ಮಹಿಳೆಯರ ಹಕ್ಕುಗಳ ಬಗ್ಗೆ ಮಾತನಾಡುವ ನೈತಿಕತೆಯೇ ಇಲ್ಲವಾಗಿದೆ. ಸರ್ವಾಧಿಕಾರ ಮತ್ತು ಏಕ ಕುಟುಂಬ ಕೇಂದ್ರಿತ ರಾಜಕಾರಣವೇ ಕಾಂಗ್ರೆಸ್‌ನ ಸಂಸ್ಕೃತಿ. ಹೀಗಾಗಿ ಅವರು ಮಹಿಳೆಯರು ರಾಜಕೀಯವಾಗಿ ಬೆಳೆಯುವುದನ್ನು ವಿರೋಧಿಸುತ್ತಿದ್ದಾರೆ ಎಂದು ಹರಿಹಾಯ್ದರು.


ಬಿಜೆಪಿ ಮತ್ತು ಪ್ರಧಾನಿ ನರೇಂದ್ರ ಮೋದಿ ಅವರು ಒಂದು ಐತಿಹಾಸಿಕ ನಿರ್ಣಯ ಕೈಗೊಂಡು ಆ ಮೂಲಕ ದೇಶದ ಎಲ್ಲಾ ಮಹಿಳೆಯರು ರಾಜಕೀಯ ಪ್ರತಿನಿಧ್ಯ ಪಡೆದು ಅಭಿವೃದ್ಧಿಗೆ ಕೊಡುಗೆ ನೀಡುವಂತೆ ವ್ಯವಸ್ಥೆ ಮಾಡಿದ್ದರು. ಆದರೆ, ಲೋಕಸಭೆಯಲ್ಲಿ ಕಾಂಗ್ರೆಸ್ ಮತ್ತು ಅದರ ಮಿತ್ರ ಪಕ್ಷಗಳು ಈ ಮಸೂದೆಯನ್ನು ವಿರೋಧವಾಗಿ ಮತ ಚಲಾಯಿಸಿ ತಮ್ಮ ಮಹಿಳಾ ವಿರೋಧಿ ಧೋರಣೆ ಅನಾವರಣಗೊಳಿಸಿದ್ದಾರೆ ಎಂದು ಕಿಡಿಕಾರಿದರು. ರತ್ನಾಬಾಯಿ ನಾಝರೆ, ಅನಿತಾ ಚಳಗೇರಿ, ಲಕ್ಷ್ಮೀ ಹಿಂಡಸಗೇರಿ, ರೂಪಾ ಚೌದರಿ, ಮಹಾಲಕ್ಷ್ಮೀ ಕುಲಕರ್ಣಿ, ಅಶ್ವಿನಿ ವೀರಾಪೂರ, ಸುಮಿತ್ರಾ ಬಡಿಗೇರ ಇದ್ದರು.

ನಾರೀಶಕ್ತಿ ವಂದನ್ ಬಿಲ್‌ಗೆ ವಿಪಕ್ಷಗಳು ಸಹಕರಿಸಲಿ: ಕವಟಗಿಮಠ



• **ಬೆಳಗಾವಿ:** ಮಹಿಳೆಯರ ಪರವಾಗಿದ್ದೇವೆ ಎಂದು ಹೇಳಿಕೊಳ್ಳುವ ವಿಪಕ್ಷಗಳು ನಾರೀಶಕ್ತಿ ವಂದನ್ ಬಿಲ್‌ಗೆ ಯಾವುದೇ ಹಿಂಜರಿಕೆಯಿಲ್ಲದೆ ಮುಕ್ತವಾಗಿ ಸಹಕರಿಸಬೇಕು ಎಂದು ಮಾಜಿ ಎಂಎಲ್‌ಸಿ ಮಹಾಂತೇಶ ಕವಟಗಿಮಠ ಆಗ್ರಹಿಸಿದ್ದಾರೆ. ಈ ಕುರಿತು ಪ್ರಕಟಣೆಯಲ್ಲಿ ಹೇಳಿಕೆ ನೀಡಿರುವ ಅವರು, ದೇಶದ ರಾಜಕೀಯ ಹಾಗೂ ಆಡಳಿತ ವ್ಯವಸ್ಥೆಯಲ್ಲಿ ಮಹಿಳೆಯರ ಪಾತ್ರವನ್ನು ಬಲಪಡಿಸುವುದು ಅತ್ಯಗತ್ಯವಾಗಿದ್ದು, ಅದಕ್ಕಾಗಿ ಈ ಬಿಲ್ ಮಹತ್ವದ ಹೆಜ್ಜೆಯಾಗಿದೆ ಎಂದು ಹೇಳಿದ್ದಾರೆ. ಕುಟುಂಬವನ್ನು ಸಮರ್ಥವಾಗಿ ನಿರ್ವಹಿಸುವ ನಾರಿಗೆ ದೇಶವನ್ನೂ ಸಮರ್ಥವಾಗಿ ನಡೆಸುವ ಸಾಮರ್ಥ್ಯವಿದೆ ಎಂಬುದನ್ನು ಎಲ್ಲರೂ ಅರಿತುಕೊಳ್ಳಬೇಕಾಗಿದೆ ಎಂದು ತಿಳಿಸಿದರು. ಮಹಿಳಾ ಸಬಲೀಕರಣದ ಬಗ್ಗೆ ಮಾತನಾಡುವಷ್ಟರಲ್ಲಿ ನಿಲ್ಲದೆ, ಅದನ್ನು ಕಾರ್ಯರೂಪಕ್ಕೆ ತರಲು ರಾಜಕೀಯ ಪಕ್ಷಗಳು ನಿಜವಾದ ಬದ್ಧತೆ ತೋರಬೇಕು ಎಂದು ಕವಟಗಿಮಠ ಹೇಳಿದರು. ನಾರೀಶಕ್ತಿ ವಂದನ್ ಬಿಲ್ ಜಾರಿಗೆ ಬಂದರೆ ದೇಶದ ರಾಜಕೀಯದಲ್ಲಿ ಮಹಿಳೆಯರ ಪ್ರತಿನಿಧಿತ್ವ ಹೆಚ್ಚುವುದಲ್ಲದೆ, ಸಮಾನತೆ ಮತ್ತು ಸಾಮಾಜಿಕ ನ್ಯಾಯಕ್ಕೆ ಹೊಸ ದಿಕ್ಕು ದೊರೆಯಲಿದೆ ಎಂದು ಅಭಿಪ್ರಾಯಪಟ್ಟರು. ವಿಪಕ್ಷಗಳು ರಾಜಕೀಯ ಭಿನ್ನಾಭಿಪ್ರಾಯಗಳನ್ನು ಬದಿಗಿಟ್ಟು, ಮಹಿಳೆಯರ ಹಿತದೃಷ್ಟಿಯಿಂದ ಈ ಬಿಲ್ಗೆ ಬೆಂಬಲ ನೀಡುವುದು ಕಾಲದ ಅಗತ್ಯವಾಗಿದೆ ಎಂದು ಅವರು ಮನವಿ ಮಾಡಿದ್ದಾರೆ. ಮಹಿಳೆಯರ ಸಬಲೀಕರಣವೇ ರಾಷ್ಟ್ರದ ಪ್ರಗತಿಗೆ ಮೂಲಾಧಾರವಾಗಿದ್ದು, ಈ ದಿಶೆಯಲ್ಲಿ ಎಲ್ಲರೂ ಒಗ್ಗಟ್ಟಿನಿಂದ ಕೆಲಸ ಮಾಡಬೇಕು ಎಂದು ಅವರು ತಿಳಿಸಿದ್ದಾರೆ.

ಚಿನ್ಮಯ ಶಾಲೆಯ ವಿದ್ಯಾರ್ಥಿಗಳ ಅಮೋಘ ಸಾಧನೆ



• **ಹುಬ್ಬಳ್ಳಿ:** ನಗರದ ಚಿನ್ಮಯ ಇಂಗ್ಲಿಷ್ ಪ್ರೈಮರಿ ಸ್ಕೂಲ್ ವಿದ್ಯಾರ್ಥಿಗಳು 10ನೇ ತರಗತಿಯ ಸಿಬಿಎಸ್‌ಇ ಪರೀಕ್ಷೆಯಲ್ಲಿ ಸತತವಾಗಿ ಹದಿನೈದನೇಯ ಬಾರಿ ಶೇ.100ರಷ್ಟು ಫಲಿತಾಂಶ ಪಡೆದು ದಾಖಲೆ ಬರೆದಿದ್ದಾರೆ.

ರಜತ್ ತಗಡಿನಮನಿ ಮತ್ತು ಆಯುಶ್ ಸವದತ್ತಿ ಶೇ.95.2ರಷ್ಟು ಪ್ರತಿಶತದೊಂದಿಗೆ ಶಾಲೆಗೆ ಪ್ರಥಮ ಸ್ಥಾನ, ಸಾತ್ವಿಕ್ ಹಂಜಗಿ ಮತ್ತು ಕ್ಷೀರಜಾ ತೋಡೂರು ಶೇ.94.8 ದ್ವಿತೀಯ ಸ್ಥಾನ, ಪ್ರಭಾಕರ ಹಿರೇಮನಿ ಮತ್ತು ದಾಸರಾಜು ಪುನರ್ವ ಸಾಯಿ ರಾಮು ಶೇ.94 ತೃತೀಯ ಸ್ಥಾನ ಪಡೆದು ಆಡಳಿತ ಮಂಡಳಿಗೆ ಮತ್ತು ಶಿಕ್ಷಕರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ.

ಒಟ್ಟು 109 ವಿದ್ಯಾರ್ಥಿಗಳಲ್ಲಿ 77 ವಿದ್ಯಾರ್ಥಿಗಳು ಉನ್ನತ ಶ್ರೇಣಿಯಲ್ಲಿ, 32 ಪ್ರಥಮ ದರ್ಜೆಯಲ್ಲಿ ಪಾಸಾಗಿರುತ್ತಾರೆ. ಸಂಸ್ಥೆಯ ಆಡಳಿತ ಮಂಡಳಿ, ಪ್ರಾಂಶುಪಾಲರು ಹಾಗೂ ಶಾಲೆಯ ಎಲ್ಲ ಸಿಬಂದಿ ವರ್ಗದ ಮಕ್ಕಳ ಸಾಧನೆಯನ್ನು ಶ್ಲಾಘಿಸಿದರು.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M/s Elegant Offset Printers, Pvt.Ltd, Plot no 33/1& 15/1(eastern part) MT Sagar Industrial Estate, Hubballi -580030, Published at Joshi Chambers, 2nd Floor, Near R.M.Joshi Petrol pump, Lamington Road, Hubballi-580020, Ph: 0836-2350942, Editor: P.S.Prakash, Group Editor: Vinayak S. Bhat

ಕಿರುಸುದ್ದಿ

ರಾಷ್ಟ್ರೀಯ ಲೋಕ ಅದಾಲತ್

ಕಾರವಾರ: ಉತ್ತರ ಕನ್ನಡ ಜಿಲ್ಲೆಯ ಎಲ್ಲಾ ನ್ಯಾಯಾಲಯಗಳಲ್ಲಿ ಜುಲೈ 11 ರಂದು ರಾಷ್ಟ್ರೀಯ ಲೋಕ ಅದಾಲತ್ ನ್ನು ಆಯೋಜಿಸಲಾಗಿದೆ. ಸದರಿ ಲೋಕ ಅದಾಲತ್ ನಲ್ಲಿ ಪೂರ್ವ ವ್ಯಾಜ್ಯ ಪ್ರಕರಣಗಳು ಹಾಗೂ ನ್ಯಾಯಲಯಗಳಲ್ಲಿ ರಾಜಿ ಆಗಬಹುದಾದ ಪ್ರಕರಣಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ರಾಜಿ ಸಂಧಾನ ಮಾಡಿಕೊಳ್ಳುವಂತೆ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷೆ ದಿವ್ಯಶ್ರೀ ಸಿ.ಎಮ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಗೋಕರ್ಣ: ಕೋಮಾರಪಂಥ ಸಮಾಜದವರು ಇಲ್ಲಿನ ಮಹಾಬಲೇಶ್ವರ ಮಂದಿರದಲ್ಲಿ ನೆರವೇರಿಸುವ ವಾರ್ಷಿಕ ರಥೋತ್ಸವ ಶುಕ್ರವಾರ ರಾತ್ರಿ ವಿಜೃಂಭಣೆಯಿಂದ ನೆರವೇರಿತು.

ಪೊಲೀಸ್ ಸಿಬ್ಬಂದಿಗಳಲ್ಲಿ ಕರ್ತವ್ಯ ಪ್ರಜ್ಞೆವಿರಲಿ

ಕಾರವಾರ: ಪೊಲೀಸ್ ಸಿಬ್ಬಂದಿಗಳಲ್ಲಿ ಕರ್ತವ್ಯ ಪ್ರಜ್ಞೆ ಸದಾ ಕಾಲ ಜಾಗೃತವಾಗಿರಬೇಕು ಮತ್ತು ಯಾವುದೇ ತುರ್ತು ಸಂದರ್ಭದಲ್ಲಿ ತಕ್ಷಣ ಸೇವೆಗೆ ಲಭ್ಯರಿರಬೇಕು ಎಂದು ಡಿಐಜಿಪಿ (ತರಬೇತಿ) ಡಿ.ದೇವರಾಜ ಹೇಳಿದರು. ಅವರು ಶುಕ್ರವಾರ ಕಾರವಾರದ ತಾತ್ಕಾಲಿಕ ಪೊಲೀಸ್ ತರಬೇತಿ ಶಾಲೆಯ 15 ನೇ ತಂಡದಲ್ಲಿ 101 ಸಶಸ್ತ್ರ ಪೊಲೀಸ್ ಕಾನ್ಸಟೇಬಲ್ ಪ್ರಶಿಕ್ಷಣಾರ್ಥಿಗಳ ಬುನಾದಿ ತರಬೇತಿಯ ನಿರ್ಗಮನ ಪಥಸಂಚಲನದಲ್ಲಿ ಕವಾಯತು ಪರಿವೀಕ್ಷಣೆ ಹಾಗೂ ಬಹುಮಾನ ವಿತರಿಸಿ ಮಾತನಾಡಿದರು. ಪೊಲೀಸ್ ಇಲಾಖೆಯಲ್ಲಿ ಶಿಸ್ತಿಗೆ ಹೆಚ್ಚಿನ ಪ್ರಾಮುಖ್ಯತೆ ಇದೆ, ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡುವ ಮಹತ್ತರ ಜವಾಬ್ದಾರಿ ಇಲಾಖೆಗಿದ್ದು, ಯಾವುದೇ ಸಂದರ್ಭದಲ್ಲಿ ಕರೆ ಬಂದರೂ ಕರ್ತವ್ಯಕ್ಕೆ ಹಾಜರಾಗಿ ಎಂದರು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ದೀಪನ್ ಎಂ.ಎನ್, ಹೆಚ್ಚುವರಿ ಪೊಲೀಸ್ ಅಧೀಕ್ಷಕರು-1 ಹಾಗೂ ತಾತ್ಕಾಲಿಕ ಪೊಲೀಸ್ ತರಬೇತಿ ಶಾಲೆಯ ಪ್ರಾಂಶುಪಾಲ ಕೃಷ್ಣಮೂರ್ತಿ ಜಿ, ಪೊಲೀಸ್ ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿ ಹಾಗೂ ಪ್ರಶಿಕ್ಷಣಾರ್ಥಿಗಳ ಕುಟುಂಬ ಸದಸ್ಯರು ಉಪಸ್ಥಿತರಿದ್ದರು. ತರಬೇತಿಯಲ್ಲಿ ಹೊರಾಂಗಣದಲ್ಲಿ ಉತ್ತಮ ಸಾಧನೆ ತೋರಿದ, ದೋಂಟಿರಾಂ ಪರ್ಸೆ, ರಂಗನಾಥ್, ಶಿವರಾಜ್ ಹಾಗೂ ಒಳಾಂಗಣದಲ್ಲಿ ಉತ್ತಮ ಸಾಧನೆ ತೋರಿದ ಮುರಳಿ, ಅನಿಲ್ ಕುಮಾರ್, ಅನ್ವರ್‌ಸಾಬ್ ನದಾಫ್ ಮತ್ತು ಫೈರಿಂಗ್‌ನಲ್ಲಿ ಉತ್ತಮ ಸಾಧನೆ ತೋರಿದ ಶಿವಪ್ಪ ದೇವರಮನಿ, ವೀರೇಶ್ ಮಡಿವಾಳ, ದೋಂಟಿರಾಂ ಪರ್ಸೆ ಅವರಿಗೆ ಬಹುಮಾನ ವಿತರಿಸಲಾಯಿತು.



ಕಾರವಾರ: ಕಾರವಾರದ ತಾತ್ಕಾಲಿಕ ಪೊಲೀಸ್ ತರಬೇತಿ ಶಾಲೆಯ 15 ನೇ ತಂಡದಲ್ಲಿ 101 ಸಶಸ್ತ್ರ ಪೊಲೀಸ್ ಕಾನ್ಸಟೇಬಲ್ ಪ್ರಶಿಕ್ಷಣಾರ್ಥಿಗಳ ಬುನಾದಿ ತರಬೇತಿಯ ನಿರ್ಗಮನ ಪಥಸಂಚಲನದಲ್ಲಿ ಡಿಐಜಿಪಿ (ತರಬೇತಿ) ಡಿ.ದೇವರಾಜ ಅವರು ಕವಾಯತು ಪರಿವೀಕ್ಷಣೆ ಹಾಗೂ ಬಹುಮಾನ ವಿತರಿಸಿದರು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ದೀಪನ್ ಎಂ.ಎನ್, ಹೆಚ್ಚುವರಿ ಪೊಲೀಸ್ ಅಧೀಕ್ಷಕರು-1 ಹಾಗೂ ತಾತ್ಕಾಲಿಕ ಪೊಲೀಸ್ ತರಬೇತಿ ಶಾಲೆಯ ಪ್ರಾಂಶುಪಾಲ ಕೃಷ್ಣಮೂರ್ತಿ ಜಿ. ಇತರರಿದ್ದರು.

ಪ್ರವಾಸಿಗರ ವಾಹನದ ಮೇಲೆ ಬಿದ್ದ ಮರದ ಬೃಹತ್ ಕೊಂಬೆ



ಗೋಕರ್ಣ: ತದಡಿ ಯುವಕ ಸಂಘದ ಕ್ರೀಡಾಂಗಣದ ಪಕ್ಕದಲ್ಲಿ ನಿಲ್ಲಿಸಿದ ಪ್ರವಾಸಿಗರ ವಾಹನದ ಮೇಲೆ ಮರದ ಬೃಹತ್ ಕೊಂಬೆ ಮುರಿದು ಬಿದ್ದು ಹಾನಿಯಾದ ಘಟನೆ ಶನಿವಾರ ನಡೆದಿದೆ. ತೆಲಂಗಾಣ ನೋಂದಣಿಯ ಖಾಸಗಿ ಕಾರ್ ಹಾಗೂ ಹಾವೇರಿ ನೋಂದಣಿಯ ಬಾಡಿಗೆ ಕಾರ್, ಸ್ಥಳೀಯರ ಎರಡು ಸ್ಕೂಟರನ್ನು ಆಲದ ಮರದ ನೆರಳಿನಲ್ಲಿ ನಿಲ್ಲಿಸಲಾಗಿತ್ತು. ಪ್ರವಾಸಿಗರು ಬೋಟಿಂಗ್‌ಗೆ ತೆರಳಿದ್ದರು. ಏಕಾಏಕಿ ಮರದ ಕೊಂಬೆ ಮುರಿದು ಬಿದ್ದಿದೆ. ಎರಡು ಕಾರು ನುಜ್ಜುಗುಜ್ಜಾಗಿದೆ. ಸ್ಕೂಟರ್‌ಗೆ ಸಹ ಹಾನಿಯಾಗಿದೆ. ಅದೃಷ್ಟವಶಾತ್ ಈ ವೇಳೆ ಜನರು ಯಾರೂ ಇರದ ಕಾರಣ ಜೀವಾಪಾಯವಾಗಿಲ್ಲ.

ವೃದ್ಧೆ ಮೇಲೆ ಬೀದಿನಾಯಿಗಳ ದಾಳಿ

ದಾಂಡೇಲಿ: ಮನೆಯ ಹೊರಗಡೆ ರಸ್ತೆ ಬದಿಯಲ್ಲಿ ವಾಕಿಂಗ್ ಮಾಡುತ್ತಿದ್ದ ವೃದ್ಧೆಯೋರ್ವರ ಮೇಲೆ ಬೀದಿನಾಯಿಗಳು ದಾಳಿ ನಡೆಸಿ ಗಾಯಗೊಳಿಸಿದ ಘಟನೆ ದಾಂಡೇಲಿಯ ಗಾಂಧಿನಗರದಲ್ಲಿ ಶನಿವಾರ ಬೆಳಗ್ಗೆ ನಡೆದಿದೆ. ಸ್ಥಳೀಯ ಗಾಂಧಿನಗರದ ನಿವಾಸಿ ಸಲೀನಾ ಮೀನಿನ್ ಡಿಸೋಜಾ ಎಂಬವರೇ ಬೀದಿ ನಾಯಿಗಳಿಂದ ದಾಳಿಗೊಳಗಾಗಿ ಗಾಯಗೊಂಡ ವೃದ್ಧೆಯಾಗಿದ್ದಾರೆ. ಬೀದಿ ನಾಯಿಗಳು ದಾಳಿ ಮಾಡುತ್ತಿದ್ದಂತೆ ಮನೆ ಮಂದಿ ಹಾಗೂ ಸ್ಥಳೀಯರು ಸೇರಿ ಬೀದಿ ನಾಯಿಗಳನ್ನು ಓಡಿಸಿದ್ದಾರೆ. ಗಾಯಗೊಂಡಿರುವ ಸಲೀನಾ ಮೀನಿನ್ ಡಿಸೋಜಾನನ್ನು ಚಿಕಿತ್ಸೆಗಾಗಿ ನಗರದ ಸಾರ್ವಜನಿಕ ಆಸ್ಪತ್ರೆಗೆ ಕರೆತರಲಾಗಿದೆ. ನಗರದಲ್ಲಿ ಬೀದಿ ನಾಯಿಗಳ ಹಾವಳಿ ದಿನದಿಂದ ದಿನಕ್ಕೆ ಏರಿಕೆಯಾಗುತ್ತಿದೆ. ಇವುಗಳ ನಿಯಂತ್ರಣಕ್ಕೆ ಅಗತ್ಯ ಕ್ರಮವನ್ನು ಕೈಗೊಳ್ಳಬೇಕಾಗಿದೆ ಎಂದು ಸ್ಥಳೀಯರು ಆಗ್ರಹಿಸಿದ್ದಾರೆ.

ಆಟೋ-ದ್ವಿಚಕ್ರ ವಾಹನ ಡಿಕ್ಕಿ: ಸವಾರನಿಗೆ ಗಾಯ

ದಾಂಡೇಲಿ: ನಗರದ ಸಿವಿಲ್ ನ್ಯಾಯಾಲಯದ ಹತ್ತಿರ ಜೆಎನ್ ರಸ್ತೆಯಲ್ಲಿ ಆಟೋ ರಿಕ್ಷಾ ಮತ್ತು ದ್ವಿಚಕ್ರ ವಾಹನದ ನಡುವೆ ಡಿಕ್ಕಿ ಸಂಭವಿಸಿ, ದ್ವಿಚಕ್ರ ವಾಹನದ ಸವಾರ ಗಾಯಗೊಂಡ ಘಟನೆ ಶನಿವಾರ ಬೆಳಗ್ಗೆ ನಡೆದಿದೆ. ಸ್ಥಳೀಯ ಜೆಎನ್ ರಸ್ತೆ, ಆಜಾದ್ ನಗರದ ನಿವಾಸಿ ಮುಜಾಫರ್ ಜಮಾದಾರ ಎಂಬವರೇ ಗಾಯಗೊಂಡಿರುವ ವ್ಯಕ್ತಿ. ಕಾಲಿಗೆ ಗಾಯಗೊಂಡ ಕಾರಣ ತಕ್ಷಣವೇ ನಗರದ ಸಾರ್ವಜನಿಕ ಆಸ್ಪತ್ರೆಗೆ ಚಿಕಿತ್ಸೆಗಾಗಿ ದಾಖಲಿಸಲಾಗಿದೆ.

ಎಪಿಎಂಸಿ ಕೃಷಿ ಧಾರಣೆ

ಶಿರಸಿ	ಕನಿಷ್ಠ	ಗರಿಷ್ಠ
ಕಾಳುಮೆಣಸು	66399	68899
ಬಿಳಿಗೋಟು	30100	38200
ಕೆಂಪುಗೋಟು	23711	41199
ಬೆಟ್ಟೆ	40699	51909
ರಾಶಿ	50909	53899
ಚಾಲಿ	44099	49100
ಬಿ.ಕಾಳುಮೆಣಸು	75000	83999

ಕಾರಿನಲ್ಲಿದ್ದ ವ್ಯಕ್ತಿ ಸಜೀವ ದಹನ ಪ್ರಕರಣ

ಮೂವರು ಆರೋಪಿಗಳ ಬಂಧನ

ಕಾರವಾರ: ಇತ್ತೀಚೆಗೆ ಯಲ್ಲಾಪುರ ತಾಲೂಕಿನ ಅರಬೈಲ್ ಘಟ್ಟದ ಬಳಿಯ ತಳಿಕುಂಬ್ರಿ ಬಸ್ ತಂಗುದಾಣದ ಬಳಿ ಕಾರೊಂದು ಬೆಂಕಿಗಾಹುತಿಯಾಗಿ ವ್ಯಕ್ತಿಯೋರ್ವ ಸಜೀವ ದಹನಗೊಂಡ ಘಟನೆ ಒಂದು ಪೂರ್ವಯೋಜಿತ ಕೊಲೆ ಸಂಚು ಎನ್ನುವುದು ಪೊಲೀಸ್ ತನಿಖೆಯಿಂದ ತಿಳಿದು ಬಂದಿದ್ದು, ಘಟನೆಗೆ ಸಂಬಂಧಿಸಿದಂತೆ ಮೂವರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

ಹಳೇ ಹುಬ್ಬಳ್ಳಿಯ ಹೆಗ್ಗೇರಿ ನಿವಾಸಿ ಅಬ್ದುಲ್ ನಹೀಮ್ ಬಸೀರ ಅಹಮದ್ ಮುಜಾವರ್, ದಿವಡಗಿ ಓಣಿ ಹಳೇ ಹುಬ್ಬಳ್ಳಿ ನಿವಾಸಿ ಮೌಲಾಸಾಬ ಬಾಬಾಜಾನ ಬಾಡ ಮತ್ತು ಹಳೆ ಹುಬ್ಬಳ್ಳಿಯ ಗಾರ್ಡನ್ ಪೇಟೆ ನಿವಾಸಿ ದಾದಾಪೀರ್ ಯಾನೆ ಅಪ್ತಾಬ್ ಮೆಹಬೂಬ್ ಸಾಬ್ ಬಾಳಸಂಗಿ ಬಂಧಿತ ಆರೋಪಿಗಳಾಗಿದ್ದು, ಕೃತ್ಯಕ್ಕೆ ಬಳಸಿದ ಬಲೇನೊ ಕಾರ್, ಬರ್ಗಮನ್ ಮತ್ತು ಹೊಂಡಾ ಎಕ್ಟಿವಾ ದ್ವಿಚಕ್ರ ವಾಹನಗಳನ್ನು ವಶಕ್ಕೆ ಪಡೆಯಲಾಗಿದೆ.

ಏಪ್ರಿಲ್ 8 ರಂದು ಬೆಳಗಿನ ಜಾವ 5 ಗಂಟೆಯಿಂದ 7 ಗಂಟೆ ನಡುವಿನ ಅವಧಿಯಲ್ಲಿ ಹುಬ್ಬಳ್ಳಿ



ಕಡೆಯಿಂದ ಅಂಕೋಲಾ ಕಡೆ ಬರುತ್ತಿದ್ದ ವೋಕ್ಸ್ ವ್ಯಾಗನ್ ಕಾರು ಬೆಂಕಿಗಾಹುತಿಯಾಗಿ ಸಂಪೂರ್ಣ ಸುಟ್ಟು ಕರುಕಲಾಗಿ ಹೋಗಿತ್ತು. ಕಾರಿನ ಚಾಲಕ ಸಹ ಯಾವುದೇ ರೀತಿಯ ಗುರುತು ಸಿಗದಂತೆ

ಸುಟ್ಟು ಹೋಗಿದ್ದ ಆರಂಭದಲ್ಲಿ ಆಕಸ್ಮಿಕ ತಾಂತ್ರಿಕ ದೋಷದಿಂದ ಅವಘಡ ಸಂಭವಿಸಿರಬಹುದು ಎಂದು ಪ್ರಕರಣ ದಾಖಲಿಸಿದ ಯಲ್ಲಾಪುರ ಪೊಲೀಸರು ಕಾರಿನಲ್ಲಿ ಸುಟ್ಟು ಹೋಗಿರುವ ವ್ಯಕ್ತಿಯ ಕುರಿತಂತೆ ಪತ್ತೆ ಹಚ್ಚುವ ಉದ್ದೇಶದಿಂದ ತನಿಖೆ ನಡೆಸಿದಾಗ ಕಾರಿನ ನೋಂದಣಿ ಸಂಖ್ಯೆ ಕೆ.ಎ04 ಎಂ.ಜೆ 8986 ಎನ್ನುವುದನ್ನು ತಿಳಿದುಕೊಂಡು ಕಾರಿನಲ್ಲಿ ಮೃತಪಟ್ಟು ಸುಟ್ಟ ಹೋಗಿರುವ ವ್ಯಕ್ತಿ ಬೆಳಗಾವಿ ಕನಬರಗಿ ನಿವಾಸಿ ನಿತೇಶ ಜಗನ್ನಾಥ ಧಾಪಳೆ(35) ಎನ್ನುವುದನ್ನು ಪತ್ತೆ ಮಾಡಲಾಗಿದೆ.

ಮೃತನ ತಂದೆ ತನ್ನ ಮಗನ ಸಾವಿನ ಕುರಿತು ಸಂಶಯ ವ್ಯಕ್ತ ಪಡಿಸಿ ಯಾರೋ ಮಗನನ್ನು ಕೊಲೆ ಮಾಡಿ ರಸ್ತೆಯಲ್ಲಿ ಅಪಘಾತ ಬೆಂಕಿ ಅನಾಹುತ ಸಂಭವಿಸಿದ ರೀತಿಯಲ್ಲಿ ಕೃತ್ಯ ಎಸಗಿರುವ ಸಾಧ್ಯತೆ ಇದೆ ಎಂದು ಹೇಳಿಕೆ ನೀಡಿದ್ದರಿಂದ ಎರಡು ಪ್ರತ್ಯೇಕ ತಂಡಗಳನ್ನು ರಚಿಸಿ ತನಿಖೆ ಕೈಗೊಂಡಿದ್ದರು.

ಜಿಲ್ಲಾ ಪೊಲೀಸ್ ಅಧೀಕ್ಷಕ ದೀಪನ್, ಹೆಚ್ಚುವರಿ ಪೊಲೀಸ್ ಅಧೀಕ್ಷಕ ಕೃಷ್ಣಮೂರ್ತಿ, ಶಿರಸಿ ವಿಭಾಗದ ಡಿ.ವೈ.ಎಸ್.ಪಿ ಗೀತಾ ಪಾಟೀಲ ಅವರ ಮಾರ್ಗದರ್ಶನದಲ್ಲಿ ಯಲ್ಲಾಪುರ ಪೊಲೀಸ್ ನಿರೀಕ್ಷಕ ರಮೇಶ ಹನಾಪುರ ಅವರ ನೇತೃತ್ವದಲ್ಲಿ ಪಿ.ಎಸ್.ಐ ರಾಜಶೇಖರ ವಂದಲಿ, ಸಿದ್ದಪ್ಪ ಗುಡಿ ಮತ್ತು ಸಿಬ್ಬಂದಿಗಳು ತನಿಖೆ ನಡೆಸಿ ಕೊಲೆ ಆರೋಪಿಗಳನ್ನು ಬಂಧಿಸಿ ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದು, ಯಾವ ಉದ್ದೇಶಕ್ಕೆ ಕೊಲೆ ಮಾಡಲಾಗಿದೆ. ಆರೋಪಿತರ ತಂತ್ರಗಾರಿಕೆ ಕುರಿತಂತೆ ಮಾಹಿತಿ ಲಭ್ಯವಾಗಬೇಕಿದೆ.

ರೈತನ ಜಾಗ ಅತಿಕ್ರಮಣ: ಸಂಘಟನೆಗಳ ವಿರೋಧ

ಅಂಕೋಲಾ: ತಾಲೂಕಿನ ಬೊಬ್ರವಾಡದ ಗೇರುಕೊಪ್ಪ ಬಳಿ ಹಿಂದೂ ರೈತ ಕುಟುಂಬದ ಜಮೀನ ಅನ್ಯ ಕೋಮಿನವರು ಅತಿಕ್ರಮಣ ಮಾಡಿ ಸ್ಮಶಾನಕ್ಕೆ ಬಳಕೆ ಮಾಡಿರುವ ಕಾರಣ ಭೂನ್ಯಾಯ ಮಂಡಳಿ ಅಂತಿಮ ತೀರ್ಪು ಬರುವವರೆಗೆ ಅದಕ್ಕೆ ಅವಕಾಶ ನೀಡಬಾರದು ಎಂದು ಹಿಂದೂಪರ ಸಂಘಟನೆಗಳು ಪೊಲೀಸ್ ಠಾಣೆಗೆ ಆಗಮಿಸಿ ಆರಕ್ಷಕರಿಗೆ ಆಗ್ರಹಿಸಿದರು.

ಹಿಂದೂ ಸಂಘಟನೆ ಪ್ರಮುಖ ನಿತ್ಯಾನಂದ ಗಾಂವಕರ ಮಾತನಾಡಿ, ಬೊಬ್ರವಾಡದ ರೈತ ಶಾಂತಾರಾಮ ನಾಯ್ಕಗೆ ಸೇರಿರುವ ಜಾಗ ಅತಿಕ್ರಮಣ ಮಾಡಿ ಖಬರಸ್ಥಾನಕ್ಕೆ ಬಳಸಲಾಗುತ್ತಿದೆ ಸಮೀಪದಲ್ಲೇ ಖಬರಸ್ಥಾನಕ್ಕೆ ಎಂದು ಮೀಸಲಾಗಿರುವ ಐದು ಎಕರೆ ಜಮೀನು ಇದ್ದರೂ, ರೈತರಿಗೆ ಸೇರಿ ಜಮೀನನ್ನು ಬಳಕೆ ಮಾಡಲಾಗುತ್ತಿದೆ. ಶ್ರೀರಾಮ ಸೇನೆ ಮುಖಂಡ ಪ್ರಮೋದ ಮುತಾಲಿಕ್ ಬಂದು ಆ ಜಮೀನಿನಲ್ಲಿ ಶವ ಹೂಳಲು ಅವಕಾಶ ನೀಡಬಾರದು ಎಂದು ಅಧಿಕಾರಿಗಳಿಗೆ ಮನವಿ ಮಾಡಿದರು ಆ ಸ್ಥಳದಲ್ಲಿ ಶವ ಹೂಳುವ ಕೆಲಸ ನಡೆದಿದೆ ಎಂದರು.

ಗೇರುಕೊಪ್ಪದ ಪರ ನೋಂದಣಿ ಸಹ ಆಗಿದೆ. ಏ.21ರಂದು ಉಪ ವಿಭಾಗಾಧಿಕಾರಿ ನ್ಯಾಯಾಲಯದ ಭೂನ್ಯಾಯ ಮಂಡಳಿ ತೀರ್ಪು ಬರಲಿದೆ. ಅದು ಅವರ ಪರವಾಗಿ ಬಂದರೆ ಹಿಂದೂ ಸಂಘಟನೆಗಳ ಯಾವುದೇ ತಕರಾರು ಇಲ್ಲ. ಅವರು ಉದ್ದೇಶಪೂರ್ವಕವಾಗಿ ಅದೇ ಸ್ಥಳದಲ್ಲಿ ಶವ ಸಂಸ್ಕಾರ ಮಾಡುವುದು ಸರಿಯಲ್ಲ ಎಂದರು.

ನಿತ್ಯಾನಂದ ಗಾಂವಕರ ಮಾತನಾಡಿ, ತೀರ್ಪು ಬರಲು ಎರಡು ದಿನಗಳಿದ್ದು, ಅಲ್ಲಿಯವರೆಗೆ ಹುಬ್ಬಳ್ಳಿಯಲ್ಲಿ ಯಾರಾದರೂ ಸತ್ತರೂ ಇಲ್ಲಿ ತಂದು ಹೂಳುವ ಸಾಧ್ಯತೆವಿದ್ದು ಪೊಲೀಸರು ಅವಕಾಶ ಮಾಡಿಕೊಡಬಾರದು ಎಂದರು.

ಡಿ.ವೈ.ಎಸ್.ಪಿ ಗಿರೀಶ ಮಾತನಾಡಿ, ಕಾನೂನು ಸುವ್ಯವಸ್ಥೆ ಕಾಪಾಡುವುದು ಪೊಲೀಸರ ಕೆಲಸವಾಗಿದ್ದು, ಶಾಂತತೆ ಕಾಪಾಡುವಂತೆ ತಿಳಿಸಿದರು.

ಬಿಜೆಪಿಯ ಪ್ರಮುಖ ಸಂಜಯ ನಾಯ್ಕ, ರೈತರ ಕುಟುಂಬದವರು, ಪಿಎಸ್ಐ, ಗುರುನಾಥ ಹಾದಿಮನಿ, ಸಿಬ್ಬಂದಿ ಇದ್ದರು.



ಏ.19, 20ರಂದು ವಿದ್ಯುತ್ ವ್ಯತ್ಯಯ

ಕಾರವಾರ: ಕಾರವಾರ ಉಪ ವಿಭಾಗದ ವ್ಯಾಪ್ತಿಯಲ್ಲಿ ತುರ್ತು ಕಾಮಗಾರಿ ಇರುವುದರಿಂದ ಏ.19 ರಂದು ಶಿರವಾಡ ಮತ್ತು ಕಿನ್ನರ ಫೀಡರಿನ ಎಲ್ಲಾ ಪ್ರದೇಶಗಳಲ್ಲಿ ಹಾಗೂ ಏ.20ರಂದು ಕೆರವಡಿ ಫೀಡರಿನ ಎಲ್ಲಾ ಪ್ರದೇಶಗಳಲ್ಲಿ ಬೆಳಗ್ಗೆ 10 ರಿಂದ ಸಂಜೆ 6ರವರೆಗೆ ವಿದ್ಯುತ್ ವ್ಯತಯ ಉಂಟಾಗಲಿದೆ. ಗ್ರಾಹಕರು ಸಹಕರಿಸುವಂತೆ ಕಾರವಾರ ಹೆಸ್ಕಾಂ, ಕಾರ್ಯ ಮತ್ತು ಪಾಲನಾ ಉಪ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್(ವಿ) ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಏ.21 ರಂದು ವಿದ್ಯುತ್ ವ್ಯತ್ಯಯ

ಕಾರವಾರ: ಕಾರವಾರ ಉಪ ವಿಭಾಗದ ವ್ಯಾಪ್ತಿಯಲ್ಲಿ ಹೆಚ್‌ಟಿ ವಾಹಕ ಬದಲಾವಣೆ ಕಾಮಗಾರಿ ಇರುವುದರಿಂದ ಏ.21ರಂದು ಬೆಳಗ್ಗೆ 10 ರಿಂದ ಸಂಜೆ 6ರವರೆಗೆ ನಂದನಗದ್ದಾ ಫೀಡರಿನ ವಿವಿಧ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ. ಗ್ರಾಹಕರು ಸಹಕರಿಸುವಂತೆ ಕಾರವಾರ ಹೆಸ್ಕಾಂ, ಕಾರ್ಯ ಮತ್ತು ಪಾಲನಾ ಉಪ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಏ.25ರಂದು ಚೈತ್ರ ಉತ್ಸವ

ಅಂಕೋಲಾ: ಕಲಾಭಾರತಿ ಟ್ರಸ್ಟ್ ಅಂಕೋಲಾ ಇವರ ಮೂರನೇ ವಾರ್ಷಿಕೋತ್ಸವ ಮತ್ತು ಹಿರಿಯ ನಟ ಡಾ.ರಾಜಕುಮಾರ ಜನ್ಮ ದಿನಾಚರಣೆ ಪ್ರಯುಕ್ತ ಚೈತ್ರ ಉತ್ಸವ-2026 ಕಾರ್ಯಕ್ರಮ ಏ.25ರಂದು ಸಂಜೆ 5ಕ್ಕೆ ತಾಲೂಕಿನ ಸ್ವಾತಂತ್ರ್ಯ ಸಂಗ್ರಾಮ ಸ್ಮಾರಕ ಭವನದಲ್ಲಿ ನಡೆಯಲಿದೆ ಎಂದು ಸಂಘಟನೆಯ ಪ್ರಮುಖ ಮಹಾಂತೇಶ ರೇವಡಿ ಹೇಳಿದರು.

ಪಟ್ಟಣದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿ, ಡಾ.ರಾಜಕುಮಾರ ಅವರನ್ನೇ ಕೇಂದ್ರಿಕರಿಸಿ ನಡೆಯುವ ಕಾರ್ಯಕ್ರಮದಲ್ಲಿ ಡಾ.ರಾಜ್ ಗಾನಮಾಲೆ, ರಾಜಕುಮಾರ ಚಲನಚಿತ್ರಗಳ ಸಂಭಾಷಣೆ, ಮಿಮಿಕ್ರಿ, ಹಾಸ್ಯ, ನೃತ್ಯ ಮೊದಲಾದ ಮನರಂಜನೆ ಆಯೋಜಿಸಲಾಗಿದ್ದು, ಪ್ರೇಕ್ಷಕರಿಗೆ ಡಾ.ರಾಜಕುಮಾರ ಕುರಿತು ರಸಪ್ರಶ್ನೆ ಕೇಳಿ ಬಹುಮಾನ ನೀಡಲಾಗುವುದು ಎಂದರು.

ಪರಮಪೂಜ್ಯ ಸದ್ಗುರು ಸಮರ್ಥ ಡಾ.ಎ.ಸಿ.ವಾಲಿ ದಿವ್ಯ ಸಾನಿಧ್ಯ ನಡೆಯಲಿರುವ ಕಾರ್ಯಕ್ರಮ ಮಾಜಿ ಶಾಸಕಿ ರೂಪಾಲಿ ನಾಯ್ಕ ಉದ್ಘಾಟಿಸವರು. ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದ ಸಾಧಕರಿಗೆ ಸನ್ಮಾನಿಸಿ ಗೌರವಿಸಲಾಗುವುದು. ಕಲಾವಿದ ಜ್ಯೂನಿಯರ್ ರಾಜಕುಮಾರ ಪಾಲ್ಗೊಂಡು ರಂಜಿಸಲಿದ್ದು, ನಟ ನೀರ್ನಳ್ಳಿ ರಾಮಕೃಷ್ಣ ಆಗಮಿಸುವರು ಎಂದರು.

ಕಾರ್ಯಕ್ರಮ ರೂವಾರಿ ಪ್ರಶಾಂತ ಶೆಟ್ಟಿ ಹಲವು ವರ್ಷಗಳಿಂದ ಅಂಕೋಲಾದಲ್ಲಿ ಸಾಂಸ್ಕೃತಿಕ ರಂಗವನ್ನು ಬೆಳೆಸುವ ಕೆಲಸ ಮಾಡುತ್ತಿದ್ದು, ಕಲಾಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಕಾರ್ಯಕ್ರಮವನ್ನು ಯಶಸ್ವಿಗೊಳಿಸುವಂತೆ ಮನವಿ ಮಾಡಿದರು.

ಕಲಾ ಭಾರತಿ ಟ್ರಸ್ಟ್ ಅಧ್ಯಕ್ಷ ಪ್ರಶಾಂತ ಶೆಟ್ಟಿ ಮಾತನಾಡಿ ಸಂಗೀತ, ಗಾನ,ಯೋಗದ ಮೂಲಕ ಸಾಮಾಜಿಕ ಸ್ವಾಸ್ಥ್ಯವನ್ನು

ಕಾಪಾಡುವ ಕಾರ್ಯ ಕಲಾಭಾರತಿ ಟ್ರಸ್ಟ್ ಮೂಲಕ ಮಾಡುತ್ತ ಬರಲಾಗುತ್ತಿದ್ದು, ಜನರಲ್ಲಿ ಜಾಗೃತಿ ಮೂಡಿಸಿ ಸಂಸ್ಕೃತಿ ಉಳಿಸಿ ಬೆಳೆಸುವ ಪ್ರಯತ್ನ ನಡೆಸಲಾಗುತ್ತಿದೆ. ಚೈತ್ರ ಉತ್ಸವ ಕಾರ್ಯಕ್ರಮ ಸಂಪೂರ್ಣ ಉಚಿತವಾಗಿದ್ದು, ಎಲ್ಲರಿಗೂ ತಲುಪಲಿ ಸಾಮಾಜಿಕ ಆರೋಗ್ಯ ವೃದ್ಧಿಸಲಿ ಎನ್ನುವದು ಸಂಘಟಕರ ಆಶಯವಾಗಿದೆ ಎಂದರು.

ಯೋಗ ಗುರು ವಿನಾಯಕ ಗುಡಿಗಾರ, ಪ್ರಮುಖರಾದ ಸುರೇಶ ನಾಯ್ಕ, ಎಚ್.ಕೆ.ನಾಯ್ಕ, ವಿ.ಕೆ.ನಾಯರ್ ಉಪಸ್ಥಿತರಿದ್ದರು.



ಕದಂಬೇಶ್ವರ ದೇವಾಲಯ ವಾರ್ಷಿಕ ವರ್ಧಂತಿ ಉತ್ಸವ

ಅಂಕೋಲಾ : ತಾಲೂಕಿನ ಕುಂಬಾರಕೇರಿ ಪುರಾತನ ಪ್ರಸಿದ್ಧ ಕದಂಬೇಶ್ವರ ದೇವಾಲಯದಲ್ಲಿ 5ನೇ ವರ್ಷದ ವಾರ್ಷಿಕ ವರ್ಧಂತಿ ಉತ್ಸವ ಅತಿ ಸಂಭ್ರಮ ಸಡಗರದಿಂದ ವಿವಿಧ ಧಾರ್ಮಿಕ ಕಾರ್ಯಕ್ರಮಗಳೊಂದಿಗೆ ನಡೆಯಿತು.



ಪುಣ್ಯಾಹವನ, ಕೌತುಕ ಬಂಧನ, ಕಲಶ ಸ್ಥಾಪನೆ, ರಾಕ್ಷೋಘ್ನ ಅಘೋಶಾಸ್ತ್ರ ಹವನ ನಡೆಯಿತು. ನವಗ್ರಹ ಹೋಮ, ಕಲಾಹವನ, ಪುಣ್ಯಾಹುತಿ ಮಹಾಪೂಜೆ ಪ್ರಸಾದ ವಿತರಣೆ ಅನ್ನಸಂತರ್ಪಣೆ ನಡೆಯಿತು. ವಿಶೇಷ ಭಜನಾ ಕಾರ್ಯಕ್ರಮ ಶಿವನ ಆರಾಧನೆ, ಪೂಜೆ, ಪ್ರಸಾದ ವಿತರಣೆ ಕದಂಬೇಶ್ವರನ ಸನ್ನಿಧಿಯಲ್ಲಿ ನಡೆಯಿತು. ರಾತ್ರೀ ಕದಂಬೇಶ್ವರ ಕಲಾ ಮಂಡಳಿಯವರು ಆಯ್ದ ಕಲಾವಿದರಿಂದ ಚಂದ್ರಹಾಸ ಚರಿತ್ರೆ ಎಂಬ ಪೌರಾಣಿಕ ಯಕ್ಷಗಾನ ಪ್ರದರ್ಶಿಸಿದರು.

ಶಂಕರ ಭಟ್ ಬ್ರಹ್ಮೂರು ಸಂಗಡಿಗರು ಹಿಮ್ಮೇಳದಲ್ಲಿ, ಸುಬ್ರಹ್ಮಣ್ಯ ಚಿಟ್ಟಾಣಿ, ಗುರು ಭಟ್, ವಿರೇಂದ್ರ ವಂದಿಗೆ, ರಾಜು ಅಮದಳ್ಳಿ, ನಾಗೇಂದ್ರ ಮುರೂರು, ಸಂತೋಷ ಹೆಮ್ಮಾಡಿ, ರಕ್ಷಿತ ಕುಳಿಮನೆ, ರೋಶಿನಿ ಎಲ್. ನಾಯ್ಕ



ಕುಂಬಾರಕೇರಿ, ರಾಮಾ ಎಲ್. ನಾಯ್ಕ ಕುಂಬಾರಕೇರಿ ಮುಮ್ಮೇಳದಲ್ಲಿ ಇದ್ದರು. ಕುಂಬಾರಕೇರಿ ಲಕ್ಷ್ಮೇಶ್ವರ ಸುತ್ತಮುತ್ತಲಿನ ಯುವಕರು ಸ್ವಯಂ ಸೇವಕರಾಗಿ ಕದಂಬೇಶ್ವರ ಎಂಬ ಹೆಸರಿನ ಡ್ರೆಸ್ ಕೋಡ ಧರಿಸಿ ಕೆಲಸ ಕಾರ್ಯ ಅಚ್ಚುಕಟ್ಟಾಗಿ ನೆರವೇರಿಸಿದರು.

ದೇವಸ್ಥಾನದ ಸುತ್ತಮುತ್ತಲಿನ ಸಾರ್ವಜನಿಕ ಭಕ್ತಾಧಿಗಳು ಸಾವಿರಾರು ಸಂಖ್ಯೆಯಲ್ಲಿ ಪಾಲ್ಗೊಂಡು ಸೇವಾ ಕಾರ್ಯವನ್ನು ನೆರವೇರಿಸಿದರು. ಪ್ರದಾನ ಅರ್ಚಕ ಅವಿನಾಶ ಜೋಶಿ ಪೂಜಾ ವಿಧಿ ವಿಧಾನದಿಂದ ನೆರವೇರಿತು.

ನಾರಾಯಣ ಶ್ರೀಗಳ ಆರಾಧನಾ ಮಹೋತ್ಸವ

ಭಟ್ಕಳ: ಸಂಸ್ಥಾನ ಗೋಕರ್ಣ ಪರ್ತಗಾಳಿ ಜೀವೋತ್ತಮ ಮಠದ ಪ್ರಥಮ ಪೀಠಾಧಿಪತಿ ಯತಿವರ್ಯ ನಾರಾಯಣ ತೀರ್ಥ ಶ್ರೀಗಳ ಪುಣ್ಯತಿಥಿ ಪಟ್ಟಣದ ವಡೇರ ಮಠ ಹಾಗೂ ಮೂಲ ವೃಂದಾವನದಲ್ಲಿ ಆರಾಧನಾ ಮಹೋತ್ಸವ ನೆರವೇರಿಸಲಾಯಿತು.



ಪುಣ್ಯತಿಥಿ ಪ್ರಯುಕ್ತ ಬೆಳಗ್ಗೆಯಿಂದಲೇ ಅಭಿಷೇಕ, ಅಲಂಕಾರ, ಮಹಾಮಂಗಳಾರತಿ ಹಾಗೂ ಪಾರಾಯಣ ಮುಂತಾದ ಕಾರ್ಯಕ್ರಮಗಳು ನಡೆದವು. ವಡೇರ ಮಠದಲ್ಲಿ ನಡೆದ ಸಂಸ್ಮರಣೆಯಲ್ಲಿ ಭಕ್ತರು ಭಾಗವಹಿಸಿ ಶ್ರೀಗಳ ಗಣಗಾನ ಮಾಡಿ, ಅಲ್ಲಿ ನಡೆದ ಪೂಜೆಯಲ್ಲಿ ಪಾಲ್ಗೊಂಡು ಗುರುಗಳ ಆಶೀರ್ವಾದ ಪಡೆದುಕೊಂಡರು. ಮಠದ ಪರಂಪರೆಯಂತೆ ವೃಂದಾವನದಲ್ಲಿ ವಿಶೇಷ ಪೂಜೆ ಸಲ್ಲಿಸಿ ಸಮಾಜದ ಕಲ್ಯಾಣಕ್ಕಾಗಿ ಪ್ರಾರ್ಥಿಸಲಾಯಿತು. ಗೌಡ ಸಾರಸ್ವತ ಬ್ರಾಹ್ಮಣ ಸಮುದಾಯದ ಆಧ್ಯಾತ್ಮಿಕ ಪುನರುತ್ಥಾನಕ್ಕೆ ಮಹತ್ವದ ಕೊಡುಗೆ ನೀಡಿದ ನಾರಾಯಣ ತೀರ್ಥ ಸ್ವಾಮಿಜಿಗಳು 15ನೇ ಶತಮಾನದಲ್ಲಿ ಮಠವನ್ನು ಸ್ಥಾಪಿಸಿ ಧಾರ್ಮಿಕ ಹಾಗೂ ಸಾಮಾಜಿಕ ಏಕತೆಗಾಗಿ ಶ್ರಮಿಸಿದರು. ಉತ್ತರ ಭಾರತದ ಕಾಶಿಯಲ್ಲಿ ಮಠ ಸ್ಥಾಪನೆ ಮಾಡಿ, ನಂತರ ಭಟ್ಕಳದಲ್ಲಿ ಮಠವನ್ನು ನಿರ್ಮಿಸಿ ಸಮುದಾಯದ ಸಂಘಟನೆಯನ್ನು ಬಲಪಡಿಸಿದರು . ಅವರಿಂದ ಆರಂಭವಾದ ಈ ಮಠ ಪರಂಪರೆ ಇಂದು ದೇಶದಾದ್ಯಂತ ವಿಸ್ತರಿಸಿ ಭಕ್ತರಿಗೆ ಧಾರ್ಮಿಕ ಮಾರ್ಗದರ್ಶನ ನೀಡುತ್ತಿದೆ. ಪುಣ್ಯತಿಥಿ ಅಂಗವಾಗಿ ನಡೆದ ಕಾರ್ಯಕ್ರಮಗಳಲ್ಲಿ ಮಠದ ಅಧ್ಯಾತ್ಮಿಕ ಮಹತ್ವವನ್ನು ಸ್ಮರಿಸಲಾಯಿತು. ಬಳಿಕ ವಿಶೇಷ ಅನ್ನಸಂತರ್ಪಣೆ ನಡೆಯಿತು.

ಸಂಸ್ಥೆಗೆ ಶಕ್ತಿ ತುಂಬುವ ಕಾರ್ಯ ಮಾಡೋಣ: ಶ್ರೀಗಳು

ಹೊನ್ನಾವರ: ಇಂದು ಶಿಕ್ಷಣವನ್ನು ವ್ಯಾಪಾರದ ದೃಷ್ಟಿಯಿಂದ ನೋಡಲಾಗುತ್ತಿದೆ. ಈ ಕಾಲಘಟ್ಟದಲ್ಲಿ ಶಿಕ್ಷಣ ಸಂಸ್ಥೆಯನ್ನು ಉಳಿಸಿಬೆಳೆಸುವ ಕೆಲಸವನ್ನು ಸುಬ್ರಹ್ಮಣ್ಯ ದೇವಸ್ಥಾನ ಸಮಿತಿಯವರು ಮಾಡುತ್ತಿರುವುದು ಶ್ಲಾಘನೀಯ ಎಂದು ರಾಮಚಂದ್ರಾಪುರ ಮಠದ ರಾಘವೇಶ್ವರ ಭಾರತೀ ಶ್ರೀಗಳು ಹೇಳಿದರು.



ತಾಲೂಕಿನ ಮುಗ್ವಾದಲ್ಲಿ ಶ್ರೀಕ್ಷೇತ್ರ ಸುಬ್ರಹ್ಮಣ್ಯದ ಆಡಳಿತದಲ್ಲಿರುವ ಸುಬ್ರಹ್ಮಣ್ಯ ಪ್ರೌಢಶಾಲೆ ಉದ್ಘಾಟನೆ ಹಾಗೂ ವಿದ್ಯಾರ್ಥಿಗಳ ದತ್ತು ಸ್ವೀಕಾರ ಸಮಾರಂಭ ಉದ್ಘಾಟಿಸಿ ಶ್ರೀಗಳು ಆಶೀರ್ವಚನ ನೀಡಿದರು.

ಇಂದು ಆಹಾರ ವಿಹಾರಗಳು ಮಕ್ಕಳನ್ನು ಚಂಚಲತೆಗೆ ಈಡು ಮಾಡುವ ಕಾಲಘಟ್ಟದಲ್ಲಿ ಇದ್ದೇವೆ. ಯೋಗ್ಯ ಶಿಕ್ಷಣ ನೀಡಬೇಕು. ಶಾಲೆಯಲ್ಲಿ ಒಳ್ಳೆಯತನವನ್ನು ಹೇಳಿಕೊಡಬೇಕು. ಸಂಸ್ಥೆಗೆ ಶಕ್ತಿ ತುಂಬುವ ಕಾರ್ಯ ನಾವೆಲ್ಲ ಮಾಡಬೇಕು. ಉಚಿತ ಶಿಕ್ಷಣ ಎಂದರೆ ಸಂಸ್ಕೃತದಲ್ಲಿ ಯೋಗ್ಯ, ಸರಿಯಾದ ಶಿಕ್ಷಣ ಎಂಬ ಅರ್ಥವಿದೆ. ಶ್ರೀಸುಬ್ರಹ್ಮಣ್ಯ ಹೆಸರಿನಲ್ಲಿ ನಡೆಯುವ ಶಾಲೆಯಲ್ಲಿ ಸುಬ್ರಹ್ಮಣ್ಯ ಯಾರು? ದೇವರ ಆಯುಧ ಯಾವುದು, ವಾಹನದ ಕಥೆ ತಿಳಿಸಬೇಕು. ಸಂಸ್ಕೃತಿ, ಒಳ್ಳೆಯ ದರ ಕುರಿತು ಪಾಲಕರು ತಿಳಿಹೇಳಬೇಕು ಎಂದರು.

ಶಿಕ್ಷಣದ ಜತೆ ಸಂಸ್ಕಾರ, ದೇಶ ಭಕ್ತಿ, ಧರ್ಮ ಪ್ರೇಮ, ಪರಂಪರೆ ಕಲಿಸಬೇಕು. ಉನ್ನತ ಶಿಕ್ಷಣ ಪಡೆದು ವಿದೇಶಕ್ಕೆ ಹೋಗಿ ಉಳಿಯುವುದಲ್ಲ, ಮತ್ತೆ ನಮ್ಮ ದೇಶಕ್ಕೆ ಸೇವೆ ನೀಡಬೇಕು ಆಗ ಶಿಕ್ಷಣಕ್ಕೆ ಅರ್ಥ ಬರುತ್ತದೆ ಎಂದರು.

ಸಚಿವ ಮಂಕಾಳ ವೈದ್ಯ ಮಾತನಾಡಿ, ಕಳೆದ 62ವರ್ಷಗಳ ಹಿಂದೆ ಹಿರಿಯರು ಸೇರಿ ಶಾಲೆ ಆರಂಭಿಸಿದ ಪರಿಣಾಮ ಸಾವಿರಾರು ವಿದ್ಯಾರ್ಥಿಗಳು ಜೀವನ ರೂಪಿಸಿಕೊಳ್ಳುವಂತಾಗಿದೆ. ಶಿಕ್ಷಣಕ್ಕೆ ಹೆಚ್ಚಿನ ಪ್ರಾಮುಖ್ಯತೆ ನೀಡಿದೇನೆ. ಶಿಕ್ಷಣಕ್ಕೆ ಕೊರತೆ ಆಗಬಾರದು. ಈ ನಿಟ್ಟಿನಲ್ಲಿ ಎಲ್ಲರೂ ಶ್ರಮಿಸಬೇಕು. ಶಿಕ್ಷಣದಿಂದ ಮಾತ್ರ ಸಾಧನೆ ಸಾಧ್ಯ. ಶಾಲೆಗಳಿಗೆ ಸರ್ಕಾರದ ಸ್ಪಂದನೆ ಸರಿಯಾಗಿ ಆಗದೇ ಇರುವುದರಿಂದ ಶಾಲೆಗಳು ಮುಚ್ಚುವ ಪರಿಸ್ಥಿತಿ ಬಂದಿದೆ. ದೇವಸ್ಥಾನ ಜೊತೆಯಲ್ಲಿ ಶಾಲೆ ಅಭಿವೃದ್ಧಿ ಮಾಡಿದಾಗ ಶಾಲೆಗಳು ಉಳಿದು ಬೆಳೆಯುತ್ತದೆ ಎಂದರು.

ಶಾಲೆಗೆ 5ಲಕ್ಷ ದೇಣಿಗೆ ನೀಡಿ,ಮುಂದೆಯು ಸಹಕಾರ ನೀಡುತ್ತೇನೆ.ಸರ್ಕಾರದಿಂದಲೂಸೌಲಭ್ಯ ಒದಗಿಸುವ ಭರವಸೆ ನೀಡಿದರು. ಶಾಸಕ ದಿನಕರ ಶೆಟ್ಟಿ ಮಾತನಾಡಿ, ಶಿಕ್ಷಣ ಸಂಸ್ಥೆ ನಡೆಸುವುದು ಸುಲಭವಲ್ಲ, ಆಡಳಿತ ಮಂಡಳಿಯವರು ಅತ್ಯಂತ ಜಾಗರೂಕತೆಯಿಂದ ಸಂಸ್ಥೆಯನ್ನು ನಡೆಸಬೇಕು. ವಿದ್ಯಾರ್ಥಿಗಳಿಗೆ ಅನುಕೂಲ ಕಲ್ಪಿಸಬೇಕು ಎಂದರು. ಎಂ.ಜಿ.ಭಟ್ ಪ್ರೇರಣಾ ಮಾತನಾಡಿದರು. ದೇವಸ್ಥಾನದ ಆಡಳಿತ ಮಂಡಳಿ ಅಧ್ಯಕ್ಷ ಎಸ್.ಆರ್.ಹೆಗಡೆ ಪ್ರಾಸ್ತಾವಿಕ ಮಾತನಾಡಿದರು. ಸಾರಿಗೆ ಉದ್ಯಮಿ ವೆಂಕಟ್ರಮಣ ಹೆಗಡೆ ಕವಲಕ್ಕಿ, ಗೋವಿಂದ ನಾಯ್ಕ, ಐ.ವಿ.ನಾಯ್ಕ, ವಿ.ಕೆ.ವಿಶಾಲ, ಸುರೇಶ ಶೆಟ್ಟಿ, ಡಾ. ರಮೇಶ ಗೌಡ, ಮುಖ್ಯಾಧ್ಯಾಪಕ ಯು.ಜಿ.ತಿಮ್ಮಪ್ಪ ಇದ್ದರು.

ವಿದ್ಯಾರ್ಥಿನಿ ಪ್ರಜಿತಾ ಸಾವು: ತನಿಖೆಗೆ ಸೂಚನೆ

ಜೋಯಿಡಾ: ತಾಲೂಕಿನ ಮುಡಿಯೆ ಗ್ರಾಮದ ವಿದ್ಯಾರ್ಥಿನಿ ಪ್ರಜಿತಾ ಪ್ರಕಾಶ್ ವೇಳಿಪ ಸಾವಿನ ಬಗ್ಗೆ ಕುಣಬಿ ಸಮಾಜದೊಂದಿಗೆ ಸಭೆ ನಡೆಸಿ ನಂತರ ಮನವಿ ಸ್ವೀಕರಿಸಿದ ಶಾಸಕ ಆರ್.ವಿ.ದೇಶಪಾಂಡೆ ಯಾವುದೇ ಕಾರಣಕ್ಕೂ ಕುಟುಂಬಕ್ಕೆ ಅನ್ಯಾಯ ಆಗಲು ಬಿಡುವುದಿಲ್ಲ ಎಂದು ಆಶ್ವಾಸನೆ ನೀಡಿದ್ದಾರೆ. ಧಾರವಾಡ ಪೊಲೀಸ್ ಅಧಿಕಾರಿಗಳೊಂದಿಗೆ ಮಾತನಾಡಿ, ತನಿಖೆ ಚುರುಕು ಗೊಳಿಸಲು ಸೂಚಿಸಿದರು.



ಕುಣಬಿ ಸಮಾಜದ ನಿಯೋಗ ಶಾಸಕ ಆರ್.ವಿ. ದೇಶಪಾಂಡೆ ಅವರಿಗೆ ಜೊಯಿಡಾ ಪದವಿ ಕಾಲೇಜಿನ ಆವರಣದಲ್ಲಿ ಭೇಟಿ ಮಾಡಿ ನಂತರ ನಡೆದ ಸಭೆಯಲ್ಲಿ ಗೋವಾ ರಾಜ್ಯದ ಮಾಜಿ ಶಾಸಕ ಪ್ರಸಾದ್ ಗಾಂವ್ಕರ್ ವಿದ್ಯಾರ್ಥಿನಿ ಪ್ರಜಿತಾ ಸಾವಿನ ಬಗ್ಗೆ ವಿವರಿಸಿದರು.ಪ್ರಜಿತಾ ಸಾವಿನಲ್ಲಿ ಸಂಶಯ ಇದೆ. ವಿದ್ಯಾರ್ಥಿನಿ ಉಳಿದುಕೊಂಡ ವಸತಿ ನಿಲಯ ಅಧಿಕಾರಿಗಳು, ಹುಡುಗಿಯ ಮೊಬೈಲ್ ಇಟ್ಟುಕೊಂಡು ಇಲ್ಲವೆಂದು ಹೇಳಿದ ಧೀರಜ್ ದೀಪಕ ದೇಸಾಯಿ ನುಜ್ಜಿ ಮತ್ತು ಆತನೇ ಹೆಸರು ಹೇಳಿದ ಇಬ್ಬರು ಯುವಕರಾದ ಆದಿತ್ಯ ವೇರ್ಣೆಕರ ಮತ್ತು ಶಶಿಧರ ವಿಠ್ಠಲ ಗೋಣದಾಳ ಇವರನ್ನು ತನಿಖೆಗೆ ಒಳಪಡಿಸಬೇಕು. ಯಾರು ತಪ್ಪಿತಸ್ಥರಾದರೂ ಅವರ ಮೇಲೆ ಕ್ರಮವಾಗಬೇಕು. ಯಾವುದೇ ಕಾರಣಕ್ಕೂ ತನಿಖೆ ವಿಳಂಬ ಆಗಬಾರದು ಎಂದು ಹೇಳಿದರು.

ಜಿಲ್ಲಾ ಕುಣಬಿ ಸಮಾಜದ ಅಧ್ಯಕ್ಷ ಸುಭಾಷ್ ಗಾವಡಾ ಮಾತನಾಡಿ, ಬುಡಕಟ್ಟು ಕುಣಬಿ ಹಿಂದುಳಿದ ಜನಾಂಗವಾಗಿದೆ. ನಾಯಕತ್ವ ಸೌಘಟನೆ ಇಲ್ಲ, ಸಮಾಜದಲ್ಲಿ ಇಂತಹ ಘಟನೆಗಳು ನಡೆದಾಗ ಒಂದಾಗಿ ಹೋರಾಟ ಮಾಡಬೇಕು. ಈ ಪ್ರಕರಣದಲ್ಲಿ ಭಾಗಿಯಾದವರು ಎಷ್ಟೇ ಪ್ರಭಾವಿತರಾದರು ನಿಷ್ಪಕ್ಷಪಾತ ತನಿಖೆ ನಡೆಸಿ ಬಂಧಿಸಬೇಕು ಎಂದರು.

ಶಾಸಕ ಆರ್.ವಿ. ದೇಶಪಾಂಡೆ ಮಾತನಾಡಿ, ತನಿಖೆಗೆ ಸರಕಾರ ಸಂಪೂರ್ಣ ಬೆಂಬಲ ನೀಡಲಿದೆ. ನನ್ನ ಕ್ಷೇತ್ರದಲ್ಲಿ ಯಾರಿಗೂ ಅನ್ಯಾಯ ಆಗಲು ಬಿಡುವುದಿಲ್ಲ, ಸ್ಥಳಿಯವಾಗಿ ಶಿಕ್ಷಣಕ್ಕೆ ಉತ್ತಮ ವಾತಾವರಣ ಇದೆ. ಎಂದು ಮೃತ ವಿದ್ಯಾರ್ಥಿನಿ ತಂದೆ ಪ್ರಕಾಶ್ ವೇಳಿಪಗೆ ಧೈರ್ಯ ನೀಡಿದರು.

ಮಾಜಿ ಶಾಸಕ ಪ್ರಸಾದ ಗಾಂವ್ಕರ್, ಕುಣಬಿ ಸಮಾಜ ಜಿಲ್ಲಾ ಅಧ್ಯಕ್ಷ ಸುಭಾಷ್ ಗಾವಡಾ, ತಾಲೂಕಾ ಅಧ್ಯಕ್ಷ ಪ್ರೇಮಾನಂದ ವೇಳಿಪ, ಕಾರ್ಯದರ್ಶಿ ದಯಾನಂದ ಕುಮಗಾಳಕ, ಪ್ರಮುಖರಾದ ಮಾಬಳು ಕುಂಡಲಕರ, ಪ್ರಸನ್ನ ಗಾವಡಾ, ದಿವಾಕರ ಕುಂಡಲಕರ, ದಯಾನಂದ ನಾಯ್ಕ, ಬುಧೊ ಕಾಲೇಕರ, ಸುಭಾಷ್ ಮಿರಾಶಿ, ಸುರೇಶ್ ಗಾವಡಾ, ಸುನಿಲ್ ಗಾವಡಾ ಸಿಸ್ಟೆ ಇದ್ದರು.

ಕಿರುಸುದ್ದಿ

ಆತ್ಮ ವಿಶ್ವಾಸವೇ ಯಶಸ್ಸಿನ ಗುಟ್ಟು

ಹಾನಗಲ್ಲ: ಮಹಿಳಾ ಸಮಾನತೆಯ ಕೂಗು 12ನೇ ಶತಮಾನದ ಶರಣರ ಕಾಲದಲ್ಲಿಯೇ ಮುನ್ನೆಲೆಗೆ ಬಂದರೂ ಈವರೆಗೂ ಅದರ ಫಲ ಮಹಿಳೆಯರಿಗೆ ಸಿಗದಿರುವುದು ವಿಷಾದದ ಸಂಗತಿ ಎಂದು ರಾಜ್ಯ ಅಲ್ಪಸಂಖ್ಯಾತರ ಕಲ್ಯಾಣ ಆಯೋಗದ ಸದಸ್ಯೆ ಪರಿಮಳಾ ಜೈನ್ ಅಭಿಪ್ರಾಯಪಟ್ಟರು.

ಶನಿವಾರ ಇಲ್ಲಿನ ಜಗಜೀವನರಾಮ್ ಭವನದಲ್ಲಿ ಪ್ರಗತಿ ಲೋಯೋಲಾ ತಾಲೂಕಾ ಸ್ವಸಹಾಯ ಸಂಘಗಳ ಒಕ್ಕೂಟ ಹಾಗೂ ಲೋಯೋಲಾ ವಿಕಾಸ ಕೇಂದ್ರದ ಸಹಯೋಗದಲ್ಲಿ ಆಯೋಜಿಸಿದ್ದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ-ಸಮಾನತೆಯ ಸಮಾಜದೆಡೆಗೆ ನಮ್ಮ ನಡೆ ಕಾರ್ಯಕ್ರಮದಲ್ಲಿ ಮಾತನಾಡಿ, ಹೆಣ್ಣು ಹೆಣ್ಣಾದೆನೆಂದು ಬೇಸರಿಸುವ ಬದಲು ಹೆಮ್ಮೆಯಿಂದ ಹೇಳಿ. ಆತ್ಮ ವಿಶ್ವಾಸವೇ ಯಶಸ್ಸಿನ ಗುಟ್ಟು ಎಂದರು.

ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಮಾಜಿ ಅಧ್ಯಕ್ಷೆ ಪ್ರಮೀಳಾ ನಾಯ್ಡು ಮಾತನಾಡಿ, ಜನ ಜಾಗೃತಿ ಮೂಲಕ ಸ್ವಾವಲಂಬಿ ಜೀವನಕ್ಕೆ ಮಾರ್ಗದರ್ಶನ ಮಾಡುವ ಸಂಕಲ್ಪ ನಮ್ಮದಾಗಿದೆ ಎಂದರು. ಪ್ರಗತಿ ಲೋಯೋಲಾ ತಾಲೂಕು ಒಕ್ಕೂಟದ ಅಧ್ಯಕ್ಷೆ ಗೀತಾ ಕುರುಬರ ಅಧ್ಯಕ್ಷತೆ ವಹಿಸಿದ್ದರು. ಯುವ ಪ್ರಗತಿಪರ ಕೃಷಿ ಮಹಿಳೆ ಕಾವ್ಯಾ ಕುಂಟನಹೊಸಳ್ಳಿ, ಸಾಹಿತಿ ಪಾರ್ವತಿಬಾಯಿ ಕಾಶೀಕರ, ಗುತ್ತೆಮ್ಮ ಸುಣಗಾರ, ಲೋಯೋಲಾ ವಿಕಾಸ ಕೇಂದ್ರದ ಸಹನಿರ್ದೇಶಕ ಜೆಸನ್ ಪಾಯ್ಸ್ ಇತರರಿದ್ದರು. ಪ್ರಗತಿಪರ ಕೃಷಿಗಾಗಿ ಕಾವ್ಯಾ ಕುಂಟನಹೊಸಳ್ಳಿ, ಗುತ್ತೆಮ್ಮ ಸವಣೂರ ಅವರನ್ನು ಸನ್ಮಾನಿಸಲಾಯಿತು. ವಿದ್ಯಾ ಲಕ್ಷ್ಮೇಪುರ ಸಂವಿಧಾನ ಪೀಠಿಕೆ ಓದಿದರು. ಕವಿತಾ ಜಾಡರ್ ಸ್ವಾಗತಿಸಿದರು. ಅನ್ನಪೂರ್ಣ ಹಾಗೂ ಗೀತಾ ನಿರ್ವಹಿಸಿದರು. ಶಬನಾಜ್ ಶೇಖ ವಂದಿಸಿದರು.

ಏ.26ರಿಂದ ಆಂಜನೇಯ ದೇವಸ್ಥಾನ ಲೋಕಾರ್ಪಣೆ

ಹಾವೇರಿ: ಸವಣೂರ ತಾಲೂಕಿನ ಸುಕ್ಷೇತ್ರ ಇಚ್ಚಂಗಿ ಗ್ರಾಮದಲ್ಲಿ ಶ್ರೀ ಆಂಜನೇಯ ದೇವಸ್ಥಾನದ ಲೋಕಾರ್ಪಣೆ ಹಾಗೂ ಶ್ರೀ ವೀರಭದ್ರೇಶ್ವರ ಜಾತ್ರಾ ಮಹೋತ್ಸವದ ಅಂಗವಾಗಿ ವಿವಿಧ ಧಾರ್ಮಿಕ ಕಾರ್ಯಕ್ರಮ ಆಯೋಜಿಸಲಾಗಿದೆ. ಏ.26ರಿಂದ 30ವರೆಗೆ ಶಿವಯೋಗೀಶ್ವರ ಸ್ವಾಮೀಜಿಗಳಿಂದ ಪ್ರವಚನ ಕಾರ್ಯಕ್ರಮ ನಡೆಯಲಿದೆ. ಏ.27ರಂದು ಆಂಜನೇಯ ಸ್ವಾಮಿಯ ಮೂರ್ತಿ ಹಾಗೂ ಕಳಸ ಮೆರವಣಿಗೆ ಸಕಲ ವಾದ್ಯಗಳೊಂದಿಗೆ ಊರಿನ ಪ್ರಮುಖ ಬೀದಿಗಳಲ್ಲಿ ಸಂಚರಿಸುವುದು. ಏ.30ರಂದು ಬ್ರಾಹ್ಮಿ ಮುಹೂರ್ತದಲ್ಲಿ ಪೂಜಾ ಹೋಮ ಹವನದೊಂದಿಗೆ ಆಂಜನೇಯ ದೇವರ ಪ್ರಾಣ ಪ್ರತಿಷ್ಠಾಪನೆ ಕಳಸಾರೋಹಣ ಮತ್ತು ದೀಪಗಂಬ ಪ್ರತಿಷ್ಠಾಪನೆ ಹಾಗೂ ಸಂಜೆ ಶ್ರೀ ವೀರಭದ್ರೇಶ್ವರ ರಥದ ಕಳಸಾರೋಹಣ ಹಾಗೂ ಹೂವಿನ ತೇರು ನಂತರ ಪ್ರವಚನ ಕಾರ್ಯಕ್ರಮದ ಮಹಾ ಮಂಗಳೋತ್ಸವ ಕಾರ್ಯಕ್ರಮ ನಡೆಯಲಿದೆ. ಮೇ 1ರಂದು ವೀರಭದ್ರೇಶ್ವರ ದೇವರ ಮಹಾರಥೋತ್ಸವ, ಮೇ 2ರಂದು ಶ್ರೀ ವೀರಭದ್ರ ದೇವರ ಗುಗ್ಗಳ ಕಾರ್ಯಕ್ರಮ ನಡೆಯಲಿದೆ. ಮೇ 3ರಿಂದ 5ರವರೆಗೆ ಮೂರು ದಿನ ಜಂಗಿ ನಿಕಾಲಿ ಕುಸ್ತಿಗಳು ಜರಗುವವು, ಮೇ 5ರಂದು ಸಂಜೆ ಶ್ರೀ ಗ್ರಾಮ ದೇವಿಗೆ ಉಡಿ ತುಂಬಾ ಕಾರ್ಯಕ್ರಮವಿರುತ್ತದೆ. ಕಾರ್ಯಕ್ರಮದಲ್ಲಿ ಗುದ್ದಲೇಶ್ವರ ಸ್ವಾಮೀಜಿ, ಚನ್ನವೀರ ಸ್ವಾಮೀಜಿ, ನಿಜಗುಣ ಸ್ವಾಮೀಜಿ, ಗುರುಶಾಂತೇಶ್ವರ ಸ್ವಾಮೀಜಿ, ಸಿದ್ದಯ್ಯ ಸ್ವಾಮೀಜಿ, ಗುರುಲಿಂಗ ಸ್ವಾಮೀಜಿ, ಜಿಲ್ಲಾಧಿಕಾರಿ ಡಾ. ವಿಜಯ ಮಹಾಂತೇಶ ಬಿ ದಾನಮ್ಮನವರ ಭಾಗವಹಿಸಲಿದ್ದಾರೆ.

ವಿದ್ಯುತ್ ವ್ಯತ್ಯಯ ಇಂದು

ಹಾವೇರಿ: ಶಿಗ್ಗಾಂವ 33/11 ಕೆವಿ ಶಿಗ್ಗಾಂವ ವಿದ್ಯುತ್ ವಿತರಣಾ ಕೇಂದ್ರದಿಂದ ಹೊರಡುವ ಬಸವನಹಳ್ಳಿ ಮಾರ್ಗ, ಕೆಎಸ್‌ಆರ್‌ಪಿ ಮಾರ್ಗ, ಚೆಕ್ಕಿನಕಟ್ಟಿ ಐಪಿ ಮಾರ್ಗ, ಕೋರ್ಟ ಮಾರ್ಗ, ಟೋಲ್‌ಗೇಟ್, ಟೆಕ್ಸಟೈಲ್ ಪಾರ್ಕ್ ಮಾರ್ಗದಲ್ಲಿ ಎನ್ ಹೆಚ್4 ರಿಂದ ಸವಣೂರು ರಸ್ತೆ (ಕಿತ್ತೂರುರಾಣಿ ಚನ್ನಮ್ಮರವರ ಪುತ್ಥಳಿ)ವರೆಗೆ ನಿರ್ವಹಣಾ ಕಾಮಗಾರಿ ಇರುವುದರಿಂದ ಏಪ್ರಿಲ್ 19 ರಂದು ಈ ಮಾರ್ಗದ ವ್ಯಾಪ್ತಿಗೆ ಬರುವ ಚೆಕ್ಕಿನಕಟ್ಟಿ, ಚೆಕ್ಕಿನಕಟ್ಟಿ ತಾಂಡಾ, ಶಿವಪುರ, ಶಿವಪುರ ತಾಂಡಾ, ಕೋಣನಕೇರಿ, ಭದ್ರಾಪುರ, ಮುಳಕೇರಿ, ಬಸವನಕಟ್ಟಿ ಗೌಳೇರದಟ್ಟಿ ಗ್ರಾಮ, ಎಪಿಎಂಸಿ, ರಾಜೀವನಗರ, ಕೆಎಸ್‌ಐಡಿ, ಕೆ.ಎಸ್‌ಆರ್‌ಪಿ ಬೆಟಲಿಯನ್, ನಾಗನೂರ ಕೇರಿ ರಸ್ತೆ, ಬಸವೇಶ್ವರ ನಗರ ಕೋ)ರ್ಟ್ ವ್ಯಾಪ್ತಿಯಲ್ಲಿ ಬೆಳಿಗ್ಗೆ 10 ರಿಂದ 6 ಗಂಟೆಯವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ. ಸಾರ್ವಜನಿಕರು ಸಹಕರಿಸಬೇಕು ಎಂದು ಹೆಸ್ಕಾಂ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಹಾನಗಲ್ಲ: ಶನಿವಾರ ಇಲ್ಲಿನ ಜಗಜೀವನರಾಮ್ ಭವನದಲ್ಲಿ ಪ್ರಗತಿ ಲೋಯೋಲಾ ತಾಲೂಕಾ ಸ್ವಸಹಾಯ ಸಂಘಗಳ ಒಕ್ಕೂಟ ಹಾಗೂ ಲೋಯೋಲಾ ವಿಕಾಸ ಕೇಂದ್ರದ ಸಹಯೋಗದಲ್ಲಿ ಆಯೋಜಿಸಿದ್ದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ-ಸಮಾನತೆಯ ಸಮಾಜದೆಡೆಗೆ ನಮ್ಮ ನಡೆ ಕಾರ್ಯಕ್ರಮದಲ್ಲಿ ರಾಜ್ಯ ಅಲ್ಪಸಂಖ್ಯಾತರ ಕಲ್ಯಾಣ ಆಯೋಗದ ಸದಸ್ಯೆ ಪರಿಮಳಾ ಜೈನ್ ಉದ್ಘಾಟಿಸಿದರು.

ಪುಸ್ತಕಮನೆ ಬೀದಿ ಗ್ರಂಥಾಲಯ ಉದ್ಘಾಟನೆ

ಶಿರಸಿ: ಮೊಬೈಲ್ ಗೀಳಿನಿಂದಾಗಿ ಓದುವ ಹವ್ಯಾಸ ಕಡಿಮೆಯಾಗುತ್ತಿರುವ ಈ ಕಾಲಘಟ್ಟದಲ್ಲಿ ವಿನೂತನ ಪರಿಕಲ್ಪನೆಯ ಈ ಪುಸ್ತಕಮನೆ ಬೀದಿ ಗ್ರಂಥಾಲಯ ನಿಜಕ್ಕೂ ಬರಹಗಾರರಿಗೆ ಒಂದು ಭರವಸೆಯ ಬೆಳಕಾಗಬಹುದು ಎಂದು ಸಾಹಿತಿ ಟಿ. ಎಂ. ಜಗದೀಶ್ ಹೇಳಿದರುಅವರು ಇತ್ತೀಚೆಗೆ ಹೊಸನಗರ ತಾಲೂಕಿನ ನಗರದಲ್ಲಿ ನಿವೃತ್ತ ಪ್ರಾಧ್ಯಾಪಕ ರಾಮಚಂದ್ರ ಭಟ್ಟರ ಕನಸಿನ ಕೂಸು ಪುಸ್ತಕಮನೆ ಬೀದಿ ಗ್ರಂಥಾಲಯವನ್ನು ಉದ್ಘಾಟಿಸಿ ಮಾತನಾಡಿದರು.ಕವಯತ್ರಿ ಪ್ರಿಯಾ ಕಲ್ಲಬ್ಬೆ ಮಾತನಾಡಿ, ಇದೊಂದು ಹೊಸತನದ ಉತ್ತಮ ಕಾರ್ಯ ಎಂದರಲ್ಲದೆ, ಯಾವುದೇ ಪ್ರತಿಫಲಾಪೇಕ್ಷೆಯಿಲ್ಲದೆ ಕೇವಲ ಸಾಹಿತ್ಯದ ಮೇಲಿನ ಪ್ರೀತಿಯಿಂದ ಈ ಗ್ರಂಥಾಲಯ ಆರಂಭಿಸಿರುವ ರಾಮಚಂದ್ರ ಭಟ್ಟರನ್ನು ಶ್ಲಾಘಿಸಿದರು. ಆಸ್ಟ್ರೇಲಿಯಾದ ತಮ್ಮ ಮಗನ ಮನೆಗೆ ಹೋಗಿದ್ದಾಗ ಅಲ್ಲಿ ಇಂತಹ ಬೀದಿ ಗ್ರಂಥಾಲಯಗಳಿರುವುದನ್ನು ಕಂಡು, ಅದರಿಂದ ಪ್ರೇರಿತರಾಗಿ ತಮ್ಮ ಊರಿನಲ್ಲೂ ಇದನ್ನು ಮಾಡಬಾರದೇಕೆ ಎಂಬ ಯೋಚನೆಯಿಂದ ಈ ಪುಸ್ತಕಮನೆ ಮಾಡಿದ್ದಾಗಿ ತಿಳಿಸಿದ ಭಟ್ಟರು, ಈ ಪುಸ್ತಕ ಮನೆಯಲ್ಲಿ ನನ್ನ ಅಭಿರುಚಿ ಗ್ರಂಥಾಲಯದ ಪುಸ್ತಕಗಳನ್ನು ಇಡುತ್ತೇನೆ. ಜನ ಇಲ್ಲಿಂದ ಪುಸ್ತಕಗಳನ್ನು ಮನೆಗೊಯ್ದು ಓದಿ, ಮರಳಿ ಇಲ್ಲೇ ತಂದಿಡಬೇಕು. ಪ್ರತಿ ವಾರ ಪುಸ್ತಕಗಳನ್ನು ಬದಲಾಯಿಸುತ್ತೇನೆ. ಇದಕ್ಕೆ ಯಾವುದೇ ನೋಂದಣಿ ಶುಲ್ಕ ಮುಂತಾದವುಗಳೇನೂ ಇಲ್ಲ ಎಂದರು. ಶ್ವೇತಾ ಭಟ್, ವಸುಧಾ ಭಟ್, ಕುಮಾರ ಭುವನ್ ಭಟ್ ರು ಹಿಂದೂಸ್ಥಾನಿ ಗಾಯನ ಪ್ರಸ್ತುತ ಪಡಿಸಿದರು. ಶಾರದಾ ಭಟ್, ವಾಣಿ ಭಟ್ ಭಕ್ತಿಗೀತೆ, ಭಾವಗೀತೆಗಳನ್ನು ಹಾಡಿ ರಂಜಿಸಿದರು.



ಶಿರಸಿ: ಇತ್ತೀಚೆಗೆ ಹೊಸನಗರ ತಾಲೂಕಿನ ನಗರದಲ್ಲಿ ನಿವೃತ್ತ ಪ್ರಾಧ್ಯಾಪಕ ರಾಮಚಂದ್ರ ಭಟ್ಟರ ಕನಸಿನ ಕೂಸು ಪುಸ್ತಕಮನೆ ಬೀದಿ ಗ್ರಂಥಾಲಯವನ್ನು ಸಾಹಿತಿ ಟಿ. ಎಂ. ಜಗದೀಶ್ ಉದ್ಘಾಟಿಸಿದರು.

ಜಿಲ್ಲಾ ಮಟ್ಟದ ನಿರ್ವಹಣಾ ಸಮಿತಿ ಸಭೆ ; ಡಿಸಿ ಸೂಚನೆ

ಜಾನುವಾರುಗಳ ರಕ್ಷಣೆಗೆ ಕ್ರಮ ವಹಿಸಿ

ಹಾವೇರಿ: ಜಾನುವಾರುಗಳು ರೈತನ ಬೆನ್ನೆಲುಬು, ಅವುಗಳ ರಕ್ಷಣೆಗೆ ಕಾಲ ಕಾಲಕ್ಕೆ ಲಸಿಕೆ ಹಾಕುವ ಮೂಲಕ ಮತ್ತು ರೋಗ ಪೀಡಿತ ಜಾನುವಾರುಗಳಿಗೆ ಚಿಕಿತ್ಸೆ ನೀಡುವ ಮೂಲಕ ಜಾನುವಾರುಗಳ ಆರೋಗ್ಯ ರಕ್ಷಣೆಗೆ ಎಲ್ಲ ಅಗತ್ಯ ಕ್ರಮ ಪಶುಪಾಲನಾ ಇಲಾಖೆ ಸೂಕ್ತವಾಗಿ ನಿರ್ವಹಿಸಲು ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಡಾ.ವಿಜಯಮಹಾಂತೇಶ ದಾನಮ್ಮನವರ ಸೂಚನೆ ನೀಡಿದರು.



ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ರಾಷ್ಟ್ರೀಯ ಜಾನುವಾರು ರೋಗ ನಿಯಂತ್ರಣ ಕಾರ್ಯಕ್ರಮದಡಿ 9ನೇ ಸುತ್ತಿನ ಕಾಲುಬಾಯಿ ಬೇನೆ ಲಸಿಕಾ ಕಾರ್ಯಕ್ರಮದ ಹಾವೇರಿ ಜಿಲ್ಲಾ ಮಟ್ಟದ ನಿರ್ವಹಣಾ ಸಮಿತಿ ಸಭೆಯಲ್ಲಿ ಮಾತನಾಡಿದರು.

ಕಾಲು ಬಾಯಿ ಬೇನೆ ರೋಗವು ಜಾನುವಾರುಗಳಿಗೆ ಮಾರಕವಾಗಿದ್ದು, ವಾರ್ಷಿಕವಾಗಿ ಎರಡು ಬಾರಿ ಲಸಿಕಾ ಅಭಿಯಾನ ಹಮ್ಮಿಕೊಳ್ಳಲಾಗುತ್ತಿದೆ. ರೋಗದ ನಿರ್ಮೂಲನೆಗಾಗಿ ಪಶುಪಾಲನಾ, ಪಶುವೈದ್ಯಕೀಯ ಸೇವಾ ಇಲಾಖೆಯೊಂದಿಗೆ ವಿವಿಧ ಇಲಾಖೆಗಳ ಸಹಕಾರ ಅಗತ್ಯವಾಗಿದೆ. ಇತರೆ ಇಲಾಖೆಗಳು ಪಶುಪಾಲನಾ ಇಲಾಖೆಯೊಂದಿಗೆ ಕೈಜೋಡಿಸಿ ಅಭಿಯಾನ ಯಶಸ್ವಿಗೊಳಿಸಲು ಸಹಕರಿಸಬೇಕೆಂದರು.

ಲಸಿಕಾ ಅಭಿಯಾನದಲ್ಲಿ ಅರ್ಹವಿರುವ ಜಾನುವಾರುಗಳಿಗೆ ಶೇ.100ರಷ್ಟು ಲಸಿಕೆ ಹಾಕುವ ಕಾರ್ಯ ನಿಗಧಿ ಪಡಿಸಿದ ಅವಧಿಯಲ್ಲಿ ಪೂರ್ಣಗೊಳ್ಳಿಸಲು ಅಧಿಕಾರಿಗಳು ಸನ್ನದ್ದರಾಗಿಬೇಕೆ ಎಂದರು.

ಪಶುವೈದ್ಯಕೀಯ ಸೇವಾ ಇಲಾಖೆ ಉಪನಿರ್ದೇಶಕ ಡಾ. ವಯೋಗಿ ಬ.ಯಲಿ ಮಾತನಾಡಿ, ಏ.23ರಿಂದ ಮೇ.22ರವರೆಗೆ ಕಾಲು ಬಾಯಿ ಲಸಿಕಾ ಕಾರ್ಯಕ್ರಮ ಜರುಗಲಿದೆ. ಲಸಿಕಾ ಅಭಿಯಾನದಲ್ಲಿ ಇಲಾಖೆ ಎಲ್ಲ ಅಧಿಕಾರಿ, ಸಿಬ್ಬಂದಿಗಳು ಮನೆ ಬಾಗಿಲಿಗೆ ಹೋಗಿ ಕಾಲುಬಾಯಿ ಲಸಿಕೆ ಹಾಕುವ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದರು.

ಕಡ್ಡಾಯವಾಗಿ ಲಸಿಕೆ ಹಾಕಿಸಿ

ಕಾಲುಬಾಯಿ ರೋಗವನ್ನು ನಿರ್ಮೂಲನೆ ಮಾಡುವ ನಿಟ್ಟಿನಲ್ಲಿ ಕರ್ನಾಟಕ ರಾಜ್ಯವು ಮುಂಚೂಣಿಯಲ್ಲಿದ್ದು, ಲಸಿಕಾ ಕಾರ್ಯಕ್ರಮದಲ್ಲಿ ಎಲ್ಲ ರೈತಾಪಿ ಜನರು ತಮ್ಮಲ್ಲಿರುವ ಎಲ್ಲ ಜಾನುವಾರುಗಳಿಗೆ (ದನ ಮತ್ತು ಎಮ್ಮೆಗಳಿಗೆ) ಕಡ್ಡಾಯವಾಗಿ ಲಸಿಕೆ ಹಾಕಿಸಿಕೊಂಡು ರಾಜ್ಯದಿಂದ ಕಾಲುಬಾಯಿ ರೋಗ ಸಂಪೂರ್ಣವಾಗಿ ನಿರ್ಮೂಲನೆ ಮಾಡಲು ಸಹಕರಿಸಬೇಕೆಂದು ಮನವಿ ಮಾಡಿಕೊಂಡರು.

171 ತಂಡ ರಚನೆ: ಪಶುಪಾಲನಾ ಇಲಾಖೆಯ ಹಾಗೂ ಇಲಾಖೇತರ ಲಸಿಕೆದಾರರು ಒಳಗೊಂಡು ಒಟ್ಟು 171 ತಂಡ ರಚಿಸಲಾಗಿರುತ್ತದೆ. ಪ್ರತಿ ತಾಲೂಕಿನಲ್ಲಿ ಲಸಿಕಾ ವೇಳಾಪಟ್ಟಿ ಮತ್ತು ಜಾನುವಾರು ಹೊಂದಿರುವ ರೈತರ ಮಾಹಿತಿ ತಯಾರಿಸಲಾಗಿದೆ. ಪ್ರತಿ ಜಾನುವಾರಿಗೆ ಒಂದರಂತೆ ಸೀರಿಂಜ್ ಉಪಯೋಗಿಸಿ ಲಸಿಕೆ ನೀಡಲಿದ್ದಾರೆ ಎಂಬ ಮಾಹಿತಿ ವಿವರಿಸಿದರು.

ಜಿಲ್ಲೆಯಲ್ಲಿ ಈಗಾಗಲೇ 3,18,550 ಡೋಸ್ ಲಸಿಕೆ ದಾಸ್ತಾನಿದ್ದು, ಈ ಲಸಿಕೆ ತಾಲೂಕಿನಲ್ಲಿರುವ ಜಾನುವಾರುಗಳ ಸಂಖ್ಯೆಗೆ ಅನುಗುಣವಾಗಿ ವಿಂಗಡಿಸಿ ಮರು ಹಂಚಿಕೆ ಮಾಡಲಾಗಿದೆ ಎಂದರು.

ಸೀರೋಮಾನಿಟರಿಂಗ ಮಾಡಲು ಹಾನಗಲ್ ತಾಲೂಕಿನ ಶ್ಯಾಡಗುಪ್ಪಿ ಮತ್ತು ಶಂಕ್ರಿಕೊಪ್ಪ, ಹಿರೇಕೆರೂರ ತಾಲೂಕಿನ ವಡೇನಪುರ, ಸವಣೂರ ತಾಲೂಕಿನ ಕಡಕೋಳ ಗ್ರಾಮಗಳಿಂದ ಮಾದರಿ ತಪಾಸಣೆಗೆ ಸಲ್ಲಿಸಲಾಗುತ್ತದೆ. ಜಿಲ್ಲೆಗೆ ಸರಬರಾಜಾದಂತಹ ಪೋಸ್ಟರ್ಸ್, ಬ್ಯಾನರ್ಸ್‌ಗಳನ್ನು ಹಾಗೂ ವ್ಯತಿರಿಕ್ತ ಪರಿಣಾಮಗಳ ನಿರ್ವಹಣೆಗೆ ಅವಶ್ಯವಿರುವ ತುರ್ತು ಔಷಧಿ ರಾಸಾಯನಿಕ ಹಂಚಿಕೆ ಮಾಡಿ ಲಸಿಕಾ ಕಾರ್ಯಕ್ರಮ ಕೈಗೊಂಡಿದೆ ಎಂದರು.

ಜಿಪಂ ಮುಖ್ಯ ಕಾರ್ಯನಿರ್ವಹಣಾಧಿಕಾರಿ ರುಚಿ ಬಿಂದಲ್, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಲಕ್ಷ್ಮಣ ಶಿರಕೋಳ, ಯೋಜನಾ ನಿರ್ದೇಶಕ ಚಂದ್ರಪ್ಪ, ಕಾರ್ಯಕ್ರಮ ಜಿಲ್ಲಾ ಉಸ್ತುವಾರಿ ಅಧಿಕಾರಿ ಡಾ.ಕಿರಣ ಕೊಪ್ಪದ, ಎಲ್ಲ ತಾಲ್ಲೂಕಿನ ಪಶು ಆಸ್ಪತ್ರೆ ಮುಖ್ಯ ಪಶುವೈದ್ಯಾಧಿಕಾರಿಗಳು, ಸ್ಥಳೀಯ ಸಂಸ್ಥೆಗಳ ಮುಖ್ಯಾಧಿಕಾರಿಗಳು, ತಾಪಂ ಕಾರ್ಯನಿರ್ವಾಹಕ ಅಧಿಕಾರಿಗಳು, ಹಾವೇರಿ ಹಾಲು ಒಕ್ಕೂಟದ, ಜಿಲ್ಲಾ ಪಾಲಿ ಕ್ಲಿನಿಕ್ ಅಧಿಕಾರಿಗಳು ಉಪಸ್ಥಿತರಿದ್ದರು.

ಕುಡಿಯುವ ನೀರಿಗಾಗಿ ಅಲೆದಾಟ

ಹಾನಗಲ್ಲ: ಗ್ರಾಮೀಣ ಕುಡಿಯುವ ನೀರಿಗಾಗಿ ಖಾಸಗಿ ಕೊಳವೆ ಬಾವಿಗಳತ್ತ ಮುಖ ಮಾಡಿರುವ ಗ್ರಾಪಂಗಳು ಈಗಾಗಲೇ ಹಾನಗಲ್ಲ ತಾಲೂಕಿನಲ್ಲಿ 8ಗ್ರಾಪಂ, 10ಗ್ರಾಮಗಳಿಗೆ 11ಕೊಳವೆ ಬಾವಿ ಕುಡಿಯುವ ನೀರಿಗಾಗಿ ಬಾಡಿಗೆ ಪಡೆದಿವೆ ಎಂದು ಗ್ರೇಡ್-2 ತಹಶೀಲ್ದಾರ್ ವಿಠಲ ಚೌಗುಲಾ ಹೇಳಿದರು.

ಇತ್ತೀಚೆಗೆ ತಹಶೀಲ್ದಾರ್ ಕಚೇರಿ ಸಭಾಂಗಣದಲ್ಲಿ ನಡೆದ ಕುಡಿಯುವ ನೀರು ನಿರ್ವಹಣಾ ಯೋಜನಾ ಸಭೆಯಲ್ಲಿ ವಿವಿಧ ಇಲಾಖೆಗಳ ಅಧಿಕಾರಿಗಳು, 42ಗ್ರಾಪಂ ಅಭಿವೃದ್ಧಿ ಅಧಿಕಾರಿಗಳು, ಕಂದಾಯ ಇಲಾಖೆ ಗ್ರಾಮಾಡಳಿತಾಧಿಕಾರಿಗಳ ಹಲವು ವಿಷಯ ಚರ್ಚಿಸಲಾಯಿತು.

ಹಾನಗಲ್ಲ ತಾಲೂಕಿನಲ್ಲಿ 166 ಗ್ರಾಮಗಳು, 42 ಗ್ರಾಪಂ ಪಂಚಾಯಿತಿಗಳಿವೆ. ಅಂತರ್ಜಲ ಕೊರತೆಯಿಂದ ಪ್ರತಿ ವರ್ಷ ಗ್ರಾಮಗಳಿಗೆ ಕುಡಿಯುವ ನೀರು ಪೂರೈಸಲು ಖಾಸಗಿ ಕೊಳವೆ ಬಾವಿಗಳನ್ನು ಬಾಡಿಗೆ ಆಧಾರದಲ್ಲಿ ಪಡೆಯುವ ಅನಿವಾರ್ಯತೆ ಇದ್ದೇ ಇದೆ. ಪ್ರಸ್ತುತ ವರ್ಷ ಹುಲಗಿನಕೊಪ್ಪ, ಗಿರಿಸಿನಕೊಪ್ಪ, ಗುರುರಾಯಪಟ್ಟಣ, ಶಂಕ್ರ ಕೊಪ್ಪ, ಗೊಂದಿ, ಹಿರೇಕಾಂಸಿ, ನರೇಗಲ್ಲ, ಚಿಕ್ಕೇರಿಹೊಸಳ್ಳಿ, ಹೊಂಕಣ, ಬೊಮ್ಮನಹಳ್ಳಿ ಹೀಗೆ10 ಗ್ರಾಮಗಳಿಗೆ ಮಾರ್ಚ್ ತಿಂಗಳ ಮೊದಲ ವಾರದಿಂದಲೇ ಆದ್ಯತೆ ಮೇರೆಗೆ ಕೊಳವೆ ಬಾವಿಗಳು ರೈತರಿಂದ ಬಾಡಿಗೆ ಪಡೆಯಲಾಗಿದೆ.

ಈಗಾಗಲೇ ತಾಲೂಕಿನಲ್ಲಿರುವ ಚಿಕ್ಕಾಂಶಿ ಹೊಸೂರು, ಕೂಸನೂರು, ಉಪ್ಪಣಸಿ, ಕೂಡಲದಲ್ಲಿರುವ 4 ಬಹುಗ್ರಾಮ ಕುಡಿಯುವ ನೀರಿನ ಘಟಕಗಳಲ್ಲಿ ತಾಂತ್ರಿಕ ಕಾರಣಕ್ಕೆ ಕೂಸನೂರ ಹಾಗೂ ಕೂಡಲ ಘಟಕಗಳು ಕಾರ್ಯ ನಿರ್ವಹಿಸುತ್ತಿಲ್ಲ, ನೆಲ್ಲಿ ಬೀಡದಲ್ಲಿ ಬಾಡಿಗೆ ತೆಗೆದುಕೊಂಡ ಕೊಳವೆ ಬಾವಿಯಲ್ಲೂ ನೀರು ಖಾಲಿಯಾಗಿದೆ. ಪರ್ಯಾಯ ವ್ಯವಸ್ಥೆಗೆ ಅಧಿಕಾರಿಗಳು ಹರಸಾಹಸಕ್ಕೆ ಮುಂದಾಗಿದ್ದಾರೆ. ಬಾದಮಗಟ್ಟಿಯಲ್ಲಿ ಕೊಳವೆಬಾವಿಯಿಂದ ಶುದ್ಧ ನೀರು ಬರುತ್ತಿಲ್ಲ, ಇಂತಹ ಕೊಳವೆ ಬಾವಿಗಳಿಂದ ನೀರು ಪೂರೈಕೆ ನಿಲ್ಲಿಸಿ, ಬೇರೆ ಕೊಳವೆಬಾವಿಗಳಿಗೆ ಶೋಧ ನಡೆದಿದೆ.

ದೊಡ್ಡ ತಾಲೂಕಿಗೆ ಕುಡಿಯುವ ನೀರಿನ ದೊಡ್ಡ ಸಮಸ್ಯೆ ಉಂಟಾಗುವ ಮೊದಲು ಪೂರ್ವಭಾವಿ ಯೋಜನೆ ರೂಪಿಸಿಕೊಂಡು ಕಾರ್ಯರೂಪಕ್ಕೆ ತರುವ ಅಗತ್ಯವಿದೆ. ಸಕಾಲಿಕವಾದ ನಿರ್ವಹಣೆಯೇ ಅತ್ಯಂತ ಮುಖ್ಯ ಎಂದರು.

ಗ್ರೇಡ್-2 ತಹಶೀಲ್ದಾರ್ ವಿಠಲ ಚೌಗುಲಾ, ನೂತನ ತಾಪಂ ಕಾರ್ಯನಿರ್ವಾಹಕ ಅಧಿಕಾರಿ, ಜಗದೀಶ ಕಮ್ಮಾರ, ಗ್ರಾಮೀಣ ಕುಡಿಯುವ ನೀರು ನೈರ್ಮಲ್ಯ ಇಲಾಖೆ ಕಾರ್ಯನಿರ್ವಾಹಕ ಅಧಿಕಾರಿ ಚಂದ್ರಶೇಖರ ನೆಗಳೂರ, ಪರಶುರಾಮ ಪೂಜಾರ, ಪುರಸಭೆ ಮುಖ್ಯಾಧಿಕಾರಿ ವೈ.ಕೆ.ಜಗದೀಶ ಹಾಗೂ ವಿವಿಧ ಅಧಿಕಾರಿಗಳು ಸಭೆಯಲ್ಲಿ ಇದರು.



ರಸಗೊಬ್ಬರದ ಕೊರತೆ ಇಲ್ಲ: ಮಲ್ಲಿಕಾರ್ಜುನ

ಹಾವೇರಿ: ಜಿಲ್ಲೆಯಲ್ಲಿರುವ ರಸಗೊಬ್ಬರ ಮತ್ತು ಬಿತ್ತನೆ ಬೀಜ ಮಾರಾಟಗಾರರು ತಮ್ಮ ಮಳಿಗೆ ಮುಂದೆ ಕಡ್ಡಾಯವಾಗಿ ದರಪಟ್ಟಿ ರೈತರಿಗೆ ಕಾಣುವಂತೆ ಪ್ರದರ್ಶಿಸಬೇಕು. ರೈತರ ಎಫ್‌ಐಡಿ ಆಧಾರಿತ ಜಮೀನಿನ ವಿಸ್ತೀರ್ಣದ ಮೇಲೆ ಗೊಬ್ಬರ ಮಾರಾಟ ಮಾಡಬೇಕು ಎಂದು ಜಿಲ್ಲಾಧಿಕಾರಿ ಡಾ.ವಿಜಯಮಹಾಂತೇಶ ದಾನಮ್ಮನವರ ಸೂಚಿಸಿದರು.



ಇಲ್ಲಿನ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ 2026ರ ಮುಂಗಾರು ಹಂಗಾಮಿನಲ್ಲಿ ಬಿತ್ತನೆ ಬೀಜ, ರಸಗೊಬ್ಬರ ಸರಬರಾಜು, ದಾಸ್ತಾನು, ವಿತರಣೆ ಕುರಿತು ನಡೆದ ಸಭೆಯಲ್ಲಿ ಮಾತನಾಡಿ, ನಿಗದಿಪಡಿಸಿದ ದರಕ್ಕಿಂತ ಹೆಚ್ಚಿನ ದರಕ್ಕೆ ಮಾರಾಟ ಮಾಡುವುದು, ಬಿಲ್ ನೀಡದಿರುವುದು, ಅವಧಿ ಮೀರಿದ ಪರಿಕರ ವಿತರಣೆ ಮಾಡುವುದು, ರಸಗೊಬ್ಬರ ಅಕ್ರಮವಾಗಿ ದಾಸ್ತಾನು ಮಾಡಿ ಕೃತಕ ಅಭಾವ ಸೃಷ್ಟಿ ಮಾಡುವುದು ಕಂಡು ಬಂದಲ್ಲಿ ಅಂತಹ ಮಾರಾಟಗಾರರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳುವುದು ಎಂದು ಎಚ್ಚರಿಸಿದರು.

ಮಾರಾಟಗಾರರುಯೂರಿಯಾರಸಗೊಬ್ಬರ ವಿತರಣೆ ಮಾಡುವಾಗ ಕಡ್ಡಾಯವಾಗಿ ಪಾಯಿಂಟ್ ಆಫ್ ಸೇಲ್ ಯಂತ್ರ ಮತ್ತು ಕೆ-ಕಿಸಾನ್ ತಂತ್ರಾಂಶದ ಮೂಲಕ ರೈತರ ಎಫ್‌ಐಡಿ ಆಧಾರಿತ ಜಮೀನಿನ ವಿಸ್ತೀರ್ಣದ ಮೇಲೆ ಮಾರಾಟ ಮಾಡಬೇಕು. ಜಿಲ್ಲೆಯ ರಸಗೊಬ್ಬರ ಮಾರಾಟಗಾರರು ಈ ಕುರಿತು ರೈತರಿಗೆ ಸೂಕ್ತ ತಿಳುವಳಿಕೆ ನೀಡಿ ಕಡ್ಡಾಯವಾಗಿ ಆಧಾರ ಸಂಖ್ಯೆಯನ್ನು ಪಡೆದು ರಸಗೊಬ್ಬರ ವಿತರಣೆ ಮಾಡಲು ಸೂಚಿಸಿದರು.

ಜಂಟಿ ಕೃಷಿ ನಿರ್ದೇಶಕ ಕೆ.ಮಲ್ಲಿಕಾರ್ಜುನ ಮಾತನಾಡಿ, ಜಿಲ್ಲೆಯಲ್ಲಿ ಮುಂಗಾರು ಹಂಗಾಮಿನಲ್ಲಿ 3.28 ಲಕ್ಷ ಹೆಕ್ಟರ್ ಬಿತ್ತನೆ ಗುರಿ ಹೊಂದಿದೆ. ಗೋವಿನ ಜೋಳ, ಸೋಯಾ ಅವರೆ, ಶೇಂಗಾ, ಇತರೆ ಬೆಳೆಗಳ ವಿತರಣೆಗಾಗಿ 19 ರೈತ ಸಂಪರ್ಕ ಕೇಂದ್ರಗಳ ಜತೆಗೆ 23 ಹೆಚ್ಚುವರಿ ಬೀಜ ಮಾರಾಟ ಕೇಂದ್ರಗಳ ಮೂಲಕ ಬೀಜ ವಿತರಣೆಗೆ ವ್ಯವಸ್ಥೆ ಕಲ್ಪಿಸಲಾಗಿದೆ ಎಂದರು.

ಪ್ರಸಕ್ತ 2026-27ನೇ ಸಾಲಿನ ಮುಂಗಾರು ಬೆಳೆಗೆ ವಿವಿಧ ವಿಧದ ಒಟ್ಟು 1,41,875 ಮೆ.ಟನ್ ರಸಗೊಬ್ಬರಬೇಡಿಕೆಯಿದ್ದು, ಜಿಲ್ಲೆಗೆ ಆವಶ್ಯಕವಿರುವ ರಸಗೊಬ್ಬರ ವಿವಿಧ ಸಂಸ್ಥೆಗಳಿಂದ ಅವಶ್ಯಕತೆಗೆ ತಕ್ಕಂತೆ ರಸಗೊಬ್ಬರ ಹಂತ-ಹಂತವಾಗಿ ಸರಬರಾಜಾಗುತ್ತಿದೆ. ರಸಗೊಬ್ಬರದ ಯಾವುದೇ ಕೊರತೆ ಇಲ್ಲ ಎಂದರು.

ರೈತರು ಡಿಎಪಿ, ಯೂರಿಯಾ ರಸಗೊಬ್ಬರಕ್ಕೆ ಪರ್ಯಾಯವಾಗಿ ಮಾರುಕಟ್ಟೆಯಲ್ಲಿ ದೊರೆಯುವ 500 ಮಿಲಿ ಬಾಟಲ್ ನ್ಯಾನೊ ಡಿಎಪಿ ಮತ್ತು ನ್ಯಾನೊ ಯುರಿಯಾ ಪ್ರತಿ ಎಕರೆಗೆ ಬಳಸಬಹುದಾಗಿರುತ್ತದೆ. ಬಿತ್ತನೆ ವೇಳೆ 4 ಎಂಎಲ್ ಪ್ರತಿ ಕೆಜಿಗೆ ನ್ಯಾನೊ ಡಿಎಪಿಯಿಂದ ಉಪಚರಿಸಬೇಕು. 15ರಿಂದ 20ದಿನ ಇರುವಾಗ ಪ್ರತಿ ಎಕರೆಗೆ 500 ಎಂಎಲ್ ನ್ಯಾನೊ ಡಿಎಪಿಯಿಂದ ಸಿಂಪರಣೆ ಮಾಡಬೇಕು ಎಂದರು.

ಕೃಷಿ ಹಾಗೂ ತೋಟಗಾರಿಕೆ ಇಲಾಖೆಯ ಅಧಿಕಾರಿಗಳು, ರಸಗೊಬ್ಬರ, ಬಿತ್ತನೆ ಬೀಜ ಮಾರಾಟಗಾರರು ಸಭೆಯಲ್ಲಿ ಹಾಜರಿದ್ದರು.

ಹೈನುಗಾರರ ಬದುಕಿಗೆ ವಿಮೆ ಬಹುದೊಡ್ಡ ಆಸರೆ

ಬ್ಯಾಡಗಿ: ಹಸು ಅಥವಾ ಎಮ್ಮೆ ಆಕಸ್ಮಿಕವಾಗಿ ಮರಣ ಹೊಂದಿದಾಗ, ರೈತ ಕುಟುಂಬಗಳು ಆರ್ಥಿಕ ಸಂಕಷ್ಟಕ್ಕೆ ಸಿಲುಕುವುದು ಸಾಮಾನ್ಯವಾಗಿದೆ. ಇಂತಹ ಸಂದರ್ಭಗಳಲ್ಲಿ 'ರಾಸು ವಿಮೆ' ರೈತರಿಗೆ ಬಲವಾದ ಆರ್ಥಿಕ ಭದ್ರತೆಯನ್ನು ಒದಗಿಸುವ ಮಹತ್ವದ ಯೋಜನೆಯಾಗಿದೆ ಎಂದು ಹಾವೇಮೂಲ ನಿರ್ದೇಶಕ ಪ್ರಕಾಶ್ ಬನ್ನಿಹಟ್ಟಿ ಹೇಳಿದರು.

ಇಂದು ತಾಲೂಕಿನ ಮುತ್ತೂರು ಹಾಲು ಉತ್ಪಾದಕ ಸಹಕಾರ ಸಂಘದಲ್ಲಿ ಹೈನುಗಾರರ ಹಿತದೃಷ್ಟಿಯಿಂದ ರಾಸು ವಿಮೆ ಯೋಜನೆಗೆ ಚಾಲನೆ ನೀಡಿ ಮಾತನಾಡಿದರು.

ಈ ಯೋಜನೆಯ ಮೂಲಕ ನಷ್ಟಕ್ಕೆ ಪರಿಹಾರ ದೊರೆಯುವುದರ ಜೊತೆಗೆ, ರೈತರು ಮತ್ತೆ ಹೊಸ ರಾಸು ಖರೀದಿಸಿ ಹೈನುಗಾರಿಕೆಯನ್ನು ನಿರಂತರವಾಗಿ ಮುಂದುವರಿಸಲು ಸಹಾಯವಾಗುತ್ತದೆ. ರೈತರ ಬದುಕನ್ನು ಬಲಪಡಿಸುವ ದಿಟ್ಟ ಸಂಕಲ್ಪದೊಂದಿಗೆ ನಾವು ಕೆಲಸ ಮಾಡುತ್ತಿದ್ದು, ಸದಸ್ಯರ ಹಿತಾಸಕ್ತಿಯೇ ನಮ್ಮ ಸಂಘದ ಪ್ರಧಾನ ಧ್ಯೇಯವಾಗಿದೆ ಈ ಹಿನ್ನಲೆಯಲ್ಲಿ, ಮರಣ ಹೊಂದಿದ ಸದಸ್ಯರ ಕುಟುಂಬಗಳಿಗೆ ಕಲ್ಯಾಣ ನಿಧಿಯ ಚೆಕ್‌ಗಳನ್ನು ವಿತರಿಸಲಾಯಿತು ಹಾಗೂ ಹೈನುಗಾರರಿಗೆ ರಾಸು ವಿಮೆಯ ಸೌಲಭ್ಯವನ್ನು ಒದಗಿಸಲಾಯಿತು ಎಂದರು.



ಈ ವೇಳೆ ಸಂಘದ ಅಧ್ಯಕ್ಷ ನಾಗೇಂದ್ರಪ್ಪ ಜಿಗಳಿಕೊಪ್ಪದವರು, ಆಡಳಿತ ಮಂಡಳಿಯ ಸದಸ್ಯರು, ಒಕ್ಕೂಟದ ಅಧಿಕಾರಿಗಳಾದ ಡಾ. ಶರಣಪ್ಪ ಹಾಗೂ ವಿಸ್ತರಣಾ ಅಧಿಕಾರಿಗಳಾದ ಅಜಯಕುಮಾರ್ ರಿತ್ತಿ ಹಾಗೂ ವ್ಯಾಪಾರಸ್ಥ ರಮೇಶ್ ಮೋಟೆಬೆನ್ನೂರು ಉಪಸ್ಥಿತರಿದ್ದರು.

ಕಲಕೇರಿ ತಾಂಡಾದ ಅಭಿವೃದ್ಧಿ ಕಾಮಗಾರಿಗೆ ಭೂಮಿಪೂಜೆ

ಹಾನಗಲ್ಲ: ರಾಜ್ಯ ಸರಕಾರ ಜನತೆಯ ನೆಮ್ಮದಿ ಬದುಕಿಗೆ ಅಗತ್ಯ ಮೂಲಭೂತಸೌಕರ್ಯ ಒದಗಿಸಲು ಗಮನ ಹರಿಸಿದ್ದು, ಕಳೆದ ವರ್ಷ ಹಾನಗಲ್ ತಾಲೂಕಿಗೆ 50 ಕೋಟಿ ರೂ. ಅನುದಾನ ಒದಗಿಸಿದೆ. ಪ್ರಸಕ್ತ ವರ್ಷದಲ್ಲಿ 25 ಕೋಟಿ ರೂ. ಬಿಡುಗಡೆಯಾಗಲಿದೆ ಎಂದು ಶಾಸಕ ಶ್ರೀನಿವಾಸ ಮಾನೆ ಹೇಳಿದರು.

ತಾಲೂಕಿನ ಕಲಕೇರಿ ತಾಂಡಾ ಗ್ರಾಮದಲ್ಲಿ 2025-26ನೇ ಸಾಲಿನ ಮುಖ್ಯಮಂತ್ರಿಗಳ ಮೂಲಸೌಕರ್ಯ ಅಭಿವೃದ್ಧಿ ಕಾರ್ಯಕ್ರಮದಡಿ 20 ಲಕ್ಷ ರೂ. ವೆಚ್ಚದಲ್ಲಿ ಸಿಸಿ ರಸ್ತೆ ನಿರ್ಮಾಣ ಸೇರಿದಂತೆ ನಾನಾ ಅಭಿವೃದ್ಧಿ ಕಾಮಗಾರಿಗಳಿಗೆ ಭೂಮಿ ಪೂಜೆ ಸಲ್ಲಿಸಿ ಮಾತನಾಡಿ, 50 ಕೋಟಿ ರೂ. ಅನುದಾನ ಬಿಡುಗಡೆಯಾದ ಸಂದರ್ಭದಲ್ಲಿ ಸ್ಥಳೀಯವಾಗಿ ಅಭಿಪ್ರಾಯ ಸಂಗ್ರಹಿಸಿ ಅಭಿವೃದ್ಧಿ ಕಾಮಗಾರಿ ಆದ್ಯತೆ ಮೇರೆಗೆ ಕೈಗೊಳ್ಳಲಾಗಿತ್ತು. 25 ಕೋಟಿ ರೂ. ಬಿಡುಗಡೆಗೊಂಡ ಬಳಿಕ ಅದೇ ಮಾನದಂಡದಡಿ ಸ್ಥಳೀಯರ ಅಭಿಪ್ರಾಯ ಆಧರಿಸಿಯೇ ಅವಶ್ಯ ಕಾಮಗಾರಿ ಕೈಗೊಳ್ಳಲಾಗುವುದು ಎಂದು ತಿಳಿಸಿದ ಅವರು ದೊಡ್ಡಣ್ಣನ ಸ್ಥಾನದಲ್ಲಿರುವ ಕೇಂದ್ರ ಸರಕಾರ ಕರ್ನಾಟಕದ ಬಗ್ಗೆ ಮಲತಾಯಿ ಧೋರಣೆ ಅನುಸರಿಸುತ್ತಿದೆ ಎಂದರು.



ಪ್ರತಿ ವಿಚಾರಗಳಲ್ಲಿಯೂ ಕೇಂದ್ರ ಸರಕಾರ ರಾಜ್ಯಕ್ಕೆ ಅನ್ಯಾಯ ಮಾಡುತ್ತಿದೆ. ಒಕ್ಕೂಟ ವ್ಯವಸ್ಥೆಯಲ್ಲಿ ನಾವಿದ್ದು, ಕೇಂದ್ರ ಸರಕಾರ ಎಲ್ಲ ರಾಜ್ಯಗಳಿಗೂ ನ್ಯಾಯ ಒದಗಿಸಬೇಕಿದೆ. ಆದರೆ ಕೇಂದ್ರ ನೀತಿ ಒಂದು ಕಣ್ಣಿಗೆ ಸುಣ್ಣ, ಇನ್ನೊಂದು ಕಣ್ಣಿಗೆ ಬೆಣ್ಣೆ ಎನ್ನುವಂತಿದೆ. ತೆರಿಗೆ ಪಾಲು ಹಂಚಿಕೆಯಲ್ಲಿ ಉತ್ತರ ಭಾರತದ ರಾಜ್ಯಗಳು ಯತೇಚ್ಛವಾಗಿ ಅನುದಾನ ಪಡೆದುಕೊಳ್ಳುತ್ತಿವೆ ಎಂದರು.

ಜಿಪಂ ಮಾಜಿ ಸದಸ್ಯರಾದ ಮಹದೇವಪ್ಪ ಬಾಗಸರ, ಟಾಕನಗೌಡ ಪಾಟೀಲ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಂಜು ಗೊರಣ್ಣನವರ, ಮುಖಂಡರಾದ ಪ್ರಕಾಶ ಬಣಕಾರ, ಕರಿಯಪ್ಪ ಬಣಕಾರ, ಚನ್ನಪ್ಪ ಕರೆಕ್ಯಾತನಹಳ್ಳಿ, ಚಂದ್ರಪ್ಪ ದೊಡ್ಡಮನಿ, ಮಹೇಶ ಬಣಕಾರ, ಸಣ್ಣಪ್ಪ ಬಣಕಾರ, ಟಾಕರೆಪ್ಪ ಹೊಸೂರ, ಸುಬ್ಬಣ್ಣ ಮಲ್ಲಿಗಾರ, ಫಕ್ಕೀರಪ್ಪ ಬಣಕಾರ ಸೇರಿದಂತೆ ಇನ್ನೂ ಹಲವರು ಇದ್ದರು.

ಕರಡಿಗಳ ಹಾವಳಿ: 3 ಜೇನು ಪೆಟ್ಟಿಗೆ ಹಾಳು

ಹಾನಗಲ್ಲ: ಕರಡಿಗಳ ಹಾವಳಿಯಿಂದ ರೈತನ ಜಮೀನಿನಲ್ಲಿದ್ದ ಮೂರು ಜೇನು ಪೆಟ್ಟಿಗೆ ಹಾಳಾಗಿರುವ ಘಟನೆ ಗುರುವಾರ ತಡರಾತ್ರಿ ಕ್ಯಾಸನೂರ ಗ್ರಾಮದ ರೈತನ ತೋಟವೊಂದರಲ್ಲಿ ನಡೆದಿದೆ.



ತಾಲೂಕಿನ ಕ್ಯಾಸನೂರ ಗ್ರಾಮದ ಸುಭಾನಗೌಡ್ರ ಪಾಟೀಲ ಎಂಬುವವರಿಗೆ ಸೇರಿದ್ದ ನಾಲ್ಕು ಎಕರೆ ಅಡಿಕೆ, ಬಾಳೆ ತೋಟದಲ್ಲಿ 10 ಜೇನು ಪೆಟ್ಟಿಗೆವಿದ್ದು ಅದರಲ್ಲಿ ಮೂರು ಜೇನು ಪೆಟ್ಟಿಗೆಯಲ್ಲಿನ ಜೇನನ್ನು ಸವಿದು ಹಾಳು ಮಾಡಿ ಹೋಗಿವೆ.

ಕ್ಯಾಸನೂರ, ಬಾಳಿಹಳ್ಳಿ, ಶಿರಗೋಡ, ಹನುಮನಕೊಪ್ಪ ಗ್ರಾಮಗಳಿಗೆ ಹೊಂದಿಕೊಂಡು ಸುತ್ತಲೂ ಅರಣ್ಯ ಪ್ರದೇಶವಿದ್ದು, ಆಗಾಗ್ಗೆ ಸುತ್ತಲಿನ ರೈತರ ಜಮೀನುಗಳಿಗೆ ಕರಡಿಗಳು ಲಗ್ಗೆ ಇಟ್ಟಿರುವ ಉದಾಹರಣೆಗಳಿವೆ.

ಒಟ್ಟು ಮೂರು ಕರಡಿಗಳು ರೈತರಿಗೆ ಪ್ರತ್ಯಕ್ಷವಾಗಿ ಕಾಣಿಸಿರುವ ಬಗ್ಗೆ ತಿಳಿದು ಬಂದಿವೆ. ರಾತ್ರಿ ಹೊತ್ತು ರೈತರು ಜಮೀನುಗಳಿಗೆ ಬೋರ್ವೆಲ್‌ಗಳಿಗೆ ನೀರು ಬಿಡಲು ತೆರಳಲು ಹಿಂದೇಟು ಹಾಕುವಂತ ಪರಿಸ್ಥಿತಿ ಬಂದಿದೆ.

ಕಳೆದ ವಾರವು ಸಹಿತ ಪಾಟೀಲವರ ಇನ್ನೊಂದು ಒಂದುವರೆ ಎಕರೆ ತೋಟದ ಜಮೀನಿಗೂ ಮೂರು ಕರಡಿಗಳು ಎರಡು ಜೇನು ಪೆಟ್ಟಿಗೆ ಹಾಳು ಮಾಡಿದ ಬೆನ್ನಲ್ಲೇ ಇನ್ನೊಂದು ತೋಟದಲ್ಲಿ ಗುರುವಾರ ಮೂರು ಜೇನು ಪೆಟ್ಟಿಗೆ ಹಾಳು ಮಾಡಿರುವ ಬಗ್ಗೆ ತಿಳಿದು ಬಂದಿದೆ.

ಪೋಕ್ಸೋ ಕಾಯ್ದೆ ಜಾಗೃತಿ ಅಗತ್ಯ

ಹಾವೇರಿ: ಜಿಲ್ಲೆಯಲ್ಲಿ ಬಾಲ್ಯವಿವಾಹ ಹಾಗೂ ಪೋಕ್ಸೋ ಪ್ರಕರಣ ತಡೆಗೆ ಎಲ್ಲರೂ ತಂಡವಾಗಿ ಜವಾಬ್ದಾರಿಯಿಂದ ಕಾರ್ಯನಿರ್ವಹಿಸಿ ಬಾಲ್ಯವಿವಾಹ ನಿಷೇಧ ಕಾಯ್ದೆ ಹಾಗೂ ಪೋಕ್ಸೋ ಕಾಯ್ದೆಗಳ ಶಿಕ್ಷೆ ಕುರಿತು ಗ್ರಾಮೀಣ ಭಾಗದಲ್ಲಿ ಸಾರ್ವಜನಿಕರಿಗೆ ಹೆಚ್ಚಿನ ಜಾಗೃತಿ ಮೂಡಿಸಬೇಕು ಎಂದು ಜಿಲ್ಲಾಧಿಕಾರಿ ಡಾ.ವಿಜಯಮಹಾಂತೇಶ ದಾನಮ್ಮನವರ ಸೂಚಿಸಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಶನಿವಾರ 2025-26ನೇ ಸಾಲಿನ ಜಿಲ್ಲಾ ಮಕ್ಕಳ ರಕ್ಷಣಾ ಸಮಿತಿ ಸಭೆ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಹಾಗೂ ಮಕ್ಕಳ ಸಹಾಯವಾಣಿ ಪ್ರಗತಿ ಪರಿಶೀಲನಾ ಸಮಿತಿ ಸಭೆ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಜಯಶ್ರೀ ಪಾಟೀಲ ಮಾತನಾಡಿ, 2025-26ನೇ ಸಾಲಿನಲ್ಲಿ ಒಟ್ಟು 46 ಬಾಲ್ಯ ವಿವಾಹ ಪ್ರಕರಣಗಳನ್ನು ತಡೆಯಲಾಗಿದೆ. ಈ ಪೈಕಿ 10 ಜನ ಬಾಲಕಿಯರು ವಿದ್ಯಾಭ್ಯಾಸ ಮುಂದುವರೆಸಿದ್ದಾರೆ ಹಾಗೂ 36 ಜನ ಬಾಲಕಿಯರು ಮನೆ ಕೆಲಸ, ಟೇಲರಿಂಗ್ ಮತ್ತು ಕರಕುಶಲ ತರಬೇತಿ ಪಡೆಯುತ್ತಿದ್ದಾರೆ. ಪೋಕ್ಸೋ ಪ್ರಕರಣದೊಂದಿಗೆ 28 ಬಾಲ್ಯವಿವಾಹಗಳು ನಡೆದಿವೆ, ಆರ್.ಸಿ.ಎಚ್. ವರದಿ ಅನುಸಾರ 42 ಬಾಲಗರ್ಭಿಣಿಯರ ಪ್ರಕರಣಗಳು ವರದಿಯಾಗಿವೆ. ಈ ಪೈಕಿ 34 ಪ್ರಕರಣಗಳಲ್ಲಿ ಎಫ್‌ಐಆರ್ ದಾಖಲಿಸಲಾಗಿದೆ. ಈ ಪೈಕಿ ನಾಲ್ಕು ಪ್ರಕರಣಗಳಲ್ಲಿ 18 ವರ್ಷ ಮೀರಿದ್ದಾರೆ. ಎಸ್.ಜೆ.ಪಿ.ಯು. ವರದಿ ಅನುಸಾರ 107 ಪೋಕ್ಸೋ ಪ್ರಕರಣಗಳು ವರದಿಯಾಗಿವೆ ಎಂದರು.

ಜಿಪಂ ಸಿಇಒ ರುಚಿ ಬಿಂದಲ್, ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಲಕ್ಷ್ಮಣ ಶಿರಕೋಳ ಮಾತನಾಡಿದರು. ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ ಅಧ್ಯಕ್ಷೆ ಗೀತಾ ಪಾಟೀಲ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕಿ ರೇವತಿ ಹೊಸಮಠ ಇತರರಿದ್ದರು.

ಸಮಾಧಾನ, ಶಾಂತಿಯಿಂದ ಸಮಾಜ ಬದಲಾವಣೆ ಸಾಧ್ಯ

ರಾಣೇಬೆನ್ನೂರ: ವಿಶ್ವ ಪರಿವರ್ತನೆಗಾಗಿ ಭೂಮಂಡಲದ ಮೇಲಿರುವ ಎಲ್ಲ ಮನುಜರು ಆಧ್ಯಾತ್ಮಿಕ ಜ್ಞಾನ ಹೊಂದಬೇಕು ಎಂದು ರಾಜಸ್ಥಾನದ ಅಬುರಾಜ್ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರಿಯ ವಿಶ್ವವಿದ್ಯಾಲಯದ ಪ್ರಧಾನ ಕೇಂದ್ರ ಸಂಯೋಜಕ ರಾಜಯೋಗಿ ಬ್ರಹ್ಮಾಕುಮಾರ ರಾಮನಾಥಜಿ ಹೇಳಿದರು.



ಇಲ್ಲಿನ ಮೃತ್ಯುಂಜಯ ನಗರದ ದೈವಜ್ಞ ಸಮುದಾಯ ಭವನದಲ್ಲಿ ಸ್ಥಳೀಯ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರಿಯ ವಿಶ್ವವಿದ್ಯಾಲಯದ ವತಿಯಿಂದ ನವ ದಶಕೋತ್ಸವದ ಸವಿನೆನಪಿಗಾಗಿ ಏರ್ಪಡಿಸಿದ್ದ ವಿಶ್ವ ಪರಿವರ್ತನೆಗಾಗಿ ಆಧ್ಯಾತ್ಮಿಕ ಜಾಗೃತಿ, ಸಂತ ಸಮ್ಮೇಳನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ವಿಶ್ವ ಸಮಾಜ ಬದಲಾಗಬೇಕು ಎಂದು ಎಲ್ಲರೂ ಹೇಳುತ್ತಾರೆ. ಅದು ನಮ್ಮಿಂದಲೇ, ನನ್ನಿಂದಲೇ ಆರಂಭವಾಗಬೇಕು.ಯಾರಲ್ಲೂ ಸಹ ಸಹನೆ, ತಾಳ್ಮೆ, ಸಮಾಧಾನ, ಶಾಂತಿ ಇಲ್ಲದಿರುವ ಕಾರಣದಿಂದಾಗಿ ಬದಲಾವಣೆ ತರಲು ಹೇಗೆ ಸಾಧ್ಯ ಎಂದು ಪ್ರಶ್ನಿಸಿದರು.

ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯವು ಮಹಿಳೆಯರಿಂದ ಮುನ್ನಡೆಸಲ್ಪಡುವ ಅಂತರರಾಷ್ಟ್ರೀಯ ಆಧ್ಯಾತ್ಮಿಕ ಸಂಸ್ಥೆಯಾಗಿದೆ. 1936ರಲ್ಲಿ 'ದಾದಾ ಲೇಖರಾಜ್' (ಬ್ರಹ್ಮ ಬಾಬಾ) ಅವರಿಂದ ಸ್ಥಾಪಿತವಾಗಿದೆ. ಈ ಸಂಸ್ಥೆಯು, ರಾಜಯೋಗ ಧ್ಯಾನದ ಮೂಲಕ ವ್ಯಕ್ತಿತ್ವ ವಿಕಸನ, ಶಾಂತಿ ಮತ್ತು ಆತ್ಮ ಸಾಕ್ಷಾತ್ಕಾರವನ್ನು ಬೋಧಿಸುತ್ತಿದೆ. 142 ದೇಶಗಳಲ್ಲಿ ಇರುವ ಈ ವಿಶ್ವವಿದ್ಯಾಲಯದ 10,000 ಕೇಂದ್ರಗಳನ್ನು ಹೊಂದಿದೆ ಪ್ರತಿದಿನ 3,00,000 ಜನರು ಇದರ ಪ್ರಯೋಜನ ಪಡೆಯುತ್ತಿದ್ದಾರೆ. ಇದರಲ್ಲಿ 20 ವಿವಿಧ ಬಗೆಯ ವಿಭಾಗಗಳಿದ್ದು, ಅಸಂಖ್ಯ ಜನರು ಉಚಿತವಾಗಿ ಇವುಗಳ ಸೇವೆಯನ್ನು ಸಮಾಜಕ್ಕೆ ಧಾರೆಯೆರೆಯುತ್ತಿದ್ದಾರೆ ಎಂದರು.

ಇಡೀ ವಿಶ್ವದಲ್ಲಿಯೇ ಶಾಂತಿ ಹಾಗೂ ಆಧ್ಯಾತ್ಮಿಕತೆಯ ಬೋಧನೆ ಮಾಡುತ್ತಿರುವ ಹಾಗೂ ಉಚಿತ ಸೇವೆ ನೀಡುತ್ತಿರುವ ವಿಶ್ವದ ಏಕೈಕ ನಿಸ್ವಾರ್ಥದ ಸಂಸ್ಥೆ ಇದಾಗಿದೆ. ಇಂತಹ ಸಂಸ್ಥೆಗೆ ನೊಬೆಲ್ ಪಾರಿತೋಷಕ ಪ್ರಶಸ್ತಿ ನೀಡಬೇಕಾಗಿದೆಮ ಎಂದರು.

ಹುಬ್ಬಳ್ಳಿ ವಲಯದ ರಾಜಯೋಗಿ ಬ್ರಹ್ಮಕುಮಾರಿ ನಿರ್ಮಲಾಜಿ, ದಾವಣಗೆರೆಯ ಬ್ರಹ್ಮಕುಮಾರಿ ಲೀಲಾಜಿ, ಸ್ಥಳೀಯ ರಾಮಕೃಷ್ಣ ವಿವೇಕಾನಂದ ಆಶ್ರಮದ ಪ್ರಕಾಶಾನಂದಜಿ ಮಹಾರಾಜ್ , ಐರಣಿಯ ಗಜದಂಡ ಶ್ರೀಗಳು, ಲಿಂಗದಹಳ್ಳಿಯ ಡಾ.ವೀರಭದ್ರ ಶ್ರೀಗಳು, ವಿರಕ್ತಮಠದ ಗುರುಬಸವ ಸ್ವಾಮಿಗಳು, ತುಮ್ಮಿನ ಕಟ್ಟೆಯ ಪ್ರಭುಲಿಂಗ ಶ್ರೀಗಳು,ಮಾತಾಜಿ ಅನ್ನಪೂರ್ಣ ನಂದಾಗಿರಿ, ಶನೇಶ್ವರ ಮಠದ ಶಿವಯೋಗಿ ಸ್ವಾಮಿಗಳು, ಅಯ್ಯಪ್ಪಸ್ವಾಮಿ ದೇವಸ್ಥಾನದ ಮಂಜುನಾಥ್ ಮಹೇಗಾರ, ಇಲ್ಲಿನ ಪ್ರಜಾಪಿತ ಬ್ರಹ್ಮಕುಮಾರಿ ವಿಶ್ವವಿದ್ಯಾಲಯದ ಮಾಲತೀಜಿ ಅಕ್ಕನವರು, ಮಾತಾಜಿ ಕಸ್ತೂರಿ ಹಲಗೇರಿ, ಗೀತಕ್ಕ ದಾಂಡೇಲಿ, ಚಂದ್ರಕಲಾ ಅಕ್ಕನವರು ಸೇರಿದಂತೆ ಮತ್ತಿತರರು ಇದ್ದರು.

ಕಿರುಸುದ್ದಿ

ಬಸವೇಶ್ವರರ ಜಯಂತಿ ಉತ್ಸವ ನಾಳೆ

ಬೆಳಗಾವಿ: ಜಿಲ್ಲಾಡಳಿತ, ಜಿಲ್ಲಾ ಪಂಚಾಯತಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಮಹಾನಗರ ಪಾಲಿಕೆ ಬೆಳಗಾವಿ ಸಂಯುಕ್ತ ಆಶ್ರಯದಲ್ಲಿ ಶ್ರೀ ಜಗಜ್ಯೋತಿ ಬಸವೇಶ್ವರರ ಜಯಂತಿ ಉತ್ಸವ ಅಂಗವಾಗಿ ಏ.20ರಂದು ಬೆಳಿಗ್ಗೆ 9.30 ಗಂಟೆಗೆ ಬೆಳಗಾವಿ ಗೋವಾವೇಸ್ ಬಸವೇಶ್ವರ ವೃತ್ತ, ಬಸವೇಶ್ವರ ಉದ್ಯಾನವನದಲ್ಲಿ ಶ್ರೀ ಜಗಜ್ಯೋತಿ ಬಸವೇಶ್ವರರ ಭಾವಚಿತ್ರಕ್ಕೆ ಪೂಜೆ ಸಲ್ಲಿಸುವುದರೊಂದಿಗೆ ವೇದಿಕೆ ಕಾರ್ಯಕ್ರಮ ಜರುಗಲಿದೆ. ಸಚಿವರಾದ ಸತೀಶ ಜಾರಕಿಹೊಳಿ ಅವರು ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದು, ಲಕ್ಷ್ಮೀ ಹೆಬ್ಬಾಳ್ಕರ್ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ. ಶಾಸಕರಾದ ಅಭಯ ಪಾಟೀಲ ಅವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಲಿದ್ದು, ಬೆಳಗಾವಿಯ ಮ.ನ.ರ. ಸಂಘದ ಶಿಕ್ಷಣ ಮಹಾವಿದ್ಯಾಲಯ ಸಹಾಯಕ ಪ್ರಾಧ್ಯಾಪಕರಾದ ಡಾ. ಗೀತಾ ದಯಣ್ಣವರ ಅವರು ವಿಶೇಷ ಉಪನ್ಯಾಸ ನೀಡಲಿದ್ದಾರೆ. ಸರ್ಕಾರಿ ಮುಖ್ಯ ಸಚೇತಕರಾದ ಅಶೋಕ ಪಟ್ಟಣ, ಕರ್ನಾಟಕ ಸರ್ಕಾರದ ಮಾನ್ಯ ವಿಶೇಷ ಪ್ರತಿನಿಧಿ ಪ್ರಕಾಶ ಹುಕ್ಕೇರಿ, ವಾಯವ್ಯ ಸಾರಿಗೆ ನಿಗಮ ನಿಯಮಿತ ಅಧ್ಯಕ್ಷರಾದ ಭರಮಗೌಡ ಕಾಗೆ ಮತ್ತು ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ ಅಧ್ಯಕ್ಷರಾದ ಮಹಾಂತೇಶ ಕೌಜಲಗಿ ಅವರುಗಳು ವಿಶೇಷ ಆಮಂತ್ರಿತರಾಗಿ ಆಗಮಿಸಲಿದ್ದಾರೆ. ರಾಜ್ಯ ಸಭೆ ಸಂಸದರಾದ ಈರಣ್ಣ ಕಡಾಡಿ, ಚಿಕ್ಕೋಡಿ ಲೋಕಸಭಾ ಸಂಸದರಾದ ಪ್ರಿಯಾಂಕಾ ಜಾರಕಿಹೊಳಿ, ಜಿಲ್ಲಾ ಲೋಕಸಭಾ ಸಂಸದರಾದ ಜಗದೀಶ್ ಶೆಟ್ಟರ, ಉತ್ತರ ಕನ್ನಡ ಲೋಕಸಭಾ ಸಂಸದರಾದ ವಿಶ್ವೇಶ್ವರ ಹೆಗಡೆ ಕಾಗೇರಿ ಅವರುಗಳು ಗೌರವಾನ್ವಿತ ಅತಿಥಿಗಳಾಗಿ ಆಗಮಿಸಲಿದ್ದಾರೆ.

ಇಂಗ್ಲಿಷ್ ಹೇರಿಕೆ ಬೇಡ

ಬೆಳಗಾವಿ: ಸರ್ಕಾರಿ ಶಾಲೆಗಳಲ್ಲಿ ದ್ವಿಭಾಷಾ ಮಾಧ್ಯಮದ ಮುಖವಾಡದಲ್ಲಿ ಕನ್ನಡ ಕಿತ್ತುಹಾಕಿ ಇಂಗ್ಲಿಷ್‌ನ್ನು ಹೇರುತ್ತಿರುವ ರಾಜ್ಯ ಸರ್ಕಾರದ ಅವೈಜ್ಞಾನಿಕ ಹಾಗೂ ಜನವಿರೋಧಿ ನಿರ್ಧಾರವನ್ನು ಎಐಡಿಎಸ್‌ಓ ಸಂಘಟನೆಯು ಖಂಡಿಸಿದೆ. ರಾಜ್ಯದ 4404 ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಒಂದನೇ ತರಗತಿಯಿಂದಲೇ ಆಂಗ್ಲ ಮಾಧ್ಯಮವನ್ನು ಆರಂಭಿಸಲು ರಾಜ್ಯ ಸರ್ಕಾರವು ಆದೇಶಿಸಿದೆ. ಎಲ್ಲ ಜಿಲ್ಲೆಗಳಲ್ಲಿ ಈಗಾಗಲೇ ಸರ್ಕಾರಿ ಶಾಲೆ ಶಿಕ್ಷಕರಿಗೆ ಆಂಗ್ಲ ಮಾಧ್ಯಮ ತರಬೇತಿ ನೀಡಲಾಗುತ್ತಿದೆ. ಸರ್ಕಾರವು ಇದನ್ನು ದ್ವಿಭಾಷಾ ಮಾಧ್ಯಮ ಎಂದು ಕರೆಯುತ್ತಿದ್ದರೂ ಇಂಗ್ಲಿಷ್‌ನಲ್ಲೇ ಪಾಠ ಮಾಡಬೇಕೆಂದು ಹಲವೆಡೆ ಶಿಕ್ಷಕರಿಗೆ ನಿರ್ದೇಶನ ನೀಡಲಾಗುತ್ತಿದೆ. ಕೆಲವು ಶಾಲೆಗಳಲ್ಲಿ ಜೂನ್ ನಿಂದ ಕನ್ನಡ ಮಾಧ್ಯಮ ಇರುವುದಿಲ್ಲ, ಬದಲಿಗೆ ಕೇವಲ ಆಂಗ್ಲ ಮಾಧ್ಯಮಕ್ಕೆ ಪ್ರವೇಶ ನೀಡಲಾಗುವುದೆಂದು ಪಾಲಕರಿಗೆ ತಿಳಿಸಲಾಗಿದೆ. ಇದು ಅಕ್ಷಮ್ಯ. ಸರ್ಕಾರದ ಈ ನಡೆಯನ್ನು ಎಐಡಿಎಸ್‌ಓ ಅತ್ಯುಗ್ರ ಪದಗಳಲ್ಲಿ ಖಂಡಿಸುತ್ತದೆ. ಇಂಗ್ಲಿಷ್ ಕಲಿಕೆ ಅವಶ್ಯಕ ನಿಜ. ಆದರೆ ಕನ್ನಡವನ್ನು ಕೊಂದು ಇಂಗ್ಲಿಷ್ ಕಲಿಸ ಹೊರಟಿರುವುದು ನಾಡಿನ ಜನತೆಗೆ ಮಾಡಿರುವ ದ್ರೋಹ ಹಾಗೂ ಕನ್ನಡಕ್ಕೆ ಮಾಡಿರುವ ಅಪಚಾರ. ನಾಡಿನ ವಿದ್ಯಾರ್ಥಿಗಳು, ಯುವಜನರು, ಪೋಷಕರು, ಸಾಹಿತಿಗಳು ಹಾಗೂ ಶಿಕ್ಷಣ ಪ್ರೇಮಿ ಜನತೆ ಕನ್ನಡವನ್ನು ರಕ್ಷಿಸಲು ಧ್ವನಿಯೆತ್ತಬೇಕೆಂದು ಪ್ರಕಟಣೆ ಮೂಲಕ ಎಐಡಿಎಸ್‌ಓ ಮನವಿ ಮಾಡಿದೆ.

ಮಕ್ಕಳ ಉಚಿತ ಬೇಸಿಗೆ ಶಿಬಿರ ಮೇ 1 ರಿಂದ

ಬೆಳಗಾವಿ: ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಡಿ ಬಾಲಭವನ ಸೊಸೈಟಿ, ಬೆಳಗಾವಿ ಇವರ ಸಹಯೋಗದೊಂದಿಗೆ 5 ರಿಂದ 16 ವರ್ಷದ ಮಕ್ಕಳಿಗಾಗಿ 15 ದಿನಗಳ ಉಚಿತ ಬೇಸಿಗೆ ಶಿಬಿರವನ್ನು ಆಯೋಜಿಸಲಾಗಿದೆ. ಬೇಸಿಗೆ ಶಿಬಿರವು ಮೇ.1 ರಿಂದ ಮೇ. 15 ರ ವರೆಗೆ ಬೆಳಿಗ್ಗೆ 9 ರಿಂದ ಮಧ್ಯಾಹ್ನ 3 ಗಂಟೆಯವರೆಗೆ ಕಣಬರ್ಗಿ ರಸ್ತೆಯ ಭಾರತ ಕಾಲೋನಿಯಲ್ಲಿರುವ ಮಹಿಳಾ ಕಲ್ಯಾಣ ಸಂಸ್ಥೆಯ ಸಭಾಗೃಹದಲ್ಲಿ ಜರುಗುವುದು. ಶಿಬಿರದಲ್ಲಿ ಮಕ್ಕಳ ಸರ್ವಾಂಗೀಣ ವಿಕಾಸಕ್ಕೆ ಅನುಕೂಲವಾಗುವ ಚಿತ್ರಕಲೆ, ಕರಕುಶಲ ಕಲೆ, ಜೇಡಿಮಣ್ಣಿನ ಕಲೆ, ಸಾಮೂಹಿಕ ನೃತ್ಯ, ಸಾಮೂಹಿಕ ಸಂಗೀತ, ಕರಾಟೆ, ಯೋಗ, ಧ್ಯಾನ, ಸ್ಥಳೀಯ ಆಟಗಳು ಹಾಗೂ ನಾಟಕ ಕಾರ್ಯಕ್ರಮಗಳನ್ನು ಆಯೋಜಿಸಲಾಗುವುದು. ಶಿಬಿರದಲ್ಲಿ ಭಾಗವಹಿಸಲು ಇಚ್ಛಿಸುವ ವಿದ್ಯಾರ್ಥಿಗಳು ಏ. 30ರ ಒಳಗೆ ಹೆಸರು ನೊಂದಾಯಿಸಬಹುದು ಎಂದು ಜಿಲ್ಲಾ ಬಾಲ ಭವನ ಕಾರ್ಯದರ್ಶಿಗಳು ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಾಶವ್ವ ಕಲ್ಲೊಳ್ಳಿ ನಿಧನ

ನೇಸರಗಿ: ಗ್ರಾಮದ ನಿವಾಸಿ, ಕಾಶವ್ವ ಈರಪ್ಪ ಕಲ್ಲೊಳ್ಳಿ (85) ಶನಿವಾರ ನಿಧನಗಿದ್ದಾರೆ. ಮೃತರಿಗೆ ಇಬ್ಬರು ಪುತ್ರರು, ಪುತ್ರಿ ಇದ್ದಾರೆ. ಶನಿವಾರ ಸಂಜೆ ಸ್ವಗ್ರಾಮದಲ್ಲಿ ಅಂತ್ಯಕ್ರಿಯೆ ನೆರವೇರಿತು.





ಯಮಕನಮರಡಿ: ಸಮೀಪದ ಹಳೆ ಗುಡಗನಹಟ್ಟಿ ಗ್ರಾಮದಲ್ಲಿ ಶ್ರೀ ಬ್ರಹ್ಮದೇವರ ದೇವಸ್ಥಾನದ ಪವರ್ಣದಲ್ಲಿ ಒಂದು ದಿನದ ಮಹಾಪ್ರಸಾದ ಊಟದ ವ್ಯವಸ್ಥೆ ಮಾಡಿರುವ ಈರಣ್ಣ ತುಬಚಿ ಅವರನ್ನು ಸನ್ಮಾನಿಸಲಾಯಿತು. ಗ್ರಾಮದ ಮುಖಂಡರಾದ ರಾಯಗೌಡ ಪಾಟೀಲ್, ಸಂತೋಷ್ ಪಾಟೀಲ್ ಹಾಗೂ ಸಕಲ ಭಕ್ತಾದಿಗಳು ಉಪಸ್ಥಿತರಿದ್ದರು.

ಆರೋಗ್ಯದ ಬಗ್ಗೆ ಕಾಳಜಿವಹಿಸಿ

ರಾಯಬಾಗ: ರೋಗ ಬರದಂತೆ ನೋಡಿಕೊಂಡು ಆರೋಗ್ಯದಾಯಕ ಜೀವನ ನಡೆಸಬೇಕು ಎಂದು ಹಿರಿಯ ದಿವಾಣಿ ನ್ಯಾಯಾಧೀಶ ಜಗದೀಶ ಬಿಸೆರೊಟ್ಟಿ ಹೇಳಿದರು. ಪಟ್ಟಣದ ನ್ಯಾಯಾಲಯದ ಆವರಣದಲ್ಲಿ ತಾಲೂಕು ವಕೀಲರ ಸಂಘ ಹಾಗೂ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ ಶಾಖೆ ರಾಯಬಾಗ ಮತ್ತು ಬೆಳಗಾವಿ ವೈದ್ಯಕೀಯ ವಿಜ್ಞಾನ ಸಂಸ್ಥೆ ಸಂಯುಕ್ತ ಆಶ್ರಯದಲ್ಲಿ ಹಮ್ಮಿಕೊಂಡಿದ್ದ ಉಚಿತ ಆರೋಗ್ಯ ತಪಾಸಣಾ ಶಿಬಿರ ಉದ್ಘಾಟಿಸಿ ಮಾತನಾಡಿದ ಅವರು, ಜನರಜೀವ ಉಳಿಸುವವೈದ್ಯರಸೇವೆಸಮಾಜದಲ್ಲಿಅತ್ಯಂತಶ್ರೇಷ್ಠವಾಗಿದೆ. ಪ್ರತಿಯೊಬ್ಬರು ಪ್ರತಿ ವರ್ಷ ನಮ್ಮ ದೇಹದ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳಬೇಕೆಂದರು. ಬಿಮ್ಸ್ ವೈದ್ಯ ಡಾ.ಎ.ಎಸ್.ನಾಗಲಿಕರ ಮಾತನಾಡಿದರು. ಪ್ರಧಾನ ದಿವಾಣಿ ನ್ಯಾಯಾಧೀಶೆ ಪ್ರಿಯಾ ಭಟ್ಟಡ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದಲ್ಲಿ ಹೆಚ್ಚುವರಿ ದಿವಾಣಿ ನ್ಯಾಯಾಧೀಶ ದಾನಪ್ಪ, ವಕೀಲರ ಸಂಘದ ಅಧ್ಯಕ್ಷ ಕೆ.ಆರ್.ಕೋಟಿವಾಲೆ, ಸರ್ಕಾರಿ ನೌಕರರ ಸಂಘದ ತಾಲೂಕಾಧ್ಯಕ್ಷ ಉಮೇಶ ಪ್ಪೋಳ, ಸಿಪಿಐ ಎಮ್.ಎಮ್.ಡಪ್ಪಿನ, ಬೆಳಗಾವಿ ಬಿಮ್ಸ್ ನಾಮ ನಿರ್ದೇಶನ ಸದಸ್ಯ ಆರ್.ಎಸ್. ಶಿರಗಾಂವೆ, ವೈದ್ಯರಾದ ಡಾ.ಸಿ.ಬಿ.ಪಾಟೀಲ, ಡಾ.ರವಿ ಆಜೂರ, ಡಾ.ಸುಕುಮಾರ ನಾವ್ಹಿ, ಡಾ.ಪ್ರಶಾಂತ, ತಾ.ಪಂ.ಇಒ ಅರುಣ ಮಾಚಕನೂರ, ಬಿ.ಸಿ.ಎಮ್ ಅಧಿಕಾರಿ ಕಲ್ಪನಾ ಕಾಂಬಳೆ, ವಕೀಲರ ಸಂಘದ ಉಪಾಧ್ಯಕ್ಷ ಕೆ.ಎಲ್.ಕೆರೂರೆ, ಕಾರ್ಯದರ್ಶಿ ಆರ್.ಎಸ್.ಹಳಪ್ಪಗೋಳ, ಸಹ ಕಾರ್ಯದರ್ಶಿ ಎಮ್.ಬಿ.ಬಂತೆ, ಖಜಾಂಚಿ ಸವಿತಾ ಸಂಗೋಟೆ, ವಿನೋದ ಚವ್ಹಾನ, ಮಲ್ಲಿಕ ಕೊರಬು, ಬಿಮ್ಸ್ ವೈದ್ಯರು, ವಕೀಲರು, ಸರ್ಕಾರಿ ನೌಕರರು ಪಾಲ್ಗೊಂಡಿದ್ದರು.



ರಾಯಬಾಗ: ಪಟ್ಟಣದ ನ್ಯಾಯಾಲಯದ ಆವರಣದಲ್ಲಿ ತಾಲೂಕು ವಕೀಲರ ಸಂಘ ಹಾಗೂ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ ಶಾಖೆ ರಾಯಬಾಗ ಮತ್ತು ಬೆಳಗಾವಿ ವೈದ್ಯಕೀಯ ವಿಜ್ಞಾನ ಸಂಸ್ಥೆ ಸಂಯುಕ್ತ ಆಶ್ರಯದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ ನಡೆಯಿತು.

ಕ್ರಮಕ್ಕೆ ವಿಳಂಬ | ಪಾಲಿಕೆ ಸಭೆಯಲ್ಲಿ ಆಕ್ರೋಶ

ಅಕ್ರಮ ಕಟ್ಟಡಗಳಿಗೆ ಪಿಐಡಿ

ಬೆಳಗಾವಿ : ಮಹಾನಗರ ಪಾಲಿಕೆ ವ್ಯಾಪ್ತಿಯ 45ಕ್ಕೂ ಹೆಚ್ಚು ಅನಧಿಕೃತ ಕಟ್ಟಡಗಳಿಗೆ ಪಿಐಡಿ ಸಂಖ್ಯೆ ನೀಡಿ ಅಕ್ರಮ ಎಸಗಿದ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳುವಲ್ಲಿ ವಿಳಂಬ ನೀತಿ ಅನುಸರಿಸಲಾಗುತ್ತಿದೆ ಎಂಬ ಆರೋಪದ ಹಿನ್ನೆಲೆಯಲ್ಲಿ ಶನಿವಾರ ನಡೆದ ಪಾಲಿಕೆ ಪರಿಷತ್ ಸಭೆಯಲ್ಲಿ ನಗರಸೇವಕರು ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

ಮೇಯರ್ ಪ್ರೀತಿ ಕಾಮಕರ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ವಿಷಯ ಪ್ರಸ್ತಾಪಿಸಿದ ಸದಸ್ಯ ರವಿ ಧೋತ್ರೆ, ಸಾಮಾನ್ಯ ನಾಗರಿಕರು ಖಾತಾ ಮತ್ತು ಪಿಐಡಿ ಪಡೆಯಲು ಎಲ್ಲಾ ದಾಖಲೆಗಳು ಸರಿಯಾಗಿದ್ದರೂ ಅಧಿಕಾರಿಗಳ ಕಚೇರಿಗಳ ಸುತ್ತಲು ಅಲೆದಾಡಬೇಕಾಗುತ್ತದೆ. ಆದರೆ ಲಂಚ ನೀಡುವವರ ಅಕ್ರಮ ಆಸ್ತಿಗಳಿಗೆ ಯಾವುದೇ ಅಡಚಣೆ ಇಲ್ಲದೆ ಪಿಐಡಿ ನೀಡಲಾಗುತ್ತಿದೆ, ಎಂದು ದೂರಿದರು. ಸದಸ್ಯೆ ಸಾರಿಕಾ ಪಾಟೀಲ ಕೂಡ ಇದೇ ವಿಷಯಕ್ಕೆ ತೀವ್ರ ಅಸಮಾಧಾನ ವ್ಯಕ್ತಪಡಿಸಿ, ಪಾಲಿಕೆಯಲ್ಲಿ ಏಜೆಂಟ್‌ಗಳ ಹಾವಳಿ ಹೆಚ್ಚಾಗಿದೆ ಎಂದು ಆರೋಪಿಸಿದರು.

ಸದಸ್ಯೆ ವಾಣಿ ಜೋಶಿ ಅವರು ಸಭೆಯ ಗಮನ ಸೆಳೆದು, ಇ-ಖಾತಾ ಮಾಡಿಸುವುದಕ್ಕಾಗಿ ಅಧಿಕಾರಿಯೊಬ್ಬರು ಸಾರ್ವಜನಿಕರಿಂದ 1 ಲಕ್ಷ ಲಂಚ ಕೇಳಿದ ಬಗ್ಗೆ ದಾಖಲೆಗಳೊಂದಿಗೆ ಆಯುಕ್ತರಿಗೆ ದೂರು ನೀಡಿದ್ದರೂ ಈವರೆಗೆ ಯಾವುದೇ ಕ್ರಮ ಕೈಗೊಳ್ಳದಿರುವುದು ಯಾಕೆ ಎಂದು ಪ್ರಶ್ನಿಸಿದರು.

ಪಾಲಿಕೆಯ ಕೆಲ ಅಧಿಕಾರಿಗಳು ಲಂಚಬಾಕರಾಗಿ ಸಾರ್ವಜನಿಕರಿಂದ ಹಣ ವಸೂಲಿ ಮಾಡುತ್ತಿರುವ ಕುರಿತು ವ್ಯಾಪಕ ದೂರುಗಳು ಬಂದರೂ,



- ಮೇಯರ್ ಪ್ರೀತಿ ಕಾಮಕರ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆ
- ಮಹಾನಗರ ಪಾಲಿಕೆ ವ್ಯಾಪ್ತಿಯ 45ಕ್ಕೂ ಹೆಚ್ಚು ಅನಧಿಕೃತ ಕಟ್ಟಡಗಳಿಗೆ ಪಿಐಡಿ ಸಂಖ್ಯೆ
- ನಗರಸೇವಕರ ತೀವ್ರ, ಆಕ್ರೋಶ
- ಏಜೆಂಟ್‌ರ ಹಾವಳಿಗೆ ಬೇಸರ
- ಆಯುಕ್ತರಿಗೆ ದೂರು ನೀಡಿದ್ದರೂ ಯಾವುದೇ ಕ್ರಮವಿಲ್ಲ: ಆರೋಪ
- ಕ್ರಮದ ಭರವಸೆ ನೀಡಿದ ಆಯುಕ್ತರು

ಸಂಬಂಧಪಟ್ಟವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುತ್ತಿಲ್ಲ ಎಂದು ಸದಸ್ಯರು ಆಕ್ಷೇಪ ವ್ಯಕ್ತಪಡಿಸಿದರು.

ಈ ಕುರಿತು ಪ್ರತಿಕ್ರಿಯಿಸಿದ ಸಿದ್ದು ಹುಲ್ಲೊಳ್ಳಿ, ಪ್ರಕರಣವು ತನಿಖಾ ಹಂತದಲ್ಲಿದ್ದು, ನಾಲ್ವರು ಅಧಿಕಾರಿಗಳ ವಿರುದ್ಧ ಇಲಾಖಾ ಮಟ್ಟದ ತನಿಖೆ ನಡೆಯಲಿದೆ ಎಂದು ತಿಳಿಸಿದರು. ಇದರಿಂದ ಅಸಮಾಧಾನಗೊಂಡ ಸದಸ್ಯರು, ಆರೋಪ ಎದುರಿಸುತ್ತಿರುವವರನ್ನೇ ತನಿಖಾಧಿಕಾರಿಗಳನ್ನಾಗಿ ಮಾಡಲಾಗಿದೆ. ಇಂತಹ ಪರಿಸ್ಥಿತಿಯಲ್ಲಿ ನ್ಯಾಯ ಸಿಗುವುದು ಹೇಗೆ ಸಾಧ್ಯ ಎಂದು ಪ್ರಶ್ನಿಸಿ ಪಾರದರ್ಶಕ ಹಾಗೂ ನಿಷ್ಪಕ್ಷಪಾತ ತನಿಖೆ ನಡೆಸುವಂತೆ ಒತ್ತಾಯಿಸಿದರು. ಇದರಿಂದ ಸಭೆಯಲ್ಲಿ ಕೆಲಕಾಲ ಗೊಂದಲದ ವಾತಾವರಣ ನಿರ್ಮಾಣವಾಯಿತು.

ಪಾಲಿಕೆ ಆಯುಕ್ತ ಕಾರ್ತಿಕ ಅವರು ಸದಸ್ಯರ ದೂರುಗಳನ್ನು ಪರಿಗಣಿಸಿ ಸೂಕ್ತ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು.

ಈ ವೇಳೆ ಸಭೆಯಲ್ಲಿ ಉಪಮೇಯರ್ ಹಣಮಂತ ಕೊಂಗಾಲಿ, ಶಾಸಕ ಅಭಯ ಪಾಟೀಲ, ವಿಧಾನಪರಿಷತ್ ಸದಸ್ಯ ತಳವಾರ ಸಾಬಣ್ಣ ಸೇರಿದಂತೆ ನಗರಸೇವಕರು ಹಾಗೂ ಅಧಿಕಾರಿಗಳು ಸೇರಿದಂತೆ ಇತರರು ಪಾಲ್ಗೊಂಡಿದ್ದರು.

ಸಾಮಾನ್ಯ ಸಭೆ ತೊರೆದ ಸದಸ್ಯರು

ನೀರಿಗಾಗಿ ಪ್ರತಿಭಟನೆ

ಬೆಳಗಾವಿ: ನಗರದಲ್ಲಿ ಕುಡಿಯುವ ನೀರಿನ ಸಮಸ್ಯೆ ಸೇರಿದಂತೆ ವಿವಿಧ ಜನಪರ ಸಮಸ್ಯೆಗಳ ಬಗ್ಗೆ ಗಮನ ಹರಿಸಬೇಕೆಂದು ಒತ್ತಾಯಿಸಿ ಬೆಳಗಾವಿ ಮಹಾನಗರ ಪಾಲಿಕೆಯಲ್ಲಿ ವಿರೋಧ ಪಕ್ಷದ ಸದಸ್ಯರು ಶನಿವಾರ ತೀವ್ರ ಪ್ರತಿಭಟನೆ ನಡೆಸಿದರು.

ಮಹಾನಗರ ಪಾಲಿಕೆಯಲ್ಲಿ ನಡೆದ ಸಾಮಾನ್ಯ ಸಭೆ ಆರಂಭವಾದ ಬಳಿಕ ನಾಡಗೀತೆ ಮುಗಿದ ತಕ್ಷಣವೇ ಕಾಂಗ್ರೆಸ್ ಹಾಗೂ ಎಂಇಎಸ್ ಪಕ್ಷದ ಪಾಲಿಕೆ ಸದಸ್ಯರು ಸಭೆಯನ್ನು ತೊರೆದು ಹೊರಬಂದು ಪ್ರತಿಭಟನೆಗೆ ಮುಂದಾದರು. ತಮ್ಮ ಬೇಡಿಕೆಗಳಿಗೆ ಮೇಯರ್ ಹಾಗೂ ಆಡಳಿತ ಮಂಡಳಿ ಸ್ಪಂದಿಸುತ್ತಿಲ್ಲವೆಂದು ಆರೋಪಿಸಿದ ಅವರು, ಸಭೆಯಲ್ಲಿ ಸಮಸ್ಯೆಗಳ ಕುರಿತು ಚರ್ಚೆಗೆ ಅವಕಾಶ ನೀಡಬೇಕೆಂದು ಆಗ್ರಹಿಸಿದರು.

ಪಾಲಿಕೆ ವ್ಯಾಪ್ತಿಯಲ್ಲಿ ಜನರು ಎದುರಿಸುತ್ತಿರುವ ಅನೇಕ ಸಮಸ್ಯೆಗಳ ಪರಿಹಾರಕ್ಕಾಗಿ ತಕ್ಷಣ ಕ್ರಮ ಕೈಗೊಳ್ಳಬೇಕು ಹಾಗೂ ಈ ಕುರಿತು ಸಮರ್ಪಕ ಚರ್ಚೆಗೆ ಅವಕಾಶ ಕಲ್ಪಿಸಬೇಕೆಂದು ಒತ್ತಾಯಿಸಿದ ಸದಸ್ಯರು, ಪಾಲಿಕೆ ಒಳಗಡೆವೇ ಕುಳಿತು ಪ್ರತಿಭಟನೆ ಮುಂದುವರಿಸಿದರು.

ಸ್ಥಳದಲ್ಲಿ ಕೆಲಕಾಲ ಗದ್ದಲದ ವಾತಾವರಣ ನಿರ್ಮಾಣವಾಗಿದ್ದು, ಪರಿಸ್ಥಿತಿ ಉದ್ವಿಗ್ನಗೊಂಡಿತು.

ಈ ವೇಳೆ ಮಹಾನಗರ ಪಾಲಿಕೆಯ ಎಲ್ಲ ವಿರೋಧ ಪಕ್ಷ ನಗರ ಸೇವಕರು ಪ್ರತಿಭಟನೆಯಲ್ಲಿ ಭಾಗಿಯಾಗಿದ್ದರು.

- ನಗರದಲ್ಲಿ ತೀವ್ರಗೊಂಡಿರುವ ಕುಡಿಯುವ ನೀರಿನ ಸಮಸ್ಯೆ ಸೇರಿದಂತೆ ಹಲವು ಮೂಲ ಸೌಕರ್ಯಗಳ ಕೊರತೆ ಬಗ್ಗೆ ಪುನಃ ಪುನಃ ಗಮನ ಸೆಳೆದರೂ ಕ್ರಮ ಕೈಗೊಳ್ಳಲಾಗುತ್ತಿಲ್ಲವೆಂದು ವಿರೋಧ ಪಕ್ಷದ ಸದಸ್ಯರು ಅಸಮಾಧಾನ ವ್ಯಕ್ತಪಡಿಸಿದರು.



ಬಸವರಾಜ ಪಾಟೀಲಗೆ ಸನ್ಮಾನ

ಕಬ್ಬೂರು: ಪಟ್ಟಣದ ಶ್ರೀ ಮಲ್ಲಿಕಾರ್ಜುನ ಜಾತ್ರಾ ಮಹೋತ್ಸವ ಹಾಗೂ ಜಗಜ್ಯೋತಿ ಬಸವೇಶ್ವರ ಜಯಂತ್ಯುತ್ಸವ ನಿಮಿತ್ತ ಆಧ್ಯಾತ್ಮಿಕ ಪ್ರವಚನ ಕಾರ್ಯಕ್ರಮದಲ್ಲಿ ಕಬ್ಬೂರ ಪಟ್ಟಣದಲ್ಲಿ ಕಳೆದ ನಲವತ್ತು ವರ್ಷಗಳಿಂದ ಶಿಕ್ಷಕರಾಗಿ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದ ಮಡಿವಾಳಪ್ಪ ಪಾಟೀಲ ಇವರ ಮಗನಾದ ಬಸವರಾಜ ಮಡಿವಾಳಪ್ಪ ಪಾಟೀಲ ಇತ್ತೀಚೆಗೆ ಕೇಂದ್ರದ ಯುಪಿಎಸ್‌ಸಿ ಪರೀಕ್ಷೇಯಲ್ಲಿ ಪಾಸಾದ ಹಿನ್ನಲೇಯಲ್ಲಿ ಶ್ರೀ ಮಲ್ಲಿಕಾರ್ಜುನ ಜಾತ್ರಾ ಮಹೋತ್ಸವ ಕಮೀಟಿ ವತಿಯಿಂದ ಸನ್ಮಾನಿಸಲಾಯಿತು.

ವೇಳೆ ಬೆಲ್ಲದ-ಬಾಗೇವಾಡಿಯ ಮಹಾಂತೇಶ ವಿರಕ್ತಮಠದ ಶಿವಾನಂದ ಮಹಾ ಸ್ವಾಮೀ ಜಿ, ಕಬ್ಬೂರಿನ ಗೌರಿಶಂಕರಮಠದ ರೇವಣ ಸಿದ್ದಶಿವಚಾರ್ಯ ಸ್ವಾಮೀಜಿ ,ಶಂಕರಯ್ಯಾ ಮಠದ,ಮಹಾದೇವ ಜಿವನಿ, ಶಿವಪ್ಪ ಚಿಮ್ಮಟ, ರಮೇಶ ಬೆಲ್ಲದ, ಸೇರಿದಂತೆ ಮುಂತಾದವರ ಉಸ್ಥಿತರಿದ್ದರು.



ಮಕ್ಕಳ ದಾಖಲಾತಿಗಾಗಿ ವಿಶೇಷ ಕಾರ್ಯಕ್ರಮ

ಮೂಡಲಗಿ: ತಾಲೂಕಿನ ತುಕ್ಕಾನಟ್ಟಿ ಗ್ರಾಮದಲ್ಲಿ 2026-27ನೇ ಸಾಲಿನ ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆ ಯಾದ ಮನೆಪಟ್ಟಿ ಹಾಗೂ ಜನಗಣತಿ ಕಾರ್ಯವನ್ನು ಪ್ರಾರಂಭಿಸಲಾಯಿತು. ಇದೇ ಸಂದರ್ಭದಲ್ಲಿ ಸರ್ಕಾರಿ ಮಾದರಿ ಕನ್ನಡ ಹಿರಿಯ ಪ್ರಾಥಮಿಕ ಹಾಗೂ ಉನ್ನತೀಕರಿಸಿದ ಪ್ರೌಢಶಾಲೆ ತುಕ್ಕಾನಟ್ಟಿಯವರು ಮನೆಪಟ್ಟಿ, ಜನಗಣತಿ ಮಾಡುವುದರ ಜೊತೆಗೆ ಗ್ರಾಮಸ್ಥರು ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗೆ 1ನೇ ತರಗತಿಗೆ ಹಾಗೂ ಎಲ್‌ಕೆಜಿ ತರಗತಿಗೆ ದಾಖಲಿಸುವಂತೆ ಕರ ಪತ್ರಗಳನ್ನು ಬಿಡುಗಡೆಗೊಳಿಸಲಾಯಿತು.



ಪ್ರತಿ ಮನೆ ಗಣತಿ ಹಾಗೂ ಮನೆಪಟ್ಟಿ ಮಾಡುವಾಗ ಕರ ಪತ್ರಗಳನ್ನು ಎಲ್ಲ ಮನೆಗಳಿಗೆ ವಿತರಿಸಿ ತಮ್ಮ ಮನೆಯಲ್ಲಿಯ 5 ವರ್ಷ 10 ತಿಂಗಳ ಮಗುವನ್ನು 1 ನೇ ತರಗತಿಗೆ ಹಾಗೂ 3 ವರ್ಷ 10 ತಿಂಗಳ ಮಗುವನ್ನು ಎಲ್. ಕೆ.ಜಿ. ತರಗತಿಗೆ ಸರಕಾರಿ ಶಾಲೆಗೆ ದಾಖಲಿಸುವಂತೆ ಶಾಲೆಯ ಪ್ರಧಾನ ಗುರು ಎ.ವ್ಹಿ ಗಿರೆಣ್ಣವರ ಮನವಿ ಮಾಡಿದರು. ಹಾಗೂ ಕರಪತ್ರಗಳನ್ನು ಗ್ರಾಮದ ಎಲ್ಲ ಜನರಿಗೆ ತಲುಪಿಸಲಾಗುವದು ಎಂದರು.

ಗಣತಿ ಮೇಲ್ವಿಚಾರಕ ಎಮ್.ಬಿ. ಪಡದಳ್ಳಿ, ಎಂ.ಡಿ.ಹಳ್ಳಿ ಮಾತನಾಡಿದರು. ಗಣತಿದಾರರಾದ ಪುಷ್ಪಾ ಭರಮಧೆ ಸುಜಾತಾ ಕೋಳಿ ವಾಸಂತಿ ಬೋರಗುಂಡಿ, ರೂಪಾ ಹೂಲಿಕಟ್ಟಿ, ವಿಮಲಾಕ್ಷಿ ತೋರಗಲ್ ಆನಂದ, ಹಮ್ಮನವರ, ಬಸವರಾಜ ನಾಯಕ, ಮಹಾದೇವ ಗೋಮಾಡಿ, ಸೋಮಶೇಖರ ವಾಯ್. ಆರ್., ಬಿ.ಎಸ್, ವರಲ್ಯಾಗೋಳ ಉಪಸ್ಥಿತರಿದ್ದರು.

ಡಾ. ಬಿ.ಆರ್.ಅಂಬೇಡ್ಕರ್ ಜಯಂತಿ ಆಚರಣೆ

ಸಂಕೇಶ್ವರ: ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಅವರ 135ನೇ ಜಯಂತಿಯನ್ನು ಪುರಸಭೆ ಕಾರ್ಯಾಲಯ ಸೇರಿದಂತೆ ಪಟ್ಟಣದ ವಿವಿಧೆಡೆ ಆಚರಿಸಲಾಯಿತು. ಪಟ್ಟಣದ ಭೀಮನಗರದಲ್ಲಿನ ಡಾ. ಅಂಬೇಡ್ಕರ್ ಪ್ರತಿಮೆಗೆ ಮುಖ್ಯಾಧಿಕಾರಿಗಳಾದ ಪ್ರಕಾಶ ಮಠದ ಹಾಗೂ ಗಣ್ಯರಿಂದ ಮಾಲಾರ್ಪಣೆ ಮಾಡಲಾಯಿತು.

ಈ ಸಂಧರ್ಭದಲ್ಲಿ ಮುಖಂಡರಾದ ಸಂತೋಷ ಮಡಶಿ, ಡಾ.ಜಯಪ್ರಕಾಶ ಕರಜಗಿ, ವಿಕ್ರಮ ಕರನಿಂಗ, ಪ್ರಮೋದ ಹೊಸಮನಿ, ಗಂಗಾರಾಮ ಭೂಸಗೋಳ, ದೀಲಿಪ ಹೊಸಮನಿ, ವಿನೋದ ನಾಯಿಕ, ಅವಿನಾಶ ನಲವಡೆ, ಮಹೇಶ ಹಟ್ಟಿವಳಿ, ಪಿಂಟು ಸುರ್ಯವಂಶಿ, ಸಂತೋಷ ಸತ್ಯನಾಯಿಕ, ಶಿವಶಂಕರ ಭೋಸಲೆ, ಗಣೇಶ ಪಾಟೀಲ ಸೇರಿದಂತೆ ಅನೇಕರು ಇದ್ದರು.



ರಂಗ ಕಲೆ ಉಳಿಸುವುದು ಎಲ್ಲರ ಕರ್ತವ್ಯ: ಖೋಬ್ರಿ

ಕಕಮರಿ: ಐತಿಹಾಸಿಕ ಸತ್ಯ ದರ್ಶನ ಮಾಡಿಕೊಡುವ ರಂಗ ಕಲೆಯನ್ನು ಉಳಿಸಿ ಬೆಳೆಸುವುದು ಎಲ್ಲರ ಕರ್ತ್ಯವ್ಯವಾಗಿದೆ ಎಂದು ಅಥಣಿ ನ್ಯಾಯವಾದಿ ಎ.ಎಂ. ಖೋಬ್ರಿ ಹೇಳೀದರು.

ಅವರು ಶುಕ್ರವಾರ ಕಕಮರಿ ಸಮೀಪದ ಬನ್ನೂರ ಗ್ರಾಮದೇವತೆ ಶ್ರೀ ದುರ್ಗಾದೇವಿ ಜಾತ್ರಾ ಮಹೋತ್ಸವ ನಿಮಿತ್ತ

ಶ್ರೀ ಬಸವೇಶ್ವರ ನಾಟ್ಯ ಸಂಘ ಬನ್ನೂರ ಇವರು ಅರ್ಪಿಸುವ 32ನೇ ಕಲಾಕುಸುಮ ದುಷ್ಟರ ನಾಡಿನಲ್ಲಿ ರೈತನ ಘರ್ಜನೆ ನಾಟಕ ಪ್ರದರ್ಶನ ಉದ್ಘಾಟಿಸಿ ಮಾತನಾಡಿ ಅವರು ಯುವಕರಲ್ಲಿ ಸಾಮಾಜಿಕ ಜವಾಬ್ದಾರಿಯ ಅರಿವು ಕಡಿಮೆಯಾಗುತ್ತಿರುವದರಿಂದ ರಂಗ ಕಲೆ ನಶಿಸುತ್ತಿದೆ. ಇಂದು ರಂಗ ಕಲೆಯನ್ನ ಬೆಳೆಸುವ ಕಲಾವಿದರನ್ನು ಪ್ರೋತ್ಸಹಿಸುವ ಕೆಲಸ ನಡೆಯಬೇಕಿದೆ. ಯುವಕರು ಯಾವುದೇ ದುಶ್ಚಟಗಳಿಗೆ ಬಲಿಯಾಗದೇ ಸಾಮಾಜಿಕ ಕಾರ್ಯಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ಜೀವನ ಸಾರ್ಥಕ ಮಾಡಿಕೊಳ್ಳಬೇಕೆಂದು ಹೇಳಿದರು.



ವಿಜಯಪೂರ ಸಿಪಿಐಯ್ ಪ್ರದೀಪ ತಳಕೇರಿ ಮಾತನಾಡಿ ಉತ್ಸವ ಹಾಗೂ ಹಬ್ಬಗಳಿಂದ ಸಮಾಜದಸ್ವಾಸ್ಥ್ಯ ಹಾಗೂ ಬಾಂದವ್ಯ ವೃದ್ದಿಯಾಗಗುತ್ತದೆ. ಗ್ರಾಮೀಣ ಭಾಗದಲ್ಲಿ ರಂಗಕಲೆಯೂ ಇನ್ನೂ ಜೀವಂತವಾಗಿದೆ. ಕಲಾವಿದರನ್ನು ಪ್ರೋತ್ಸಹಿಸಿಬೇಕು ಎಂದರು.

ಧ್ಯಕ್ಷತೆ ಎನ್.ವಾಯ್.ಪಾಟೀಲ ವಹಿಸಿದ್ದರು. ಅನೀಲಕುಮಾರ ರೂಗಿ, ಬೆಳಗಾವಿ ಡಿಸಿಸಿ ಬ್ಯಾಂಕ ನಿರ್ದೇಶಕಿ ಸುನೀತಾ ಐಹೋಳೆ, ಅಪ್ಪಾಸಾಬ ಬಿರಾದಾರ, ಚನ್ನಪ್ಪ ಶೇಗಾಂವಿ, ಬಾಬಾಗೌಡ ಪಾಟೀಲ, ಪ್ರಶಾಂತ ಐಹೋಳೆ, ಶ್ರೀಶೈಲ ಇಂಚಗೇರಿ, ವೆಂಕಣ್ಣ ಅಸ್ಕಿ, ಗಿರೀಶ ಸಜ್ಜನ, ರವಿ ಕವಟಗಿ, ಗುರುರಾಜ ಕಾಮನ, ಅಣ್ಣಪ್ಪ ಹನಗಂಡಿ, ಪೀರಸಾಬ ಮುಲ್ಲಾ, ಮಾದೇವ ಹಾದಿಮನಿ, ಇತರರಿದ್ದರು. ಮಹಾಂತೇಶ ಪೂಜಾರಿ ಸ್ವಾಗತಿಸಿದರು, ಬೆಂಗಳೂರ ಶಂಕರ ಕಾಮನ ನಿರೂಪಿಸಿ ವಂದಿಸಿದರು.

ಮುಖ್ಯಮಂತ್ರಿಗಳ ವಿಶೇಷ ಸೇವಾ ಪದಕ ಪುರಸ್ಕೃತ ಜಗದೀಶಗೆ ಸನ್ಮಾನ



ಖಾನಾಪುರ: ಸ್ಥಳೀಯ ಪೊಲೀಸ್ ಠಾಣೆಯ ಮುಖ್ಯ ಪೇದೆ ಜಗದೀಶ ಕಾದ್ರೊಳ್ಳಿ ಅವರಿಗೆ 2025ನೇ ಸಾಲಿನ ಮುಖ್ಯಮಂತ್ರಿಗಳ ವಿಶೇಷ ಸೇವಾ ಪದಕ ಲಭಿಸಿದ ಹಿನ್ನೆಲೆಯಲ್ಲಿ ಶುಕ್ರವಾರ ಅವರನ್ನು ಹಿರಿಯ ನಾಗರಿಕರ ಕ್ಷೇಮಾಭಿವೃದ್ಧಿ ಸಂಘದ ತಾಲೂಕು ಘಟಕದ ವತಿಯಿಂದ ಸನ್ಮಾನಿಸಲಾಯಿತು.

ಪಟ್ಟಣದ ಜ್ಞಾನೇಶ್ವರ ದೇವಾಲಯದಲ್ಲಿ ನಡೆದ ಸಂಘದ ಸಭೆಯಲ್ಲಿ ಜಗದೀಶ ಅವರನ್ನು ಸಂಘದ ಅಧ್ಯಕ್ಷ ವಿದ್ಯಾಧರ ಬನೋಶಿ, ತಾಲೂಕು ಘಟಕದ ಪದಾಧಿಕಾರಿಗಳಾದ ಸಿ.ಎಸ್ ಪವಾರ, ಎಂ.ಜಿ ಬೆನಕಟ್ಟಿ, ಪ್ರಕಾಶ ಕಾದ್ರೊಳ್ಳಿ, ಉಮಾಕಾಂತ ವಾಘದರೆ, ಎಸ್.ಆರ್ ಕುಂದರಗಿ ಹಾಗೂ ಇತರರು ಸತ್ಕರಿಸಿದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಜಗದೀಶ, ಪೊಲೀಸ್ ಇಲಾಖೆಯಲ್ಲಿ ತಾವು ಮಾಡಿದ ಸೇವೆಯನ್ನು ಗುರುತಿಸಿ ಗೌರವಿಸಿದ ಇಲಾಖೆಗೆ ಮತ್ತು ಹಿರಿಯ ನಾಗರಿಕರ ಸಂಘಕ್ಕೆ ತಾವು ಚಿರಋಣಿ ಎಂದರು.

ಈ ಸಂದರ್ಭದಲ್ಲಿ ಸಂಘದ ಪದಾಧಿಕಾರಿಗಳು, ಸದಸ್ಯರು

ನಗರಸೇವಕ ನಾಶಿಪುಡಿ ವಿನೂತನ ಪ್ರತಿಭಟನೆ

ತಮಟೆ ಬಾರಿಸಿ ಸಿಂಗಲ್ ಟ್ಯಾಕ್ಸ್‌ಗೆ ಆಗ್ರಹ

ಬೆಳಗಾವಿ: ಮಹಾನಗರ ಪಾಲಿಕೆಯ ತೆರಿಗೆ ನೀತಿಗೆ ವಿರೋಧ ವ್ಯಕ್ತಪಡಿಸಿ ಸಿಂಗಲ್ ಟ್ಯಾಕ್ಸ್ ವ್ಯವಸ್ಥೆ ಜಾರಿಗೆ ತರಬೇಕು ಎಂದು ಆಗ್ರಹಿಸಿ ನಗರಸೇವಕ ನಾಶಿಪುಡಿ ವಿನೂತನವಾಗಿ ತಮಟೆ ಬಾರಿಸಿ ಪ್ರತಿಭಟನೆ ನಡೆಸಿದರು.

ನಗರದ ಪಾಲಿಕೆ ಆಯುಕ್ತರ ಕಚೇರಿ ಎದುರು ನಡೆದ ಈ ಪ್ರತಿಭಟನೆಯಲ್ಲಿ ನಾಶಿಪುಡಿ ಅವರು ಸರ್ಕಾರ ಹಾಗೂ ಮಹಾನಗರ ಪಾಲಿಕೆ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಪ್ರಸ್ತುತ ಪಾಲಿಕೆಯು ವಿವಿಧ ರೂಪಗಳಲ್ಲಿ ತೆರಿಗೆ ವಿಧಿಸುತ್ತಿದ್ದು, ಇದು ಸಾಮಾನ್ಯ ಜನರ ಮೇಲೆ ಹೆಚ್ಚುವರಿ ಭಾರವಾಗುತ್ತಿದೆ ಎಂದು ಆರೋಪಿಸಿದರು. ಈಗಿನ ವ್ಯವಸ್ಥೆಯಲ್ಲಿ ಜನರು ದ್ವಿಗುಣ ತೆರಿಗೆ (ಡಬಲ್ ಟ್ಯಾಕ್ಸ್) ಭಾರವನ್ನು ಹೊರುತ್ತಿದ್ದಾರೆ ಎಂಬ ಅಸಮಾಧಾನವೂ ವ್ಯಕ್ತವಾಗಿದೆ.

ಈ ಹಿನ್ನೆಲೆ ಒಂದೇ ತೆರಿಗೆ ಸಿಂಗಲ್ ಟ್ಯಾಕ್ಸ್' ವ್ಯವಸ್ಥೆ ಜಾರಿಗೊಳಿಸಿ ಜನರಿಗೆ ಸುಲಭ ಮತ್ತು ಸ್ಪಷ್ಟ ತೆರಿಗೆ ವ್ಯವಸ್ಥೆ ಕಲ್ಪಿಸಬೇಕು ಎಂದು ಅವರು ಒತ್ತಾಯಿಸಿದರು. ಪ್ರತಿಭಟನೆಯ ವೇಳೆ ತಮಟೆ ಬಾರಿಸುವ ಮೂಲಕ ಜನರ ಗಮನ ಸೆಳೆಯುವ ಪ್ರಯತ್ನ ನಡೆಸಿದ ಅವರು, ಈ ವಿಷಯವನ್ನು ಗಂಭೀರವಾಗಿ ಪರಿಗಣಿಸದಿದ್ದರೆ ಮುಂದಿನ ದಿನಗಳಲ್ಲಿ ಹೋರಾಟವನ್ನು ತೀವ್ರಗೊಳಿಸುವುದಾಗಿ ಎಚ್ಚರಿಕೆ ನೀಡಿದರು.



ಸ್ಥಳದಲ್ಲಿದ್ದ ಕೆಲ ಸಾರ್ವಜನಿಕರು ಮತ್ತು ಬೆಂಬಲಿಗರು ಈ ವಿನೂತನ ಪ್ರತಿಭಟನೆಗೆ ಬೆಂಬಲ ಸೂಚಿಸಿ, ಪಾಲಿಕೆಯ ತೆರಿಗೆ ನೀತಿಯಲ್ಲಿ ಬದಲಾವಣೆ ಆಗತ್ಯವಿದೆ ಎಂದು ಅಭಿಪ್ರಾಯಪಟ್ಟರು.

ಈ ವೇಳೆ ಮಾಹಾ ನಗರ ಪಾಲಿಕೆಯ ವಿರೋಧ ಪಕ್ಷದ ಎಲ್ಲ ನಗರ ಸೇವಕರು ಪ್ರತಿಭಟನೆಯಲ್ಲಿ ಭಾಗಿಯಾಗಿದ್ದರು.

ನಾಳೆಯಿಂದ ಅಡಹಳ್ಳಟ್ಟಿಯಲ್ಲಿ ಬಸವೇಶ್ವರ ಜಾತ್ರೆ

ಅಡಹಳ್ಳಿ: ಸಮೀಪದ ಅಡಹಳ್ಳಟ್ಟಿ ಗ್ರಾಮದ ಶ್ರೀ ಬಸವೇಶ್ವರ ಜಾತ್ರಾ ಮಹೋತ್ಸವ ಏ.20 ರಿಂದ 24ರವರೆಗೆ ಹಲ್ಯಾಳದ ವಿರಕ್ತಮಠ ಶ್ರೀ ಸಿದ್ದರಾಮ ಮಹಾಸ್ವಾಮಿಗಳ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಜರುಗಲಿದೆ.

ಏ.20ರಂದು ಬೆಳಿಗ್ಗೆ 10 ಗಂಟೆಗೆ ಶ್ರೀ ಬಸವಶ್ರೀ ಸೇವಾ ಸಂಘದಿಂದ ವಚನ ಸ್ಪರ್ಧೆ, ಶ್ರೀ ಬಸವೇಶ್ವರ ಮೂರ್ತಿಗೆ ರುದ್ರಾಭಿಷೇಕ, ಮಹಾಪೂಜೆ ಜರುಗುವುದು. ಸಂಜೆ 6 ಗಂಟೆಗೆ ವಿವಿಧ ವಾದ್ಯ ಮೇಳದೊಂದಿಗೆ ಬಸವೇಶ್ವರ ಭಾವಚಿತ್ರದ ಭವ್ಯ ಮೆರವಣಿಗೆ ನಡೆಯಲಿದೆ. ನಂತರ ಸುಮಂಗಲೇಯರಿಂದ ಬಸವೇಶ್ವರ ನಾಮಕರಣ ಕಾರ್ಯಕ್ರಮ, ರಾತ್ರಿ 10 ಗಂಟೆಗೆ ಉಮರಾಣಿಯ ಶ್ರೀ ದಾನಮ್ಮದೇವಿ ನಾಟ್ಯ ಸಂಘದವರಿಂದ ಶ್ರೀ ದಾನಮ್ಮದೇವಿ ಮಹಾತ್ಮೆ ಎಂಬ ಬೈಲಾಟ ನಡೆಯಲಿದೆ.



ಏ.21 ರಂದು ಬೆಳಿಗ್ಗೆ 10 ಗಂಟೆಗೆ ರಸ ಪ್ರಶ್ನೆ ಕಾರ್ಯಕ್ರಮ ಜರುಗಲಿದೆ. ಮಧ್ಯಾಹ್ನ 3 ಗಂಟೆಗೆ ಅಭಿನಂದನಾ ಕಾರ್ಯಕ್ರಮ. ಸಂಜೆ 6 ಗಂಟೆಗೆ ಪ್ರೌಢ ಮತ್ತು ಪದವಿ ಪೂರ್ವ ವಿದ್ಯಾರ್ಥಿಗಳಿಗೆ ಜಾಣ ಕನ್ನಡಿಗ ಎಂಬ ರಾಜ್ಯ ಮಟ್ಟದ ರಸಪ್ರಶ್ನೆ ಕಾರ್ಯಕ್ರಮ. ರಾತ್ರಿ 10 ಗಂಟೆಗೆ ಇಂಡಿ ಹಾಗೂ ದೇವರಗೆನ್ನೂರ ಗ್ರಾಮದವರಿಂದ ಹರದೇಶಿ- ನಾಗೇಶಿ ಗೀಗೀ ಪದಗಳು ನಡೆಯಲಿವೆ.

ಏ.22ರಂದು 10 ಗಂಟೆಗೆ ಗುಂಡು ಎತ್ತುವ ಸ್ಪರ್ಧೆ, ಸಂಗ್ರಾಮ ಕಲ್ಲು ಎತ್ತುವ ಸ್ಪರ್ಧೆ, ಚೀಲ ಎತ್ತುವ ಸ್ಪರ್ದೆ ನಡೆಯಲಿದೆ. ರಾತ್ರಿ 7 ಗಂಟೆಗೆ ನಯನ ಅಳವಂಡಿ ಕಲಾ ತಂಡದವರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಲಿವೆ.

ಏ.23 ರಂದು 10 ಗಂಟೆಗೆ ಬಸವೇಶ್ವರ ಆಶೀರ್ವಾದ ಕಾಯಿ ಸವಾಲು, ಮಧ್ಯಾಹ್ನ 4 ಜಂಗೀ ನಿಕಾಲಿ ಕುಸ್ತಿಗಳು ನಡೆಯಲಿವೆ. ರಾತ್ರಿ 10 ಗಂಟೆಗೆ ಹೆತ್ತವರ ಕನಸು ಎಂಬ ಸಾಮಾಜಿಕ ನಾಟಕ ನಡೆಯಲಿದೆ.

ಏ. 24 ರಂದು ಮುಂಜಾನೆ 10 ಗಂಟೆಗೆ ಶ್ರೀ ಬಸವೇಶ್ವರರ ಪಲ್ಲಕ್ಕಿ ಉತ್ಸವ, 11 ಗಂಟೆಗೆ ಅಪ್ಪುಗುಡದಿನ್ನಿ ಕಲಾ ತಂಡದವರಿಂದ ಸಂಗೀತ ರಸ ಮಂಜರಿ ಕಾರ್ಯಕ್ರಮ ಜರುಗಲಿದೆ ಎಂದು ಜಾತ್ರಾ ಸದ್ಭಕ್ತ ಮಂಡಳಿ ತಿಳಿಸಿದೆ.

ಕಿರುಸುದ್ದಿ

ಸಿಇಟಿ ಪರೀಕ್ಷೆ: ನಿಷೇಧಾಜ್ಞೆ

ಬೆಳಗಾವಿ : ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಬೆಂಗಳೂರು ಇವರ ವತಿಯಿಂದ 2026 ನೇ ಸಾಲಿನ ವೃತ್ತಿಪರ ಕೋರ್ಸುಗಳ ಪ್ರವೇಶಕ್ಕಾಗಿ ಸಾಮಾನ್ಯ ಪ್ರವೇಶ ಪರೀಕ್ಷೆಯು ಬೆಳಗಾವಿ ಜಿಲ್ಲೆಯ ಬೆಳಗಾವಿ ನಗರ, ಚಿಕ್ಕೋಡಿ, ಗೋಕಾಕ್ ಹಾಗೂ ಅಥಣಿ ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆಗಳು ಜರುಗಲಿರುತ್ತವೆ ಪರೀಕ್ಷಾ ಕೇಂದ್ರಗಳ ಸುತ್ತ ನಿಷೇಧಾಜ್ಞೆ ಜಾರಿಗೊಳಿಸಿ ಜಿಲ್ಲಾಧಿಕಾರಿ ಮೊಹಮ್ಮದ ರೋಷನ್ ಆದೇಶ ಹೊರಡಿಸಿರುತ್ತಾರೆ.

ನಗರದಲ್ಲಿ ಏಪ್ರಿಲ್ 22ರಿಂದ ಏ.24 ರವರೆಗೆ, ಬೆಳಗಾವಿ ಶೈಕ್ಷಣಿಕ ಜಿಲ್ಲೆಯಲ್ಲಿ ಒಟ್ಟು-21 ಪರೀಕ್ಷಾ ಕೇಂದ್ರಗಳು ಹಾಗೂ ಚಿಕ್ಕೋಡಿ-11, ಅಥಣಿ-06, ಗೋಕಾಕ್-07 ಒಟ್ಟು ಚಿಕ್ಕೋಡಿ ಶೈಕ್ಷಣಿಕ ಜಿಲ್ಲೆಯಲ್ಲಿ 24 ಪರೀಕ್ಷಾ ಕೇಂದ್ರಗಳಲ್ಲಿ, ಹೀಗೆ ಬೆಳಗಾವಿ ಜಿಲ್ಲೆಯಲ್ಲಿ ಒಟ್ಟು 42 ಪರೀಕ್ಷಾ ಕೇಂದ್ರಗಳಲ್ಲಿ ಸಾಮಾನ್ಯ ಪ್ರವೇಶ ಪರೀಕ್ಷೆಯು ಜರುಗಲಿರುತ್ತವೆ.ಪರೀಕ್ಷಾ ಕೇಂದ್ರಗಳ ಸುತ್ತಮುತ್ತ 200ಮೀ. ವ್ಯಾಪ್ತಿಯಲ್ಲಿ ಮುಂಜಾಗ್ರತಾ ಕ್ರಮವಾಗಿ ಯಾವುದೇ ಅಹಿತಕರ ಘಟನೆಗಳು ಜರುಗದಂತೆ ನೋಡಿಕೊಳ್ಳಲು ಹಾಗೂ ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡುವ ಹಿತ ದೃಷ್ಟಿಯಿಂದ ಜಿಲ್ಲಾ ದಂಡಾಧಿಕಾರಿಗಳು ನಿಷೇಧಾಜ್ಞೆ ಹೊರಡಿಸಿರುತ್ತಾರೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ನೀರಿಗಾಗಿ ಸಹಾಯವಾಣಿ

ಬೆಳಗಾವಿ : ತಾಲೂಕಿನಲ್ಲಿ ಸಾರ್ವಜನಿಕರಿಗೆ ಹಾಗೂ ಜಾನುವಾರುಗಳಿಗೆ ಕುಡಿಯುವ ನೀರಿನ ಸಮಸ್ಯೆ ಉಂಟಾಗುವುದರಿಂದ ಸಮಸ್ಯೆಯನ್ನು ಶೀಘ್ರಗತಿಯಲ್ಲಿ ಪರಿಹರಿಸುವ ನಿಟ್ಟಿನಲ್ಲಿ ತಾಲೂಕ ಪಂಚಾಯತ ಕಚೇರಿಯಲ್ಲಿ ಕುಡಿಯುವ ನೀರಿನ ಸಮಸ್ಯೆ ಕುರಿತು ದೂರುಗಳನ್ನು ಸ್ವೀಕರಿಸಲು ಸಹಾಯವಾಣಿ ಕೇಂದ್ರವನ್ನು ತೆರೆಯಲಾಗಿದೆ. ಸಹಾಯವಾಣಿ ಕೇಂದ್ರವು ಬೆಳಿಗ್ಗೆ 10 ರಿಂದ ಸಂಜೆ 6 ಗಂಟೆಯವರೆಗೆ ಕಾರ್ಯನಿರ್ವಹಿಸಲಾಗುತ್ತಿದ್ದು, ಸಾರ್ವಜನಿಕರು ಕುಡಿಯುವ ನೀರಿನ ಸಮಸ್ಯೆ ಉಂಟಾದಲ್ಲಿ ತೆರೆಯಲಾದ ಸಹಾಯವಾಣಿ ಕೇಂದ್ರದ ದೂರವಾಣಿ ಸಂಖ್ಯೆ 8861331349 ಗೆ ಕರೆ ಮಾಡಿ ದೂರು ದಾಖಲಿಸಬಹುದಾಗಿದೆ ಎಂದು ಬೆಳಗಾವಿ ತಾಲೂಕ ಪಂಚಾಯತ ಕಾರ್ಯನಿರ್ವಾಹಕ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಂಬೇಡ್ಕರ್ ಜಯಂತಿ: ನಟ ಚೇತನ ಭಾಗಿ

ರಾಮದುರ್ಗ: ಡಾ. ಬಿ. ಆರ್. ಅಂಬೇಡ್ಕರ ಅವರ ಕನಸು ನನಸಾಗ ಬೇಕಾದರೆ ಪರಿಶಿಷ್ಟರ ಶಿಕ್ಷಣ ಪಡೆದು ಉನ್ನತ ಹುದ್ದೆಯಲ್ಲಿ ಕೆಲಸ ಮಾಡಿದರೆ ಅಲ್ಲ ಅಸಮಾನತೆಯನ್ನು ಮೆಟ್ಟಿ ಸಮಾಜದಲ್ಲಿ ಸಮಾನತೆ ಮೂಡಿದಾಗ ಮಾತ್ರ ಸಾಧ್ಯ ಅಂಬೇಡ್ಕರ ಕನಸು ನನಸಾಗಲು ಸಾಧ್ಯ ಎಂದು ನಟ ಚೇತನ ಹೇಳಿದರು.ಬುಧವಾರ ಸಂಜೆ ಪಟ್ಟಣದ ಗ್ರಂಥಾಲಯದ ಹತ್ತಿರ ವಿವಿಧ ದಲಿತಪರ ಸಂಘಟನೆಗಳು ಡಾ. ಬಿ. ಆರ್. ಅಂಬೇಡ್ಕರ ಜಯಂತಿ ಅಂಗವಾಗಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಪಠ್ಯ ಪುಸ್ತಕದ ಶಿಕ್ಷಣದಿಂದ ಸಮಾಜದಲ್ಲಿ ಸಮಾನತೆ ಮೂಡಲು ಸಾಧ್ಯವಿಲ್ಲ ನಮಗೆಲ್ಲ ಚಳವಳಿಯ ಶಿಕ್ಷಣದ ಅಗತ್ಯವಿದೆ ಎಂದರು.ಡಿಸಿಸಿ ಬ್ಯಾಂಕ ನಿರ್ದೇಶಕ ಮಲ್ಲಣ್ಣ ಯಾದವಾಡ, ಜನಪರ ಟ್ರಸ್ಟ್ ಅಧ್ಯಕ್ಷ ಸುಭಾಸಚಂದ್ರ ಘೋಡಕೆ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕ್ರಮ ವೇದಿಕೆಯಲ್ಲಿ ಜಿಪಂ ಮಾಜಿ ಸದಸ್ಯ ಜಹೂರ ಹಾಜಿ, ಸಿದ್ದು ಮೇತ್ರಿ, ಮಹ್ಮದಶಫಿ ಬೆಣ್ಣಿ, ಅಭಿ ಮುನವಳ್ಳಿ, ಚಿದಾನಂದ ದೊಡಮನಿ, ಅಲ್ತಾಫ ಜಹಗೀರದಾರ ಸೇರಿದಂತೆ ಹಲವರಿದ್ದರು.ಡಿಎಸ್‌ಎಸ್ ಸಂಚಾಲಕ ಗೋಪಾಲ ಮಾದರ ಸ್ವಾಗತಿಸಿದರು. ಗೈಬು ಜೈನೆಖಾನ ಪ್ರಾಸ್ತಾವಿಕವಾಗಿ ಮಾತನಾಡಿದರು. ಪವನ ದೇಶಪಾಂಡೆ ನಿರೂಪಿಸಿದರು.

ಏ.21ರಂದು ಮದ್ಯದಂಗಡಿಗಳು ಬಂದ್

ಬೆಳಗಾವಿ: ಛತ್ರಪತಿ ಶಿವಾಜಿ ಜಯಂತಿಯ ಆಚರಣೆ ಹಿನ್ನೆಲೆಯಲ್ಲಿ ಬೆಳಗಾವಿ ತಾಲೂಕಿನಾದ್ಯಂತ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವ ದೃಷ್ಟಿಯಿಂದ ಮುಂಜಾಗ್ರತಾ ಕ್ರಮವಾಗಿ ಏಪ್ರಿಲ್ 21 ರಂದು ಬೆಳಿಗ್ಗೆ 6 ಗಂಟೆಯಿಂದ ಏಪ್ರಿಲ್ 22 ರಂದು ಬೆಳಿಗ್ಗೆ 6 ಗಂಟೆಯವರೆಗೆ ಮಧ್ಯ ಮಾರಾಟವನ್ನು ಬಂದ್ ಮಾಡುವಂತೆ ಬೆಳಗಾವಿ ನಗರ ಹೆಚ್ಚುವರಿ ಜಿಲ್ಲಾ ದಂಡಾಧಿಕಾರಿಗಳು ಹಾಗೂ ಪೊಲೀಸ್ ಆಯುಕ್ತರಾದ ಬೊರಸೆ ಭೂಷಣ್ ಗುಲಾಬರಾವ್ ಅವರು ಆದೇಶ ಹೊರಡಿಸಿದ್ದಾರೆ.

ನಿಧನ ಸುದ್ದಿ

ನಾಗಪ್ಪ ಕೋಲಕಾರ



ಹಿರೇಬಾಗೇವಾಡಿ: ಇಲ್ಲಿಯ ಬಸವನಗರ ನಿವಾಸಿ ನಾಗಪ್ಪ ಸತ್ಯಪ್ಪ ಕೋಲಕಾರ (78) ಗುರುವಾರ ರಾತ್ರಿ ಹೃದಯಘಾತದಿಂದ ನಿಧನರಾಗಿದ್ದಾರೆ. ಮೃತರು ಪತ್ನಿ, ಮೂವರು ಗಂಡು ಮಕ್ಕಳು, ಓರ್ವ ಪುತ್ರಿ ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.



ಮುಗಳಖೋಡ: ಪಟ್ಟಣದ ಡಾ.ಸಿ.ಬಿ.ಕುಲಿಗೋಡ ಪದವಿ ಮಹಾವಿದ್ಯಾಲಯದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅವರ 135 ನೇ ಜಯಂತಿ ನಿಮಿತ್ತ ಭಾಷಣ ಮತ್ತು ಗಾಯನ ಸ್ಪರ್ಧೆ ಕಾರ್ಯಕ್ರಮ ನಡೆಯಿತು. ವಾಣಿಜ್ಯ ವಿಭಾಗದ ಪ್ರಾಧ್ಯಾಪಕ ಬಿ.ಎಸ್.ಸವಸುದ್ದಿ, ಪ್ರಾಚಾರ್ಯ ಪಿ.ಸಿ.ಕಂಬಾರ, ಆರ್. ಎಸ್. ಶೇಗುಣಸಿ, ಕಚೇರಿ ಅಧೀಕ್ಷಕ ಹುಸೇನ್ ಯಲಿಗಾರ, ಸಹಾಯಕ ಸಂಗಣ್ಣ ತೇಲಿ ಸೇರಿದಂತೆ ಎಲ್ಲ ಉಪನ್ಯಾಸಕರು, ವರ್ಗ ಪ್ರತಿನಿಧಿಗಳು, ವಿದ್ಯಾರ್ಥಿಗಳು ಇದ್ದರು.

ಹೊಲಿಗೆ ತರಬೇತಿ ಸಮಾರೋಪ

ಯಮಕನಮರಡಿ: ಎಫ್‌ವಿಟಿಆರ್‌ಎಸ್ ಬೆಂಗಳೂರು ಹಾಗೂ ಮಹಿಳಾ ಕಲ್ಯಾಣ ಸಂಸ್ಥೆಯ ಶಕ್ತಿ ಸದನ ಮಹಿಳೆಯರ ಪುನರ್ವಸತಿ ಕೇಂದ್ರ ಹಿಡಕಲ್ ಡ್ಯಾಮ್ ಸಂಯುಕ್ತ ಆಶ್ರಯದಲ್ಲಿ ಹಮ್ಮಿಕೊಂಡಿದ್ದ 4 ತಿಂಗಳ ಟೇಲರಿಂಗ್ ತರಬೇತಿಯ ಸಮಾರೋಪ ಸಮಾರಂಭ ಹಾಗೂ ಪ್ರಮಾಣಪತ್ರ ವಿತರಣಾ ಕಾರ್ಯಕ್ರಮ ಹುಕ್ಕೇರಿ ತಾಲೂಕಿನ ಹಿಡಕಲ್ ಡ್ಯಾಮ್ ನ ಶಕ್ತಿ ಸದನ ಸಭಾಂಗಣದಲ್ಲಿ ನಡೆಯಿತು.ಮಹಿಳಾ ಕಲ್ಯಾಣ ಸಂಸ್ಥೆಯ ಸಂಯೋಜಕರಾದ ಸುರೇಖಾ ಪಾಟೀಲ ಮಾತನಾಡಿ, ಸಮಾಜದಲ್ಲಿ ಮಹಿಳೆಯರು ವೃತ್ತಿ ತರಬೇತಿಗಳನ್ನು ಪಡೆದುಕೊಂಡು ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ಅಭಿವೃದ್ಧಿಯಾಗಬೇಕು. ಮಹಿಳೆಯರು ಆರ್ಥಿಕವಾಗಿ ಸಂಬಲರಾದಾಗ ಮಾತ್ರ ಕುಟುಂಬದ ಸಮುದಾಯದ ಹಾಗೂ ಸಮಾಜದ ಏಳಿಗೆಗೆ ಪೂರಕ ಎಂದರು.ಅಧ್ಯಕ್ಷತೆ ಅಲಂಕರಿಸಿದ್ದ ವಿಜಯ ಕರ್ನಾಟಕ ರಕ್ಷಣಾ ವೇದಿಕೆಯ ಮಹಿಳಾ ಘಟಕದ ರಾಜ್ಯ ಕಾರ್ಯದರ್ಶಿಯಾದ ಜಯಶ್ರೀ ಮತ್ತಿಕೊಪ್ಪ ಮಾತನಾಡಿ, ಗ್ರಾಮೀಣ ಭಾಗದ ಮಹಿಳೆಯರಿಗೆ ಇಂತಹ ತರಬೇತಿಗಳು ಅಗತ್ಯವಾಗಿದ್ದು ಇಂತಹ ತರಬೇತಿ ಆಯೋಜಿಸುತ್ತಿರುವ ಸಂಘಟಕರನ್ನು ಶ್ಲಾಘಿಸಿದರು. ಕಾರ್ಯಕ್ರಮದಲ್ಲಿ ತರಬೇತಿ ಪಡೆದ ಪ್ರಶಿಕ್ಷಣಾರ್ಥಿಗಳು ತಮ್ಮ ಅನುಭವದ ನುಡಿಗಳನ್ನು ಹಂಚಿಕೊಂಡರು. ಕಾರ್ಯಕ್ರಮದಲ್ಲಿ ಎಫ್ ವಿ ಟಿ ಆರ್ ಎಸ್ ಕ್ಷೇತ್ರ ಸಂಯೋಜಕರಾದ ಬಸವರಾಜ ಮಣ್ಣಿಕೇರಿ, ಶಕ್ತಿ ಸದನ ಮಹಿಳಾ ಪುನರ್ವಸತಿ ಕೇಂದ್ರದ ಅಧೀಕ್ಷಕರಾದ ದ್ರಾಕ್ಷಾಯಿನಿ ಮಠಪತಿ ಹಾಗೂ ತರಬೇತಿದಾರರಾದ ಮಂದಾಕಿನಿ ಹಟ್ಟಿ ಉಪಸ್ಥಿತರಿದ್ದರು.



ಯಮಕನಮರಡಿ: ಎಫ್‌ವಿಟಿಆರ್‌ಎಸ್ ಬೆಂಗಳೂರು ಹಾಗೂ ಮಹಿಳಾ ಕಲ್ಯಾಣ ಸಂಸ್ಥೆಯ ಶಕ್ತಿ ಸದನ ಮಹಿಳೆಯರ ಪುನರ್ವಸತಿ ಕೇಂದ್ರ ಹಿಡಕಲ್ ಡ್ಯಾಮ್ ಸಂಯುಕ್ತ ಆಶ್ರಯದಲ್ಲಿ ಹಮ್ಮಿಕೊಂಡಿದ್ದ 4 ತಿಂಗಳ ಟೇಲರಿಂಗ್ ತರಬೇತಿಯ ಸಮಾರೋಪ ಸಮಾರಂಭ ಹಾಗೂ ಪ್ರಮಾಣಪತ್ರ ವಿತರಣಾ ಕಾರ್ಯಕ್ರಮ ಹುಕ್ಕೇರಿ ತಾಲೂಕಿನ ಹಿಡಕಲ್ ಡ್ಯಾಮ್ ನ ಶಕ್ತಿ ಸದನ ಸಭಾಂಗಣದಲ್ಲಿ ನಡೆಯಿತು.

ಅಧಿಕಾರಿಗಳೊಂದಿಗೆ ಶಾಸಕ ಗಣೇಶ ಹುಕ್ಕೇರಿ ಸಭೆ

ನೀರು ಪೂರೈಕೆಗೆ ಕ್ರಮ ಕೈಗೊಳ್ಳಿ

ಚಿಕ್ಕೋಡಿ: ಚಿಕ್ಕೋಡಿ, ಸದಲಗಾ, ಯಕ್ಸಂಬಾ ಪಟ್ಟಣ ಸೇರಿದಂತೆ ತಾಲೂಕು ವ್ಯಾಪ್ತಿಯಲ್ಲಿ ಬೇಸಿಗೆ ಕಾಲದಲ್ಲಿ ಕುಡಿಯುವ ನೀರು ಪೂರೈಕೆಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಶಾಸಕ ಗಣೇಶ ಹುಕ್ಕೇರಿ ಅಧಿಕಾರಿಗಳಿಗೆ ಸೂಚಿಸಿದರು.

ಪಟ್ಟಣದ ನೂತನ ಪುರಸಭೆ ಕಚೇರಿ ಸಭಾಭವನದಲ್ಲಿ ಚಿಕ್ಕೋಡಿ ತಾಲೂಕಿನ ಕುಡಿಯುವ ನೀರು, ಮೇವು ಪೂರೈಕೆ ಹಾಗೂ ಹವಾಮಾನ ವೈಪರಿತ್ಯ ವಿಷಯದ ಕುರಿತು ಶನಿವಾರ ಕರೆದ ಅಧಿಕಾರಿಗಳ ಸಭೆಯಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿ, ಮುಂದಿನ ಎರಡು ತಿಂಗಳ ಅವಧಿಯಲ್ಲಿ ಕುಡಿಯುವ ನೀರು ಪೂರೈಕೆಯಲ್ಲಿ ಯಾವುದೇ ಸಮಸ್ಯೆ ಬಾರದಂತೆ ಸಂಬಂಧಿಸಿದ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು. ಯಾವುದೇ ಲೋಪಗಳು ಆದಲ್ಲಿ ಸಂಬಂಧಿಸಿದ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದರು.

ಚಿಕ್ಕೋಡಿ ಪಟ್ಟಣಕ್ಕೆ ಬೇಸಿಗೆ ಅವಧಿಯಲ್ಲಿ ನೀರು ಪೂರೈಕೆ ಮಾಡಲು ವಿದ್ಯುತ್ ಸಮಸ್ಯೆ ಕಾಡುತ್ತಿದೆ. ಆಗಾಗ ವಿದ್ಯುತ್ ಕೈಕೊಡುವದರಿಂದ ಸಮರ್ಪಕವಾಗಿ ನೀರು ಪೂರೈಕೆಯಲ್ಲಿ ವ್ಯತ್ಯಯ ಉಂಟಾಗುತ್ತದೆ. ಈ ಕುರಿತು ಕ್ರಮ ಕೈಗೊಂಡಲ್ಲಿ ಪಟ್ಟಣಕ್ಕೆ ಕೃಷ್ಣಾ ನದಿಯಿಂದ ನೀರು ಪೂರೈಕೆ ಮಾಡಲು ಅನುಕೂಲವಾಗುತ್ತದೆ ಎಂದು ಚಿಕ್ಕೋಡಿ ಪುರಸಭೆ ಮುಖ್ಯಾಧಿಕಾರಿ ಜಗದೀಶ ಈಟಿ ಸಭೆಯ ಗಮನಕ್ಕೆ ತಂದರು.

ಹೆಸ್ಕಾಂ ಕಚೇರಿಯ ಸಹಾಯಕ ಕಾರ್ಯನಿರ್ವಾಹಕ ಅಧಿಕಾರಿ ಸುಖಸಾರೆ ಮಾತನಾಡಿ, ಕುಡಿಯುವ ನೀರು ಪೂರೈಕೆ ಮಾಡಲು ಬಳಸುವ ವಿದ್ಯುತ್ ಮಾರ್ಗದಲ್ಲಿ ಸಮಸ್ಯೆ ಇದ್ದು, ಕೂಡಲೇ ಇದನ್ನು



ಕಪ್ಪು ಪಟ್ಟಿಗೆ ಸೇರಿಸಿ

ಜಲಜೀವನ ಮಿಷನ್, ಬಹುಗ್ರಾಮ ಕುಡಿಯುವ ನೀರು ಪೂರೈಕೆ ಯೋಜನೆ ಸೇರಿದಂತೆ ನೀರು ಪೂರೈಕೆಯ ಯೋಜನೆಗಳನ್ನು ಗುತ್ತಿಗೆದಾರರು ಸರಿಪಡಿಸಿ ನೀರು ಪೂರೈಕೆಗೆ ಅನುಕೂಲ ಮಾಡಿಕೊಡಬೇಕು. ನಿರ್ಲಕ್ಷ್ಯ ತೋರಿದ ಗುತ್ತಿಗೆದಾರರ ಹೆಸರುಗಳನ್ನು ಕಪ್ಪುಪಟ್ಟಿಗೆ ಸೇರಿಸಲಾಗುವುದು ಎಂದು ಚಿಕ್ಕೋಡಿ ಉಪ ವಿಭಾಗಾಧಿಕಾರಿ ಸುಭಾಷ ಸಂಪಗಾವಿ ಕಿಡಿಕಾರಿದರು.

ಚಿಕ್ಕೋಡಿ-ಸದಲಗಾ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಗ್ರಾಮ ಪಂಚಾಯಿತಿಯ ಆಡಳಿತಾಧಿಕಾರಿಗಳು, ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಪಟ್ಟಣ ಪಂಚಾಯಿತಿ, ಪುರಸಭೆಯ ಮುಖ್ಯಾಧಿಕಾರಿಗಳು ತಮ್ಮ ಕ್ಷೇತ್ರ ವ್ಯಾಪ್ತಿಯಲ್ಲಿ ಕುಡಿಯುವ ನೀರು ಪೂರೈಕೆಗೆ ಇರುವ ಸಮಸ್ಯೆ, ಕೈಗೊಳ್ಳಬೇಕಾದ ಕ್ರಮಗಳ ಕುರಿತು ಸಭೆಯ ಗಮನಕ್ಕೆ ತಂದರು.

ಸರಿಪಡಿಸಲಾಗುವುದು ಎಂದು ಉತ್ತರಿಸಿದರು.

ಯಕ್ಸಂಬಾ ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ಮಹಾಂತೇಶ ನಿಡವಣಿ ಮಾತನಾಡಿ, ಯಕ್ಸಂಬಾ ಪಟ್ಟಣ ಪಂಚಾಯಿತಿ ವ್ಯಾಪ್ತಿಯ 5 ವಾರ್ಡ್‌ಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಇದ್ದು, ಈ ಕುರಿತು ಕ್ರಮ ಕೈಗೊಳ್ಳಲು ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದರು.

ಸಭೆಯಲ್ಲಿ ಚಿಕ್ಕೋಡಿ ತಹಶೀಲ್ದಾರ್ ರಾಜೇಶ ಬುರ್ಲಿ, ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ರವಿಕುಮಾರ ಹುಕ್ಕೇರಿ, ಚಿಕ್ಕೋಡಿ ವಿಭಾಗದ ಗ್ರಾಮೀಣ ಕುಡಿಯುವ ನೀರು ಪೂರೈಕೆ ಹಾಗೂ ನೈರ್ಮಲ್ಯ ವಿಭಾಗದ ಕಾರ್ಯನಿರ್ವಾಹಕ ಅಭಿಯಂತರ ಪಾಂಡುರಂಗರಾವ್ ಸೇರಿದಂತೆ ಹಲವು ಅಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.

ಪ್ರಜಾಸೌಧ ನಿರ್ಮಾಣ ಸ್ಥಳ ಪರಿಶೀಲಿಸಿದ ಡಿಸಿ

ಯರಗಟ್ಟಿ: ಜಿಲ್ಲಾಧಿಕಾರಿ ಮಹಮ್ಮದ ರೋಶನ ಯರಗಟ್ಟಿ ತಾಲೂಕಿಗೆ ಶನಿವಾರ ಭೇಟಿ ನೀಡಿ ಸಚಿವ ಸಂಪುಟದಲ್ಲಿ ಅನು ಮೋದನೆ ದೊರೆತ ಪ್ರಜಾಸೌಧ ಸ್ಥಳ ಪರಿಶೀಲನೆ ನಡೆಸಿದರು.

ಯರಗಟ್ಟಿಯಲ್ಲಿ 8.60 ಕೋಟಿ ವೆಚ್ಚದಲ್ಲಿ ಪ್ರಜಾಸೌಧ ನಿರ್ಮಾಣ ಮಾಡಲು ಆಡಳಿತಾತ್ಮಕ ಅನುಮೋದನೆ ದೊರೆತಿರುವ ಹಿನ್ನಲೆಯಲ್ಲಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ ಮಾತನಾಡಿ,ಎರಡು ವಾರಗಳ ನಂತರ ಕಾಮಗಾರಿ ಅನುಷ್ಠಾನ ಸಂಬಂಧ ತ್ವರಿತ ಕ್ರಮ ವಹಿಸುವಂತೆ

ಅಧಿಕಾರಿಗಳಿಗೆ ಸೂಚಿಸಿದರು. ನೂತನ ತಾಲೂಕಿಗೆ ಶೀಘ್ರದಲ್ಲೇ ಸರ್ವೇ ಆಫೀಸ್ ಪ್ರಾರಂಭಿಸಲಾಗುವುದು ಎಂದರು.

ಈ ವೇಳೆ ತಹಶೀಲ್ದಾರ ಎಮ್ ವ್ಹಿ ಗುಂಡಪ್ಪಗೋಳ, ಲೋಕೋಪಯೋಗಿ ಇಲಾಖೆ ಅಧಿಕಾರಿ ಪ್ರಕಾಶ ಪಾಟೀಲ, ಎ.ಡಿ.ಎಲ್.ಆರ್ ಎಂ. ಆಯ್. ಬೆನಕಟ್ಟಿ, ಸರ್ವೇ ಅಧಿಕಾರಿ ಶ್ರೀಮಂತ ಬಡಿಗೇರ, ಶಿರಸ್ತದಾರ ಎಸ್. ಬಿ. ಕುಲಕರ್ಣಿ, ಗ್ರಾಮದ ಆಡಳಿತಾಧಿಕಾರಿಗಳಾದ ಯಲ್ಲಪ್ಪ ಭಾಂಗಿ, ಎಲ್. ಬಿ. ದಳವಾಯಿ, ಗ್ರಾಮ ಸಹಾಯಕರ ಮಡಿವಾಳಪ್ಪ ವನ್ನೂರ ಸೇರಿದಂತೆ ಅನೇಕರು ಇದ್ದರು.



ಮದ್ಯಪಾನ ಸಂಪೂರ್ಣ ನಿಷೇಧ ಮಾಡಲಿ

ಮುಗಳಖೋಡ: ವ್ಯಕ್ತಿಯು ಮನಸ್ಸಿನಲ್ಲಿ ಗಟ್ಟಿ ನಿರ್ಧಾರ ಮಾಡಿದರೆ ಮಾತ್ರ ಮದ್ಯ ಕುಡಿಯುವುದನ್ನು ನಿಲ್ಲಿಸುತ್ತಾನೆ. ಸರ್ಕಾರಕ್ಕೆ ಬಡವರ ಬಗ್ಗೆ ಹಾಗೂ ಮಹಿಳೆಯರ ಬಗ್ಗೆ ಕರುಣೆ, ಕಾಳಜಿ ಇದ್ದರೇ ಕಲ್ಯಾಣ ಕರ್ನಾಟಕವನ್ನು ಕಟ್ಟಬೇಕು ಎನ್ನುವ ಕನಸು, ಹಂಬಲವಿದ್ದರೆ, ಸರ್ಕಾರವು ಮದ್ಯಪಾನವನ್ನು ಸಂಪೂರ್ಣ ನಿಷೇಧ ಮಾಡಬೇಕು ಎಂದು ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ, ಮಾಜಿ ಶಾಸಕ ಪಿ.ರಾಜೀವ್ ಹೇಳಿದರು.

ಅವರು ಸಮೀಪದ ಹಂದಿಗುಂದ ಗ್ರಾಮದ ಶ್ರೀ ಸಿದ್ದೇಶ್ವರ ವಿರಕ್ತ ಮಠದ ಸಭಾಭವನದಲ್ಲಿ ಮದ್ಯವರ್ಜನ ಶಿಬಿರ ವ್ಯವಸ್ಥಾಪನ ಸಮಿತಿ ಹಂದಿಗುಂದ, ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಡಿಸಿ ಟ್ರಸ್ಟ್ ಹಾರೂಗೇರಿ ಸಯುಕ್ತ ಆಶ್ರಯದಲ್ಲಿ, ಏ. 22ರ ವರೆಗೆ 8 ದಿನಗಳ ವರೆಗೆ ಜರಗುವ 2048ನೇ ಮಧ್ಯವರ್ಜನ ಶಿಬಿರದ ಉದ್ಘಾಟನಾ ಕಾರ್ಯಕ್ರಮದಲ್ಲಿ ಜ್ಯೋತಿ ಬೆಳಗಿಸುವುದರೊಂದಿಗೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.ಜಿಪಂ ಮಾಜಿ ಸದಸ್ಯ ಡಾ.ಸಿಬಿ ಕುಲಿಗೋಡ, ಧಾರವಾಡ ಜನ ಜಾಗೃತಿ ಪ್ರಾದೇಶಿಕ ಕಚೇರಿಯ ಯೋಜನಾಧಿಕಾರಿ ಭಾಸ್ಕರ್.ಎನ್, ಜಿಪಂ ಮಾಜಿ ಸದಸ್ಯ ರಾಮನಗೌಡ ಪಾಟೀಲ ಮಾತನಾಡಿದರು. ಗುರುಮಠದ ಗುರುಲಿಂಗಯ್ಯ ಸ್ವಾಮೀಜಿ ಸಾನ್ನಿಧ್ಯವಹಿಸಿದ್ದರು. ಅಥಣಿ ಜಿಲ್ಲಾ ಜಾಗೃತಿ ವೇದಿಕೆ ಟ್ರಸ್ಟ್ ಅಧ್ಯಕ್ಷ ಅಮರ ದುರ್ಗಣ್ಣವರ ಸಭೆಯ ಅಧ್ಯಕ್ಷತೆವಹಿಸಿದ್ದರು. ಸಿದ್ದೇಶ್ವರ ಮಠದ ಅರ್ಚಕರು ಗುರುಲಿಂಗಯ್ಯ ಮಠದ ಸನ್ನಿದಾನ ಸಹಿಸಿದ್ದರು.ವೇದಿಕೆಯ ಮೇಲೆ ಗ್ರಾಪಂ ಅಧ್ಯಕ್ಷೆ ಶ್ರೀದೇವಿ ಹೆಗ್ಗಾಣಿ, ಮಾಜಿ ಜಿಪಂ ಸದಸ್ಯ ಡಾ: ಸಿ.ಬಿ.ಕುಲಿಗೋಡ, ಧರ್ಮಸ್ಥಳ ಗ್ರಾಮಾಭಿವೃದ್ಧಿಯ ಯೋಜನೆ ಜಿಲ್ಲಾ ನಿರ್ದೇಶಕಿ ನಾಗರತ್ನ ಹೆಗಡೆ, ಷಣ್ಮುಖ ತೇರದಾಳ, ಜಿಪಂ ಮಾಜಿ ಸದಸ್ಯ ರಾಮನಗೌಡ ಪಾಟೀಲ, ಯಕ್ಸಂಬಾ ಶ್ರೀ ಬೀರೇಶ್ವರ ಸೊಸೈಟಿ ನಿರ್ದೇಶಕ ಮಲ್ಲಿಕಾರ್ಜುನ ತೇಲಿ, ಪ್ರಗತಿಪರ ಕೃಷಿಕರು ಪರಪ್ಪ ಬಂಗಿ, ಸಂಗಪ್ಪ ಮಿರ್ಜಿ, ಮುಗಳಖೋಡ ಪುರಸಭೆಯ ಸದಸ್ಯ ಮಂಗಲ ಪನದಿ, ಅನ್ನಪೂರ್ಣ ಯರಡತ್ತಿ, ಹನುಮಂತ ಸಣ್ಣಕಿನವರ, ಬಿಜೆಪಿ ಕುಡಚಿ ಮಂಡಲ ಅಧ್ಯಕ್ಷ ಸಿದ್ದು ಮೂಡಲಗಿ, ಗ್ರಾಪಂ ಸದಸ್ಯ ಶೋಭಾ



ಜಾತ್ರೆಗಳು ಸಂಸ್ಕೃತಿಯ ಪ್ರತೀಕ

ಯರಗಟ್ಟಿ: ಜಾತ್ರೆ, ಹಬ್ಬ, ಹರಿದಿನಗಳು ಭಾರತೀಯ ಸೌಹಾರ್ದ ಸಂಸ್ಕೃತಿ ಪ್ರತೀಕದಂತಿವೆ ದೇವರ ಜಾತ್ರೆಗಳು, ಗ್ರಾಮಗಳ ಒಂದು ಪ್ರಮುಖ ಪರಂಪರೆ. ಸಾಮಾನ್ಯವಾಗಿ ಒಂದು ಸಾರ್ವಜನಿಕ ಉದ್ದೇಶಕ್ಕಾಗಿ ಒಂದುಗೂಡುವಿಕೆಯನ್ನು ಜಾತ್ರೆ ಎಂದು ಪರಿಗಣಿಸಲಾಗುತ್ತದೆ ಎಂದು ಸಹಾಯಕ ಕೃಷಿ ನಿರ್ದೇಶಕ ಶಿವಪ್ರಕಾಶ ಪಾಟೀಲ ಹೇಳಿದರು.

ಪಟ್ಟಣದ ಮರಡಿ ಬಸವೇಶ್ವರ ಜಾತ್ರಾ ನಿಮಿತ್ತ ಹಮ್ಮಿಕೊಂಡಿದ್ದ ತತ್ವಪದಗಳ ಭಜನಾ ಕಾರ್ಯಕ್ರಮವನ್ನು ಜ್ಯೋತಿ ಬೆಳಗಿಸುವವರು ಮೂಲಕ ಉದ್ಘಾಟಿಸಿ ಮಾತನಾಡಿದರು.ಶೆರೆವಾಡಿ ಬಸವೇಶ್ವರ ಭಜನಾ ಸಂಘದ ಶಿದ್ಲಿಂಗೇಶ ಹಾಗೂ ಕನಕೂರ ಗ್ರಾಮದ ರಾಮಲಿಂಗೇಶ್ವರ ಭಜನಾ ಸಂಘದ ಈಶ್ವರ ಇವರಿಂದ ತತ್ವಪದಗಳ ಭಜನಾ ಕಾರ್ಯಕ್ರಮ ಜರುಗಿದವು.ಈ ವೇಳೆ ಮಹಾದೇವ ವಾಲಿ, ಸಂತೋಷ ಹಾದಿಮನಿ, ಮಹಾಂತೇಶ ಜಕಾತಿ, ಶಿವಶಂಕರ ಪಟ್ಟೇದ, ರಾಮೇಗೌಡ ದೇವರಡ್ಡಿ, ಮೋಹನ ಹಾದಿಮನಿ, ವೀರುಪಾಕ್ಷಪ್ಪ ಮದ್ದಾನಿ,



ಬಸಯ್ಯ ಹಿರೇಮಠ, ಕಾಶೀಮಬೇಗ ಜಮಾದಾರ, ಬಸಲಿಂಗಪ್ಪ ಪಟ್ಟಣಶೆಟ್ಟಿ, ಮಾರುತಿ ಬನ್ನೂರ, ತುಕಾರಾಮ ಕಮತಗಿ, ಲಕ್ಕಪ್ಪ ಜಗದಾರ, ಮಹಾಂತ ಕರ್ಜಗಿಮಠ, ದುಂಡಯ್ಯ ಹಿರೇಮಠ, ಸದಾನಂದ ಹಣಬರ, ಮಹಾಂತೇಶ ಅಲ್ಲನ್ನವರ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಜಾಕವೆಲ್ ಕಾಮಗಾರಿ ಪರಿಶೀಲಿಸಿದ ಶಾಸಕ ಐಹೊಳೆ

ಚಿಕ್ಕೋಡಿ: ತಾಲೂಕಿನ ಕಲ್ಲೋಳ ಗ್ರಾಮದ ಕೃಷ್ಣಾ ನದಿ ಬಳಿಯಲ್ಲಿ ಕೈಗೆತ್ತಿಕೊಂಡ ಕರಗಾಂವ ಏತ ನೀರಾವರಿ ಯೋಜನೆಯ ಜಾಕವೆಲ್ ನಿರ್ಮಾಣ ಕಾಮಗಾರಿಯನ್ನು ರಾಯಬಾಗ ಶಾಸಕ ದುರ್ಯೋಧನ ಐಹೊಳೆ ಹಾಗೂ ನೀರಾವರಿ ಇಲಾಖೆಯ ಅಧಿಕಾರಿಗಳು ಶನಿವಾರ ಭೇಟಿ ನೀಡಿ ಪರಿಶೀಲಿಸಿದರು.

ನಂತರ ಮಾತನಾಡಿದ ಅವರು, 2024-25ನೇ ಸಾಲಿನಲ್ಲಿ ಕರಗಾಂವ ಏತ ನೀರಾವರಿ ಯೋಜನೆಗೆ ಮಂಜೂರಾತಿ ದೊರೆತಿದ್ದು, ಮೊದಲ ಹಂತದ ಕಾಮಗಾರಿಯನ್ನು 100 ಕೋಟಿ ಮೊತ್ತದಲ್ಲಿ ಜಾಕವೆಲ್ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಿದೆ. ಕಾಮಗಾರಿಯು ಶರವೇಗದಲ್ಲಿ ನಡೆಯುತ್ತಿರುವುದು ಖುಷಿ ತಂದಿದೆಎಂದು ಹೆಮ್ಮೆ ವ್ಯಕ್ತಪಡಿಸಿದರು.

ಒಟ್ಟು 567 ಕೋಟಿ ಮೊತ್ತದ ಕರಗಾಂವ ಏತನೀರಾವರಿ ಯೋಜನೆಯಿಂದ 15ಕ್ಕೂ ಹೆಚ್ಚು ಗ್ರಾಮಗಳ 8390 ಹೆಕ್ಟೇರ್ ಜಮೀನು ನೀರಾವರಿಗೊಳಪಡಲಿದೆ. ಇನ್ನು ಮುಂದಿನ ಹಂತದ ಕಾಮಗಾರಿಗೆ ಸರ್ಕಾರದಿಂದ ಅನುದಾನವನ್ನು ಶೀಘ್ರದಲ್ಲಿ ಬಿಡುಗಡೆ ಮಾಡಿಸಿಕೊಂಡು ಬರಲಾಗುವುದು ಎಂದು ಭರವಸೆ



ನೀಡಿದರು. ಈ ಸಂದರ್ಭದಲ್ಲಿ ಮಾಜಿ ಜಿಲ್ಲಾ ಪಂಚಾಯಿತಿ ಸದಸ್ಯ ಮಹೇಶ ಭಾತೆ, ಕರ್ನಾಟಕ ನೀರಾವರಿ ನಿಗಮ ನಿಯಮಿತದ ಚಿಕ್ಕೋಡಿ ವಿಭಾಗದ ಕಾರ್ಯನಿರ್ವಾಹಕ ಅಭಿಯಂತರ ಮಕರಂದ ಪೇಡನೇಕರ, ಸಹಾಯಕ ಕಾರ್ಯನಿರ್ವಾಹಕ ಅಧಿಕಾರಿ ಕಮಲಾಕರ ಇತರರು ಇದ್ದರು.

ಇತಿಹಾಸ ಉಳಿಸುವ ಸ್ಮಾರಕಗಳ ರಕ್ಷಿಸುವ ಕಾರ್ಯವಾಗಲಿ

ಚನ್ನಮ್ಮನ ಕಿತ್ತೂರು: ಇತಿಹಾಸವನ್ನು ಉಳಿಸುವ ಹಾಗೂ ಸ್ಮಾರಕಗಳನ್ನು ರಕ್ಷಿಸುವ ಕೆಲಸವನ್ನು ಮಾಡಬೇಕು ನಮ್ಮ ಪರಂಪರೆಗಳು ದೇಶದ ಗೌರವದ ಪ್ರತೀಕವಾಗಿವೆ ಎಂದು ರಾಜಗುರು ಸಂಸ್ಥಾನ ಕಲ್ಮಠದ ಮಡಿವಾಳ ರಾಜಯೋಗಿಂದ್ರ ಮಹಾಸ್ವಾಮಿಗಳು ಹೇಳಿದರು.

ಪಟ್ಟಣದ ರಾಜಗುರು ಸಂಸ್ಥಾನ ಕಲ್ಮಠದ ಆವರಣದಲ್ಲಿ ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಹಾಗೂ ಕಿ ನಾ ವಿ ವ ಸಂಘದ ಮಹಾವಿದ್ಯಾಲಯ ಇವುಗಳ ಸಯುಕ್ತ ಆಶ್ರಯದಲ್ಲಿಶನಿವಾರನಡೆದವಿಶ್ವಪರಂಪರೆ ದಿನಾಚರಣೆ 2026 ಕಾರ್ಯಕ್ರಮದಲ್ಲಿ ಮಾತನಾಡಿ, ಯುವ ಪಿಳಿಗೆಯು ಇವುಗಳ ಬಗ್ಗೆ ತಿಳಿದುಕೊಳ್ಳುವುದು ಅತೀ ಅವಶ್ಯಕವಾಗಿದೆ ಎಂದರು.

ಡಾ.ಚಂದ್ರಶೇಖರ ತಾಬೋಜಿ ಮಾತನಾಡಿ, ಜಾಗತಿಕ ಪರಂಪರಾ ತಾಣಗಳು ಹಾಗೂ ರಾಜ್ಯದ ಮತ್ತು ಸ್ಥಳೀಯ ಪಾರಂಪರಿಕ ತಾಣಗಳ ಕುರಿತು ಅವುಗಳ ಉಲ್ಲೇಖ ಅವುಗಳ ಐತಿಹಾಸಿಕ



ಮಹತ್ವ ಮತ್ತು ನೈಸರ್ಗಿಕ ಪ್ರಮುಖ ತಾಣವಾದ ಸಹ್ಯಾದ್ರಿ ಪರ್ವತ ಶ್ರೇಣಿಗಳ ಕುರಿತು ವಿವರವಾಗಿ ಮಾತನಾಡಿದರು.

ಪಪಂ ಸ್ಥಾಯಿ ಸಮಿತಿ ಅಧ್ಯಕ್ಷ ಎಂ ಎಫ್ ಜಕಾತಿ, ಕ್ಯುರೇಟರ್ ರಾಘವೇಂದ್ರ, ಶಿಕ್ಷಕ ಮಂಜುನಾಥ ಕಳಸನ್ನವರ ಮಾತನಾಡಿದರು.

ಇದಕ್ಕೂ ಪೂರ್ವದಲ್ಲಿ ಕಲ್ಮಠದ ಆವರಣದಲ್ಲಿರುವ ಕಿತ್ತೂರು ಸಂಸ್ಥಾನದ ರಾಜರುಗಳ ಸಮಾಧಿಗಳನ್ನು ಸ್ವಚ್ಛತೆಗೊಳಿಸುವ ಕಾರ್ಯಕ್ಕೆ ಶ್ರೀಗಳಿಂದ ಚಾಲನೆ ದೊರೆತು ಏಳು ವಿದ್ಯಾರ್ಥಿಗಳ ತಂಡಗಳ ಮೂಲಕ ಸ್ವಚ್ಛತೆ ಕೈಗೊಳ್ಳಲಾಯಿತು.

ಪಪಂ ಮುಖ್ಯಾಧಿಕಾರಿ ಮಲ್ಲಯ್ಯ ಹಿರೇಮಠ ,ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯ ಡಾ. ಬಿ ಎನ್ ಹೊಸಮನಿ, ಹಾಗೂ ಕೆ, ಎನ್ ,ವಿ,ವ ಕಾಲೇಜಿನ ಪ್ರಾಚಾರ್ಯ ಎಚ್ ಕೆ ನಾಗರಾಜ್, ಕಸಾಪ ಅಧ್ಯಕ್ಷ ಡಾ. ಎಸ್ ಬಿ ದಳವಾಯಿ, ಪ್ರಾಧ್ಯಾಪಕ ಶಿವಾಜಿ ಗುಡಾಜಿ, ರಾಜಶೇಖರ ಇಲಕಲ್, ಎಮ್ ಜಿ ಹಿರೇಮಠ, ಬಿ ಸಿ ಬಿದರಿ, ಮಹೇಶ್ ಚೆನ್ನಂಗಿ, ಎಂ. ಆರ್. ಶಹಪುರ್, ಎನ್ ಜಿ ಪಾಟೀಲ್, ಮಲ್ಲಿಕಾರ್ಜುನ ಉಳ್ಳಾಗಡ್ಡಿ, ಮಂಜುನಾಥ್ ದೊಡ್ಡಣ್ಣವರ ಸೇರಿದಂತೆ ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಮಹೇಶ ಹೊಂಗಲ ನಿರೂಪಿಸಿದರು, ಕುಮಾರಿ ಕೃತಿ ರಾಘವೇಂದ್ರ ಪ್ರಾರ್ಥನೆ, ರಾಜಶೇಖರ ರಗಟಿ ವಂದಿಸಿದರು.

ಕೇಂದ್ರದ ಯೋಜನೆ ಮನೆ ಮನೆಗೆ ತಲುಪಿಸಿ

ಬೈಲಹೊಂಗಲ: ತಾಲೂಕಿನ ಕೆ.ಬಿ. ಪಟ್ಟಿಹಾಳ ಗ್ರಾಮದ ಸಂಗೊಳ್ಳಿ ರಾಯಣ್ಣ ವೇದಿಕೆಯಲ್ಲಿ ಬಿಜೆಪಿ ಮಂಡಳದ ವತಿಯಿಂದ ಆಯೋಜಿಸಲಾದ ಮೂರು ದಿನಗಳ ಪಂಡಿತ ದೀನದಯಾಳ ಉಪಾಧ್ಯಾಯ ಪ್ರಶಿಕ್ಷಣ ಮಹಾಭಿಯಾನ-2026 ಕಾರ್ಯಕ್ರಮಕ್ಕೆ ಭರ್ಜರಿ ಚಾಲನೆ ದೊರಕಿತು.

ಕಾರ್ಯಕ್ರಮವನ್ನು ಮಾಜಿ ಶಾಸಕರಾದ ಡಾ ವಿಶ್ವನಾಥ ಪಾಟೀಲ, ಜಗದೀಶ ಮೆಟಗುಡ್ಡ ಅವರು ಸಂಯುಕ್ತವಾಗಿ ಉದ್ಘಾಟಿಸಿದರು.

ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಡಾ. ವಿಶ್ವನಾಥ ಪಾಟೀಲ ಅವರು, ಕೇಂದ್ರ ಸರ್ಕಾರದ ವಿವಿಧ ಜನಪರ ಯೋಜನೆಗಳನ್ನು ಸಾಮಾನ್ಯ ಜನರಿಗೆ ತಲುಪಿಸುವಲ್ಲಿ ಕಾರ್ಯಕರ್ತರ ಪಾತ್ರ ಅತ್ಯಂತ ಮಹತ್ವದ್ದಾಗಿದೆ ಎಂದು ಅವರು ಹೇಳಿದರು.

ಮಾಜಿ ಶಾಸಕ ಜಗದೀಶ ಮೆಟಗುಡ್ಡ ಮಾತನಾಡಿದರು.

ಈ ಕಾರ್ಯಕ್ರಮದಲ್ಲಿ ಮಾಜಿ ಶಾಸಕ ಸಂಜಯ ಪಾಟೀಲ, ಜಿಲ್ಲಾ ಅಧ್ಯಕ್ಷ ಸುಭಾಸ ಪಾಟೀಲ, ಮಂಡಳ ಅಧ್ಯಕ್ಷ ಸುಭಾಸ ತುರಮರಿ, ಜಿಲ್ಲಾ ರೈತ ಮೋರ್ಚಾ ಅಧ್ಯಕ್ಷ ಜಗದೀಶ ಬೂದಿಹಾಳ, ಜಿಲ್ಲಾ ಮುಖಂಡರಾದ ಮಹೇಶ ಮೋಹಿತೆ, ಗುರುಪಾದ ಕಳ್ಳಿ, ಜಿಲ್ಲಾ ಕಾರ್ಯದರ್ಶಿ ಗುರು ಮೆಟಗುಡ್ಡ ಸೇರಿದಂತೆ ಅನೇಕರು ಭಾಗವಹಿಸಿದ್ದರು.

ಮಾಧ್ಯಮ ಪ್ರಮುಖರಾದ ಎಫ್.ಎಸ್. ಸಿದ್ದನಗೌಡರ, ಸಚಿನ್ ಕಡಿ, ಸಂದೀಪ ದೇಶಪಾಂಡೆ, ಸುಭಾಸ ಸಣ್ಣವೀರಪ್ಪನವರ, ವಿಶಾಲ್ ಬೋಗುರ, ಲಕ್ಕಪ್ಪ ಕಾರಗಿ ಸೇರಿದಂತೆ ಇನ್ನಿತರರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಕಾರ್ಯಕ್ರಮವನ್ನು ಸಂತೋಷ ಹಡಪದ ನಿರೂಪಿಸಿದರು. ಸಿದ್ದಾರೂಡ ಹೊಂಡಪ್ಪನವರ ಸ್ವಾಗತಿಸಿದರು.



ಮಸೂದೆಗೆ ಮತ ಹಾಕದ ಕಾಂಗ್ರೆಸ್

ಚಿಕ್ಕೋಡಿ ಬಿಜೆಪಿ ಮಹಿಳಾ ಘಟಕದಿಂದ ಪ್ರತಿಭಟನೆ



ಚಿಕ್ಕೋಡಿ: ಪಟ್ಟಣದ ಬಸವೇಶ್ವರ ವೃತ್ತದಲ್ಲಿ ಚಿಕ್ಕೋಡಿ ಜಿಲ್ಲಾ ಬಿಜೆಪಿ ಮಹಿಳಾ ಮೋರ್ಚಾ ವತಿಯಿಂದ ಶನಿವಾರ ಪ್ರತಿಭಟನೆ ನಡೆಸಿದರು. ಕೇಂದ್ರದಲ್ಲಿ ಬಿಜೆಪಿ ಸರ್ಕಾರ ಜಾರಿಗೆ ತರಲು ಉದ್ದೇಶಿಸಿದ ಮಸೂದೆಯನ್ನು ವಿರೋಧಿಸಿದ ಕಾಂಗ್ರೆಸ್ ಪಕ್ಷ ಹಾಗೂ ಅದರ ಮಿತ್ರ ಪಕ್ಷಗಳ ವಿರುದ್ಧ ಘೋಷಣೆ ಕೂಗಿದರು. ಈ ಸಂದರ್ಭದಲ್ಲಿ ಬಿಜೆಪಿ ರಾಜ್ಯ ಮಹಿಳಾ ಮೋರ್ಚಾ ಉಪಾಧ್ಯಕ್ಷೆ ಶಾಂಭವಿ ಅಶ್ವತ್ಥಪೂರ, ಜಿಲ್ಲಾ ಮಹಿಳಾ ಮೋರ್ಚಾ ಅಧ್ಯಕ್ಷೆ ಶಕುಂತಲಾ ಡೋಣವಾಡೆ, ಚಿಕ್ಕೋಡಿ ಜಿಲ್ಲಾ ಬಿಜೆಪಿ ಅಧ್ಯಕ್ಷ ಸತೀಶ ಅಪ್ಪಾಜಿಗೋಳ, ಅಮೃತ ಕುಲಕರ್ಣಿ, ಶಿವಾನಂದ ನವಿನಾಳೆ ಇತರರು ಇದ್ದರು.

ಕಿರುಸುದ್ದಿ

ವಿದ್ಯುತ್ ವ್ಯತ್ಯಯ ಇಂದು

ಬಾಗಲಕೋಟೆ: ಬಾಗಲಕೋಟೆ ನಗರ-1 ಶಾಖೆಯು ವ್ಯಾಪ್ತಿಯಲ್ಲಿ ಬರುವ ಬಾಗಲಕೋಟೆ 110 ಕೆವಿ ಉಪಕೇಂದ್ರದ ಎಫ್-4 ಬಾಗಲಕೋಟೆ ಪಟ್ಟಣ-1 ಫೀಡರ್ ವ್ಯಾಪ್ತಿಗೆ ಒಳಪಡುವ ಪ್ರದೇಶಗಳಲ್ಲಿ ಮುಂಗಾರು ಪೂರ್ವ ನಿರ್ವಹಣಾ ಕಾರ್ಯ ಹಾಗೂ ದಡ್ಡೇನವರ ಆಸ್ಪತ್ರೆಯ ಹತ್ತಿರ ತುರ್ತು ವಿದ್ಯುತ್ ಕಾಮಗಾರಿ ಕೈಗೊಳ್ಳುವ ನಿಮಿತ್ಯ ಏ.19ರಂದು ಬೆಳಗ್ಗೆ 10ರಿಂದ ಸಂಜೆ 5 ಗಂಟೆವರೆಗೆ ಎಫ್-4 ಬಾಗಲಕೋಟೆ ಪಟ್ಟಣ-1 ಮಾರ್ಗದಿಂದ ಸರಬರಾಜು ಆಗುವ ಲಕ್ಷ್ಮೀನಗರ, ಮದೀನಾ ಕಾಲೋನಿ, ದೀಪಂ ಕಾಲೋನಿ, ನಾರಾಯಣಸಾ ಭಾಂಡಗೆಯವರ ಮನೆ ಹತ್ತಿರ, ಸ್ಪಂದನಾ ಆಸ್ಪತ್ರೆ, ಸಿಟಿ ಸ್ಕ್ಯಾನ್ ಸೆಂಟರ್, ಕೆರೂಡಿ ಕ್ಯಾನ್ಸರ್ ಆಸ್ಪತ್ರೆ, ಕಟ್ಟಿ ಆಸ್ಪತ್ರೆ, ಗೂರಣ್ಣವರ ಆಸ್ಪತ್ರೆ ಮತ್ತು ಯಂಡಿಗೇರಿ ಲೇಔಟ್ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಿದೆ. ಗ್ರಾಹಕರು ಸಹಕರಿಸುವಂತೆ ಬಾಗಲಕೋಟೆ ಹೆಸ್ಕಾಂ ಕಾರ್ಯನಿವಾಹಕ ಅಭಿಯಂತರರು ತಿಳಿಸಿದ್ದಾರೆ.

ಬಸವ ಸ್ಮರಣೋತ್ಸವ ನಾಳೆ

ಗುಳೇದಗುಡ್ಡ: ಸ್ಥಳೀಯ ಬಸವ ಕೇಂದ್ರದ ವತಿಯಿಂದ ಬಸವಜಯಂತಿ ಅಂಗವಾಗಿ ಬಸವಸ್ಮರಣೋತ್ಸವ ಕಾರ್ಯಕ್ರಮ ಏ.20ರಂದು ಪಟ್ಟಣದ ಬಸಮ್ಮ ಮಂಗಳಗುಡ್ಡ ಕಲ್ಯಾಣ ಮಂಟಪದಲ್ಲಿ ಹಮ್ಮಿಕೊಳ್ಳಲಾಗಿದೆ. ಅಂದು ಬೆಳಗ್ಗೆ 7 ಗಂಟೆಗೆ ಸಾಮೂಹಿಕ ಸಹಜ ಶಿವಯೋಗ ಬಳಿಕ 9 ಗಂಟೆಗೆ ಅನುಭಾವಗೋಷ್ಠಿ ನಡೆಯಲಿದ್ದು, ಅಕ್ಕಮಹಾದೇವಿ ಮಂದಿರದ ಶರಣಮ್ಮತಾಯಿ ಅವರು ಗೋಷ್ಠಿಯ ಸಾನಿಧ್ಯ ವಹಿಸುವರು. ಬಸವಕೇಂದ್ರದ ಗೌರವಾಧ್ಯಕ್ಷ ಎಚ್.ಎಸ್.ಹುಳಿಪಲ್ಲೇದ ಅಧ್ಯಕ್ಷತೆ ವಹಿಸುವರು. ಚಿಂತಕ, ಸಾಹಿತಿ ರವಿ ಕಂಗಳ ಅನುಭಾವ ನೀಡುವರು ಎಂದು ಬಸವಕೇಂದ್ರದ ಪ್ರಕಟಣೆ ತಿಳಿಸಿದೆ.

ರಂಗೋಲಿಯಲ್ಲಿ ಅರಳಿದ ಶಿವ ಬಸವೇಶ್ವರ



ರನ್ನ ಬೆಳಗಲಿ: ಪಟ್ಟಣದ ಸಿದ್ಧಾರೂಢ ಸರಕಾರಿ ಪ್ರೌಢಶಾಲೆಯಲ್ಲಿ ತಿಂಗಳಿಗೊಂದು ರಂಗೋಲಿ ಚಿತ್ರ ಕಾರ್ಯಕ್ರಮದಲ್ಲಿ ಶಿವ ಬಸವರ ಜಯಂತಿ ಪ್ರಯುಕ್ತ ಚಿತ್ರಕಲಾವಿದರಾದ ಮಾಯಪ್ಪ ಲೋಕ್ಯಾಗೋಳ, ಮಹಾಂತೇಶ ಲೋಕಾಪುರ ಮತ್ತು ಆಕಾಶ ಕೊಗಟನೂರ, ರಂಗೋಲಿಯಲ್ಲಿ ಭಾವಚಿತ್ರ ಬಿಡಿಸಿದರು. ಚಿತ್ರಕಲಾ ಶಿಕ್ಷಕ ಬಿ.ಪಿ.ಭೋಪಡೆ, ರವಿ ಹಿರೇಕಲ್ಮಠ ಉಪಸ್ಥಿತರಿದ್ದರು.

ಮಹಿಳೆಯರಿಗೆ ಕಾಂಗ್ರೆಸ್‌ನಿಂದ ಮೋಸ: ನಿರಾಣಿ



ಬೀಳಗಿ: ಬಿಜೆಪಿ ನೇತೃತ್ವದ ಎನ್‌ಡಿಎ ಸರಕಾರ ಭಾರತದಲ್ಲಿರುವ ಮಹಿಳೆಯರಿಗೆ ಶೇ. 33 ಮೀಸಲಾತಿ ಹಕ್ಕನ್ನು ನೀಡಿ ಮಹಿಳೆಯರ ಸಬಲೀಕರಣಕ್ಕೆ ಆದ್ಯತೆ ಕೊಡುವ ದೃಷ್ಟಿಯಿಂದ ಲೋಕಸಭೆಯ ವಿಶೇಷ ಅಧಿವೇಶನದಲ್ಲಿ ನಾರಿ ಶಕ್ತಿ ವಂದನಾ (ಮಹಿಳಾ ಮೀಸಲಾತಿ ಕಾಯ್ದೆ) ಮಸೂದೆಯನ್ನು ಮಂಡಿಸಿತು.

ಈ ಮಸೂದೆ ಮಂಡನೆಯನ್ನು ವಿರೋಧ ಪಕ್ಷವಾದ ಕಾಂಗ್ರೆಸ್ ನೇತೃತ್ವದ ಇಂಡಿ ಮೈತ್ರಿಕೂಟ ತೀವ್ರವಿರೋಧ ವ್ಯಕ್ತಪಡಿಸಿತು. ನಂತರ ನಡೆದ ಮತದಾನದಲ್ಲಿ ಇಂಡಿ ಮೈತ್ರಿಕೂಟ ನಾರಿ ಶಕ್ತಿ ವಂದನಾ (ಮಹಿಳಾ ಮೀಸಲಾತಿ ಕಾಯ್ದೆ) ಮಸೂದೆಯ ವಿರುದ್ಧ ಮತಚಲಾಯಿಸಿ ಮಸೂದೆಗೆ ಸೋಲುಂಟಾಗಲು ಕಾರಣವಾಯಿತು, ಇದು ಭಾರತೀಯ ಮಹಿಳೆಯರಿಗೆ ಕಾಂಗ್ರೆಸ್ ಮಾಡಿದ ಮಹಾಮೋಸವೆಂದು ವಿಧಾನ ಪರಿಷತ್ ಸದಸ್ಯ ಹಣಮಂತ ನಿರಾಣಿ ಆರೋಪಿಸಿದರು. ಹಲವಾರು ದಶಕಗಳಿಂದ ಹಾಗೇ ಉಳಿದಿರುವ ಭಾರತೀಯ ಮಹಿಳೆಯರಿಗೆ ಮೀಸಲಾತಿ ನೀಡಿ ಸೂಕ್ತ ಸ್ಥಾನಮಾನ ಕಲ್ಪಿಸುವ ಮಹಿಳಾ ಮೀಸಲಾತಿ ಕಾಯ್ದೆಯನ್ನು ಜಾರಿಗೆ ತಂದು ದೇಶದಲ್ಲಿ ಅವರಿಗೆ ಸ್ಥಾನಮಾನ ನೀಡಿ ಗೌರವಿಸಬೇಕೆಂಬುದು ದೇಶದ ಹೆಮ್ಮೆಯ ಪ್ರಧಾನಿ ನರೇಂದ್ರ ಮೋದಿಯವರ ಕನಸಾಗಿತ್ತು. ಆದ್ದರಿಂದ ವಿಶೇಷ ಅಧಿವೇಶನ ನಡೆಸಿ ಭಾರತೀಯ ಮಹಿಳಾ ಸಬಲೀಕರಣಕ್ಕೆ ಶಕ್ತಿತುಂಬುವ ಮಹತ್ವಾಕಾಂಕ್ಷೀ ಮಸೂದೆಯಾದ ನಾರಿ ಶಕ್ತಿ ವಂದನಾ (ಮಹಿಳಾ ಮೀಸಲಾತಿ ಕಾಯ್ದೆ) ಮಸೂದೆ ಮಂಡಿಸಲಾಯಿತು. ಆದರೆ ಕಾಂಗ್ರೆಸ್‌ನ ಇಂಡಿ ಮೈತ್ರಿಕೂಟ ಮಸೂದೆ ವಿರುದ್ಧ ಮತಚಲಾಯಿಸಿ ಮಸೂದೆ ಸೋಲಿಸಿತು. ಇದು ಭಾರತದ ಪ್ರಜಾಪ್ರಭುತ್ವದ ವ್ಯವಸ್ಥೆಗೆ ಕರಾಳ ದಿನವಾಗಿದೆ. ಕಾಂಗ್ರೆಸ್ ನಡೆ ಭಾರತೀಯ ಇಡೀ ಮಹಿಳಾ ಕುಲವನ್ನು ಅಪಮಾನಿಸಿದೆ. ಈ ನಡೆಯನ್ನು ಯಾವೊಬ್ಬ ಭಾರತೀಯ ಮಹಿಳೆಯರು ಕ್ಷಮಿಸುವದಿಲ್ಲಾ. ಮುಂದಿನ ದಿನಗಳಗಲ್ಲಿ ಕಾಂಗ್ರೆಸ್‌ಗೆ ದೇಶಾದ್ಯಂತ ಮಹಿಳೆಯರು ತಕ್ಕ ಪಾಠ ಕಲಿಸಿ ನಾರಿ ಶಕ್ತಿಯನ್ನು ತೋರಿಸಲಿದ್ದಾರೆ ಎಂದು ತಿಳಿಸಿದ್ದಾರೆ.



ಗುಳೇದಗುಡ್ಡ: ಸ್ಥಳೀಯ ರಾಠಿ ಮತ್ತು ಕಾವಡೆ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಭಾರತ ರತ್ನ ಡಾ. ಭೀಮರಾವ್ ಅಂಬೇಡ್ಕರ್ ಅವರ 135ನೇ ಜಯಂತಿ ಅಂಗವಾಗಿ ರಾಜೀವ ಗಾಂಧಿ ವಿಶ್ವವಿದ್ಯಾಲಯದಿಂದ ನರ್ಸಿಂಗ್ ಪದವಿಯಲ್ಲಿ 6ನೇ ರ್‍ಯಾಂಕ್ ಪಡೆದ ಭಾಗ್ಯಾ ಮಾದರ ಅವರನ್ನು ಶಾಲೆಯಿಂದ ಸನ್ಮಾನಿಸಲಾಯಿತು. ಶಾಲೆಯ ಚೇರ್ಮನ್ ಅಶೋಕ ಹೆಗಡಿ, ಮುಖ್ಯ ಗುರುಗಳಾದ ಆರ್.ಎಸ್.ಜೆರ್ಲಿ, ವೀಣಾ ಹಳ್ಳೂರ, ಶಿಕ್ಷಕಿ ಶಬಾನಾ ಮಕಾನದಾರ, ಎಸ್.ಬಿ.ಗಾಜಿ ಸೇರಿದಂತೆ ಶಿಕ್ಷಕರು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಏ.22ರಂದು ಸ್ನೇಹ ಸಂಗಮ ಮಹೋತ್ಸವ

ಮುಧೋಳ: ನಗರದ ಸರ್ಕಾರಿ ಗಂಡು ಮಕ್ಕಳ ಮಾದರಿ ಶಾಲೆ, ಆರ್‌ಎಂಜಿ ಹಾಗೂ ಎನ್‌ಜಿಎಚ್‌ಎಸ್ ಶಾಲೆಯ 1977-87ರ ಎಸೆಸ್ಸೆಲ್ಸಿ ಸಹಪಾಠಿಗಳಿಂದ ಏ.22ರಂದು ಡಾ.ಬಿ.ಆರ್.ಅಂಬೇಡ್ಕರ್ ಹಾಗೂ ಬಾಬು ಜಗಜೀವನರಾಂ ಭವನದಲ್ಲಿ ಬೆಳಗ್ಗೆ 9ಕ್ಕೆ ಗುರುವಂದನಾ ಹಾಗು ಸ್ನೇಹ ಸಂಗಮ ಮಹೋತ್ಸವ ಜರುಗಲಿದೆ ಎಂದು ಗೆಳೆಯರ ಬಳಗದ ಪ್ರಮುಖ ಸಂಜೀವ ಕಮಕೇರಿ, ಎಂ.ಆರ್.ಬಿದರಿ ತಿಳಿಸಿದ್ದಾರೆ. ಸುದ್ದಿಗಾರ ಜತೆ ಮಾತನಾಡಿದ ಅವರು, ಜ್ಞಾನ ದೀಪ ಹಚ್ಚಿ ನಮ್ಮ ಜೀವನಕ್ಕೆ ದಾರಿದೀಪ ಗುರುಗಳ ವೃಂದಕ್ಕೆ ಕೃತಜ್ಞತೆಯ ನಮನ ಸಲ್ಲಿಸುವ ಪವಿತ್ರ ಹಾಗು ಭವ್ಯ ಕಾರ್ಯಕ್ರಮದ ಗೌರವ ಹೆಚ್ಚಿಸಲು ಅಂದಿನ ಎಲ್ಲ ವಿದ್ಯಾರ್ಥಿ(ಗೆಳೆಯರ-ಬಳಗ) ಆಗಮಿಸಿ ಕಾಯಕ್ರಮ ಯಶಸ್ವಿಗೊಳಿಸಬೇಕು ಎಂದು ಸಂಘಟಕ ಎಂ.ಬಿ.ಪಾಟೀಲ, ಭೀಮ ಘೋರ್ಪಡೆ, ನಂದು ಚಿಕದಾನಿ ಕೋರಿದ್ದಾರೆ. 40 ವರ್ಷದ ನಂತರ ಹಿರಿಯ ವಿದ್ಯಾರ್ಥಿಗಳು ಜೊತೆಗೂಡಿ, 80ರ ವಯೋವೃದ್ಧ ನಿವೃತ್ತ ಶಿಕ್ಷಕರಾದ ವಿ.ವಿ.ಅರಕೇರಿ, ಎಸ್.ಎಸ್.ಉಕ್ಕಲಿ, ಎಸ್.ಡಿ.ಬಿಳ್ಳೂರ, ಎನ್.ಎಸ್.ಹುಲಕುಂದ, ಎಲ್.ಕೆ.ಹಾದಿಮನಿ, ಎ.ಆರ್.ಯಡಹಳ್ಳಿ, ಎಂ.ವಿ.ದಾಸರಡ್ಡಿ, ಎಸ್.ಬಿ.ಉಳ್ಳಾಗಡ್ಡಿ, ಎಸ್.ಎಸ್.ಕುಲಕರ್ಣಿ, ಎಸ್.ಬಿ. ಹಬ್ಬಿ, ಎಸ್.ಎಸ್.ರೇಷ್ಮೆ, ಎಸ್.ಕೆ.ನಿಂಬಾಳಕರ, ಜಿಗಳೂರ ಸೇರಿದಂತೆ ಇತರರಿಗೆ ಗುರುವಂದರನೆ ಮತ್ತು ಗೌರವ ಸನ್ಮಾನ ಹಮ್ಮಿಕೊಳ್ಳಲಾಗಿದೆ ಎಂದು ಬಾಬು ನಿಂಬಾಳಕರ, ಕೆ.ಟಿ.ಘೋರ್ಪಡೆ, ಎಸ್.ಎಸ್.ಭೋಸಲೆ ತಿಳಿಸಿದರು. ಅಪ್ಪಾಸಿ ಬರಗಿ, ಅಪ್ಪಾಸಾಹೇಬ ಘೋರ್ಪಡೆ, ಎಸ್.ಎಲ್. ಪೂಜಾರಿ, ಬಿ.ಎಚ್.ಬೀಳಗಿ, ಗಂಗಮ್ಮ ತಿಮಸಾನಿ, ಅಕ್ಕಮಹಾದೇವಿ ರಾಮತೀರ್ಥ, ಸುನಿತಾ ಜಾಧವ, ಚೌಗಲಾ ಮೇಡಂ ಇತರರಿದ್ದರು.



ಬೀಳಗಿ: ತಾಲೂಕಿನ ತೋಳಮಟ್ಟಿ ಗ್ರಾಮದ ಸಹನಾ ಸಂಗಪ್ಪ ಸಜ್ಜನ ವಿಜ್ಞಾನ ವಿಭಾಗದಲ್ಲಿ 600ಕ್ಕೆ 587(ಶೇ.97.83) ಅಂಕ ಪಡೆದ ಹಿನ್ನಲೆ ಶಿಕ್ಷಕ ಎಸ್.ಎಂ.ಬೋಳರಡ್ಡಿ, ಗುತ್ತಿಗೆದಾರ ವಿಕ್ರಮಗೌಡ ಪಾಟೀಲ ವಿದ್ಯಾರ್ಥಿನಿ ಮನೆಗೆ ತೆರಳಿ ಸನ್ಮಾನಿಸಿದರು. ಶಿಕ್ಷಕ ಎಸ್.ವಿ.ಸಜ್ಜನ, ಶಿಕ್ಷಕಿ ಸರೋಜಿನಿ ಸಜ್ಜನ, ಇಂದುಮತಿ ಸಜ್ಜನ ಇದ್ದರು.

ಏ.23, 24ಕ್ಕೆ ಸಾಮಾನ್ಯ ಪ್ರವೇಶ ಪರೀಕ್ಷೆ | ಎಡಿಸಿ ಸೂಚನೆ

ಪರೀಕ್ಷೆಗೆ ಅಗತ್ಯ ಸಿದ್ಧತೆ ಮಾಡಿಕೊಳ್ಳಿ

ಬಾಗಲಕೋಟೆ: ಜಿಲ್ಲೆಯ ಬಾಗಲಕೋಟೆ ಮತ್ತು ಜಮಖಂಡಿ ನಗರದಲ್ಲಿ ಏ.23, 24ರಂದು ಸಾಮಾನ್ಯ ಪ್ರವೇಶ ಪರೀಕ್ಷೆ(ಸಿಇಟಿ)ಗಳು ನಡೆಯಲಿದ್ದು, ಪರೀಕ್ಷೆಗೆ ಎಲ್ಲ ರೀತಿಯ ಸಿದ್ಧತೆ ಮಾಡಿಕೊಳ್ಳುವಂತೆ ಅಪರ ಜಿಲ್ಲಾಧಿಕಾರಿ ಅಶೋಕ ತೇಲಿ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜಿಲ್ಲಾಡಳಿತ ಭವನದಲ್ಲಿರುವ ಆಡಿಟೋರಿಯಂ ಹಾಲ್‌ನಲ್ಲಿ ಶನಿವಾರ ಸಿಇಟಿ-2026 ಪರೀಕ್ಷೆ ಕುರಿತು ನಡೆದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಬಾಗಲಕೋಟೆ ನಗರದಲ್ಲಿ 13 ಹಾಗೂ ಜಮುಖಂಡಿ ನಗರದಲ್ಲಿ 8 ಸೇರಿ ಒಟ್ಟು 21 ಪರೀಕ್ಷಾ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಒಟ್ಟು 9800 ವಿದ್ಯಾರ್ಥಿಗಳು ಸಿಇಟಿ ಪರೀಕ್ಷೆ ಬರೆಯಲಿದ್ದು, ಇದರಲ್ಲಿ ಬಾಗಲಕೋಟೆ ನಗರದಲ್ಲಿ 5553 ವಿದ್ಯಾರ್ಥಿಗಳು ಹಾಗೂ ಜಮುಖಂಡಿ ನಗರದಲ್ಲಿ 4247 ವಿದ್ಯಾರ್ಥಿಗಳು ಇದ್ದಾರೆಂದು ತಿಳಿಸಿದರು.

ಸಿಇಟಿ ಪರೀಕ್ಷೆಯಲ್ಲಿ ಪಾರದರ್ಶಕತೆ ಕಾಯ್ದುಕೊಳ್ಳುವ ದೃಷ್ಟಿಯಿಂದ ಪ್ರತಿ ಪರೀಕ್ಷಾ ಕೇಂದ್ರದಲ್ಲಿ ಫ್ರಿಸ್ಕಿಂಗ್, ಫೇಸ್ ರೆಕಗ್ನಿಶನ್ ಸೌಲಭ್ಯವನ್ನು ಮಾಡಲಾಗಿದೆ. ಪರೀಕ್ಷಾ ಮುನ್ನಾದಿನ ಪ್ರಾತ್ಯಕ್ಷಿಕೆಯ ಮೂಲಕ ಖಚಿತ ಪಡಿಸಿಕೊಳ್ಳಲು ಪರೀಕ್ಷಾ ಕೇಂದ್ರದ ಉಪ ಮುಖ್ಯ ಅಧೀಕ್ಷಕರಿಗೆ ಸೂಚನೆ ನೀಡಿದರು. ಪರೀಕ್ಷೆಗೆ ವಿಜ್ಞಾನ ಉಪನ್ಯಾಸಕರನ್ನು ಹೊರತುಪಟಿಸಿ ಇತರೆ ವಿಷಯದ ಉಪನ್ಯಾಸಕರನ್ನು ನೇಮಕ ಮಾಡಿಕೊಳ್ಳಬೇಕು. ಪರೀಕ್ಷೆಯಲ್ಲಿ ಉಪ ಮುಖ್ಯ ಅಧೀಕ್ಷಕರ ಪಾತ್ರ ಹಾಗೂ ಜವಾಬ್ದಾರಿ ಮುಖ್ಯವಾಗಿದೆ. ಪ್ರತಿ 24 ವಿದ್ಯಾರ್ಥಿಗಳಿಗೆ ಓರ್ವ ಕೊಠಡಿ ಮೇಲ್ವಿಚಾರಕರಂತೆ ನೇಮಿಸಿಕೊಳ್ಳಬೇಕು. ಇದರ ಜೊತೆಗೆ ಅಗತ್ಯವಿರುವ ಇತರೆ ಸಿಬ್ಬಂದಿಗಳನ್ನು ಸಹ ನೇಮಿಸಿಕೊಂಡು ಪರೀಕ್ಷೆ ಸುಸೂತ್ರವಾಗಿ ನಡೆಸಲು ಎಲ್ಲ ರೀತಿಯ ಅಗತ್ಯ ಕ್ರಮಕೈಗೊಳ್ಳಲು ತಿಳಿಸಿದರು.



ಪರೀಕ್ಷಾ ವೇಳಾಪಟ್ಟಿ

ಸಾಮಾನ್ಯ ಪ್ರವೇಶ ಪರೀಕ್ಷೆಯಲ್ಲಿ ಏ.23ರಂದು ಬೆಳಗ್ಗೆ 10.30ರಿಂದ 11.50ರ ವರೆಗೆ ಭೌತಶಾಸ್ತ್ರ, ಮಧ್ಯಾಹ್ನ 2.30ರಿಂದ 3.50 ವರೆಗೆ ರಸಾಯನಶಾಸ್ತ್ರ, ಏ.24ರಂದು ಬೆಳಗ್ಗೆ 10.30ರಿಂದ 11.50ರ ವರೆಗೆ ಗಣಿತಶಾಸ್ತ್ರ, ಮಧ್ಯಾಹ್ನ 2.30ರಿಂದ 3.50ರ ವರೆಗೆ ಜೀವಶಾಸ್ತ್ರ ವಿಷಯ ಪರೀಕ್ಷೆಗಳು ನಡೆಯಲಿವೆ.

ಪರೀಕ್ಷೆಗಳು ಬೆಳಗ್ಗೆ ಮತ್ತು ಮಧ್ಯಾಹ್ನ ಎರಡು ಅವಧಿಯಲ್ಲಿ ನಡೆಯಲಿದ್ದು, ಎರಡು ಅವಧಿಗೆ ಮಾರ್ಗಾಧಿಕಾರಿಗಳು ಪ್ರಶ್ನೆ ಪತ್ರಿಕೆಗಳನ್ನು ಸಮಯಕ್ಕೆ ಸರಿಯಾಗಿ ಪರೀಕ್ಷಾ ಕೇಂದ್ರಗಳಿಗೆ ತಲುಪಿಸುವ ಕೆಲಸವಾಗಬೇಕು. ಪರೀಕ್ಷಾ ಕಾರ್ಯಕ್ಕೆ ನೇಮಿಸಲಾಗುತ್ತಿರುವ ಅಧಿಕಾರಿ ಹಾಗೂ ಸಿಬ್ಬಂದಿಗಳ ಮಕ್ಕಳು ಪರೀಕ್ಷೆ ಬರೆಯುತ್ತಿದ್ದರೆ, ಅಂತವರನ್ನು ಕರ್ತವ್ಯಕ್ಕೆ ನಿಯೋಜನೆ ಮಾಡುವಂತಿಲ್ಲವೆಂದು ಕಟ್ಟುನಿಟ್ಟಿನ ಸೂಚನೆ ನೀಡಿದರು. ಅಭ್ಯರ್ಥಿಗಳು ಪರೀಕ್ಷಾ ಕೊಠಡಿಗೆ ಪಠ್ಯ ಸಾಮಗ್ರಿ, ಜಾಮಿಟ್ರಿ ಬಾಕ್ಸ್, ಕ್ಯಾಲ್ಕುಲೇಟರ್, ಮೊಬೈಲ್ ಫೋನ್ ಸೇರಿದಂತೆ ಇತರೆ ಎಲೆಕ್ಟ್ರಾನಿಕ್ಸ್ ವಸ್ತುಗಳು, ಕೈಗಡಿಯಾರ, ಬಳೆ, ಯಾವುದೇ ಆಭರಣ, ಲೋಹದ ವಸ್ತುಗಳು (ಮಂಗಳ ಸೂತ್ರ ಹೊರತುಪಡಿಸಿ), ಕ್ಯಾಮರಾ, ಬ್ಲೂಟೂತ್ ಸಾಧನ ತರುವುದನ್ನು ನಿಷೇಧಿಸಲಾಗಿದೆ ಎಂದರು.

ಉಪ ವಿಭಾಗಾಧಿಕಾರಿ ಸಂತೋಷ ಜಗಲಾಸರ, ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಪುಂಡಲೀಕ ಕಾಂಬಳೆ, ಜಮಖಂಡಿ ತಹಶೀಲ್ದಾರ ಅನೀಲ ಬಡಿಗೇರ ಸೇರಿದಂತೆ ಪರೀಕ್ಷಾ ಕೇಂದ್ರದ ಉಪ ಮುಖ್ಯ ಅಧೀಕ್ಷಕರು, ಮಾರ್ಗಾಧಿಕಾರಿಗಳು ಉಪಸ್ಥಿತರಿದ್ದರು.

ಜಾನಪದ ಉತ್ಸವ ಜಾತ್ರೆ ಅದ್ದೂರಿ

ಜನಪದ ಜೀವನ ಕ್ರಮ ದೇಶಿ ಶೈಲಿ

ಕಲಾದಗಿ: ಜನಪದ ಜೀವನ ಕ್ರಮವೂ ಅಪ್ಪಟ ದೇಶಿಯ ಶೈಲಿಯಾಗಿದ್ದು, ನಮ್ಮ ಆಚಾರ, ವಿಚಾರ, ಉಡುಗೆ ತೊಡುಗೆ, ಆಹಾರ ಕ್ರಮ ಇವೆಲ್ಲವೂ ಕೂಡ ವೈಶಿಷ್ಟ್ಯ ಪೂರ್ಣವಾದವು ಇವತ್ತಿನ ಆಧುನಿಕ ಜೀವನ ಶೈಲಿಗೆ ಸಿಲುಕಿ ಮ್ಯೂಜಿಯಂಗಳಲ್ಲಿ ಹಳ್ಳಿ ಜೀವನ ಶೈಲಿಯ ಚಿತ್ರಗಳನಿಟ್ಟು ನೋಡುವವಂತಾಗಿದೆ ಎಂದು ಮಂಗಳಾ ಬೇವೂರ ಹೇಳಿದರು.

ಗ್ರಾಮದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಶುಕ್ರವಾರದಂದು ನಡೆದ ಜಾನಪದ ಜಾತ್ರೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಇವತ್ತಿನ ಆಧುನಿಕ ಬದುಕಿನಲ್ಲಿ ನಮ್ಮ ಸಂಸ್ಕೃತಿಯನ್ನು ಉಳಿಸುವ ಕಾರ್ಯ ಮಾಡಬೇಕಾಗಿದ್ದು ಯುವ ಪೀಳಿಗೆಗೆ ಇವುಗಳನ್ನು ಪರಿಚಯಿಸುವ ಕಾರ್ಯ ಅನಿವಾರ್ಯವಾಗಿ ಮಾಡಬೇಕಾಗಿದೆ ಎಂದು ಹೇಳಿದರು.

ಜಾನಪದ ಜಾತ್ರೆಯನ್ನು ವಿಶೇಷ ಅಲಂಕೃತ ಎತ್ತುಗಳು ಮತ್ತು ಎತ್ತಿನ ಗಾಡಿಯ ಮೆರವಣಿಗೆಗೆ ಚಾಲನೆ ನೀಡಿ ವೇದಿಕೆ ಕಾರ್ಯಕ್ರಮದಲ್ಲಿ ಮಾತನಾಡಿದ ಪ್ರಾಂಶುಪಾಲ ಡಾ.ಎಚ್.ಬಿ.ಮಹಾಂತೇಶ ಜಾನಪದ ಉತ್ಸವವು ಅರ್ಥಪೂರ್ಣ ಆಚರಣೆಯ ಭಾಗವಾಗಿದ್ದು ಈ ನೆಲದ ಮೂಲ ಸಂಸ್ಕೃತಿಯ ಉಡುಗೆ ಮತ್ತು ಊಟೋಪಚಾರ ಜನಪದರ ಬದುಕಿನ ವಿಧಾನವಾಗಿದೆ. ಈ ಪರಂಪರೆ ಮುಂದುವರೆಯಲು ನಾವು ನೀವೆಲ್ಲರೂ ಉತ್ತರದಾಯಿಗಳಾಗೋಣ ಎಂದರು.

ವಿದ್ಯಾರ್ಥಿಗಳು ದೇಶಿ ಶೈಲಿಯ ಉಡುಗೆ ತೊಟ್ಟು ಸಂಭ್ರಮಿಸಿದರು. ಡಾ.ಲೋಕಣ್ಣ ಭಜಂತ್ರಿ, ಡಾ.ಪುಂಡಲೀಕ ಹುನ್ನಳ್ಳಿ, ಡಾ.ಸರೋಜಿನಿ ಹೊಸಕೇರಿ, ಡಾ.ಯಲ್ಲಪ್ಪ ಜಿ, ಡಾ.ಕೆ.ಎಂ.ಸಾರವಾನ, ಡಾ.ವಿಕಾಸ ಕಾಳೆ, ಜಂಬೀರಸಾಬ ಕುರಣಿ, ವಿದ್ಯಾ ದಂಡಗಿ, ಯಂಕಮ್ಮ ಇದ್ದರು.



ಜ್ಞಾನದ ಬೆಳಕು ತೋರುವ ಗುರು ಹೊಂದಿ

ಹುಲ್ಯಾಳ: ಗ್ರಾಮದ ಆದಿಶಕ್ತಿ ಮಹಾಲಕ್ಷ್ಮೀ ದೇವಸ್ಥಾನದಲ್ಲಿ ದೇವಿ ಸತ್ಸಂಗ ಬಳಗದಿಂದ ಐದನೇ ವರ್ಷದ ಮಹಾಸತ್ಸಂಗ ನಡೆಯಿತು. ಜಮಖಂಡಿಯ ರುದ್ರಾವಧೂತ ಮಠದ ವೇದಾಂತಚಾರಿ ಸ್ವಾಮೀಜಿ ಸಹಜಾನಂದ ಶ್ರೀಗಳು ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿ, ನಿಸ್ಕಾಮ ಕರ್ಮ ಮಾಡುವುದರಿಂದ ಮನುಷ್ಯನಿಗೆ ಸಹಜ ಧ್ಯಾನ ವೃದ್ಧಿಯಾಗುತ್ತದೆ ಎಂದರು.

ಮನುಷ್ಯನ ಅಂತರಂಗದಲ್ಲಿ ಅಡಗಿರುವ ಅಜ್ಞಾನ ಕಳೆದು ಜ್ಞಾನದ ಬೆಳಕು ತೋರುವ ಗುರುವನ್ನು ಪ್ರತಿಯೊಬ್ಬರೂ ಹೊಂದಬೇಕು. ಗುರು ತೋರಿದ ಮಾರ್ಗದಲ್ಲಿ ಸಾಗಿದರೆ ಜೀವನ ಅರ್ಥಪೂರ್ಣವಾಗುತ್ತದೆ ಎಂದು ಆಶೀರ್ವಚನ ನೀಡಿದರು.



ಹಿರಿಯ ಆಧ್ಯಾತ್ಮ ಜೀವಿ ಬಸಪ್ಪ ಸೋರಗಾವಿ ಮಾತನಾಡಿದರು. ನ್ಯಾಯವಾದಿ ಪಂಡಿತ ಜುಲಪಿ, ದಯಾನಂದ ನಾರುಸೇನಿ, ಗುರುನಾಥ ಸುತಾರ, ಚಿಕ್ಕಯ್ಯ ಮಠಪತಿ, ರಾಮಣ್ಣ ಮಂದಾಗಣಿ, ನಿವೃತ್ತ ತಹಶೀಲ್ದಾರ್ ಬಿ.ಎಲ್.ಗೋಟೆ, ರುದ್ರಪ್ಪ ಜುಲಪಿ, ಬಸವರಾಜ ಕೋಲೂರ, ಮಲ್ಲು ಚಿಮ್ಮಡ, ಬಸವರಾಜ ಕಥಾವಾಡಿ, ಈಶ್ವರ ಬಾಡನವರ, ನಿಂಗಯ್ಯ ಸ್ವಾಮಿಗಳು, ಸುಶ್ಮಿತಾ ಹೂಗಾರ, ನ್ಯಾ.ಪಂಡಿತ ಜುಲಪಿ, ಶರಣ ಮಲ್ಲು ಗೆದ್ದಪ್ಪನವರ, ಪ್ರಭುಜಿ ಹೂಗಾರ ಉಪಸ್ಥಿತರಿದ್ದರು.

ಎಫ್‌ಐಡಿ ಜೋಡಣೆ ಕಡ್ಡಾಯ

ಜಮಖಂಡಿ: ನೈರುತ್ಯ ಮುಂಗಾರು ದುರ್ಬಲಗೊಳ್ಳಲಿರುವ ಕಾರಣದಿಂದ ಕರ್ನಾಟಕ ಸೇರಿ ದೇಶಾದ್ಯಂತ ಮಾನ್ಸೂನ ಅವಧಿಯಲ್ಲಿ ಮಳೆ ಕುಂಠಿತಗೊಳ್ಳುವ ಸಾಧ್ಯತೆ ಹೆಚ್ಚಿದೆ. ಕಾರಣ ಬೆಳೆಗಳಿಗೆ ಒದಗಿಸುವ ರಸಗೊಬ್ಬರಗಳ ಸದ್ಬಳಕೆಯಾಗಬೇಕು. ಈ ನಿಟ್ಟಿನಲ್ಲಿ 2026-27ನೇ ಸಾಲಿನ ಮುಂಗಾರು ಹಂಗಾಮಿನ ಹಿನ್ನಲೆ ಯೂರಿಯಾ ಬಳಕೆ ನಿಯಂತ್ರಿಸಲು ಕೃಷಿ ಇಲಾಖೆ ಹೊಸ ಮಾರ್ಗಸೂಚಿ ಜಾರಿಗೊಳಿಸಿದೆ. ಅದರಂತೆ ಪ್ರತಿ ಎಕರೆಗೆ ತಿಂಗಳಿಗೆ ಕೇವಲ ಒಂದು ಚೀಲ ಯೂರಿಯಾ ಮಾತ್ರ ವಿತರಿಸಲಾಗುವುದು ಬೆಳೆಗಳಿಗೆ ಅಗತ್ಯವಾದ ಪೋಷಕಾಂಶ ಪೂರೈಸಲು ಯೂರಿಯಾ ಮಾತ್ರವಲ್ಲದೇ ಸಂಯುಕ್ತ ರಸಗೊಬ್ಬರಗಳಾದ 10:26:26, 12:32:16, 20:20:0:13 ಬಳಸಿಕೊಳ್ಳಬಹುದಾಗಿದೆ. ಆಧುನಿಕ ತಂತ್ರಜ್ಞಾನ ಹೊಂದಿರುವ ನ್ಯಾನೋ ಯೂರಿಯಾ ಹಾಗೂ ನ್ಯಾನೋ ಡಿಎಪಿಗಳ ಬಳಕೆ ಹೆಚ್ಚಾಗಬೇಕು ಎಂದು ತಿಳಿಸಿದರು. ಕೇಂದ್ರ ಸರ್ಕಾರದ ಹೊಸ ನಿಯಮದಂತೆ ರೈತರು ಇನ್ನೂ ಮುಂದೆ ಕೆ-ಕಿಸಾನ ತಂತ್ರಾಂಶದಡಿ ರಸಗೊಬ್ಬರ ಪಡೆಯಲು ಆಧಾರ ಹಾಗೂ ಪಹಣಿಯನ್ನು ಎಫ್ ಐಡಿಗೆ ಜೋಡಣೆ ಮಾಡಿಕೊಳ್ಳುವುದು ಕಡ್ಡಾಯವಾಗಿದೆ. ಇದರಿಂದ ರಸಗೊಬ್ಬರ ಕಾಳಸಂತೆಯಲ್ಲಿ ಮಾರಾಟವಾಗುವುದನ್ನು ತಡೆಗಟ್ಟುವುದು ಸರಿಯಾದ ರಸಗೊಬ್ಬರ ಸಿಗುವಂತೆ ಮಾಡುವ ಉದ್ದೇಶ ಹೊಂದಿರುತ್ತದೆ. ಎಫ್ ಐಡಿ ಹೊಂದಿರದ ರೈತರು ತಕ್ಷಣ ಸಂಬಂಧಿಸಿದ ರೈತ ಸಂಪರ್ಕಕ್ಕೆ ಭೇಟಿ ನೀಡಿ ನೊಂದಣಿ ಮಾಡಿಕೊಳ್ಳುವುದು. ಅನಧಿಕೃತ ರಸಗೊಬ್ಬರ ಖರೀಗೆ ಆಸ್ಪದ ಕೊಡಬೇಡಿ ಎಂದು ಕೃಷಿ ಇಲಾಖೆಯ ಸಹಾಯಕ ನಿರ್ದೇಶಕ ಸಿದ್ದಪ್ಪ ಪಟ್ಟಿಹಾಳ ತಿಳಿಸಿದ್ದಾರೆ.

ಉತ್ತಮ ಸಮಾಜ ಕಟ್ಟುವ ಜವಾಬ್ದಾರಿ ಮಹಿಳೆಯದ್ದು: ಶೆಟ್ಟರ

ಬಾಗಲಕೋಟೆ: ಆಧುನಿಕ ಜಗತ್ತಿನಲ್ಲಿ ಮಹಿಳೆಗೆ ಅತ್ಯುನ್ನತ ಸ್ಥಾನಗಳು ದೊರೆಯುತ್ತಿವೆ. ಪುರುಷನ ಸಮಾನವಾದ ಸ್ಥಾನಮಾನ ಪಡೆದುಕೊಂಡಿದ್ದಾಳೆ. ಆದರೆ ಉತ್ತಮ ಸಮಾಜ ಕಟ್ಟುವ ಜವಾಬ್ದಾರಿ ಮಹಿಳೆಯರದ್ದಾಗಿದೆ ಎಂದು ನಿವೃತ್ತ ಪ್ರಾಚಾರ್ಯ ಎಸ್.ಎಚ್.ಶೆಟ್ಟರ ಹೇಳಿದರು.

ನಗರದ ಬಿವಿವಿ ಸಂಘದ ಅಕ್ಕಮಹಾದೇವಿ ಮಹಿಳಾ ಕಲಾ, ವಿಜ್ಞಾನ ಹಾಗೂ ವಾಣಿಜ್ಯ ಮಹಾವಿದ್ಯಾಲಯದಲ್ಲಿ 26ನೇ ವಾರ್ಷಿಕೋತ್ಸವ, ಪ್ರತಿಭಾ ಪುರಸ್ಕಾರ, ಕದಳಿ ಶ್ರೀ ವಾರ್ಷಿಕ ಸಂಚಿಕೆ ಬಿಡುಗಡೆ ಸಮಾರಂಭದಲ್ಲಿ ಮಾತನಾಡಿದ ಅವರು , ವಿದ್ಯಾರ್ಥಿನಿಯರು ಗುರು ಹಿರಿಯರಿಗೆ ಗೌರವವನ್ನು ಕೊಡುವ ಮನೋಭಾವನೆ ಬೆಳೆಸಿಕೊಂಡರೆ ಸಂಸ್ಕಾರ ಯುತ ಜೀವನ ನಡೆಸಲು ಸಾಧ್ಯವಾಗುತ್ತದೆ.

ವಿದ್ಯಾರ್ಥಿನಿಯರು ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಮಹಿಳೆಯರನ್ನು ಆದರ್ಶವಾಗಿಟ್ಟುಕೊಂಡು ತಮ್ಮ ಉಜ್ವಲ ಭವಿಷ್ಯ ರೂಪಿಸಿಕೊಳ್ಳಬೇಕು. ಸರ್ಪಣಾ ಮನೋಭಾವದಿಂದ ವಿದ್ಯಾರ್ಥಿ ಜೀವನ ಒಂದು ತಪಸ್ಸಿನ ರೀತಿಯಲ್ಲಿ ಸ್ವೀಕರಿಸಬೇಕೆಂದರು.

ಅಧ್ಯಕ್ಷತೆ ವಹಿಸಿದ್ದ ಮಹಾವಿದ್ಯಾಲಯದ ಪ್ರಾಚಾರ್ಯ ಎಸ್.ಜೆ.ಒಡೆಯರ ಮಾತನಾಡಿ, ಪದವಿ ಹಂತದ ಶಿಕ್ಷಣವು ವಿದ್ಯಾರ್ಥಿನಿಯರ ಬದುಕಿನ ನಿರ್ಣಯ ಘಟ್ಟವಾಗಿದೆ. ಇದನ್ನು ಜವಾಬ್ದಾರಿಯುತವಾಗಿ ನೀವು ಸ್ವೀಕರಿಸಬೇಕು. ಆಸಕ್ತ ವಿಷಯಗಳಲ್ಲಿ ಹೆಚ್ಚಿನ ಅಧ್ಯಯನ ಮಾಡುವುದರ ಮೂಲಕ ಆ ಕ್ಷೇತ್ರದಲ್ಲಿ ಸಾಧನೆಗೈದು ಸಮಾಜ ಹಾಗೂ ಪಾಲಕರಿಗೆ ಕೀರ್ತಿ ತರುವುದರ ಜೊತೆಗೆ ಸಂತೋಷದ ಬದುಕನ್ನು ನಡೆಸಲು ಸಾಧ್ಯವಾಗುತ್ತದೆ ಎಂದರು.



ಮಹಾವಿದ್ಯಾಲಯದವಾರ್ಷಿಕಸ್ಮರಣಸಂಚಿಕೆಬಿಡುಗಡೆಗೊಳಿಸಲಾಯಿತು. ರ್‍ಯಾಂಕ್ ಪಡೆದ ವಿದ್ಯಾರ್ಥಿನಿಯರನ್ನು ಹಾಗೂ ವಿಶ್ವವಿದ್ಯಾನಿಲಯದ ಬ್ಲ್ಯೂ ಆದ ವಿದ್ಯಾರ್ಥಿನಿಯರನ್ನು ಸನ್ಮಾನಿಸಲಾಯಿತು. ಮಹಾವಿದ್ಯಾಲಯದ ಐಕ್ಯೂಎಸಿ ಸಂಯೋಜಕ ಪಿ.ಕೆ.ಚೌಗುಲಾ, ಎಸ್.ಕೆ.ಹಿರೇಮಠ, ಪಿ.ಎಂ. ಅರ್ಕಸಾಲಿ, ಡಾ.ಎಂ.ವಿ.ಬಾಜಪ್ಪನವರ, ವಿದ್ಯಾರ್ಥಿ ಪ್ರತಿನಿಧಿ ಪದ್ಮಾ ಗಾಳಿಕಟ್ಟಿ, ವಂದನಾ ಸತ್ತಿಗೇರಿ ಹಾಗೂ ವಂದನಾ ಕಡಪಟ್ಟಿ, ಅನುಷಾ, ಮಹಾವಿದ್ಯಾಲಯದ ಸಿಬ್ಬಂದಿ, ವಿದ್ಯಾರ್ಥಿನಿಯರು ಇದ್ದರು.

ಸೌಹಾರ್ದತೆಯಿಂದ ಗ್ರಾಮದೇವತೆ ಜಾತ್ರೆ ಆಚರಿಸಿ: ಸಿಪಿಐ ಕರಿಯಪ್ಪ

ಕೆರೂರ: ಗ್ರಾಮದೇವತೆಗಳ ಜಾತ್ರೆ ಒಂದೇ ಸಮುದಾಯಕ್ಕೆ ಸಿಮೀತವಾದ್ದದ್ದು ಅಲ್ಲ, ಭಿನ್ನಾಭಿಪ್ರಾಯ ಮರೆತು ಒಗ್ಗಟ್ಟಿನಿಂದ ಜಾತ್ರೆ ಆಚರಣೆ ಮಾಡಿರಿ ಎಂದು ಸಿಪಿಐ ಕರಿಯಪ್ಪ ಬನ್ನೆ ಹೇಳಿದರು.

ಪಟ್ಟಣದ ಪೊಲೀಸ್ ಠಾಣೆ ಆವರಣದಲ್ಲಿ ಗ್ರಾಮದೇವತಗಳಜಾತ್ರೆ ಅಂಗವಾಗಿ ಆಯೋಜಿಸಿದ್ದ ಸಭೆಯಲ್ಲಿ ಅವರು ಮಾತನಾಡಿದರು. ಪಟ್ಟಣದಲ್ಲಿ ಒಂಬತ್ತುವರ್ಷಕ್ಕೊಮ್ಮೆನಡೆಯುವ ಜಾತ್ರೆ, 10ರಿಂದ 15 ದಿನಗಳವರೆಗೆ ನಡೆಯುವ ಜಾತ್ರೆ ಇದ್ದು, ಕಾನೂನು ಸುವ್ಯವಸ್ಥೆ ಕಾಪಾಡಲು ಇಲಾಖೆಯಿಂದ ಅಗತ್ಯ ಕ್ರಮ ಕೈಗೊಳ್ಳಲಾಗುವುದು. ಎಲ್ಲ ಜನರು ಕೂಡಿಕೊಂಡು ಜಾತ್ರೆ ಆಚರಿಸಲು ಸೂಚಿಸಿದರು.



ಮುಖ್ಯಾಧಿಕಾರಿ ರಮೇಶ ಮಾಡಬಾಳ ಮಾತನಾಡಿ, ಪಟ್ಟಣ ಪಂಚಾಯತಿ ವತಿಯಿಂದ ಜಾತ್ರೆಗೆ ಬೇಕಾದ ಅಗತ್ಯ ಮೂಲ ಸೌಕರ್ಯಗಳ ವ್ಯವಸ್ಥೆ ಮಾಡಲಾಗುವುದು ಎಂದು ಹೇಳಿದರು.

ಪಿಎಸ್ಐ ಭೀಮಪ್ಪ ರಬಕವಿ ಮಾತನಾಡಿ, ಇಲಾಖೆಯೊಂದಿಗೆ ಸಹಕಾರಿ ನೀಡಿ, ನಾವು ಕೂಡ ನಿಮ್ಮೊಂದಿಗೆ ಇರುತ್ತದೆ. ಕಾನೂನು ವ್ಯವಸ್ಥೆಯಲ್ಲಿ ತೊಂದರೆಗಳು ಉಂಟಾದರೆ ನಿಶ್ಚಿತವಾಗಿ ಕ್ರಮಕೈಗೊಳ್ಳಲಾಗುವುದು ಎಂದರು.

ಉಪತಹಶೀಲ್ದಾರ್ ವಿರೇಶ ಬಡಿಗೇರ, ಗ್ರಾಮದೇವತಗಳ ಜಾತ್ರಾ ಕಮೀಟಿ ಅಧ್ಯಕ್ಷ ಮಾಂತೇಶ ಮೆಣಸಗಿ, ಪ್ರಮುಖರಾದ ಬಿ.ಬಿ.ಸೂಳಿಕೇರಿ, ಪರಸಪ್ಪಜ್ಜ ಚೂರಿ, ಮಲ್ಲು ಹಡಪದ, ಬೀಮಷಿ ಬದಾಮಿ, ರಾಮಣ್ಣ ಪೂಜಾರ, ಶಂಕ್ರಪ್ಪ ಬಡಿಗೇರ, ಈರಣ್ಣ ಬಡಿಗೇರ, ಬಿ.ಸಿ.ಬಡಿಗೇರ, ಮೊದಿನಸಾಬ ದೊಡಕಟ್ಟಿ, ಉಮರ ಪೆಂಡಾರಿ, ರಫೀಕ್ ಪೀರಖಾನ, ಶಿವಪ್ಪ ಬಡಿಗೇರ ಇತರರು ಇದ್ದರು.

ಅಂಬೇಡ್ಕರ್, ಬಾಬು ಜಗಜೀವನರಾಂ ಪ್ರಗತಿಯ ಹರಿಕಾರರು

ಬೀಳಗಿ: ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್, ಹಸಿರು ಕ್ರಾಂತಿ ಹರಿಕಾರ ಡಾ.ಬಾಬು ಜಗಜೀವನರಾಂರವರು ದೇಶದ ಪ್ರಗತಿಯ ಹರಿಕಾರರು. ದೇಶದ ಎರಡು ಅರಿವಿನ ಕಣ್ಣುಗಳಂತೆ ಅವರು ಸಲ್ಲಿಸಿದ ಸೇವೆ ಅಪಾರ ಎಂದು ಪೂರ್ಣಾನಂದ ಆಶ್ರಮದ ಮಾತೋಶ್ರೀ ಅನಸೂಯಾ ತಾಯಿ ಹೇಳಿದರು.

ತಾಲೂಕಿನ ಅನಗವಾಡಿ ಗ್ರಾಮದ ಮಹಾಶಿವಶರಣ ಮಾದಾರ ಚನ್ನಯ್ಯ ಕಾಲೋನಿಯಲ್ಲಿ ಶುಕ್ರವಾರ ಜರುಗಿದ ಡಾ.ಬಿ.ಆರ್.ಅಂಬೇಡ್ಕರ್, ಡಾ. ಬಾಬು ಜಗಜೀವನರಾಂರವರ ಜನ್ಮ ದಿನಾಚರಣೆ ಸಾನ್ನಿಧ್ಯ ವಹಿಸಿ ಮಾತನಾಡಿದರು.

ಮಾದಿಗ ಮೀಸಲಾತಿ ಹೋರಾಟ ಸಮಿತಿ ರಾಜ್ಯಾಧ್ಯಕ್ಷ ಶಿವರಾಯ ಅಕ್ಕರಕಿ ಉಪನ್ಯಾಸ ನೀಡಿ, ದೇಶದ ಅಸ್ಪೃಶ್ಯರು, ಶೋಷಿತರು, ದಮನಿತರಿಗೆ ನಡೆಯಲು, ನುಡಿಯಲು, ತೊಡಲು, ಸ್ವಾಭಿಮಾನದ ಬದುಕು ನಡೆಸಲು ಅಂಬೇಡ್ಕರ್ ತಮ್ಮ ಬದುಕನ್ನೇ ಸಮರ್ಪಿಸಿದರು. ಸಂವಿಧಾನವನ್ನು ರಚಿಸುವ ಮೂಲಕ ಸರ್ವರಿಗೂ ಸ್ವಾತಂತ್ರ್ಯ, ಸಮಾನತೆಯ ಬದುಕಿನ ಅವಕಾಶ ಕಲ್ಪಿಸಿಕೊಟ್ಟರೆಂದರು.

ಉದ್ಯಮಿ ಪ್ರವೀಣ ಪಾಟೀಲ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಸಮಸ್ಯೆಗಳ ಸುಳಿಗಳಲ್ಲಿ ಸಿಲುಕಿದ್ದ ದೇಶದಲ್ಲಿ ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಗೌರವದ ಬದುಕನ್ನು ಕಲ್ಪಿಸುವ ನಿಟ್ಟಿನಲ್ಲಿ ಅಂಬೇಡ್ಕರ್ ನೀಡಿದ ಸಂವಿಧಾನ ಎಲ್ಲರ ಪಾಲಿನ ಧರ್ಮ ಗ್ರಂಥವಿದ್ದಂತೆ ಎಂದರು.

ಡಾ.ರಮೇಶ ಅಕ್ಕಿಮರಡಿ ಮಹನಿಯರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿ, ದೇಶದಲ್ಲಿ ಆಹಾರದ ಕೊರತೆ ಎದುರಾದಾಗ ಹಸಿರು ಕ್ರಾಂತಿಯ ಮೂಲಕ ದೇಶದ ಜನರ ಹಸಿವನ್ನು ನೀಗಿಸಿದ ಮಹಾನ್ ವ್ಯಕ್ತಿ ಬಾಬೂಜಿ. ಕಾರ್ಮಿಕ ಹಕ್ಕುಗಳು, ಶೋಷಿತ, ದಮನಿತರ ಧ್ವನಿಯಾಗಿದ್ದ ಅವರ ಬದುಕು, ಹೋರಾಟ ಇಂದಿನ ಯುವ ಪೀಳಿಗೆಗೆ ಮಾದರಿಯಾಗಿದೆ ಎಂದು ಸ್ಮರಿಸಿದರು.



ಮಾದಿಗ ಮಹಾಸಭಾ ರಾಜ್ಯಾಧ್ಯಕ್ಷ ಮುತ್ತಣ್ಣ ಬೆಣ್ಣೂರ ಮಾತನಾಡಿ, ಅಂಬೇಡ್ಕರ್ ಅವರ ಶಿಕ್ಷಣ, ಸಂಘಟನೆ, ಹೋರಾಟ ಎಂಬ ತತ್ವ ಇಂದಿಗೂ ದಾರಿದೀಪವಾಗಿದೆ ಎಂದರು.

ಮಾದಿಗ ಮೀಸಲಾತಿ ಹೋರಾಟ ಸಮಿತಿ ರಾಜ್ಯ ಕಾರ್ಯದರ್ಶಿ ಸೋಮು ಚೂರಿ ಮಾತನಾಡಿ, ಡಾ.ಬಾಬು ಜಗಜೀವನರಾಂ ಪ್ರಾಥಮಿಕ ಶಿಕ್ಷಣ ಕಲಿಯುವಾಗ ಶಾಲೆಯಲ್ಲಿ ನೀರು ಕುಡಿಯಲಿಕ್ಕೆ ಅಲ್ಪ ಸಂಖ್ಯಾತರಿಗೊಂದು ಮಡಿಕೆ ಮತ್ತು ಹಿಂದೂಗಳಿಗೊಂದು ಮಡಿಕೆ ಇಟ್ಟಾಗ ಹಿಂದೂಗಳ ಮಡಿಕೆಯಲ್ಲಿ ನೀರು ಕುಡಿದಾಗ ವಿರೋಧ ವ್ಯಕ್ತವಾಗುತ್ತದೆ. ಆದರೆ ಬಾಬೂಜಿಯವರು ಪ್ರತಿ ಸಲ ಇಟ್ಟಿರುವ ಮಡಿಕೆಯನ್ನು ಒಡೆದು ಪ್ರತಿಭಟಿಸಿದಾಗ ಪ್ರಾಂಶುಪಾಲರು ದಲಿತರಿಗಾಗಿ ಇನ್ನೊಂದು ಮಡಿಕೆ ಇಟ್ಟು ಸರಿ ಪಡಿಸಿದರು ಎಂದರು.

ನಿವೃತ್ತ ಕೆವಿಜಿಬಿ ಬ್ಯಾಂಕ್ ಅಧಿಕಾರಿ ಮನೋಹರ ಅನಗವಾಡಿ ಅಧ್ಯಕ್ಷತೆ ವಹಿಸಿದ್ದರು. ಹಾಲು ಉತ್ಪಾದಕ ಸಹಕಾರಿ ಸಂಘದ ಅಧ್ಯಕ್ಷ ಮಲ್ಲಪ್ಪಗೌಡ ಮೇಟಿ, ಮುಖಂಡರಾದ ವೈ.ವೈ.ತಿಮ್ಮಾಪುರ, ಫಕೀರಯ್ಯ ಮಠಪತಿ. ಮಿಥುನ ನಾಯಕ, ಪೀರಸಾಬ ನದಾಫ, ಇಮಾಮಸಾಬ ಗುದಗಿ, ಬಾಬು ಮಾದರ, ಗುರುಬಸು ಅಕ್ಕಿಮರಡಿ, ರವಿ ಕುಂಚನೂರ, ಬಸು ಭಬ್ಬಿ, ಮಹೇಶ ಮಾದರ, ರಮೇಶ ಅನಗವಾಡಿ, ಬ್ರಹ್ಮಾನಂದ ಮಾದರ, ಹುಸೇನ ಮಾದರ, ಬಾಬು ಮಾದರ. ರಮೇಶ ಅನಗವಾಡಿ, ಅಶ್ವಿನಿ ಮಾದರ, ಸೌಜನ್ಯ ಚೂರಿ ಮತ್ತಿತರಿದ್ದರು.

ಮಹಿಳೆಯರಿಗೆ ಹಕ್ಕು ಸಿಗಬಾರದು ಎಂಬುದೇ ಕಾಂಗ್ರೆಸ್ ಅಜೆಂಡಾ

ಬಾಗಲಕೋಟೆ: ಮಹಿಳೆಯರಿಗೆ ಹಕ್ಕು ಸಿಗಬಾರದು ಎಂಬುದೇ ಕಾಂಗ್ರೆಸ್ ಅಜೆಂಡಾ. 33% ಮಹಿಳಾ ಮೀಸಲಾತಿ ಕಾಯ್ದೆಯನ್ನು ಜಾರಿಗೆ ತರಲು ದಶಕಗಳಿಂದ ಅಡ್ಡಿಪಡಿಸುತ್ತಿರುವ ಕಾಂಗ್ರೆಸ್‌ನ ಅಸಲಿ ಮುಖ ಇಂದು ಮತ್ತೆ ಬಯಲಾಗಿದೆ ಎಂದು ಮಾಜಿ ಶಾಸಕ ಡಾ.ವೀರಣ್ಣ ಚರಂತಿಮಠ ಹೇಳಿದರು.

ನಗರದ ಬಸವೇಶ್ವರ ವೃತ್ತದಲ್ಲಿ ಶನಿವಾರ ಭಾರತೀಯ ಜನತಾ ಪಾರ್ಟಿ ಬಾಗಲಕೋಟೆ ಮತಕ್ಷೇತ್ರದ ಮಹಿಳಾ ಮೋರ್ಚಾ ಹಮ್ಮಿಕೊಂಡ ನಾರಿ ಶಕ್ತಿ ವಂದನಾ ಅಧಿನಿಯಮವನ್ನು ಸೋಲಿಸಿ ಮಹಿಳೆಯರ ಹಕ್ಕುಗಳನ್ನು ಹತ್ತಿಕ್ಕಿದ ಕಾಂಗ್ರೆಸ್ ವಿರುದ್ಧ ನಡೆದ ಪ್ರತಿಭಟನೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, ಬಿಜೆಪಿ ಸರ್ಕಾರ ಜಾರಿಗೆ ತಂದ ಪ್ರತಿಯೊಂದು ಜನಪರ ಮತ್ತು ರಾಷ್ಟ್ರಹಿತದ ನಿರ್ಧಾರಗಳನ್ನು ಕಾಂಗ್ರೆಸ್ ವಿರೋಧಿಸುತ್ತಲೇ ಬಂದಿದೆ, ಮಹಿಳಾ ಸಬಲೀಕರಣಕ್ಕೆ ಕೊಡಲಿ ಪೆಟ್ಟು ಕೊಟ್ಟ ಕಾಂಗ್ರೆಸ್ ಪಕ್ಷದ ಮಹಿಳಾ ವಿರೋಧಿ ಧೋರಣೆಗೆ ದೇಶ ಸಾಕ್ಷಿಯಾಗಿದೆ. ಮಹಿಳೆಯರಿಗೆ ಹಕ್ಕು ಸಿಗಬಾರದು ಎಂಬುದೇ ಕಾಂಗ್ರೆಸ್ ಅಜೆಂಡಾ. 33% ಮಹಿಳಾ ಮೀಸಲಾತಿ ಕಾಯ್ದೆಯನ್ನು ಜಾರಿಗೆ ತರಲು ದಶಕಗಳಿಂದ



ಅಡ್ಡಿಪಡಿಸುತ್ತಿರುವ ಕಾಂಗ್ರೆಸ್‌ನ ಅಸಲಿ ಮುಖ ಇಂದು ಮತ್ತೆ ಬಯಲಾಗಿದೆ. ಮಹಿಳಾ ಮೀಸಲಾತಿಗೆ ವಿರೋಧಿಸುವುದು ಎಂದರೆ ಸಮಾನತೆ ವಿರೋಧಿಸಿದಂತೆ. ವಿರೋಧಿಸಿದವರು ಇನ್ನಾದರೂ ತಪ್ಪನ್ನು ಸರಿಪಡಿಸಿಕೊಳ್ಳಲಿ ಎಂದರು.

ವಿಧಾನ ಪರಿಷತ್ ಸದಸ್ಯ ಪಿ.ಎಚ್.ಪೂಜಾರ ಮಾತನಾಡಿ, ಮಹಿಳೆಯರ ಹಕ್ಕುಗಳು ಸಮಾಧಿಯಾಗುವುದನ್ನು ತನ್ನ ಜಯ ಎಂದು ಹೆಮ್ಮೆ ಪಡುವ ಕಾಂಗ್ರೆಸ್‌ನ ಮನಸ್ಥಿತಿ ಎಂತಹ ಕ್ರೂರ ಮನಸ್ಥಿತಿ ಇರಬೇಕು? ಇದು ಕಾಂಗ್ರೆಸ್ಸಿಗರ ಮಹಿಳಾ ವಿರೋಧಿ ಧೋರಣೆಯನ್ನು ಎತ್ತಿ ತೋರಿಸುತ್ತದೆ. ಅವರದೃಷ್ಟಿಯಲ್ಲಿ ಮಹಿಳೆಯರು ಕೇವಲ ಘೋಷಣೆಗಳಿಗೆ ಸೀಮಿತವಾಗಬೇಕೇ ಹೊರತು ಅಧಿಕಾರಕ್ಕೆ ಬರಬಾರದು ಎಂಬುದು ಸ್ಪಷ್ಟವಾಗಿದೆ. ಕಾಂಗ್ರೆಸ್ ಪಕ್ಷದ ಈ ದ್ರೋಹವನ್ನು ಪ್ರತಿಯೊಬ್ಬ ಮಹಿಳೆಯೂ, ಪ್ರತಿಯೊಬ್ಬ ಪ್ರಜಾಪ್ರಭುತ್ವವಾದಿ ಖಂಡಿಸಬೇಕಿದೆ ಎಂದರು.

ಮಹಿಳಾ ಮೋರ್ಚಾದ ಅಧ್ಯಕ್ಷೆ ಶಶಿಕಲಾ ಮಜ್ಜಗಿ ಮಾತನಾಡಿ, ಕಾಂಗ್ರೆಸ್ಸಿಗರ ಗುರಿ ಕೇವಲ ಚುನಾವಣೆ ಗೆಲ್ಲುವುದು, ಆದರೆ ನಮ್ಮ ಗುರಿ ರಾಷ್ಟ್ರದ ಕಲ್ಯಾಣ. ನಮಗೆ ಯಾವಾಗಲೂ ದೇಶ ಮತ್ತು ದೇಶದ ಜನತೆಯೇ ಮೊದಲ ಆದ್ಯತೆ. ಪ್ರತಿಯೊಬ್ಬರಿಗೂ ಸಮಾನ ಅವಕಾಶ ಮತ್ತು ನ್ಯಾಯ ಒದಗಿಸುವುದೇ ನಮ್ಮ ಸಂಕಲ್ಪ ಎಂದರು.

ಸವಿತಾ ಲಂಕೆನ್ನವರ, ಶೋಭಾ ರಾವ್, ಸುಜಾತಾ ಶಿಂಧೆ, ಸರಸ್ವತಿ ಕುರಬರ, ಶಿವಲೀಲಾ ಪಟ್ಟಣಶೆಟ್ಟಿ, ಸ್ಮಿತಾ ಪವಾರ, ಪ್ರೇಮಾ ಅಂಬಿಗೇರ ಭಾಗವಹಿದ್ದರು.


ಕಿರುಸುದ್ದಿ

ಬಸವ ಜಯಂತಿ ನಾಳೆ

ವಿಜಯಪುರ: ಜಿಲ್ಲಾಡಳಿತ, ಜಿಲ್ಲಾ ಪಂಚಾಯತಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗಳ ಸಹಯೋಗದಲ್ಲಿ ಬಸವ ಜಯಂತಿ ಆಚರಣೆ ಏ.20ರಂದು ಸಂಜೆ 5 ಗಂಟೆಗೆ ನಗರದ ಕಂದಗಲ್ ಹನುಮಂತರಾಯ ರಂಗಮಂದಿರದಲ್ಲಿ ಆಯೋಜಿಸಲಾಗಿದೆ. ನಗರದ ಬಸವೇಶ್ವರ ವೃತ್ತದಲ್ಲಿರುವ ವಿಶ್ವಗುರು ಬಸವಣ್ಣನವರ ಪುತ್ಥಳಿಗೆ ಮಾಲಾರ್ಪಣೆ ಹಾಗೂ ಅಂದು ಸಂಜೆ 4ಗಂಟೆಗೆ ಭಾವಚಿತ್ರದ ಮೆರವಣಿಗೆ ನಗರದ ಸಿದ್ದೇಶ್ವರ ದೇವಸ್ಥಾನದ ಆವರಣದಿಂದ ಪ್ರಮುಖ ವೃತ್ತಗಳ ಮೂಲಕ ಸಾಗಿ ಕಂದಗಲ್ ಹನುಮಂತರಾಯ ರಂಗಮಂದಿರವರೆಗೆ ಜರುಗಲಿದೆ. ಸಚಿವ ಡಾ.ಎಂ.ಬಿ.ಪಾಟೀಲ ಅವರು ಉದ್ಘಾಟಿಸುವರು. ನಗರ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅಧ್ಯಕ್ಷತೆ ವಹಿಸಲಿದ್ದಾರೆ. ಪ್ರೊ.ಎಚ್.ಟಿ.ಪೋತೆ ವಿಶೇಷ ಉಪನ್ಯಾಸ ನೀಡಲಿದ್ದಾರೆ. ಶ್ರೀದೇವಿ ಭಂಡಾರಿಕರ ಸುಗಮ ಸಂಗೀತ ನಡೆಸಿಕೊಡಲಿದ್ದಾರೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪ್ರಕಟಣೆ ತಿಳಿಸಿದೆ.

ಸ್ತ್ರೀ ಶ್ರೇಯೋಭಿವೃದ್ಧಿಗೆ ವಿಪಕ್ಷಗಳಿಂದ ವಿರೋಧ

ವಿಜಯಪುರ: ಮಹಿಳಾ ಮೀಸಲಾತಿ ಪರ ಇದ್ದೇವೆ ಎನ್ನುತ್ತಿದ್ದ ವಿಪಕ್ಷಗಳು ಸಂಸತ್ತಿನಲ್ಲಿ ತಮ್ಮ ಅಸಲಿ ಮುಖವನ್ನು



ಪ್ರದರ್ಶಿಸುವ ಮೂಲಕ ಸ್ತ್ರೀ ವಿರೋಧಿ ಹಾಗೂ ಸ್ತ್ರೀ ಶ್ರೇಯೋಭಿವೃದ್ಧಿ ವಿರೋಧಿ ಧೋರಣೆಯನ್ನು ಪ್ರದರ್ಶಿಸಿವೆ ಎಂದು ಸಂಸದ ರಮೇಶ ಜಿಗಜಿಣಗಿ ಖಾರವಾಗಿ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಈ ಕುರಿತು ಪತ್ರಿಕಾ ಹೇಳಿಕೆ ಮೂಲಕ ನಾರಿಶಕ್ತಿ ಅಭಿನಂದನ್ ಬಿಲ್ ಅಂಗೀಕಾರವಾಗದೇ ಇರಲು ಕಾರಣೀಕರ್ತರಾದ ಪ್ರತಿಪಕ್ಷ ಕಾಂಗ್ರೆಸ್ ಮೊದಲಾದ ಪಕ್ಷಗಳ ಮೇಲೆ ಹರಿಹಾಯ್ದಿದ್ದಾರೆ. ಪ್ರಧಾನಿ ನರೇಂದ್ರ ಮೋದಿಜೀ ಅವರು ಮಹಿಳಾ ಸಶಕ್ತಿಕರಣ ಜಾರಿ ಮಾಡಿ 2029 ರಲ್ಲಿ ಚುನಾವಣೆ ನಡೆಸುವುದು, ಒಬ್ಬ ವ್ಯಕ್ತಿ ಒಂದು ಮತ ಎಂಬ ಸಿದ್ಧಾಂತವನ್ನು ದೃಢಗೊಳಿಸುವ ಚಿಂತನೆ ಹೊಂದಿದ್ದರು. ನಾರಿ ಶಕ್ತಿಗೆ 2029ಕ್ಕಿಂತ ಮೊದಲು ಅವಕಾಶ ಕೊಡಲು ಕಾಂಗ್ರೆಸ್ ಮತ್ತು ಅದರ ಮಿತ್ರ ಪಕ್ಷಗಳು ಸಿದ್ಧವಿಲ್ಲ ಎಂಬುದು ಸಾಬೀತಾಗಿದೆ. ಬಿಜೆಪಿಗೆ ರಾಷ್ಟ್ರ ನಿರ್ಮಾಣದ ಚಿಂತನೆ ಇದೆ. ಕಾಂಗ್ರೆಸ್ ಪಕ್ಷವು ಸುಮಾರು ಆರೂವರೆ ದಶಕಗಳ ಕಾಲ ದೇಶದ ಆಡಳಿತದಲ್ಲಿ ಇದ್ದಾಗ ಒಬಿಸಿ ಸಮುದಾಯಕ್ಕೆ ಅನ್ಯಾಯ ಮಾಡಿತ್ತು. ಮಂಡಲ್ ವರದಿ ಜಾರಿ ಮಾಡಲು ಹಿಂಜರಿಕೆ ತೋರಿದ ಇವರದು ತೋರಿಕೆಯ ಒಬಿಸಿ ಪ್ರೀತಿ ಎಂಬುದು ಜನರಿಗೆ ಗೊತ್ತಿದೆ. ಇನ್ನು ಮುಂದೆ ಮಹಿಳೆಯರ ಕುರಿತ ಇವರ ಮಾತುಗಳು ಕೇವಲ ತೋರಿಕೆ ಎಂಬುದು ಮಹಿಳಾ ಶಕ್ತಿಗೂ ಅರಿವಾಗಿದೆ ಎಂದು ಅವರು ಹೇಳಿದ್ದಾರೆ.

ರಾಜ್ಯಮಟ್ಟದ ಪ್ರಶಸ್ತಿಗೆ ಶಾಜಾದಬಿ ಮುಲ್ಲಾ ಆಯ್ಕೆ

ಆಲಮೇಲ: ಸಿಂದಗಿ ತಾಲೂಕಿನ ಕೋರವಾರ



ಗ್ರಾಮದ ಡಿಎಸ್ಎಸ್ (ಸಾಗರ ಬಣ) ಡಾ.ಬಿ.ಆರ್ ಅಂಬೇಡ್ಕರ್ ಅವರ 135ನೇ ಜಯಂತೋತ್ಸವ ಕಾರ್ಯಕ್ರಮದ ಪ್ರಯುಕ್ತ ನೀಡುವ ರಾಜ್ಯಮಟ್ಟದ ಅತ್ಯುತ್ತಮ ಶಿಕ್ಷಕಿಯರು ಪ್ರಶಸ್ತಿಗೆ ಆಲಮೇಲ ತಾಲೂಕಿನ ಪಿಎಂಶ್ರೀ ಸರಕಾರಿ ಕನ್ನಡ ಗಂಡು ಮಕ್ಕಳ ಮಾದರಿ ಪ್ರಾಥಮಿಕ ಶಾಲೆ ಆಲಮೇಲ ಈ ಶಾಲೆಯಲ್ಲಿ ಸಹ ಶಿಕ್ಷಕರಾಗಿ ಕರ್ತವ್ಯ ನಿರ್ವಹಿಸುತ್ತಿರುವ ಶಾಜಾದಬಿ ಮುಲ್ಲಾ(ನಗಾರಶಿ)ಅವರು ಆಯ್ಕೆಯಾಗಿದ್ದಾರೆ. ಸುಮಾರು 19 ವರ್ಷಗಳಿಂದ ಸರಕಾರಿ ಶಾಲೆಯ ಮಕ್ಕಳ ಗುಣಾತ್ಮಕ ಶಿಕ್ಷಣಕ್ಕಾಗಿ ಅತ್ಯಂತ ಪ್ರಾಮಾಣಿಕ ಸೇವೆಸಲ್ಲಿಸಿರುವದನ್ನು ಗುರುತಿಸಿ ಈ ಪ್ರಶಸ್ತಿ ನೀಡಲಾಗುತ್ತಿದೆ. ಏ.19 ರಂದು ಸಂಜೆ 4 ಗಂಟೆಗೆ ಕೋರವಾರ ಗ್ರಾಮದಲ್ಲಿ ಜರುಗಲಿರುವ ಜಯಂತೋತ್ಸವ ಕಾರ್ಯಕ್ರಮದಲ್ಲಿ ಇವರನ್ನು ಪ್ರಶಸ್ತಿ ನೀಡಿ ಗೌರವಿಸಲಾಗುತ್ತದೆ ಎಂದು ತಿಳಿಸಿದ್ದಾರೆ

ಬಿ.ಟಿ.ಚವ್ಹಾಣ ನಿಧನ

ವಿಜಯಪುರ: ನಿವೃತ್ತ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಬಿ.ಟಿ.ಚವ್ಹಾಣ(74) ನಿಧನರಾಗಿದ್ದಾರೆ.



ಮೃತರು ವಿಜಯಪುರದ ಚಾಲುಕ್ಯ ನಗರದ ನಿವಾಸಿಯಾಗಿದ್ದರು. ಪಿಎಸ್ಐ, ಸಿಪಿಐ, ಡಿವೈಎಸ್ಪಿ ಸೇರಿದಂತೆ ಹೆಚ್ಚುವರಿ ಎಸ್ಪಿಯಾಗಿ ಸೇವೆ ಸಲ್ಲಿಸಿದ್ದರು. ಬೆಂಗಳೂರು, ಹುಬ್ಬಳ್ಳಿ, ರೋಣ, ಅಥಣಿ, ಹೊಸಪೇಟೆ, ಬಾದಾಮಿ, ವಿಜಯಪುರ ನಗರ, ಗದಗ, ಮೈಸೂರು, ಹಾಸನ ಹಾಗೂ ದಾವಣಗೆರೆಯಲ್ಲಿ ಸೇವೆ ಸಲ್ಲಿಸಿದ್ದಾರೆ. ಮೃತರಿಗೆ ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗ ಇದ್ದಾರೆ. ಹಿರಿಯ ಪೊಲೀಸ್ ಅಧಿಕಾರಿ ಡಿಜಿಪಿ ಅಲೋಕಕುಮಾರ ಸೇರಿದಂತೆ ನಾನಾ ಗಣ್ಯರು ಮೃತರ ಅಂತಿಮ ದರ್ಶನ ಪಡೆದು ಕುಟುಂಬ ಸದಸ್ಯರಿಗೆ ಸಾಂತ್ವನ ಹೇಳಿದರು.



ಮುದ್ದೇಬಿಹಾಳ: ತಾಲೂಕಿನ ಆಲೂರು ಗ್ರಾಮದಲ್ಲಿ ಮಾದಿಗ ಸಮುದಾಯದ ವತಿಯಿಂದ ಆಂಜನೇಯ ಸ್ವಾಮಿಗೆ ಪಾದುಕೆ ಸಮರ್ಪಿಸುವ ಪುಣ್ಯ ಕಾರ್ಯಕ್ರಮದಲ್ಲಿ ಮಾಜಿ ಶಾಸಕ ಎ.ಎಸ್ .ಪಾಟೀಲ ಅವರು ಭಾಗವಹಿಸಿದ್ದರು. ಗ್ರಾಮಸ್ಥರಿಂದ ಆತ್ಮೀಯ ಸನ್ಮಾನ ಸ್ವೀಕರಿಸಿ ಮಾತನಾಡಿದರು. ಈ ಸಂದರ್ಭದಲ್ಲಿ ಊರಿನ ಮುಖಂಡರು ಹಾಗೂ ಸಮಾಜದ ಹಿರಿಯರು ಉಪಸ್ಥಿತರಿದ್ದರು.

ಸಹಾಯವಾಣಿಗೆ ಕರೆ ಮಾಡಿ

ಇಂಡಿ: ಆಕಸ್ಮಿಕ ಬೆಂಕಿ ತಗುಲಿದರೆ ಅದನ್ನು ತಡೆಯುವುದು ಅಗ್ನಿಶಾಮಕ ಇಲಾಖೆಯ ಕರ್ತವ್ಯ ಕಾರಣ ಸಾರ್ವಜನಿಕರು ಅಂತಹ ಸಮಯದಲ್ಲಿ 101ಕ್ಕೆ ಸಹಾಯವಾಣಿ ಮೂಲಕ ಕರೆ ಮಾಡಬೇಕು ಎಂದು ಅಗ್ನಿಶಾಮಕ ಇಲಾಖೆಯ ಅಧಿಕಾರಿ ದೇವದಾನಮ್ಮ ಹೇಳಿದರು. ನಗರದ ಅಗ್ನಿ ಶಾಮಕ ಇಲಾಖೆಯಲ್ಲಿ ನಡೆದ ಅಗ್ನಿಶಾಮಕ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದರು. ಮನೆಗಳಿಗೆ ಹುಲ್ಲಿನ ಮದುಗಳಿಗೆ ಮರದ ರಾಶಿಗೆ ಬೆಂಕಿ ಬಿದ್ದಾಗ ಸಾಕಷ್ಟು ಮರಳು ನೀರನ್ನು ಸುರಿವಿರಿ. ಸೀಮೆ ಎಣ್ಣೆ ಪೆಟ್ರೋಲ್ ಅಥವಾ ಇತರೆ ಎಣ್ಣೆ ಪದಾರ್ಥಗಳಿಗೆ ಬೆಂಕಿ ಬಿದ್ದಾಗ ತಗುಲಿದಾಗ ನೀರನ್ನು ಸುರಿಯಬೇಡಿ ನೀರು ಭಾರವಾಗಿರುವದರಿಂದ ಬೆಂಕಿಯು ಬೇರೆ ಕಡೆಗೆ ಹರಡುವ ಸಾಧ್ಯತೆ ಇದೆ. ಈ ಸಂದರ್ಭದಲ್ಲಿ ಮರಳನ್ನು ಬಳಸಿ. ವಿದ್ಯುತ್ ಒಲೆಗಳಲ್ಲಿ ಕೆಲಸ ಮಾಡುವಾಗ ಮರದ ಹಲಗೆ ಮೇಲೆ ನಿಂತು ಕೆಲಸ ಮಾಡಬೇಕು ವಿದ್ಯುತ ಬೆಂಕಿ ತಗುಲಿದಾಗ ಬೇಗನೆ ಮೇನ್ ಸ್ವಿಚ್ ಆಫ್ ಮಾಡಬೇಕು. ನಂತರ ಬೆಂಕಿ ಆರಿಸಲು ಮರಳು ಅಥವಾ ಮಣ್ಣನ್ನು ಬಳಸಿ, ಮಷಿನರಿ ಯಂತ್ರದ ಸಾಮಾನುಗಳನ್ನು ಕಾರು ಇಂಜಿನಿಗೆ ಬೆಂಕಿ ತಗುಲಿದಾಗ ನೀರನ್ನು ಸುರಿಯಬೇಡಿ ಬದಲಾಗಿ ಮರಳು ಮಣ್ಣು ಬಳಸಿ ಎಂದು ವಿವಿಧ ಪ್ರಕಾರಗಳನ್ನು ವಿವರಿಸಿದರು. ಅಗ್ನಿಶಾಮಕ ಸಿಬ್ಬಂದಿ ಸೇವಾ ನಿರತರಿದ್ದಾಗ ಪ್ರಾಣ ತ್ಯಾಗ ಮಾಡಿದ ಸ್ಮರಣಾರ್ಥ ತಿಳುವಳಿಕೆ ಮೂಡಿಸುವದು ಉದ್ದೇಶವಾಗಿದೆ ಎಂದರು. ಧರೆಪ್ಪ ಪೂಜಾರಿ, ಸಂತೋಷ ಪೂಜಾರಿ ರಿಯಾಜ ಯಾದಗಿರಿ ಬಬ್ಲು ಮಾಣಿಕ ಬಸವರಾಜ ನಾವಿ ಅನಿಲ್ ಚವ್ಹಾಣ ಮತ್ತಿತರಿದ್ದರು.



ಇಂಡಿ: ನಗರದ ಅಗ್ನಿ ಶಾಮಕ ಇಲಾಖೆಯಲ್ಲಿ ನಡೆದ ಅಗ್ನಿಶಾಮಕ ದಿನಾಚರಣೆ ನಡೆಯಿತು. ಅಗ್ನಿಶಾಮಕ ಇಲಾಖೆಯ ಅಧಿಕಾರಿ ದೇವದಾನಮ್ಮ, ಧರೆಪ್ಪ ಪೂಜಾರಿ, ಸಂತೋಷ ಪೂಜಾರಿ ರಿಯಾಜ ಯಾದಗಿರಿ ಬಬ್ಲು ಮಾಣಿಕ ಬಸವರಾಜ ನಾವಿ ಅನಿಲ್ ಚವ್ಹಾಣ ಮತ್ತಿತರಿದ್ದರು.

ಕಾಂಗ್ರೆಸ್ ವಿರುದ್ಧ ಮಾಜಿ ಸಚಿವ ಪಟ್ಟಣಶೆಟ್ಟಿ ಆಕ್ರೋಶ

ಪ್ರತಿಪಕ್ಷಗಳಿಂದ ಮಹಿಳೆಯರಿಗೆ ಅನ್ಯಾಯ

ವಿಜಯಪುರ: ಮಹಿಳಾ ಮೀಸಲಾತಿ ವಿಧೇಯಕಕ್ಕೆ ವಿರೋಧ ವ್ಯಕ್ತಪಡಿಸುವ ಮೂಲಕ ಕಾಂಗ್ರೆಸ್ ಹಾಗೂ ಅದರ ಮಿತ್ರ ಪಕ್ಷಗಳು ದೇಶದ ಮಹಿಳೆಯರಿಗೆ ಅನ್ಯಾಯ ಮಾಡಿವೆ ಎಂದು ಮಾಜಿ ಸಚಿವ ಅಪ್ಪಾಸಾಹೇಬ ಪಟ್ಟಣಶೆಟ್ಟಿ ಕಾಂಗ್ರೆಸ್ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಸ್ವಾತಂತ್ರ್ಯ ಬಂದು ಇಷ್ಟು ವರ್ಷ ಕಳೆದರೂ ಮಹಿಳಾ ಮೀಸಲಾತಿ ನೀಡುವಲ್ಲಿ ಕಾಂಗ್ರೆಸ್ ಪಕ್ಷ ಬದ್ಧತೆಯಿಂದ ಕೆಲಸ ಮಾಡಿಲ್ಲ. ಇತ್ತೀಚಿನ 3 ದಶಕಗಳಲ್ಲಿ ಕಾಂಗ್ರೆಸ್ ಸರ್ಕಾರ ಮಹಿಳಾ ಸಬಲೀಕರಣ, ಮಹಿಳಾ ಮೀಸಲಾತಿ ಹೆಸರಿನಲ್ಲಿ ಮತ ಕೇಳಿ ರಾಜಕಾರಣ ಮಾಡುತ್ತಿದೆ. ಈ ದೇಶದ ಮಹಿಳೆಯರಿಗೆ ನರೇಂದ್ರ ಮೋದಿ ಸರ್ಕಾರ ಮೀಸಲಾತಿ ಕಲ್ಪಿಸುವ ಬಿಲ್ ತಂದರೆ ಅದನ್ನು ವಿರೊಧಿಸುವ ಮೂಲಕ ಮಹಿಳೆಯರ ಹಕ್ಕುಗಳನ್ನು ಕಿತ್ತಿಕೊಳ್ಳುವ ಪ್ರಯತ್ನ ಮಾಡುತ್ತಿದೆ ಎಂದು ದೂರಿದರು.

ಕೇಂದ್ರ ಬಿಜೆಪಿ ಸರ್ಕಾರ ಮಹಿಳೆಯರ ಬಹುದಿನದ ಬೇಡಿಕೆಗೆ ಸ್ಪಂದಿಸುವ ಕಾರ್ಯ ಮಾಡಿತ್ತು. ಲೋಕಸಭೆ, ರಾಜ್ಯ ಸಭೆ, ವಿಧಾನ ಸಭೆ ಹಾಗೂ ಸ್ಥಳಿಯ ಮಟ್ಟದ ಸರ್ಕಾರಗಳಲ್ಲಿ ಮಹಿಳೆಯರಿಗೆ ಮೀಸಲಾತಿ ಕಲ್ಪಿಸಬೇಕು. ಕಾಂಗ್ರೆಸ್ ಪಕ್ಷ ವಾಸ್ತವದ ಯೋಚನೆ ಮಾಡಬೇಕಿತ್ತು. ಮಹಿಳೆಯರ ಅಭಿವೃದ್ಧಿ ವಿಷಯದಲ್ಲಿ ರಾಜಕೀಯ ಮಾಡುವುದು ಸರಿಯಲ್ಲ ಎನ್ನುವ ಸಣ್ಣ ಅರಿವು ಸಹಿತ ಕಾಂಗ್ರೆಸ್‌ಗೆ ಇಲ್ಲದಿರುವುದು ಅತ್ಯಂತ ನೋವಿನ ಸಂಗತಿ ಎಂದರು.

ಬಿಜೆಪಿ ಮಹಿಳಾ ಮೋರ್ಚಾ ಜಿಲ್ಲಾಧ್ಯಕ್ಷೆ ಸ್ವಪ್ನಾ



> ಡಿಲಿಮಿಟೇಷನ್ ಬಿಲ್ ಮೇಲೆ ಕಾಂಗ್ರೆಸ್ ವಿರೋಧ ವ್ಯಕ್ತಪಡಿಸಬೇಕಾಗಿತ್ತು. ಆದರೆ ಮಹಿಳಾ ಮೀಸಲಾತಿ ವಿರೋಧಿಸಿರುವುದು ಅತ್ಯಂತ ಖಂಡನೀಯ. ಮಹಿಳಾ ಮೀಸಲಾತಿ ಬಿಲ್ ವಿರೋಧಿಸುವ ಮೂಲಕ ದೇಶದ ಮಹಿಳೆಯರಿಗೆ ಅನ್ಯಾಯ- ಅಪಮಾನ ಮಾಡಿರುವ ಕಾಂಗ್ರೆಸ್ ಪಕ್ಷಕ್ಕೆ ಜನ ತಕ್ಕ ಪಾಠ ಕಲಿಸಲಿದ್ದಾರೆ.
>
> ■ ಅಪ್ಪಾಸಾಹೇಬ ಪಟ್ಟಣಶೆಟ್ಟಿ, ಮಾಜಿ ಸಚಿವ

ಕಣಮುಚನಾಳ ಮಾತನಾಡಿ, ನಾರಿಶಕ್ತಿ ಅಧಿನಿಯಮ ಕಾಯ್ದೆ ವಿರೋಧಿಸಿರುವ ಕಾಂಗ್ರೆಸ್‌ನ ನಡೆ ನಾರಿ ಶಕ್ತಿಗೆ ಮಾಡಿರುವ ಅನ್ಯಾಯ. ಕಾಂಗ್ರೆಸ್ ಪಕ್ಷ ಯಾವತ್ತಿಗೂ ಮಹಿಳೆಯರ ವಿರೋಧಿಯೇ ಆಗಿದೆ. ಈ ಬಿಲ್ ಪಾಸ್ ಆದರೆ ಮಹಿಳೆಯರು ಬಿಜೆಪಿ ಪರವಾಗಿ ನಿಲ್ಲುತ್ತಾರೆ ಎನ್ನುವ ಆತಂಕದಿಂದ ಮಹಿಳಾ ವಿರೋಧಿ ನಡೆ ಅನುಸರಿಸಿದೆ ಎಂದು ಅಸಮಧಾನ ಹೊರ ಹಾಕಿದರು.

ಮಹಿಳಾ ಮೀಸಲಾತಿ ವಿಧೇಯಕ ಪಾಸ್ ಆದರೆ ಕಾಂಗ್ರೆಸ್ ಪಕ್ಷ ದೇಶದಲ್ಲಿ ಆಡಳಿತ ನಡೆಸಲು ಸಾಧ್ಯವಿಲ್ಲ ಎನ್ನುವ ದುರುದ್ದೇಶದಿಂದ ಕಾಂಗ್ರೆಸ್ ಹಾಗೂ ಅದರ ಮಿತ್ರ ಪಕ್ಷಗಳು ಮಹಿಳಾ ಮೀಸಲಾತಿ ವಿರೋಧಿಸುತ್ತಿವೆ. ಆದರೆ ಕಾಂಗ್ರೆಸ್ ಮಹಿಳಾ ವಿರೋಧಿ ದೋರಣೆ ದೇಶದ ಜನರಿಗೆ ಗೊತ್ತಾಗಿದೆ ಎಂದರು.

ಬಾಗಲಕೋಟ ಉಪಚುನಾವಣೆಯಲ್ಲಿ ಬಿಜೆಪಿ ಗೆಲ್ಲುತ್ತದೆ. ಬಸನಗೌಡ ಪಾಟೀಲ್ ಯತ್ನಾಳ ಪ್ರಚಾರಕ್ಕೆ ಬಂದಿದ್ದಾರೆ ಅದಕ್ಕೆ ಗೆಲ್ಲುತ್ತದೆ ಎನ್ನುವುದು ಶುದ್ಧ ಸುಳ್ಳು. ಬಿಜೆಪಿ ಕಾರ್ಯಕರ್ತರು ಸಾಕಷ್ಟು ಶ್ರಮ ಹಾಕಿದ್ದಾರೆ. ಬಿಜೆಪಿ ಮುಖಂಡರು, ನಾವು ಯತ್ನಾಳ ಎಲ್ಲರೂ ಕೂಡಿ ಪ್ರಚಾರ ಮಾಡಿದ್ದೇವೆ ಎಂದು ಪಟ್ಟಣಶೆಟ್ಟಿ ಪ್ರತಿಕ್ರಿಯಿಸಿದರು.

ಬಿಜೆಪಿ ನಗರ ಮಂಡಲ ಅಧ್ಯಕ್ಷ ಸಂದೀಪ ಪಾಟೀಲ, ಜಿಲ್ಲಾ ಮಾಧ್ಯಮ ಸಂಚಾಲಕ ವಿಜಯ ಜೋಶಿ ಪತ್ರಿಕಾಗೋಷ್ಠಿಯಲ್ಲಿ ಇದ್ದರು.

ಪರಂಪರೆ ಸಂರಕ್ಷಣಾ ಜವಾಬ್ದಾರಿ ನಮ್ಮದು

ವಿಜಯಪುರ: ನಮ್ಮ ಪರಂಪರೆ ಐತಿಹಾಸಿಕ ಸ್ಮಾರಕಗಳ ಇತಿಹಾಸ, ವೈವಿಧ್ಯತೆ ಕಾಪಾಡಿಕೊಳ್ಳುವುದು ಅಲ್ಲದೆ ಪಾರಂಪರಿಕ ತಾಣಗಳನ್ನು ರಕ್ಷಣೆ ಮಾಡುವ ಜವಾಬ್ದಾರಿ ನಮ್ಮ ಮೇಲಿದೆ ಎಂದು ಚಡಚಣ ಸಂಗಮೇಶ್ವರ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯದ ಇತಿಹಾಸ ವಿಭಾಗದ ಮುಖ್ಯಸ್ಥ ಡಾ.ಮಯೂರ ಕುದರಿ ಹೇಳಿದರು.

ನಗರದ ಬಿಎಲ್‌ಡಿಇ ಸಂಸ್ಥೆಯ ಎಸ್‌ಬಿ ಕಲಾ ಮತ್ತು ಕೆಸಿಪಿ ವಿಜ್ಞಾನ ಮಹಾವಿದ್ಯಾಲಯದಲ್ಲಿ ಐಕ್ಯೂಎಸಿ, ಹೆರಿಟೇಜ್ ಕ್ಲಬ್ ಹಾಗೂ ಇತಿಹಾಸ ವಿಭಾಗದ ಆಶ್ರಯದಲ್ಲಿ ಏ.18 ರಂದು ವಿಶ್ವ ಪಾರಂಪರಿಕ ದಿನಾಚರಣೆ ನಿಮಿತ್ತ ಕರ್ನಾಟಕದ ಪಾರಂಪರಿಕ ಸ್ಮಾರಕಗಳ ಮಹತ್ವ ಎಂಬ ವಿಷಯದ ಕುರಿತು ಉಪನ್ಯಾಸ ನೀಡಿ ಅವರು ಮಾತನಾಡಿದರು.

ಪುರಾತತ್ವ ಇಲಾಖೆಯಡಿಯಲ್ಲಿನ ಹಲವು ವಿಶ್ವ ಪಾರಂಪರಿಕ ತಾಣಗಳು ಇದ್ದು ಅವುಗಳನ್ನು ಸಂರಕ್ಷಿಸುವ ಜವಾಬ್ದಾರಿ ನಮ್ಮದಾಗಿದೆ, ಪಾರಂಪರಿಕ ತಾಣಗಳು ಪೂರ್ವಜರ ವಿಚಾರಗಳನ್ನು ಪಸ್ತುತಪಡಿಸುತ್ತಿವೆ ಎಂದರು.

ಯುನೆಸ್ಕೋ ಪಟ್ಟಿಯಡಿಯಲ್ಲಿ ನಮ್ಮ ದೇಶದ ಹಲವು ಸ್ಮಾರಕಗಳು, ಕಟ್ಟಡಗಳು, ಪಶ್ಚಿಮ ಘಟ್ಟಗಳು, ವಿಶ್ವ ಪರಂಪರೆ ಸ್ಥಳಗಳು, ಅಲ್ಲದೆ ಕರ್ನಾಟಕದ ಪ್ರಮುಖ ಐತಿಹಾಸಿಕ ಸ್ಥಳಗಳಾದ ವಿರೂಪಾಕ್ಷಿ ದೇವಾಲಯ, ಲೋಟಸ್ ದೇವಾಲಯ, ಹಜಾರ ರಾಮ್ ದೇವಾಲಯ, ಹಂಪಿ ದೇವಾಲಯ ವಿವಿಧ ಯುನೆಸ್ಕೋ ಪಟ್ಟಿಗೆ ಸೇರಿದ ದೇವಾಲಯಗಳ ಮಹತ್ವ ಮತ್ತು ಅವುಗಳ ಇತಿಹಾಸದ ಬಗ್ಗೆ ತಿಳಿಸಿದರು.

ಪ್ರಾಚಾರ್ಯ ಡಾ.ಅನಿಲ ನಾಯಕ, ಐಕ್ಯೂಎಸಿ ಸಂಯೋಜಕ ಡಾ.ಪಿ.ಎಸ್.ಪಾಟೀಲ, ಡಾ.ತರನ್ನುಮ್ ಜಬೀನ ಖಾನ್, ಪ್ರೊ.ಎಸ್.ವೈ.ಅಂಗಡಿ, ಭೀಮಶಿ ಮದರಕಂಡಿ, ಮಲಿಕ್ ಜಮಾದಾರ, ಅಕ್ಷಯ ಜನಾಯ, ಡಾ.ಸುಮಿ ಚೋಪಡೆ ಇದ್ದರು.

ಇತಿಹಾಸ ವಿಭಾಗದ ಮುಖ್ಯಸ್ಥ ಪ್ರೊ.ಐ.ಎಸ್. ಹೂಗಾರ ಸ್ವಾಗತಿಸಿದರು. ಹೆರಿಟೇಜ್ ಕ್ಲಬ್ ಸಂಯೋಜಕ ಡಾ.ಗಿರೀಶ ಹನಮರೆಡ್ಡಿ ಪರಿಚಯಿಸಿದರು.



ಮಾನವ ಇತರರಿಗೆ ಆಸರೆಯಾಗಿ ಬದುಕಲಿ

ಸಿಂದಗಿ: ಮಾನವ ಇತರರಿಗೆ ಆಸರೆಯಾಗಿ ಬದುಕಬೇಕು. ಇತರರಿಗೆ ಬೇಸರವಾಗುವಂತಿದ್ದರೆ ಅದು ನಶ್ವರದ ಬದುಕಾಗಿರುತ್ತದೆ ಎಂದು ಯಡ್ರಾಮಿ ತಾಲೂಕಿನ ಸುಕ್ಷೇತ್ರ ಮಾಗಣಗೇರಿಯ ರುದ್ರಮುನೇಶ್ವರ ಹಿರೇಮಠದ ಪಟ್ಟಾಧ್ಯಕ್ಷ ಏಕಾಕ್ಷರ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ತಾಲೂಕಿನ ಸುಕ್ಷೇತ್ರ ಹೊನ್ನಳ್ಳಿ ಬ್ರಹ್ಮದೇವನಮಡು ಗ್ರಾಮದ ಕಲ್ಯಾಣದೇಶ್ವರ ಜಾತ್ರಾ ಮಹೋತ್ಸವ ನಿಮಿತ್ಯ ಹಮ್ಮಿಕೊಂಡ ಶ್ರೀದೇವಿ ಹಾಗೂ 351 ಮುತ್ತೈದಿಯರಿಗೆ ಉಡಿ ತುಂಬುವ ಕಾಯಕ್ರಮದಲ್ಲಿ ಸಮ್ಮುಖ ವಹಿಸಿ ಮಾತನಾಡಿದ ಅವರು, ಮಾನವನ ಜನ್ಮದಿಂದ ಜಗತ್ತಿಗೆ ಉಪಯೋಗವಾಗಬೇಕು. ಇದಕ್ಕೆ ನಿದರ್ಶನವೇ ಶ್ರೀಮಠದ ಲಿಂಗೈಕ್ಯ ವೀರಘಂಟಯ್ಯ ಸ್ವಾಮೀಜಿ. ಇವರ ಸತ್ಯ ಸನ್ಮಾರ್ಗವು ಮನುಕುಲಕ್ಕೆ ದಾರಿದೀಪವಾಗಿದೆ. ಸಂಪತ್ತಿನ ಬೆನ್ನು ಹತ್ತದೇ ಸದ್ವಿಚಾರಗಳು, ನಡೆ ನುಡಿಯಲ್ಲಿ ಭಿನ್ನವಿಲ್ಲದಂತೆ ಬದುಕಿದ್ದೇ ಆದಲ್ಲಿ ದೈವಾನುಗ್ರಹ ಸದಾ ಇರುತ್ತದೆ. ವಿಕೃತಿ ಬದುಕು ತ್ಯಜಿಸಿ ಸುಸಂಸ್ಕೃತ ಬದುಕು ಸಾಗಿಸುವುದು ಅಗತ್ಯವಾಗಿದೆ ಎಂದರು.

ಯಂಕಂಚಿ ಕುಂಟೋಜಿ ಹಿರೇಮಠದ ಅಭಿನವ ರುದ್ರಮುನಿ ಶಿವಾಚಾರ್ಯರು ಮಾತನಾಡಿ, ಕಲ್ಯಾಣದೇಶ್ವರ ಮಠದ ಸತ್ಕಾರ್ಯಗಳು ಸತತವಾಗಿ ನಡೆಯುತ್ತಿವೆ. ಸಕಲ ಸದ್ಭಕ್ತರ ಸಹಕಾರ ಪ್ರೀತಿ ವಿಶ್ವಾಸಯುಕ್ತ ಬದುಕಿಗೆ ಮಠದಿಂದ ಒಳಿತಾಗುತ್ತಿದೆ. ಪೂಜ್ಯನೀಯ ತಂದೆ ತಾಯಿಯರನ್ನು ಗೌರವಿಸುವವರೇ ಪುಣ್ಯವಂತರಾಗುತ್ತಾರೆ. ಪ್ರಾಣಿ ಪ್ರೀತಿಯ ಜೊತೆಗೆ ಮಾನವ ಸಹಸಂಬಂಧಗಳಿಗೂ ಬೆಲೆ ಇರಬೇಕು. ಹಿರಿಯರನ್ನು ವೃದ್ಧಾಶ್ರಮಕ್ಕೆ ಕಳಿಸುವ ದುಸ್ಥಿತಿ ಯಾರಿಗೂ ಬರಬಾರದು. ಭಕ್ತರು ಸದಾ ಶ್ರೀಮಠದ ಮೇಲೆ ಕಾಳಜಿ ಸೇವಾ ಮನೋಭಾವ ಹೊಂದಬೇಕು. ಸದ್ಗುಣಗಳಿಂದ ಜೀವನ ನಡೆಸುವ ಪ್ರತಿಯೊರ್ವರಿಗೂ ಗುರುವಿನ ಕೃಪಕಟಾಕ್ಷ ಇರುತ್ತದೆ ಎಂದರು.

ಚಾಮನಾಳದ ಗುರಣ್ಣಸಾಹು ಅಂಗಡಿ ದಂಪತಿಗಳ ಹಾಗೂ ಪತ್ರಕರ್ತ ಮಲ್ಲಿಕಾರ್ಜುನ ಕೆಂಭಾವಿ ಅವರನ್ನು ಮಠದಿಂದ ಸನ್ಮಾನಿಸಿ ಗೌರವಿಸಲಾಯಿತು.

ಮಠದ ಒಡೆಯ ಕಲ್ಯಾಣದಯ್ಯ ವೀರಘಂಟಯ್ಯ ಗದ್ದುಗೆಮಠ ಸ್ವಾಮೀಜಿ, ರಾಜೇಶ್ರೀ ಅಮ್ಮನವರು, ಚನ್ನಮಲ್ಲಯ್ಯ ಹಿರೇಮಠ, ಸೋಮನಗೌಡ ಚಿಂಚೊಳ್ಳಿ, ಶಿವುಸಾಹ ಅಂಗಡಿ, ಪ್ರವಚನಕಾರ ಡಾ.ಶಿವಲಿಂಗಯ್ಯ ಶರಣರು ಪುರಾಣಿಕಮಠ, ಶಹಾಪೂರ ಮನಗೂಳಿ ಆಸ್ಪತ್ರೆಯ ಡಾ.ಶಂಭುಲಿಂಗ ಮನಗೂಳಿ, ಮಲ್ಹಾರಾವ್ ಕುಲಕರ್ಣಿ, ಗುರುಲಿಂಗಪ್ಪಸಾಹು ಸಜ್ಜನ, ಎಸ್.ವೈ.ಅಮರಗೋಳ, ಪವನ ಕುಲಕರ್ಣಿ ಚಾಮನಾಳ, ಅರವಿಂದಸಾಹು ಕುರಳಗೇರಾ ಸೇರಿದಂತೆ, ಹೊನ್ನಳ್ಳಿ, ಬ್ರಹ್ಮದೇವನಮಡು, ಅಂಬರಖೇಡ, ಹುಣಶ್ಯಾಳ, ಚಾಮನಾಳ, ವಡಗೇರಾ, ಸಲಾದಹಳ್ಳಿ, ಚಿಂಚೊಳ್ಳಿ, ಬಿರಾಳ, ಕುರಳಗೇರಾ, ಮಲ್ಲಾಬಾದ್, ದಂಡ ಸೋಲಾಪೂರ ಗ್ರಾಮ ಸೇರಿದಂತೆ ಶ್ರೀಮಠದ ಸಮಸ್ತ ಭಕ್ತರು ಪಾಲ್ಗೊಂಡಿದ್ದರು.



ಡಾ.ಅಂಬೇಡ್ಕರ್ ಜೀವನ ಮೌಲ್ಯ ತಿಳಿಸಲು ಸ್ಪರ್ಧೆಯ ಉದ್ದೇಶ

ದೇವರಹಿಪ್ಪರಗಿ: ಸಮೀಪದ ಹಿಟ್ಟಿನಹಳ್ಳಿ ತಾಂಡಾದ ಜಗದಂಬಾ ಪ್ರಥಮ ದರ್ಜೆ ಕಾಲೇಜಿನಲ್ಲಿ ಐಕ್ಯೂಎಸಿ ಸಹಯೋಗದೊಂದಿಗೆ ಡಾ.ಬಿಆರ್.ಅಂಬೇಡ್ಕರ್ ರವರ 135ನೇ ಜನ್ಮ ದಿನಾಚರಣೆ ಪ್ರಯುಕ್ತ

ಎನ್‌ಎಸ್‌ಎಸ್, ಮಹಿಳಾ, ರೆಡ್‌ಕ್ರಾಸ್ ಪಚಾತಿ, ಪಪಂಗಡ, ಕ್ರೀಡಾ ಘಟಕಗಳ ಅಡಿಯಲ್ಲಿ ಮನೆ ಮನೆಗೆ ಮನ ಮನಕೆ ಬಾಬಾ ಸಾಹೇಬರು ಅಭಿಯಾನದ ಶೀರ್ಷಿಕೆ ಅಡಿಯಲ್ಲಿ ವಿವಿಧ ಸ್ಪರ್ಧೆ ಏರ್ಪಡಿಸಲಾಗಿತ್ತು. ಸಂಘಟಕ ಡಾ.ಎನ್.ಪಿ.ಕೋಟಿ ಮಾತನಾಡಿ, ಈ ಸ್ಪರ್ಧೆಯ ಮುಖ್ಯ ಉದ್ದೇಶ ವಿದ್ಯಾರ್ಥಿಗಳಿಗೆ ಡಾ.ಅಂಬೇಡ್ಕರ್ ಅವರ ಜೀವನ



ಮೌಲ್ಯಗಳು, ಸಮಾನತೆ, ಶಿಕ್ಷಣ ಮತ್ತು ಸಾಮಾಜಿಕ ನ್ಯಾಯದ ಬಗ್ಗೆ ಅರಿವು ಮೂಡಿಸುವುದಾಗಿದೆ. ವಿದ್ಯಾರ್ಥಿಗಳು ಉತ್ಸಾಹದಿಂದ ಭಾಗವಹಿಸಿ ಅಂಬೇಡ್ಕರ್ ಅವರ ಜೀವನ, ಸಾಧನೆಗಳು ಹಾಗೂ ಸಮಾಜಕ್ಕೆ ನೀಡಿದ ಕೊಡುಗೆಗಳ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ಪ್ರಭಾವಶೀಲವಾಗಿ ವ್ಯಕ್ತಪಡಿಸಿರುವುದು ಸಾಕ್ಷಿಯಾಗಿದೆ ಎಂದರು.

ಬಿಎಡ್ ಕಾಲೇಜಿನ ಉಪನ್ಯಾಸಕ ಪ್ರೊ.ಕಲ್ಯಾಣ ಕುಮಾರ್ ರಾಠೋಡ ಮಾತನಾಡಿ, ಇಂತಹ ಕಾರ್ಯಕ್ರಮಗಳು ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸವನ್ನು ಹೆಚ್ಚಿಸುವುದರ ಜೊತೆಗೆ ಮಹಾನ್ ನಾಯಕರ ಆದರ್ಶಗಳನ್ನು ತಿಳಿದುಕೊಳ್ಳಲು ಸಹಾಯ ಮಾಡುತ್ತವೆ. ಡಾ.ಅಂಬೇಡ್ಕರ್ ಅವರ ಸಂದೇಶಗಳು ಇಂದಿಗೂ ಸಮಾಜಕ್ಕೆ ದಾರಿದೀಪವಾಗಿವೆ ಎಂದರು.

ವಿದ್ಯಾರ್ಥಿಗಳ ಭಾಷಣಗಳು ಮತ್ತು ಗಾಯನ ಸ್ಪರ್ಧೆ ಡಾ.ಅಂಬೇಡ್ಕರ್ ಅವರ ಆದರ್ಶಗಳನ್ನು ನೆನಪಿಸುವುದರ ಜೊತೆಗೆ ಸಮಾನತೆ ಮತ್ತು ಶಿಕ್ಷಣದ ಮಹತ್ವವನ್ನು ಒತ್ತಿಹೇಳಿದರು. ಸ್ಪರ್ಧೆಯ ಅಂತ್ಯದಲ್ಲಿ ಉತ್ತಮವಾಗಿ ಮಾತನಾಡಿದ ವಿದ್ಯಾರ್ಥಿಗಳಿಗೆ ಬಹುಮಾನಗಳನ್ನು ನೀಡಿ ಗೌರವಿಸಲಾಯಿತು.

ಎನ್‌ಎಸ್‌ಎಸ್ ಮಹಿಳಾ ಘಟಕದ ಸಂಚಾಲಕರಾದ ಮಾಲತಿ ಶೋಭಾನಿ, ಬಿ.ಡಿ.ಪಾಟೀಲ್, ರೆಡ್ ಕ್ರಾಸ್ ಸಂಚಾಲಕ ಎಸ್.ವಿ.ಮುಂಜಿ, ಪಜಾತಿ ಮತ್ತು ಪಪಂಗಡ ಸಂಚಾಲಕ ಪಿ.ಜೆ.ಕಡ್ಡಿಪುಡಿ, ಬಿ.ಬಿ.ಬಿರಾದಾರ, ಡಾ.ಎಸ್.ಎಂ.ಗೋಟ್ಯಾಳ, ಎಸ್.ಎಂ.ಬಿರಾದಾರ ಮತ್ತು ಬಿ.ಜಿ.ರುದ್ರಾಕ್ಷಿ ಉಪಸ್ಥಿತರಿದ್ದರು.

ಸಂಗನಬಸವ ಸ್ವಾಮೀಜಿಯವರ 25ನೇ ಸಂಸ್ಮರಣೋತ್ಸವ

ಬಸವನಬಾಗೇವಾಡಿ: ತಾಲೂಕಿನ ಮನಗೂಳಿ ಪಟ್ಟಕಂಥಿ ಹಿರೇಮಠದ ಬಾಲತಪಸ್ವಿ ಲಿಂ.ತಪೋಭೂಷಣ ಸಂಗನಬಸವ ಶಿವಾಚಾರ್ಯ ಸ್ವಾಮೀಜಿಯವರ 25ನೇ ಸಂಸ್ಮರಣೋತ್ಸವ ಲಿಂ.ಮಹಾಂತೇಶ್ವರ ಶಿವಾಚಾರ್ಯ ಸ್ವಾಮೀಜಿಯವರ 77ನೇ ಯಾತ್ರಾ ಮಹೋತ್ಸವದ ನಿಮಿತ್ತ ಹಿರೇಮಠದಲ್ಲಿ ವಿಶೇಷ ಪೂಜೆ ಸಲ್ಲಿಸಿದ ನಂತರ ಪಟ್ಟಣದ ಬಸವೇಶ್ವರ ದೇವಸ್ಥಾನದಿಂದ ಹೆಣ್ಣುಮಕ್ಕಳಿಂದ ನೂರಾರು ಕುಂಭಮೇಳ, ಡೊಳ್ಳು ಸೇರಿ ಸಕಲ ವಾದ್ಯಗಳೊಂದಿಗೆ, ಹೂವಿನ ಅಂಲಕೃತ ಬೆಳ್ಳಿ ಪಲ್ಲಕ್ಕಿಗಳಲ್ಲಿ ಇರ್ವ ಸ್ವಾಮೀಜಿಯವರ ಬೆಳ್ಳಿ ಮೂರ್ತಿಗಳೊಂದಿಗೆ ಸಿಂಹಾಸನಾರೋಹಣ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಸೋಮೇಶ್ವರ



ಭಜನಾ ಮಂಟಪಕ್ಕೆ ಪಲ್ಲಕ್ಕಿ ಆಗಮಿಸಿತು.

ಡಾ.ಮಹಾಂತಲಿಂಗ ಶಿವಾಚಾರ್ಯ ಸ್ವಾಮೀಜಿ, ಇಂಗಳೇಶ್ವರ ಹಿರೇಮಠದ ಬೃಂಗೀಶ್ವರ ಶಿವಾಚಾರ್ಯ ಸ್ವಾಮೀಜಿ, ನಾಗಠಾಣದ ಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮೀಜಿ, ಕೆರೂರಿನ ಡಾ.ಶಿವಕುಮಾರ ಶಿವಾಚಾರ್ಯ ಸ್ವಾಮೀಜಿ, ಮುಖಂಡರಾದ ಸುಭಾಸಗೌಡ ಪಾಟೀಲ, ಅಪ್ಪುಗೌಡ ಪಾಟೀಲ, ಚಂದ್ರಶೇಖರಗೌಡ ಪಾಟೀಲ, ವಿಶ್ವನಾಥಗೌಡ ಪಾಟೀಲ, ಶೇಖಪ್ಪಗೌಡ ಬಿರಾದಾರ, ಭಾಗ್ಯರಾಜ ಸೊನ್ನದ, ಪ್ರದೀಪ ಜಾನಕರ, ಸಂಗಮೇಶ ಗೆಣ್ಣೂರ, ಎಸ್.ಪಿ.ಪಾಟೀಲ, ಪಪಂ ಮುಖ್ಯಾಧಿಕಾರಿ ನಿಖೀಲಗೌಡ ಪಾಟೀಲ ಸೇರಿದಂತೆ ಇತರರು ಇದ್ದರು.

ಇಂಗಳೇಶ್ವರದ ನಿವೃತ್ತ ಶಿಕ್ಷಕ ಸಿದ್ದಪ್ಪ, ರತ್ನಾಬಾಯಿ ಗುಬ್ಬಾ ದಂಪತಿಗಳಿಗೆ ಶ್ರೀಗುರು ಮಹಾಂತೇಶ್ವರ ಪ್ರಶಸ್ತಿ, ಈರೇಶ ಗೂಡಲಮನಿ ಅವರಿಗೆ ಆದರ್ಶ ಯುವಕೃಷಿಕ ಪ್ರಶಸ್ತಿ ಹಾಗೂ ಪ್ರತಿಭಾನ್ವಿತ ಎಸ್ಸೆಸೆಲ್ಸಿ, ಪಿಯುಸಿ ವಿದ್ಯಾರ್ಥಿಗಳಿಗೆ ಸನ್ಮಾನಿಸಿ ಗೌರವಿಸಿದರು.

ಮಾಧ್ಯಮ ಕ್ಷೇತ್ರದಲ್ಲಿ ವಿಪುಲ ಅವಕಾಶ

ವಿಜಯಪುರ: ಮಾಧ್ಯಮ ಕ್ಷೇತ್ರದಲ್ಲಿ ವಿಪುಲ ಅವಕಾಶಗಳಿದ್ದು, ಅವುಗಳನ್ನು ಸಮರ್ಪಕವಾಗಿ ಬಳಸಿಕೊಂಡು ವಿದ್ಯಾರ್ಥಿಗಳು ತಮ್ಮ ವೃತ್ತಿ ಬದುಕನ್ನು ಕಟ್ಟಿಕೊಳ್ಳಬೇಕು ಎಂದು ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ಮುಖ್ಯಸ್ಥ ಪ್ರೊ.ಓಂಕಾರ ಕಾಕಡೆ ಹೇಳಿದರು.

ನಗರದ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ಪತ್ರಿಕೋದ್ಯಮ ಮತ್ತು ಸಂವಹನ ವಿಭಾಗದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಒಂದು ದಿನದ ಸ್ಟುಡಿಯೋ ಟೂರ್ ಮತ್ತು ಟಿವಿ ಆಂಕರಿಂಗ್ ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಪತ್ರಿಕೋದ್ಯಮವು ವೃತ್ತಿಜೀವನವನ್ನು ರೂಪಿಸಿಕೊಳ್ಳಲು ಅಗತ್ಯವಾದ ವಿವಿಧ ಕೌಶಲ್ಯಗಳನ್ನು ನೀಡುತ್ತದೆ. ಈ ಕ್ಷೇತ್ರವನ್ನು ಆಯ್ಕೆ ಮಾಡಿಕೊಳ್ಳುವುದರಿಂದ ವ್ಯಕ್ತಿಗತ ಬೆಳವಣಿಗೆಯ ಜೊತೆಗೆ ಸಮಾಜದ ಅಭಿವೃದ್ಧಿಗೂ ಸಹಕಾರಿಯಾಗುತ್ತದೆ. ಇಂದಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ ಕೋರ್ಸ್‌ಗಳನ್ನು ಆಯ್ಕೆ ಮಾಡುವಾಗ ಬೇರೆಯವರ ಮೇಲೆ ಅವಲಂಬಿತರಾಗದೇ, ತಮ್ಮ ಸಾಮರ್ಥ್ಯ ಮತ್ತು ಸ್ಪಷ್ಟ ಗುರಿಗಳನ್ನು ಗಮನದಲ್ಲಿಟ್ಟುಕೊಂಡು ಉತ್ತಮ ಆಯ್ಕೆ ಮಾಡಿಕೊಳ್ಳಬೇಕು ಎಂದು ಹೇಳಿದರು.

ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ.ಸಂದೀಪ್



ಮಾತನಾಡಿ, ಇಂದಿನ ದಿನಗಳಲ್ಲಿ ಪ್ರತಿಯೊಬ್ಬರೂ ಸುದ್ದಿಗಳನ್ನು ಓದುವ ಅಭ್ಯಾಸವನ್ನು ಬೆಳೆಸಿಕೊಳ್ಳುವುದು ಅಗತ್ಯವೆಂದು ಹೇಳಿದರು. ಟಿವಿ ಸ್ಟುಡಿಯೋದಲ್ಲಿ ನಡೆಯುವ ಕಾರ್ಯವೈಖರಿ ಹಾಗೂ ಸುದ್ದಿ ಸಂಗ್ರಹಣೆಯಿಂದ ಹಿಡಿದು ಪ್ರಸಾರವಾಗುವ ಹಂತಗಳ ಕುರಿತು ವಿವರಿಸಿದರು.

ವಿಭಾಗದ ಸಹಾಯಕ ಪ್ರಾಧ್ಯಾಪಕಿ ಡಾ.ತಹಮೀನಾ ಕೋಲಾರ, ಕೊಪ್ಪಳ ಹಾಗೂ ಕನಕಗಿರಿ ಸ್ನಾತಕ ವಿದ್ಯಾರ್ಥಿನಿಯರು, ಅತಿಥಿ ಉಪನ್ಯಾಸಕಿ ಹುಲಿಗೆಮ್ಮ, ವಿಭಾಗದ ಅತಿಥಿ ಉಪನ್ಯಾಸಕಿ ಸುಶ್ಮಾ ಪವಾರ, ಸಂಶೋಧನಾ ವಿದ್ಯಾರ್ಥಿನಿಯರು, ಸ್ನಾತಕ ಹಾಗೂ ಸ್ನಾತಕೋತ್ತರ ವಿದ್ಯಾರ್ಥಿನಿಯರು, ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳು ಉಪಸ್ಥಿತರಿದ್ದರು. ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ. ಸಂದೀಪ್ ಅತಿಥಿಗಳನ್ನು ನಿರೂಪಿಸಿದರು.

ಅಗ್ನಿ ಅವಘಡ: ಪ್ರಾತ್ಯಕ್ಷಿಕೆ

ಮುದ್ದೇಬಿಹಾಳ: ಸರ್ಕಾರಿ ಪದವಿ ಕಾಲೇಜಿನಲ್ಲಿ ವಾರ್ಷಿಕ ರೋವರ್ ಮತ್ತು ರೇಂಜರ್ ಗಳಿಗೆ ಬೇಸಿಗೆ ಶಿಬಿರದ ಚಟುವಟಿಕೆ ಪ್ರಾರಂಭಿಸಲಾಯಿತು. ಅಗ್ನಿಶಾಮಕ ತಂಡದವರಿಂದ ಅಗ್ನಿ ಅವಘಡದ ಕುರಿತು ಪ್ರಾತಕ್ಷಿಕೆ ನಡೆಯಿತು. ಇದಾದ ಮೇಲೆ ಅಗ್ನಿಶಾಮಕ ವಾಹನದಲ್ಲಿರುವ ಸ್ಕೌಟ್ ಇತಿಹಾಸ, ಪೋರ್ ಬಾಂಡ್ಸ್, ಪ್ರತಿಜ್ಞೆ ಮತ್ತು ನಿಯಮದ ಬಗ್ಗೆ ತಿಳಿಸಲಾಯಿತು. ವಿವಿಧ ಪರಿಕರಗಳ ಬಗ್ಗೆ ಸಂಪೂರ್ಣ ಮಾಹಿತಿಯನ್ನು ಶ್ರೀರಂಗನಗೌಡ ಬಿರಾದಾರ, ಸುನೀಲ ನಾಯಕ ಮಕ್ಕಳಿಗೆ ನೀಡಿದರು. ಠಾಣಾಧಿಕಾರಿ ಬಸವರಾಜ ಬಿರಾದಾರ ಹಾಗೂ ಹವಾಲ್ದಾರ್, ಜಾವೇದ ಜಮಖಿಂಡಿ, ಸಿದ್ದಣ್ಣ ಪೋಲೇಶಿ, ಶೈಲಗೌಡ ಪಾಟೀಲ, ಸುಭಾಷ ಗೌಡರ, ಕಾಲೇಜಿನ ಪ್ರಾಂಶುಪಾಲ ಡಾ.ಎಚ್.ಎ.ಕಟಗೂರ, ರೋವರ್ ಸ್ಕೌಟ್ ಲೀಡರ್ ಪ್ರೊ.ಮೌನೇಶ, ರೇಂಜರ್ ಲೀಡರ್ ಪ್ರೊ.ವನಿತಾ ಭೀಮಪ್ಪ ದೊಡ್ಡಮನಿ, ಐಕ್ಯೂಎಸಿ ಸಂಯೋಜಕ ಪ್ರೊ.ಪ್ರದೀಪ, ದೈಹಿಕ ಶಿಕ್ಷಣ ನಿರ್ದೇಶಕ ಪ್ರೊ ಎಲ್ ಹೆಚ್ ಮಮದಾಪುರ. ಸಾಂಸ್ಕೃತಿಕ ವಿಭಾಗದ ಪ್ರೊ. ಹಂಪಣ್ಣ, ಪ್ರೊ.ಪರಶುರಾಮ ದೇವಿ, ಮುತ್ತಣ್ಣ ಗೌಡರ, ಪ್ರೊ.ಜ್ಯೋತಿ, ರೆಡ್ ಕ್ರಾಸ್ ಸಂಯೋಜಕ ಪ್ರೊ.ಮುತ್ತಣ್ಣ ಗೌಡರ, ಮಹಿಳಾ ಸಬಲೀಕರಣ ಕೋಶದ ಸಂಯೋಜಕಿ ಪ್ರೊ.ಧನುಶ್ರೀ, ಎಸ್‌ಓಸಿ ಡಿ.ಬಿ.ಅತ್ತಾರ ಹಾಗೂ ಕಾಲೇಜಿನ ಎಲ್ಲ ಸಿಬ್ಬಂದಿ, ಶಿಬಿರಾರ್ಥಿಗಳು ಉಪಸ್ಥಿತರಿದ್ದರು.



ಸಿಇಟಿ ಪರೀಕ್ಷೆ ಸುಸೂತ್ರವಾಗಿ ನಡೆಸಲು ಸೂಚನೆ

ವಿಜಯಪುರ: 2026ನೇ ಸಾಲಿನ ಸಿಇಟಿ ಪ್ರವೇಶ ಪರೀಕ್ಷೆಗಳು ಏ. 22 ರಿಂದ 24 ರವರೆಗೆ ಜಿಲ್ಲೆಯ 30 ಪರೀಕ್ಷಾ ಕೇಂದ್ರಗಳಲ್ಲಿ ನಡೆಯಲಿದ್ದು, ಪರೀಕ್ಷಾ ಕಾರ್ಯಗಳಲ್ಲಿ ಯಾವುದೇ ಲೋಪವಾಗದಂತೆ ಸುಸೂತ್ರವಾಗಿ ನಡೆಸುವಂತೆ ಅಪರ ಜಿಲ್ಲಾಧಿಕಾರಿ ಡಾ.ಔದ್ರಾಮ ಅವರು ಸೂಚಿಸಿದರು.

ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಶನಿವಾರ ಸಿಇಟಿ ಪರೀಕ್ಷೆಗೆ ಸಂಬಂಧಿಸಿದ ಪರೀಕ್ಷಾ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಪರೀಕ್ಷೆಯು ಎರಡು ಅವಧಿಯಲ್ಲಿ ನಡೆಯಲಿದ್ದು, ಜಿಲ್ಲೆಯ ಒಟ್ಟು 30 ಪರೀಕ್ಷಾ ಕೇಂದ್ರಗಳಲ್ಲಿ ಜರುಗಲಿದ್ದು,13,359 ಅಭ್ಯರ್ಥಿಗಳು ಪರೀಕ್ಷೆಗೆ ನೋಂದಣಿ ಮಾಡಿಕೊಂಡಿದ್ದಾರೆ. ಯಾವುದೇ ಸಮಸ್ಯೆ ಬಾರದ ರೀತಿಯಲ್ಲಿ ಪರೀಕ್ಷೆಗೆ ನಿಯೋಜಿತ ಅಧಿಕಾರಿಗಳು



ಮುಂಜಾಗ್ರತೆಯಿಂದ ಪರೀಕ್ಷಾ ನಿಯಮಗಳನ್ವಯ ಕಾರ್ಯ ನಿರ್ವಹಿಸುವಂತೆ ಸೂಚನೆ ನೀಡಿದರು.

ಪ್ರತಿ ಪರೀಕ್ಷಾ ಕೇಂದ್ರಕ್ಕೆ ಓರ್ವ ವೀಕ್ಷಕರಂತೆ ಒಟ್ಟು 30 ವೀಕ್ಷಕರನ್ನು ನೇಮಿಸಿದೆ. ಪರೀಕ್ಷಾ ಕೇಂದ್ರಕ್ಕೆ ನಿಯೋಜಿಸಲಾದ ವೀಕ್ಷಕರು ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕಿಂತ ಒಂದು ಗಂಟೆ ಮೊದಲು ಪರೀಕ್ಷಾ ಕೇಂದ್ರದಲ್ಲಿ ಹಾಜರಿರಬೇಕು. ಪ್ರತಿ ಪರೀಕ್ಷಾ ಕೇಂದ್ರಕ್ಕೆ ಓರ್ವ ಉಪ ಮುಖ್ಯ ಅಧೀಕ್ಷಕರು,ಓರ್ವ ಪ್ರಶ್ನೆಪತ್ರಿಕೆ ಪಾಲಕರು ಹಾಗೂ ಓರ್ವ ವಿಶೇಷ ಸ್ಥಾನಿಕ ಜಾಗೃತದಳ ಸದಸ್ಯರನ್ನು ನೇಮಿಸಿದೆ. ಪರೀಕ್ಷಾ ನಡೆಯುವ ಪರೀಕ್ಷಾ ಕೇಂದ್ರಗಳ ಸುತ್ತಲಿನ 200ಮೀ.ಪ್ರದೇಶವನ್ನು ನಿಷೇಧಿತ ಪ್ರದೇಶ ಎಂದು ಆದೇಶಿಸಲಾಗಿದೆ. ಎಲ್ಲಾ ಪರೀಕ್ಷಾ ಕೇಂದ್ರಗಳಿಗೆ ಮುಂಜಾಗ್ರತಾ ಕ್ರಮವಾಗಿ ಸೂಕ್ತ ಬಂದೋಬಸ್ತ್ ಕೈಗೊಳ್ಳಲು ಸೂಚಿಸಲಾಯಿತು.

ಜಿಲ್ಲಾ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ರಾಮನಗೌಡ ಹಟ್ಟಿ, ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ಚಂದ್ರಶೇಖರ ಹೊಸಮನಿ, ಉಪ ಅಧೀಕ್ಷಕರು, ಮಾರ್ಗಾಧಿಕಾರಿಗಳು, ವೀಕ್ಷಕರು ಸೇರಿದಂತೆ ಪರೀಕ್ಷೆಗೆ ನಿಯೋಜಿತ ಅಧಿಕಾರಿಗಳು ಉಪಸ್ಥಿತರಿದ್ದರು.

ಕಿರುಸುದ್ದಿ

ಸಚಿವ ಸಂಪುಟದಲ್ಲಿ ರಾಯರೆಡ್ಡಿಗೆ ಅವಕಾಶ ನೀಡಿ

ಕುಕನೂರ: ಸಚಿವ ಸಂಪುಟ ವಿಸ್ತರಣೆಯಲ್ಲಿ ಅನುಭವಿ ರಾಜಕಾರಣಿಗಳಿಗೆ ಅವಕಾಶ ನೀಡಲು ಮುಂದಾಗಬೇಕು ಎಂದು ಬ್ಲಾಕ್ ಕಾಂಗ್ರೆಸ್ ತಾಲೂಕು ಪ್ರಧಾನ ಕಾರ್ಯದರ್ಶಿ ಡಾ.ಮಲ್ಲಿಕಾರ್ಜುನ ಬಿನ್ನಾಳ ಆಗ್ರಹಿಸಿದರು. ಪಟ್ಟಣದಲ್ಲಿ ಶನಿವಾರ ಪತ್ರಿಕೆಯೊಂದಿಗೆ ಮಾತನಾಡಿದ ಅವರು, ಇಂದಿನ ರಾಜ್ಯ ಸರ್ಕಾರ ಅದಷ್ಟು ಅನುಭವಿ ರಾಜಕಾರಣಿಗಳಿಗೆ ಸಚಿವ ಸ್ಥಾನ ನೀಡಲು ಮುಂದಾಗಬೇಕು ಸದ್ಯ ತಾಲೂಕಿನಲ್ಲಿ ಬಸವರಾಜ ರಾಯರಡ್ಡಿಯರಿಗೆ ಸಚಿವ ಸ್ಥಾನ ನೀಡಬೇಕು ಯಲಬುರ್ಗಾ ವಿಧಾನ ಸಭೆಯಿಂದ ಆರು ಬಾರಿ ಶಾಸಕರಾಗಿ ಎರಡು ಬಾರಿ ಸಚಿವರಾಗಿ ಒಮ್ಮೆ ಸಂಸದರಾಗಿ ಅಪಾರ ಅನುಭವ ಹೊಂದಿರುವ ಯಲಬುರ್ಗಾದ ಶಾಸಕರು ಮತ್ತು ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರರಾದ ಬಸವರಾಜ ರಾಯರೆಡ್ಡಿ ಅವರಿಗೆ ಮುಂಬರುವ ದಿನಮಾನಗಳಲ್ಲಿ ರಾಜ್ಯ ಸರ್ಕಾರದಲ್ಲಿ ಸಚಿವ ಸಂಪುಟ ವಿಸ್ತರಿಸಿದರೇ ಬಸವರಾಜ ರಾಯರಡ್ಡಿರವರನ್ನು ಸಚಿವರನ್ನಾಗಿ ಮಾಡಬೇಕು ಅಂದಾಗ ರಾಜ್ಯದಲ್ಲಿ ಇನ್ನಷ್ಟು ಅಭಿವೃದ್ಧಿಯಾಗುತ್ತದೆ ಈಗಾಗಲೇ ಹಿಂದುಳಿದ ಪ್ರದೇಶವಾದ ಯಲಬುರ್ಗಾದಲ್ಲಿ ಸಾಕಷ್ಟು ಅಭಿವೃದ್ಧಿಯಾಗಿದೆ ಅದರಂತೆ ರಾಜ್ಯದಲ್ಲಿಯೂ ಅಭಿವೃದ್ಧಿ ಮಾಡಲು ಅವಕಾಶ ನೀಡಬೇಕು ಎಂದು ಮನವಿ ಮಾಡಿದ್ದಾರೆ.



ಕಲಾ ಪ್ರದರ್ಶನಕ್ಕೆ ಆಯ್ಕೆ

ಹನುಮಸಾಗರ: ಪಟ್ಟಣದ ಜ್ಞಾನೋದಯ ಶಿಕ್ಷಣ ಸಂಸ್ಥೆಯ ಶಿಕ್ಷಕ ಗುರುದೇವ ರಜಪೂತ್ ಕಲಾ ಪ್ರದರ್ಶನಕ್ಕೆ ಆಯ್ಕೆಯಾಗಿದ್ದಾರೆ. ಮೈಸೂರಿನ ಕರ್ನಾಟಕ ಕಲಾ ಮಂದಿರದಲ್ಲಿ ಏ.24ರಿಂದ 26ರವರೆಗೆ ನಡೆಯುವ ಕಲಾ ಪ್ರದರ್ಶನದಲ್ಲಿ ಕಲಾಕೃತಿಗಳನ್ನು ಪ್ರದರ್ಶನ ಗೊಳಿಸಲಾಗಿದ್ದಾರೆ.



ಏ.21ಕ್ಕೆ ಪೂರ್ವಭಾವಿ ಸಭೆ

ಕಲಬುರಗಿ: ವರನಟ ಡಾ.ರಾಜಕುಮಾರ ಅವರ 97ನೇ ಜನ್ಮ ದಿನಾಚರಣೆಯನ್ನು ಇದೇ ಏಪ್ರಿಲ್ 24 ರಂದು ಆಚರಿಸಬೇಕಾಗಿರುವ ಹಿನ್ನೆಲೆಯಲ್ಲಿ ಅದಕ್ಕೆ ಪೂರಕವಾಗಿ ಇದೇ ಏಪ್ರಿಲ್ 21 ರಂದು ಬೆಳಿಗ್ಗೆ 10 ಗಂಟೆಗೆ ಕಲಬುರಗಿಯ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಪೂರ್ವಭಾವಿ ಸಭೆ ಕರೆಯಲಾಗಿದೆ. ಅಪರ ಜಿಲ್ಲಾಧಿಕಾರಿ ಸಭೆಯ ಅಧ್ಯಕ್ಷತೆ ವಹಿಸಲಿದ್ದು, ಡಾ.ರಾಜಕುಮಾರ್ ಅವರ ಜನ್ಮದಿನಾಚರಣೆ ಅರ್ಥಪೂರ್ಣವಾಗಿ ಆಚರಿಸುವ ನಿಟ್ಟಿನಲ್ಲಿ ಜಿಲ್ಲೆಯ ಸಮಸ್ತ ಕನ್ನಡಪರ ಸಂಘಟನೆಗಳು, ಸಂಘ-ಸಂಸ್ಥೆಗಳು, ಸಾರ್ವಜನಿಕರು, ರಾಜ್ ಅಭಿಮಾನಿಗಳು ಸಭೆಗೆ ಆಗಮಿಸಿ ಅಗತ್ಯ ಸಲಹೆಗಳನ್ನು ನೀಡುವಂತೆ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಉಪನಿರ್ದೇಶಕ ಜಡಿಯಪ್ಪ ಗೆದ್ಲಗಟ್ಟಿ ಅವರು ಮನವಿ ಮಾಡಿದ್ದಾರೆ.

ಬಿಜೆಪಿ ಕುತಂತ್ರಕ್ಕೆ ಸೋಲಾಗಿದೆ: ರೇಣುಕಾ

ಕಲಬುರಗಿ: ಬಿಜೆಪಿ ಮತ್ತು ಸುಳ್ಳು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ.ಮಹಿಳಾ ಸಬಲೀಕರಣದ ನಾಟಕವಾಡುತ್ತಿರುವ ಬಿಜೆಪಿ, ಮಹಿಳಾ ಮೀಸಲಾತಿ ಹೆಸರಿನಲ್ಲಿ ಡಿ-ಲಿಮಿಟೇಷನ್ ಕುತಂತ್ರ ನಡೆಸುತ್ತಿದೆ ಎಂದು ಮಹಿಳಾ ಕಾಂಗ್ರೆಸ್ ಜಿಲ್ಲಾಧ್ಯಕ್ಷೆ ರೇಣುಕಾ ಸಿಂಗೆ ವಾಗ್ದಾಳಿ ನಡೆಸಿದರು. ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು,ಕಾಂಗ್ರೆಸ್ ಎಂದಿಗೂ ಮಹಿಳಾ ಮೀಸಲಾತಿಯ ವಿರೋಧಿಯಲ್ಲ, ಆದರೆ, ಮೀಸಲಾತಿ ಜನಗಣತಿ ಹಾಗೂ ಡಿಲಿಮಿಟೇಷನ್ ಪ್ರಕ್ರಿಯೆಗಳೊಂದಿಗೆ ತಳುಕು ಹಾಕಿ ವಿಳಂಬ ಮಾಡುತ್ತಿರುವ ಬಿಜೆಪಿಯ ಹುನ್ನಾರಕ್ಕೆ ಸೋಲು ಕಟ್ಟಿಟ್ಟ ಬುತ್ತಿ ಎಂದರು. ಬಿಜೆಪಿ ವಕ್ತಾರೆ ಡಾ.ಸುಧಾ ಹಾಲಕಾಯಿ ಅವರ ವಿರುದ್ಧ ಹರಿಹಾಯ್ದ ರೇಣುಕಾ, ಹತ್ರಾಸ್, ಉನ್ನಾವೋ ಘಟನೆಗಳು ಹಾಗೂ ಗುಜರಾತ್ ಹತ್ಯಾಕಾಂಡದ ವೇಳೆ ಮಹಿಳೆಯರ ಮೇಲೆ ನಡೆದ ದೌರ್ಜನ್ಯಗಳ ಬಗ್ಗೆ ಬಿಜೆಪಿ ಮೌನ ವಹಿಸಿದ್ದು ಏಕೆ? ವರ್ಷಕ್ಕೆ 2 ಕೋಟಿ ಉದ್ಯೋಗ ನೀಡುವ ಭರವಸೆ ಏನಾಯಿತು? ಇವರ 'ಸಬ್ ಕಾ ಸಾಥ್, ಸಬ್ ಕಾ ವಿಕಾಸ್' ಎಂಬ ಘೋಷಣೆ ಭೂತದ ಬಾಯಲ್ಲಿ ಭಗವದ್ಗೀತೆ ಬಂದಂತಿದೆ ಎಂದು ಟೀಕಿಸಿದರು. ಸ್ಮೃತಿ ಇರಾನಿಯವರನ್ನು ಮೂಲೆಗುಂಪು ಮಾಡಿದ ಬಗ್ಗೆ ಸುಧಾ ಹಾಲಕಾಯಿ ಆತ್ಮಸಾಕ್ಷಿಗೆ ಅನುಗುಣವಾಗಿ ಪ್ರಶ್ನಿಸಲಿ ಎಂದು ಕಿವಿಮಾತು ಹೇಳಿದರು. ಮುಖಂಡರಾದ ಸಂಗೀತ ಪಾಟೀಲ, ಸವಿತಾ ವಂಟಿ ಹಾಗೂ ಜಯಶ್ರೀ ಚಿಂತಪಳ್ಳಿ ಉಪಸ್ಥಿತರಿದ್ದರು.



ಬಳ್ಳಾರಿ: ಸಮೀಪದ ಸಂಗನಕಲ್ಲು ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ವಿಶ್ವಚೇತನ ಸಮೃದ್ಧಿ ಸೇವ ಟ್ರಸ್ಟ್ ವತಿಯಿಂದ ಡಾ.ಬಿ.ಆರ್.ಅಂಬೇಡ್ಕರ್ ಜಯಂತ್ಯುತ್ಸವವನ್ನು ಆಚರಿಸಲಾಯಿತು. ಬುಡಾ ಮಾಜಿ ಅಧ್ಯಕ್ಷ ಮಾರುತಿ ಪ್ರಸಾದ್ ಸರ್ವಶೆಟ್ಟಿ, ಶಾಲೆಯ ಮುಖ್ಯಗುರು ವಿಜಯಕುಮಾರ್, ಗ್ರಾಪಂ ಮಾಜಿ ಅಧ್ಯಕ್ಷ ಪುನೀತ್‌ರಾಜ್, ಮಾರುತಿ ಪ್ರಸಾದ್, ಹೊನ್ನೂರ್ ಇತರರಿದ್ದರು.

ನೇತಾಜಿ ಸ್ಕೂಲ್‌ನಲ್ಲಿ ವಸಂತೋತ್ಸವ

ಮಾನ್ವಿ: ಪರಿಸರ ಉಳಿಯಬೇಕು, ಭೂಮಿ ಮೇಲಿನ ಎಲ್ಲರ ಜೀವನ ಸುಗಮವಾಗಿ ಸಾಗಬೇಕಾದರೆ ಗುಬ್ಬಚ್ಚಿಯಂತಹ ಚಿಕ್ಕ ಪಕ್ಷಿಗಳು ಕೂಡ ಉಳಿಯಬೇಕು. ಆದ್ದರಿಂದ ನಾವೆಲ್ಲರೂ ಗಿಡ, ಮರ, ಪ್ರಾಣಿ, ಪಕ್ಷಿ ಗಳ ಬಗ್ಗೆ ಪ್ರೀತಿ ಬೆಳೆಸಿಕೊಳ್ಳಬೇಕು ಎಂದು ಪಕ್ಷಿ ಪ್ರೇಮಿ ಸಲ್ಲಾವುದ್ದೀನ್ ಹೇಳಿದರು.

ಪಟ್ಟಣದ ನೇತಾಜಿ ಶಿಕ್ಷಣ ಸಂಸ್ಥೆಯಲ್ಲಿ ಬೇಸಿಗೆ ಶಿಬಿರದಲ್ಲಿ ಅಭ್ಯಾಸ ಮಾಡುತ್ತಿರುವ 350 ವಿದ್ಯಾರ್ಥಿ ಗಳಿಗೆ ಹಮ್ಮಿಕೊಂಡಿದ್ದ ವಸಂತೋತ್ಸವ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದರು. ನಮ್ಮ ಮನೆಯಲ್ಲಿ 150ಕ್ಕೂ ಹೆಚ್ಚು ಗುಬ್ಬಚ್ಚಿ ಗಳು ವಾಸವಾಗಿವೆ,ನೀವು ಇದರಂತೆ ಪಕ್ಷಿ ಗಳಿಗೆ ಆಶ್ರಯ ನೋಡಿ ಎಂದು ಕರೆ ನೀಡಿದರು. ಅಲ್ಲದೆ ಕೃತಕ ಗೂಡು ನಿರ್ಮಿಸುವ ಬಗ್ಗೆ ವಿದ್ಯಾರ್ಥಿ ಗಳಿಗೆ ಮಾಹಿತಿ ನೀಡಿದರು.

ಲಿಂಗಸೂರಿನ ಗಾಯಕ ಹುಸೇನ್ ಸಾಬ್ ಅವರ ಗಾಯನ ಕಾರ್ಯಕ್ರಮ ವೂ ಇತ್ತು. ಹಳೆಯ ಚಲನಚಿತ್ರ ಗೀತೆಗಳನ್ನು ಹಾಡಿ ಅವರು ಮಕ್ಕಳನ್ನು ರಂಜಿಸಿದರು.

ಅಧ್ಯಕ್ಷತೆ ವಹಿಸಿದ್ದ ಕೆ.ಈ.ನರಸಿಂಹ ಮಾತನಾಡಿ, ಪ್ರತಿವರ್ಷ ನಮ್ಮ ನೇತಾಜಿ ಶಿಕ್ಷಣ ಸಂಸ್ಥೆಯಿಂದ ನಡೆಯುವ ಬೇಸಿಗೆ ಶಿಬಿರದಲ್ಲಿ ಭಾಗವಿಸಿದ ಮಕ್ಕಳಿಗೆ ನಾಡಿನ ಪ್ರಸಿದ್ಧ ವ್ಯಕ್ತಿ ಗಳು, ಕವಿಗಳು, ಸಾಧಕರು, ಪರಿಸರ ಪ್ರೇಮಿಗಳು,ಹಾಸ್ಯ ಕಲಾವಿದರನ್ನು ಕರೆಸುವ ಮೂಲಕ ಅವರಿಂದ ಜಗತ್ತಿನ ಜ್ಞಾನ ಪಡೆಯುವ ಅವಕಾಶ ಕಲ್ಪಿಸಲಾಗುತ್ತದೆ ಎಂದು ಹೇಳಿದರು.



ಮಾನ್ವಿ: ಪಟ್ಟಣದ ನೇತಾಜಿ ಶಿಕ್ಷಣ ಸಂಸ್ಥೆಯಲ್ಲಿ ಬೇಸಿಗೆ ಶಿಬಿರದಲ್ಲಿ ಅಭ್ಯಾಸ ಮಾಡುತ್ತಿರುವ 350 ವಿದ್ಯಾರ್ಥಿ ಗಳಿಗೆ ಹಮ್ಮಿಕೊಂಡಿದ್ದ ವಸಂತೋತ್ಸವ ಸಮಾರಂಭದಲ್ಲಿ ಪಕ್ಷಿ ಪ್ರೇಮಿ ಸಲ್ಲಾವುದ್ದೀನ್ ಮಾತನಾಡಿದರು. ಕೆ.ವಿಜಯ ಲಕ್ಷ್ಮೀ, ಕೆ.ರಾಜಾರವಿವರ್ಮಾ, ಡಾ.ವಿನಯಾ, ಜಗನ್ನಾಥ ಚೌದ್ರಿ, ಶಿಕ್ಷಕರಾದ ಬಸವರಾಜ, ರಹಿಂ, ಆರೀಫ್, ಅರುಣಾ, ಸುಪ್ರಿಯಾ, ಕಾವ್ಯ, ಉಮಾದೇವಿ, ಶರಣಬಸವ ಇದ್ದರು.

ಮಾಹಿತಿ ಹಕ್ಕು ಕಾಯ್ದೆ ಕಾರ್ಯಾಗಾರ | ಬಿ.ವೆಂಕಟ್ ಸಿಂಗ್ ಹೇಳಿಕೆ

ಪಾರದರ್ಶಕ ಆಡಳಿತಕ್ಕೆ ಆರ್‌ಟಿಐ ಜಾರಿ

ಕಲಬುರಗಿ: ಸಾರ್ವಜನಿಕ ಆಡಳಿತ ಪಾರದರ್ಶಕವಾಗಿ ಮತ್ತು ಜನರಿಗೆ ಉತ್ತರದಾಯಿತ್ವ ಇರಲೆಂದೆ ಮಾಹಿತಿ ಹಕ್ಕು ಕಾಯ್ದೆ ಜಾರಿಗೆ ತರಲಾಗಿದೆ ಎಂದು ಕರ್ನಾಟಕ ಮಾಹಿತಿ ಹಕ್ಕು ಆಯೋಗ ಕಲಬುರಗಿ ಪೀಠದ ಆಯುಕ್ತ ಬಿ.ವೆಂಕಟ್ ಸಿಂಗ್ ಹೇಳಿದರು.

ಶನಿವಾರ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಕರ್ನಾಟಕ ಮಾಹಿತಿ ಹಕ್ಕು ಆಯೋಗ ಕಲಬುರಗಿ ಪೀಠ ಮತ್ತು ಜಿಲ್ಲಾಡಳಿತ ಸಂಯುಕ್ತಾಶ್ರಯದಲ್ಲಿ ಜಿಲ್ಲಾ-ತಾಲೂಕು ಮತ್ತು ಗ್ರಾಪಂ ಪಿಡಿಓಗಳಿಗೆ ಆಯೋಜಿಸಿದ ಮಾಹಿತಿ ಹಕ್ಕು ಕಾಯ್ದೆ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದ ಅವರು,

ಮಾಹಿತಿ ಹಕ್ಕು ಕಾಯ್ದೆಯ ಮೂಲ ಉದ್ದೇಶ ಅಧಿಕಾರಿ ವರ್ಗ ಅರಿಯಬೇಕು. ಮಾಹಿತಿ ಹಕ್ಕು ಕಾಯ್ದೆಗೆ 300 ವರ್ಷಗಳ ಇತಿಹಾಸ ಹೊಂದಿದೆ. 1766 ಸುಡಾನ್‌ನಲ್ಲಿ ಇದು ಮೊದಲು ಜಾರಿಗೆ ತರಲಾಗಿತ್ತು. ತದನಂತರ 1951ರಲ್ಲಿ ಫಿನ್‌ಲ್ಯಾಂಡ್, 1966 ರಲ್ಲಿ ಅಮೆರಿಕಾ, 2000ರಲ್ಲಿ ಇಂಗ್ಲ್ಯಾಂಡ್, 2001ರಲ್ಲಿ ಜಪಾನ್ ನಲ್ಲಿ ಹಾಗೂ 2005 ರಲ್ಲಿ ಭಾರತದಲ್ಲಿ ಇದನ್ನು ಕಾಯ್ದೆ ರೂಪ ನೀಡಿ ಶಾಸನಬದ್ಧವಾಗಿ ಜಾರಿಗೆ ತಂದಿದ್ದು, ಇದೇ ವರ್ಷ ಕರ್ನಾಟಕದಲ್ಲಿಯೂ ಯಥಾವತ್ತಾಗಿ ಕಾಯ್ದೆ ಜಾರಿಗೆ ತಂದಿದೆ ಎಂದು ಆರ್‌ಟಿಐ ಕಾಯ್ದೆ ಇತಿಹಾಸದ ಬಗ್ಗೆ ಮೆಲುಕು ಹಾಕಿದರು.

ಕರ್ನಾಟಕ ಮಾಹಿತಿ ಆಯೋಗದ ಆಯುಕ್ತ ಡಾ.ರಿಚರ್ಡ ವಿನ್ಸೆಂಟ್ ಡಿಸೋಜಾ ಮಾತನಾಡಿ, ಮಾಹಿತಿ ಹಕ್ಕು ಕಾಯ್ದೆ ಸರಿಯಾಗಿ ಓದಿಕೊಂಡಲು ಅರ್ಜಿ ವಿಲೇವಾರಿ ಮಾಡಲು ಕಷ್ಟವಾಗದು. ಭ್ರಷ್ಟಾಚಾರ ಮುಕ್ತ ಸಮಾಜ ನಿರ್ಮಾಣಕ್ಕೆ ಕಾಯ್ದೆ ಸಹಕಾರಿಯಾಗಿದೆ ಎಂದರು. ಕಾಯ್ದೆಯು ಪ್ರತಿ ಸಾರ್ವಜನಿಕರ ನೌಕರನಿಗೆ ಹೊಣೆಗಾರಿಕೆ ನೀಡಿದೆ. ಖಾಸಗಿ ವಿಚಾರ, ಗೌಪ್ಯ, ರಾಷ್ಟ್ರೀಯ ಹಿತಾಸಕ್ತಿ ಹಾಗೂ ಕಾಯ್ದೆಯಲ್ಲಿ ಮಾಹಿತಿ ನೀಡಲು ವಿನಾಯ್ತಿ ಇರುವ ವಿಷಯಗಳನ್ನು ಹೊರತುಪಡಿಸಿ ಎಲ್ಲಾ ಮಾಹಿತಿ ಇಲಾಖೆಯ ಅಂತರ್ಜಾಲದಲ್ಲಿ ಪ್ರದರ್ಶಿಸಬೇಕು ಎಂದರು. ಕರ್ನಾಟಕ ಮಾಹಿತಿ ಆಯೋಗದ ಆಯುಕ್ತ ಡಾ.ಮಹೇಶ್ ವಾಲ್ವೇಕರ್, ಕಚೇರಿಯಲ್ಲಿ ಆರ್‌ಟಿಐ ಅರ್ಜಿ ಸಲ್ಲಿಕೆಯಾಗಿದೆ ಎಂದರೆ ಅಧಿಕಾರಿಗಳು ಗಾಬರಿಗೊಳ್ಳುತ್ತಾರೆ. ಇದು ಬೇಡ. ಸರಿಯಾಗಿ ಕಾಯ್ದೆ ಓದಿಕೊಂಡಲ್ಲಿ ಅರ್ಜಿಗೆ ಹೆದರದೆ ಸ್ಪಷ್ಟವಾದ ಉತ್ತರ ನೀಡಬೇಕು ಎಂದರು. ಪಾಲಿಕೆ ಆಯುಕ್ತ ಅವಿನಾಶ ಶಿಂಧೆ, ಸಹಾಯಕ ಆಯುಕ್ತ ಸಾಹಿತ್ಯ ಆಲದಕಟ್ಟಿ, ಜಿಪಂ ಉಪ ಕಾರ್ಯದರ್ಶಿ ಲಕ್ಷ್ಮಣ ಶೃಂಗೇರಿ, ಯೋಜನಾ ನಿರ್ದೇಶಕ ಜಗದೇವಪ್ಪ ಸೇರಿದಂತೆ ವಿವಿಧೆ ಇಲಾಖೆಯ ಜಿಲ್ಲಾ, ತಾಲೂಕು ಮಟ್ಟದ ಅಧಿಕಾರಿಗಳು, ಗ್ರಾಪಂ ಪಿಡಿಒ, ವಿ.ಎ. ಭಾಗವಹಿಸಿದ್ದರು.ಎಡಿಸಿ ರಾಯಪ್ಪ ಹುಣಸಗಿ ಸ್ವಾಗತಿಸಿದರು. ಶಿವಶರಣಪ್ಪ ಧನ್ನಿ ನಿರೂಪಿಸಿದರು.



ಇಲಾಖೆ ಮಾಹಿತಿ ಪ್ರಕಟಿಸಿ

ಕಲಬುರಗಿ: ಮಾಹಿತಿ ಹಕ್ಕು ಕಾಯ್ದೆಯ ಸೆಕ್ಷನ್ 4(1)ಎ, 4(1)ಬಿ ರಂತೆ ಇಲಾಖೆಯ ಮಾಹಿತಿಯನ್ನು ಸಾರ್ವಜನಿಕವಾಗಿ ಪ್ರಕಟಿಸುವಂತೆ ಸಾರ್ವಜನಿಕ ಮಾಹಿತಿ ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದು ಕರ್ನಾಟಕ ರಾಜ್ಯ ಮಾಹಿತಿ ಹಕ್ಕು ಆಯೋಗದ ಕಲಬುರಗಿ ಪೀಠದ ಆಯುಕ್ತ ಬಿ.ವೆಂಕಟ್ ಸಿಂಗ್ ಹೇಳಿದರು.ಶನಿವಾರ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, ಜಿಲ್ಲೆಯ ಎಲ್ಲ ಜಿಲ್ಲಾ, ತಾಲೂಕು, ಗ್ರಾಮೀಣ ಹಂತದ ಅಧಿಕಾರಿಗಳಿಗೆ ಮಾಹಿತಿ ಹಕ್ಕು ಕಾಯ್ದೆ ಕುರಿತು ಕಾರ್ಯಾಗರ ನಡೆಸಲಾಗಿದ್ದು, ಮಾಹಿತಿ ಹಕ್ಕು ಕಾಯ್ದೆಯ ಮೂಲ ಆಶಯವೇ ಉತ್ತರದಾಯಿತ್ವ ಮತ್ತು ಸಾರ್ವಜನಿಕರಿಗೆ ಮಾಹಿತಿ ಒದಗಿಸುವುದಾಗಿದೆ. ಹೀಗಾಗಿ ಸಾರ್ವಜನಿಕ ಮಾಹಿತಿ ಅಧಿಕಾರಿಗಳು ತಮ್ಮ ಕಚೇರಿ ಮಾಹಿತಿಯನ್ನು ಸ್ವಯಂ ಪ್ರೇರಿತರಾಗಿ ಕಾಯ್ದೆಯ ಸೆಕ್ಷನ್ 4(1)ಎ, 4(1)ಬಿ ರಂತೆ ಇಲಾಖೆಯ ಮಾಹಿತಿಯನ್ನು ಸಾರ್ವಜನಿಕವಾಗಿ ಪ್ರಕಟಿಸಿದಲ್ಲಿ ಕಚೇರಿಗೆ ಬರುವ ಅರ್ಜಿ ಸಂಖ್ಯೆ ಗಣನೀಯವಾಗಿ ಕಡಿಮೆಯಾಗಲಿದೆ ಎಂದು ತಿಳಿಸಲಾಗಿದೆ ಎಂದರು.

ಜಿಲ್ಲೆಯಲ್ಲಿ ಆರ್.ಟಿ.ಐ ಅರ್ಜಿಗಳನ್ನು ಕಾಲಮಿತಿಯಲ್ಲಿ ಆದ್ಯತೆ ಮೇರೆಗೆ ವಿಲೇ ಮಾಡಬೇಕು.ವಿನಾಕಾರಣ ವಿಳಂಬ ಮಾಡುವುದು ಸಲ್ಲದು.ಇನ್ನು ಜಿಲ್ಲೆಯಲ್ಲಿ ಅರ್ಜಿಯನ್ನು ತ್ವರಿತವಾಗಿ ವಿಲೇವಾರಿಗೆ ತ್ರೈಮಾಸಿಕವಾಗಿ ಪ್ರಗತಿ ಪರಿಶೀಲನೆ ಸಹ ಮಾಡಲಾಗುತ್ತಿದೆ.

■ ಫೌಜಿಯಾ ತರನ್ನುಮ್, ಡಿಸಿ

ಪಟ್ಟಣಕ್ಕೆ ಕೃಷಿ ಮಾರುಕಟ್ಟೆ ಸಚಿವ ಭೇಟಿ

ಮಸ್ಕಿ: ಪಟ್ಟಣದ ಎಪಿಎಂಸಿಯು ಸ್ವತಂತ್ರ ಮಾರುಕಟ್ಟೆಯಾಗಿ ಅಸ್ತಿತ್ವಕ್ಕೆ ಬಂದ ಹಿನ್ನೆಲೆಯಲ್ಲಿ ಮಸ್ಕಿ ಎಪಿಎಂಸಿಗೆ ಜವಳಿ, ಕಬ್ಬು ಅಭಿವೃದ್ಧಿ, ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಎಸ್.ಪಾಟೀಲ ಅವರು ಶನಿವಾರ ಭೇಟಿ ನೀಡಿದರು.

ಈ ವೇಳೆ ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಎಸ್.ಪಾಟೀಲ ಮಾತನಾಡಿ, ಮಸ್ಕಿ ಕೃಷಿ ಉತ್ಪನ್ನ ಮಾರುಕಟ್ಟೆಯಾಗಿ ಒಂದು ವರ್ಷವಾದರೂ ಕೂಡ ಹೊಸ ಕಟ್ಟಡ ಏಕೆ ನಿರ್ಮಾಣ ಮಾಡಿಲ್ಲ.ಮಸ್ಕಿ ಮತ್ತು ಸರ್ಕಾರದಿಂದ 2.5 ಕೋಟಿ ಅನುದಾನ ನೀಡಿದ್ದು,ಅದನ್ನು ಯಾವ ರೀತಿ ಬಳಕೆ ಮಾಡಿಕೊಂಡಿದ್ದೀರಿ ಎಂಬುದನ್ನು ತಿಳಿಸಿ, ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ ವರ್ತಕರು ಇಲ್ಲದೇ ಇರುವುದರ ಬಗ್ಗೆ ದೂರುಗಳು ಬಂದಿದ್ದು, ವರ್ತಕರು ಇರುವ ಸ್ಥಳಗಳಿಗೆ ನೀವೆ ಹೋಗಿ ಭೇಟಿ ನೀಡುವುದು ಎಷ್ಟು ಸರಿ ಎಂದು ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು.

ಮೊದಲು ಕೃಷಿ ಉತ್ಪನ್ನ ಮಾರುಕಟ್ಟೆಗೆ ಎರಡು ಗೇಟ ಗಳನ್ನು ನಿರ್ಮಾಣ ಮಾಡಿ ಎಪಿಎಂಸಿ ಅಭಿವೃದ್ಧಿಗಾಗಿ ಎಂಟರಿಂದ ಹತ್ತು ಕೋಟಿ ಅನುದಾನವನ್ನು ಒದಗಿಸುತ್ತೇನೆ ಎಂದು ಹೇಳಿದರು.

ಕೃಷಿ ಮಾರುಕಟ್ಟೆಯ ನೂತನ ಅಧ್ಯಕ್ಷ ಹಾಗೂ ಪದಾಧಿಕಾರಿಗಳ ಸಮಸ್ಯೆಗಳನ್ನು ಆಲಿಸಿ ಅವರಿಗೆ ಸೂಕ್ತ ಪರಿಹಾರ ನೀಡುವ ಭರವಸೆ ನೀಡಿದರು. ನಂತರ ಮಸ್ಕಿ ಕೃಷಿ ಉತ್ಪನ್ನ ಮಾರುಕಟ್ಟೆ ವತಿಯಿಂದ ಸಚಿವರಿಗೆ ಸನ್ಮಾನ ಮಾಡಲಾಯಿತು. ಈ ವೇಳೆ ಕೃಷಿ ಸಚಿವರಿಗೆ ಶಾಸಕ ಬಸನಗೌಡ ತುರವಿಹಾಳ ಅವರು ಸಾಥ್ ನೀಡಿದರು.

ಮಸ್ಕಿ ಎಪಿಎಂಸಿಯಲ್ಲಿ ಚೆಕ್ ಪೋಸ್ಟ್ ನಿರ್ಮಾಣ ಮಾಡಬೇಕು ಹಾಗೂ ವರ್ತಕರ ಸಮಸ್ಯೆಗಳಿಗೆ ಪರಿಹಾರ ಒದಗಿಸಬೇಕೆಂದು ವರ್ತಕ ಪ್ರತಿನಿಧಿ ಸಂಗಣ್ಣ ಎಲಿಗಾರ ಹಾಗೂ ಎ.ಪಿ.ಎಂ.ಸಿ.ಪ್ರತಿನಿಧಿ ಮಲ್ಲರೆಡ್ಡೆಪ್ಪ ಅವರು ಕೃಷಿ ಸಚಿವರಿಗೆ ಮನವಿ ಮಾಡಿದರು.

ನೂತನ ಎಪಿಎಂಸಿ ಅಧ್ಯಕ್ಷರು ಪದಾಧಿಕಾರಿಗಳು, ವಿವಿಧ ಇಲಾಖೆಯ ಅಧಿಕಾರಿಗಳು, ವರ್ತಕರು, ಕಾಂಗ್ರೆಸ್ ಪಕ್ಷದ ಮುಖಂಡರು ಸೇರಿದಂತೆ ಇತರರು ಉಪಸ್ಥಿತರಿದ್ದರು.



ಲಸಿಕಾ ಅಭಿಯಾನ ಯಶಸ್ವಿಗೊಳಿಸಿ



ರಾಯಚೂರು: ಪಶುಪಾಲನೆ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯಿಂದ ಜಿಲ್ಲೆಯಲ್ಲಿ ಏ.23ರಿಂದ ಮೇ 22ರವರೆಗೆ ಎಲ್ಲ ದನ ಹಾಗೂ ಎಮ್ಮೆಗಳಿಗೆ ಕಾಲುಬಾಯಿ ಜ್ವರ ಲಸಿಕೆ ಹಾಕುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದ್ದು, ರೈತರು ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ಅಪರ ಜಿಲ್ಲಾಧಿಕಾರಿ ಶಿವಾನಂದ ಹೇಳಿದರು.

ಶನಿವಾರ ನಗರದ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಕೇಂದ್ರ ಪುರಸ್ಕೃತ ರಾಷ್ಟ್ರೀಯ ಕಾಲುಬಾಯಿ ರೋಗ ನಿಯಂತ್ರಣ ಕಾರ್ಯಕ್ರಮದ 9ನೇ ಜಿಲ್ಲಾ ಮೇಲುಸ್ತುವಾರಿ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ರಾಜ್ಯ ಕಾಲುಬಾಯಿ ರೋಗ ನಿಯಂತ್ರಣ ಕಾರ್ಯಕ್ರಮದ ಮೇಲುಸ್ತುವಾರಿ ಸಮಿತಿಯ ಸೂಚನೆಯಂತೆ ಏ.23ರಿಂದ ಮೇ 22ರವರೆಗೆ 9ನೇ ಸುತ್ತಿನ ಕಾಲುಬಾಯಿ ಜ್ವರ ಲಸಿಕೆ ಕಾರ್ಯಕ್ರಮವನ್ನು ಜಿಲ್ಲೆಯ ಎಲ್ಲ ದನ ಹಾಗೂ ಎಮ್ಮೆಗಳಿಗೆ ಹಾಕುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದರು.

ಈ ಕಾರ್ಯಕ್ರಮದಡಿ ರೈತರ ಮನೆ ಬಾಗಿಲಲ್ಲಿ ದನ ಮತ್ತು ಎಮ್ಮೆಗಳಿಗೆ ಕಾಲುಬಾಯಿ ಬೇನೆ ಲಸಿಕೆ ಹಾಕಲಾಗುವುದು. ಈ ಕಾರ್ಯಕ್ಕಾಗಿ ಜಿಲ್ಲೆಯಲ್ಲಿ 29 ತಂಡಗಳನ್ನು ರಚಿಸಿದ್ದು, ಪ್ರತಿ ತಂಡದಲ್ಲಿ 1 ಮೇಲ್ವಿಚಾರಕರು ಹಾಗೂ 2 ಲಸಿಕದಾರರು ಇರುತ್ತಾರೆ. ಜಿಲ್ಲೆಯಲ್ಲಿರುವ 315280 ದನಗಳು ಹಾಗೂ 231927 ಎಮ್ಮೆಗಳನ್ನು ಲಸಿಕಾಕರಣಕ್ಕೆ ಒಳಪಡಿಸಲಾಗುವುದು. ಜಿಲ್ಲೆಯಲ್ಲಿ ಪ್ರತಿ 120 ಜಾನುವಾರಗಳಿಗೆ ಒಂದು ಬ್ಲಾಕ್ ಮಾಡಲಾಗಿದೆ ಎಂದು ಹೇಳಿದರು.

ಲಸಿಕಾ ಅಭಿಯಾನದ ನಂತರ ಅಭಿಯಾನದಲ್ಲಿ ಬಿಟ್ಟು ಹೋಗಿರುವ ಜಾನುವಾರುಗಳಿಗೆ ಲಸಿಕೆ ಹಾಕಲಾಗುವುದು. ಜಿಲ್ಲೆಯ ದನ, ಎಮ್ಮೆಗಳು ಕಾಲುಬಾಯಿ ಬೇನೆ ಮುಕ್ತವಾದಲ್ಲಿ ಜಾನುವಾರುಗಳ ಉತ್ಪನ್ನಗಳನ್ನು ಹೆಚ್ಚಿಸಿ, ರೈತರ ಆರ್ಥಿಕ ಪರಿಸ್ಥಿತಿ ಉತ್ತಮಗೊಳ್ಳಿಸುವುದು ಕಾರ್ಯಕ್ರಮದ ಉದ್ದೇಶವಾಗಿದೆ. ಲಸಿಕಾ ಅಭಿಯಾನ ಕಾರ್ಯಕ್ರಮದಲ್ಲಿ ರೈತರು ತಮ್ಮ ಜಾನುವಾರುಗಳಿಗೆ ಲಸಿಕೆ ಹಾಕಿಸಿ ಶೇ.100ರಷ್ಟು ಗುರಿ ಸಾಧಿಸಲು ಸಹಕರಿಸಲು ಗ್ರಾಮೀಣ ಭಾಗದಲ್ಲಿ ಹೆಚ್ಚು ಜಾಗೃತಿ ಮೂಡಿಸುವಂತೆ ತಿಳಿಸಿದರು. ಪಶುಪಾಲನೆ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ ಉಪನಿರ್ದೇಶಕ ಪೋಮ್‌ಸಿಂಗ್ ಸ್ವಾಗತಿಸಿ, ಸಭೆ ನಿರ್ವಹಿಸಿದರು. ಸಭೆಯಲ್ಲಿ ಜಿಲ್ಲೆಯ ವಿವಿಧ ತಾಲೂಕಿನ ಪಶುವೈದ್ಯಾಧಿಕಾರಿಗಳು, ಕೆಎಂಎಫ್ ವಿಸ್ತರಣಾಧಿಕಾರಿಗಳು, ಕೆಎಂಎಫ್ ಪಶು ಅಧಿಕಾರಿಗಳು, ಮುಖ್ಯ ಪಶು ಅಧಿಕಾರಿಗಳಿದ್ದರು.

ಮಾಸಿಕ ಶಿವಾನುಭವ ಕಾರ್ಯಕ್ರಮ

ಕುಕನೂರು: 12ನೆಯ ಶತಮಾನದಲ್ಲಿ ವಚನ ಸಾಹಿತ್ಯ ವು ಸಮ ಸಮಾಜದ ನಿರ್ಮಾಣಕ್ಕೆ ಹೊಸ ಮೈಲುಗೆ ಆಗಿದ್ದು ಜನರು ಬಸವಾದಿ ಶರಣರ ಅನುಭಾವ ಪರಂಪರೆಯನ್ನು ಬಿಂಬಿಸುವ ಹಬ್ಬದಾಚರಣೆಗಳು ಸ್ಮರಣೀಯ ಕ್ಷಣಗಳಾಗಿವೆ ಎಂದು ಇಟಗಿ ಮಹೇಶ್ವರ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕ ಗಂಗಾಧರ ಅವೇಟೇ ಹೇಳಿದರು.

ಶುಕ್ರವಾರ ಸಂಜೆ ಇಲ್ಲಿಯ ಶ್ರೀಇಟಗಿ ಭೀಮಾಂಬಿಕಾ ದೇವಾಲಯದಲ್ಲಿ ಆಯೋಜಿಸಿದ್ದ ಮಾಸಿಕ ಶಿವಾನುಭವ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡಿ, 12ನೆಯ ಶತಮಾನದಲ್ಲಿ ಶರಣರು ವಚನಗಳ ಮೂಲಕ ಜಾಗೃತಿ ಮೂಡಿಸಿದರು.

ಈ ಸಾಹಿತ್ಯದ ಮೂಲಕವೇ ದಾಸೋಹ ಪರಿಕಲ್ಪನೆ ಹೆಚ್ಚು ಸಂಚಲನ ಮೂಡಿಸಿದೆ ಇದರಿಂದ ಶಿವಾನುಭವಗಳು ಹೆಚ್ಚು ಪ್ರಚಲಿತ ವಾಗಿವೆ ಎಂದು ತಿಳಿಸಿದರು.

ನಿವೃತ್ತ ಉಪನ್ಯಾಸಕ ಎಂ.ಎಸ್.ಹಿರೇಮಠ್ ಅಧ್ಯಕ್ಷತೆ ವಹಿಸಿದ್ದರು.



ದಾಸೋಹಿ ಎಸ್.ಸಿ.ಚಿಂಚಲಿ ಹಾಗೂ ನಿವೃತ್ತ ಶಿಕ್ಷಕ ಲಕ್ಷ್ಮಣ ಹಿರೇಮನಿ ಅವರನ್ನು ಸತ್ಕರಿಸಿದರು. ಭೀಮಾಂಬಿಕೆ ದೇವಸ್ಥಾನ ಸಮಿತಿ ಉಪಾಧ್ಯಕ್ಷ ಲಕ್ಷ್ಮಣ ಬೇದವಟ್ಟಿ, ಶಿಕ್ಷಕ ನೀಲಪ್ಪ ಕಡೆಮನಿ ಸ್ವಾಗತಿಸಿದರು.

ನಿವೃತ್ತ ಶಿಕ್ಷಕ ರಾದ ಶರಣಪ್ಪ ಕೊಪ್ಪದ ನಿರೂಪಿಸಿದರು. ಗಾಯಕರಾದ ಮೇಘರಾಜ ಜಿಡಗಿ, ಸಂಗಪ್ಪ ಕಿಂದರಿ, ಹಾಡಿದರು.

ಫುಟ್‌ಪಾತ್‌ನಲ್ಲಿ ವ್ಯಾಪಾರ ಮಾಡಲು ಅವಕಾಶ ಕಲ್ಪಿಸಿ

ಸಿಂಧನೂರು: ಬೀದಿಬದಿ ವ್ಯಾಪಾರಿಗಳಿಗೆ ಪರ್ಯಾಯ ವ್ಯವಸ್ಥೆ ಕಲ್ಪಿಸಬೇಕೆಂದು ಒತ್ತಾಯಿಸಿ ಬೀದಿಬದಿ ವ್ಯಾಪಾರಗಳ ಹೋರಾಟ ಸಮಿತಿ ಸೋಮವಾರ ತೋಟಗಾರಿಕೆ ಇಲಾಖೆ ಕಚೇರಿ ಮುಂದೆ ಧರಣಿ ನಡೆಸಿತು.

ನಗರದ ಬೀದಿ ವ್ಯಾಪಾರಿಗಳ ಡಬ್ಬಾ ಅಂಗಡಿಗಳನು ತೆರವುಗೊಳಿಸಿ 14 ತಿಂಗಳು ಕಳೆದರೂ ತಾಲೂಕು ಆಡಳಿತ ಮತ್ತು ಜಿಲ್ಲಾಡಳಿತ ಪರ್ಯಾಯ ವ್ಯವಸ್ಥೆ ಕಲ್ಪಿಸಿಲ್ಲ. ಇದರಿಂದ ಸಾವಿರಾರು ಬೀದಿಬದಿ ವ್ಯಾಪಾರಿಗಳು ನಿರುದ್ಯೋಗಿಗಳಾಗಿದ್ದು, ಜೀವನ ನಡೆಸುವುದು ಕಷ್ಟವಾಗಿದೆ. ಕುಟುಂಬದವರೂ ಆರ್ಥಿಕ ತೊಂದರೆ ಅನುಭವಿಸುತ್ತಿದ್ದಾರೆ. ವ್ಯಾಪಾರ ಮತ್ತು ಜೀವನಕ್ಕೆ ಖಾಸಗಿ ಬ್ಯಾಂಕ್‌ಗಳಲ್ಲಿ ಸಾಲ ಮಾಡಿಕೊಂಡಿದ್ದಾರೆ. ಸಾಲಬಾಧೆ ತಾಳಿಕೊಳ್ಳದೆ ಮೂರ್‍ನಾಲ್ಕು ಜನ ಆತ್ಮಹತ್ಯೆಗೆ ಶರಣಾಗಿದ್ದಾರೆ. ಕೂಡಲೇ ನಗರದ ಎಲ್ಲ ವ್ಯಾಪಾರಿಗಳಿಗೆ ಫುಟ್‌ಪಾತ್ ಮೇಲೆ ವ್ಯಾಪಾರ ಮಾಡಲು ಅವಕಾಶ ಕಲ್ಪಿಸಬೇಕು ಎಂದು ಆಗ್ರಹಿಸಿದರು.

ಗಂಗಾವತಿ ರಸ್ತೆಯ ಸರ್ಕಾರಿ ಹಣ್ಣಿನ ತೋಟದ ಕಾಂಪೌಂಡ್ ಪಕ್ಕದ ಖಾಲಿ ಜಾಗಕ್ಕೆ ಬಾಡಿಗೆ ನಿಗದಿ ಮಾಡಿ ವ್ಯಾಪಾರ ಮಾಡಲು ಅನುಕೂಲ ಕಲ್ಪಿಸಬೇಕು. ಇಲ್ಲಿನ 4 ಎಕರೆ ಭೂಮಿಯನ್ನು ನಗರಸಭೆಯವರು ಲೀಸ್ ಪಡೆದು ಬೀದಿ ವ್ಯಾಪಾರಿಗಳಿಗೆ ಬಾಡಿಗೆ ನಿಗದಿ ಪಡಿಸಿ ವ್ಯಾಪಾರ ಮತ್ತು ಉಪ ಜೀವನಕ್ಕೆ ಅನುಕೂಲ ಕಲ್ಪಿಸಬೇಕು.ತಾಲೂಕು ಆಡಳಿತ ಮತ್ತು ಜಿಲ್ಲಾಡಳಿತ ಮಾತು ಕೊಟ್ಟಂತೆ ರಾಯಚೂರ-ಗಂಗಾವತಿ ಮತ್ತು ಕುಷ್ಟಗಿ ರಸ್ತೆಗಳು,ಬಸ್ ನಿಲ್ದಾಣದ ಮುಂದಿನ ಒಳ ರಸ್ತೆಯನ್ನು ಅತಿಕ್ರಮಿಸಿ ನಿರ್ಮಿಸಿರುವ ಕಟ್ಟಡಗಳನ್ನು ಕೂಡಲೇ ತೆರವುಗೊಳಿಸಬೇಕೆಂದು ಒತ್ತಾಯಿಸಿದರು. ಸಮಿತಿ ಸಂಚಾಲಕರಾದ ಡಿ.ಎಚ್.ಪೂಜಾರ,ರಮೇಶ ಪಾಟೀಲ್,ಕಾಸಿಂಸಾಬ್,ಶಾಮೀದ್‌ಸಾಬ್, ಚಿಟ್ಟಿಬಾಬು, ಚಂದ್ರಶೇಖರ ಗೊರೇಬಾಳ, ಬಿ.ಎನ್.ಯರದಿಹಾಳ, ಜಾಬರ್ ಪಾಷಾ, ಖಾದರ್‌ಬಾಷಾ ಇತರರು ಉಪಸ್ಥಿತರಿದ್ದರು.



ಲಕ್ಷ ಮನೆಗಳಲ್ಲಿ ಗ್ರಂಥಾಲಯದ ಬೀಜ ಬಿತ್ತುತ್ತೇವೆ

ಕುಷ್ಟಗಿ: ಕರ್ನಾಟಕ ಸರ್ಕಾರದ ರಾಜ್ಯ ಕನ್ನಡ ಪುಸ್ತಕ ಪ್ರಾಧಿಕಾರ ಹಾಗೂ ಜಿಲ್ಲಾ ಜಾಗೃತಿ ಸಮಿತಿ ಆಶ್ರಯದಲ್ಲಿನಗರದಹಿರಿಯಚಿಂತಕ ಹಾಗೂ ಮಾಜಿ ಶಾಸಕ ಕೆ.ಶರಣಪ್ಪ ವಕೀಲರ ಮನೆಯಲ್ಲಿನ ಪುಟ್ಟ ಗ್ರಂಥ ಭಂಡಾರದ ಸಮ್ಮುಖದಲ್ಲಿ, ಲಕ್ಷ ಗ್ರಂಥಾಲಯಗಳ ಯೋಜನೆ ಮನೆಗೊಂದು ಗ್ರಂಥಾಲಯದ ರೂಪು ರೇಷದ ಕರಪತ್ರವನ್ನು ವಿತರಿಸುವ ಮೂಲಕ ಪ್ರಾಧಿಕಾರದ ರಾಜ್ಯಾಧ್ಯಕ್ಷರಾದ ಡಾ.ಮಾನಸ ಅವರು ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಡಾ.ಮಾನಸ ಮಾತನಾಡಿ, ಓದಬೇಕು, ಬರೆಯಬೇಕು ಎನ್ನುವ ಆಶಯದ ಅರ್ಥಪೂರ್ಣ ಮನಸುಗಳ ಮನೆಯಲ್ಲಿ ಕಾರ್ಯಕ್ರಮಕ್ಕೆ ಚಾಲನೆ ಸಿಗುತ್ತಿರುವುದು ಸಂತಸದ ಸಂಗತಿ ಎಂದರು.

ನೀನು ಜೀವನದಲ್ಲಿ ಎರಡು ರೂಪಾಯಿ ಗಳಿಸುತ್ತಿದ್ದರೆ ಅದರಲ್ಲಿ ಒಂದು ರೂಪಾಯಿ ಆಹಾರಕ್ಕೆ ಬಳಸು; ಮತ್ತೊಂದು ರೂಪಾಯಿಯನ್ನು ಪುಸ್ತಕಕ್ಕೆ ಬಳಸು ಎಂಬುದು ಜ್ಞಾನದ ಶಿಖರ ಡಾ.ಬಿ.ಆರ್. ಅಂಬೇಡ್ಕರ್ ಅವರ ಹೇಳಿಕೆಯಾಗಿದೆ. ಅವರ ಈ ಹೇಳಿಕೆಯೇ ಮನೆಯಲ್ಲಿ ಪುಟ್ಟದೊಂದು ಗ್ರಂಥಾಲಯ ಇರಬೇಕು ಎಂಬ ಯೋಜನೆ ರೂಪುಗೊಳ್ಳಲು ಪ್ರೇರಣೆಯಾಯಿತು ಎಂದು ತಿಳಿಸಿದರು.

ಮಾಜಿ ಶಾಸಕ ಕೆ.ಶರಣಪ್ಪ ವಕೀಲರು ಮಾತನಾಡಿ, ಕುಷ್ಟಗಿ ಸೇರಿದಂತೆ ಕಲ್ಯಾಣ ಕರ್ನಾಟಕ ಭಾಗದಲ್ಲಿ ನಿಜಾಂ ಆಡಳಿತ ಇದ್ದಿತು. ಬೇರೆ ಭಾಷೆಯ ಪ್ರಭಾವ ಹೆಚ್ಚಿತ್ತು. ಇಂತಹ ಕಾರಣದಿಂದಲೇ ಈ ಭಾಗ ಹಿಂದುಳಿಯಿತು. ಇಂತಹ ಪ್ರದೇಶದಲ್ಲಿ ಮನೆಗೊಂದು ಗ್ರಂಥಾಲಯ ಯೋಜನೆ ಅನುಷ್ಠಾನ ಕಾರ್ಯಕ್ರಮವನ್ನು ತಮ್ಮ ಮನೆಯಲ್ಲಿ ನೆರವೇರಿಸಿದ್ದಕ್ಕೆ ಸಂತೋಷವಾಯಿತು ಎಂದು ತಿಳಿಸಿದರು.

ಬುದ್ಧ ಬಸವ ಅಂಬೇಡ್ಕರ ಅವರ ತತ್ವಗಳನ್ನು ನಾವು ಅರಿಯಬೇಕು. ಅಂದಾಗ ಸಮಸಮಾಜ ನಿರ್ಮಾಣ ಸಾಧ್ಯವಾಗಲಿದೆ ಎಂದು ಅವರು ಸಲಹೆ ಮಾಡಿದರು.

ರಾಜ್ಯೋತ್ಸವ ಪುರಸ್ಕೃತರಾದ ಶೇಖರಗೌಡಮಾಲಿಪಾಟೀಲ,ಪುಸ್ತಕ ಪ್ರಾಧಿಕಾರದ ಸದಸ್ಯರು ಹಾಗೂ ಸಂಶೋಧಕರಾದ ಡಾ.ಶರಣಪ್ಪ ಕೋಲಕಾರ, ರಾಜ್ಯ ಚಲನಚಿತ್ರ ಅಕಾಡೆಮಿಯ ಸದಸ್ಯರು ಮತ್ತು ಲೇಖಕಿ ಸಾವಿತ್ರಿ ಮುಜಮದಾರ, ಜಿಲ್ಲಾ ವಾರ್ತಾಧಿಕಾರಿ ಗವಿಸಿದ್ದಪ್ಪ ಹೊಸಮನಿ, ಗ್ರಂಥಾಲಯ ಜಾಗೃತಿ ಅಭಿಯಾನದ ಸಂಚಾಲಕರು ಹಾಗೂ ಸಾಹಿತಿಗಳಾದ ಜಿ ಎಸ್ ಗೋನಾಳ, ರವೀಂದ್ರ ಬಾಕಳೆ, ಸಾಹಿತಿಗಳಾದ ಹನುಮಂತಪ್ಪ ಈಟಿಯವರ್, ಡಾ.ನಾಗರಾಜ ಹೀರಾ, ಶರಣಪ್ಪ ತುಮರಿಕೊಪ್ಪ, ಕನ್ನಡಪರ ಹೋರಾಟಗಾರರಾದ ಸ.ಶರಣಪ್ಪ ಪಾಟೀಲ, ಪತ್ರಕರ್ತರಾದ ರವೀಂದ್ರ ಬಾಕಳೆ, ಹನುಮೇಶ ಗುಮಗೇರಿ, ಪವಾಡೆಪ್ಪ ಚೌಡ್ಕಿ, ಪರಶಿವಮೂರ್ತಿ, ಉಮೇಶ ಹಿರೇಮಠ ಹಾಗೂ ಇತರರು ಇದ್ದರು. ಜೀವನಸಾಬ ವಾಲೀಕಾರ ಅವರು ನಿರೂಪಿಸಿದರು.



ಜೆಸ್ಕಾಂ ಗ್ರಾಹಕರೊಂದಿಗೆ ಸಂವಾದ ಸಭೆ

ಕುಷ್ಟಗಿ: ಪಟ್ಟಣದ ಜೆಸ್ಕಾಂ ಉಪ ವಿಭಾಗದ ಕಚೇರಿಯಲ್ಲಿ ಗ್ರಾಹಕರ ಸಂವಾದ ಸಭೆ ಶನಿವಾರ ನಡೆಯಿತು.

ಜೆಸ್ಕಾಂ ಎಇಇ ಕೆಂಚಪ್ಪ ಭಾವಿಮನಿ ಮಾತನಾಡಿ, ಇಲ್ಲಿನ ಪ್ರಮುಖ ಸ್ಥಳದಲ್ಲಿ ಹಳೆಯದಾದ ಟಿಸಿ ಮೇಲ್ದರ್ಜೆಗೇರಿಸಲಾಗವುದು. ಕೊಪ್ಪಳ ರಸ್ತೆಯಲ್ಲಿರುವ ಪರಿವರ್ತಕ ಘಟಕ, ಶಾಖಾಪೂರು ರಸ್ತೆಯಲ್ಲಿರುವ ಲೇಔಟ್‌ದಲ್ಲಿ ವಿದ್ಯುತ್ ಕಂಬದ ತಂತಿಗಳು ಜೋತು ಬಿದ್ದಿದ್ದು, ತ್ವರಿತವಾಗಿ ಬದಲಾಯಿಸಲು ಕ್ರಮ ಕೈಗೊಳ್ಳಲಾಗುವುದು. ನಾನಾ ವಾರ್ಡ್ ಗಳಲ್ಲಿ ಮುಖ್ಯ ರಸ್ತೆಯ ತಂತಿ ಹಾದು ಹೋಗಿದ್ದು, ಗಿಡ ಮರಗಳಿಂದ ಗಾಳಿ ರಸಭಸಕ್ಕೆ ಜೋತು ಬಿದ್ದಿದ್ದು ಕಂಡು ಬಂದರೆ ಕೂಡಲೇ ನಿಗಾವಹಿಸುವುದು. ಸಾರ್ವಜನಿಕರು ಅರ್ಜಿ ಸಲ್ಲಿಸಿದ್ದು, ಸ್ಪಂದಿಸಲಾಗುವುದು ಎಂದು ತಿಳಿಸಿದರು. ಪಟ್ಟಣದ ಮುಖಂಡರಾದ ಬಸವರಾಜ್ ಗಾಣಿಗೇರ್, ವೈಜನಾಥ ಹಿರೇಮಠ ಹಾಗೂ ನಾಗರಿಕರಿಂದ 9ಕ್ಕೂ ಅಧಿಕ ಮನವಿ ಪತ್ರವನ್ನು ಜೆಸ್ಕಾಂ ಎಇಇಗೆ ಮನವಿ ಪತ್ರ ಸಲ್ಲಿಸಿದರು. ಜೆಸ್ಕಾಂ ಉಪ ವಿಭಾಗದ ಎಇ ಪುರುಷೋತ್ತಮ್ ಕಟ್ಟಿಮನಿ,ಶಾಖಾ ಅಧಿಕಾರಿಗಳಾದ ನಿತ್ಯಾನಂದಗೌಡ, ಮಂಜುನಾಥ್ ಉಪ್ಪಾರ, ಚಂದ್ರಕಾಂತ, ರಶ್ಮಿ, ಎಇಟಿ ದೀಪಾ ಹಾಗೂ ನಾಗರಿಕರು ಸಿಬ್ಬಂದಿಗಳು ಪಾಲ್ಗೊಂಡಿದ್ದರು



ನೂರಕ್ಕೆ ನೂರರಷ್ಟು ಫಲಿತಾಂಶ

ಮಸ್ಕಿ: ಪಟ್ಟಣದ ಹಿಂದುಳಿದ ವರ್ಗಗಳ ಮಹಿಳಾ ವಸತಿ ನಿಲಯದ ವಿದ್ಯಾರ್ಥಿಗಳು ಈ ಸಾರಿ ದ್ವಿತೀಯ ಪಿಯುಸಿ ಪರೀಕ್ಷೆ ಬರೆದ ಎಲ್ಲ ವಿದ್ಯಾರ್ಥಿಗಳು ಶೇಕಡಾ ನೂರರಷ್ಟು (100%) ಫಲಿತಾಂಶದೊಂದಿಗೆ ಉತ್ತೀರ್ಣರಾಗಿ ಹಿಂದುಳಿದ ವರ್ಗಗಳ ಮಹಿಳಾ ವಸತಿ ನಿಲಯಕ್ಕೆ ಉನ್ನತವಾದ ಕೀರ್ತಿಯನ್ನು ತಂದು ಕೊಟ್ಟಿದ್ದಾರೆ. ಪರೀಕ್ಷೆ ಬರೆದ ಒಟ್ಟು 45 ವಸತಿ ನಿಲಯದ ವಿದ್ಯಾರ್ಥಿಗಳಲ್ಲಿ ಎಲ್ಲ ವಿದ್ಯಾರ್ಥಿಗಳು ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾರೆ. ಸೃಷ್ಟಿ ಬಸವರಾಜ್ 93.3%, ಅಂಬಮ್ಮ 93.1%, ಸೃಷ್ಟಿ ಅಮರೇಶ್ 93%, ಚೈತ್ರಾ ಮಲ್ಲಪ್ಪ 93%, ನಾಜಿಮಾ 82% ಸೇರಿ ಒಟ್ಟು 45 ವಿದ್ಯಾರ್ಥಿಗಳು ಅತ್ಯುತ್ತಮ ಶ್ರೇಣಿಯಲ್ಲಿ ತೇರ್ಗಡೆಯಾಗಿ ಹಿಂದುಳಿದ ವರ್ಗಗಳ ಮಹಿಳಾ ವಸತಿ ನಿಲಯಕ್ಕೆ ಕೀರ್ತಿ ತಂದಿದ್ದಾರೆ ಎಂದು ನಿಲಯದ ಮೇಲ್ವಿಚಾರಕರಾದ ಸುಧಾ ಸಿದ್ದರಾಮಯ್ಯ ಅವರು ಶುಭ ಹಾರೈಸಿದ್ದಾರೆ.

ಪೌರಕಾರ್ಮಿಕರ ಹುದ್ದೆಗೆ ಅರ್ಜಿ ಆಹ್ವಾನ

ವಿಜಯನಗರ: ರಾಜ್ಯದ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಿಗೆ ಒಟ್ಟು 132 ಪೌರಕಾರ್ಮಿಕರ ಹುದ್ದೆ ಮಂಜೂರಾಗಿದ್ದು, ಈ ಪೈಕಿ ಹೊಸಪೇಟೆ ನಗರ ಸಭೆಯಲ್ಲಿ 3 ಖಾಲಿ ಇರುವ ಪೌರಕಾರ್ಮಿಕರ ಹುದ್ದೆಗಳಿಗೆ ನಗರ ಸ್ಥಳೀಯ ಸಂಸ್ಥೆಗಳಲ್ಲಿ ನೇರ ಪಾವತಿ ಅಡಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅರ್ಹ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದಾಗಿದೆ. ನಗರಸಭೆಗಳಲ್ಲಿ ಹಾಲಿ ನೇರ ಪಾವತಿ ಅಥವಾ ಕ್ಷೇಮಾಭಿವೃದ್ಧಿ, ದಿನಗೂಲಿ ಆಧಾರದಡಿ 2 ವರ್ಷಗಳಿಗೆ ಕಡಿಮೆ ಇಲ್ಲದಂತೆ ನಿರಂತರವಾಗಿ ಕೆಲಸ ನಿರ್ವಹಿಸುತ್ತಿರುವ ಪೌರಕಾರ್ಮಿಕರಿಗೆ ಪ್ರಾಥಮಾದ್ಯತೆ ನೀಡಲಾಗುತ್ತದೆ. ಆಸಕ್ತರು ಏಪ್ರಿಲ್ 30 ಅರ್ಜಿ ಸಲ್ಲಿಸಲು ಕೊನೆಯ ದಿನವಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಕಿರುಸುದ್ದಿ



ಬಳ್ಳಾರಿ: ಮಹಾನಗರ ಪಾಲಿಕೆ ವತಿಯಿಂದ ಎಸ್‌ಟಿ ಸಮುದಾಯದ ಎಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಮಹಾನಗರ ಪಾಲಿಕೆ ಸದಸ್ಯ ಹಾಗೂ ಲೆಕ್ಕಪತ್ರ ಸ್ಥಾಯಿ ಸಮಿತಿ ಅಧ್ಯಕ್ಷ ಕೆ.ಹನುಮಂತಪ್ಪ ಅವರು ಶನಿವಾರ ಉಚಿತ ಲ್ಯಾಪ್‌ಟಾಪ್ ವಿತರಿಸಿದರು.

ಕಮಲಾಪುರದಲ್ಲಿ ಜನ ಗಣತಿ ಆರಂಭ

ವಿಜಯನಗರ: ಕಮಲಾಪುರ ಪಟ್ಟಣದ ಪಂಚಾಯತಿ ವ್ಯಾಪ್ತಿಯಲ್ಲಿ 2027ರ ಜನಗಣತಿಯ ಅಂಗವಾಗಿ ಮನೆ ಮನೆ ಗಣತಿ ಕಾರ್ಯ ನಡೆಯಲಿದೆ. ಗಣತಿದಾರರು ತಮ್ಮ ಮನೆಗಳಿಗೆ ಭೇಟಿ ನೀಡಿದಾಗ ಸಮರ್ಪಕ ಮತ್ತು ನಿಖರ ಮಾಹಿತಿ ಒದಗಿಸಬೇಕು. ಈ ಜನಗಣತಿ ಕಾರ್ಯಕ್ಕೆ ಸಂಬಂಧಿಸಿದಂತೆ ಸಾರ್ವಜನಿಕರಿಗೆ ಯಾವುದೇ ಗೊಂದಲಗಳಿದ್ದಲ್ಲಿ ಅಥವಾ ಹೆಚ್ಚಿನ ಮಾಹಿತಿ ಅಗತ್ಯವಿದ್ದಲ್ಲಿ ಕಮಲಾಪುರ ಪುರಸಭೆಯಲ್ಲಿ ತೆರೆಯಲಾಗಿರುವ ಜನಗಣತಿ ಸಹಾಯವಾಣಿ ಸಂಖ್ಯೆ 97405 80083, 78927 44342 ಗೆ ಸಂಪರ್ಕಿಸಬಹುದು ಎಂದು ಪುರಸಭೆ ಮುಖ್ಯಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಡೆಲ್ಲಿ ವರ್ಲ್ಡ್ ಸ್ಕೂಲ್ ಮಾನ್ಯತೆ ರದ್ದತಿಗೆ ಹೈಕೋರ್ಟ್ ತಡೆ

ಕೊಟ್ಟೂರು: ಪಟ್ಟಣದಲ್ಲಿ ನಡೆಯುತ್ತಿರುವ ಡೆಲ್ಲಿ ವರ್ಲ್ಡ್ ಸ್ಕೂಲ್ 2025 ಫೆ.3ರಂದು ಸಿಬಿಎಸ್‌ಇ ಪಠ್ಯಕ್ರಮದ ಮಾನ್ಯತೆಗೆ ಅರ್ಜಿ ಸಲ್ಲಿಸಲಾಗಿತ್ತು. ಆದರೂ ಸಿಬಿಎಸ್‌ಇ ಪಠ್ಯಕ್ರಮ ಅಳವಡಿಸಿಕೊಂಡು ಪಠ್ಯ ಚಟುವಟಿಕೆಗಳನ್ನು ನಡೆಸಲಾಗುತ್ತಿದೆ ಎಂಬ ದೂರುಗಳು ಸಲ್ಲಿಕೆಯಾದ ಹಿನ್ನೆಲೆಯಲ್ಲಿ ಡೆಲ್ಲಿ ವರ್ಲ್ಡ್ ಸ್ಕೂಲ್ ಮಾನ್ಯತೆಯನ್ನು ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕರು ಶಾಲೆಯ ಮಾನ್ಯತೆಯನ್ನು ರದ್ದುಪಡಿಸಿ ಆದೇಶ ಹೊರಡಿಸಿದ್ದರು. ಈ ಆದೇಶದ ವಿರುದ್ಧ ಡೆಲ್ಲಿ ವರ್ಲ್ಡ್ ಸ್ಕೂಲ್‌ನ ಆಡಳಿತ ಮಂಡಳಿ ಈ ಆದೇಶವನ್ನು ರದ್ದುಪಡಿಸುವಂತೆ ಮಾನ್ಯ ಉಚ್ಚ ನ್ಯಾಯಾಲಯ ಧಾರವಾಡ ಪೀಠದ ಮೊರೆ ಹೋಗಿತ್ತು. ಸದರಿ ಮನವಿಯನ್ನು ಪುರಸ್ಕರಿಸಿದ ಮಾನ್ಯ ಘನ ನ್ಯಾಯಾಲಯವು ದಿನಾಂಕ 2026 ಏ.6ರಂದು ಉಪನಿರ್ದೇಶಕರು ನೀಡಿದ್ದ ಆದೇಶಕ್ಕೆ ಮಧ್ಯಂತರ ತಡೆ ಆದೇಶ ಹೊರಡಿಸಿದೆ. ಈ ಆದೇಶದಂತೆ ಉಪನಿರ್ದೇಶಕರು, ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಈ ಬಗ್ಗೆ ತಡೆಯಾಜ್ಞೆಯ ಕುರಿತು ಮಾಹಿತಿ ನೀಡಿದೆ. 2026 ಏ.1ರಿಂದ 2031 ಮಾ.31ರವರೆಗೆ ಡೆಲ್ಲಿ ವರ್ಲ್ಡ್ ಸ್ಕೂಲ್‌ಗೆ ಸಿ.ಬಿ.ಎಸ್.ಸಿ. ಮಾನ್ಯತೆ ದೊರೆತಿದೆ ಎಂದೂ ಸಹ ಹೇಳಿದರು. ಪಟ್ಟಣದಲ್ಲಿ ಡೆಲ್ಲಿ ವರ್ಲ್ಡ್ ಸ್ಕೂಲ್‌ನ ಆಡಳಿತಾಧಿಕಾರಿ ಪುಷ್ಪರಾಜ್, ಪುಷ್ಪಲತಾ ಎಚ್‌ಎಂ ಪತ್ರಿಕಾ ಗೋಷ್ಠಿ ಶುಕ್ರವಾರ ಕರೆದು ಪತ್ರಿಕೆಗಳಿಗೆ ತಿಳಿಸಿದರು. ಡೆಲ್ಲಿ ವರ್ಲ್ಡ್ ಸ್ಕೂಲ್‌ಗೆ ಪ್ರವೇಶ ಪಡೆಯುವ ಮಕ್ಕಳು, ಪೋಷಕರು ಯಾವುದೇ ಕಾರಣಕ್ಕೂ ಗೊಂದಲಗಳಿಗೆ ಬಲಿಯಾಗಬಾರದು. ಪ್ರವೇಶ ಯಥಾಪ್ರಕಾರ ಈ ವರ್ಷವೂ ನಡೆಯಲಿದೆ.


ಶಾಂತಿ ನಗರದಲ್ಲಿ ಬೆಂಕಿ ಅವಘಡ



ಬಳ್ಳಾರಿ: ಆಕಸ್ಮಿಕ ಬೆಂಕಿ ತಗುಲಿ ಬಣವೆಗಳು ಸುಟ್ಟು ಕರಕಲಾದ ಘಟನೆ ನಗರದ ಶಾಂತಿ ನಗರ ಪ್ರದೇಶದಲ್ಲಿ ಸಂಭವಿಸಿದೆ. ರಾಮಾಂಜಿನೆಮ್ಮ ಅವರಿಗೆ ಸೇರಿದ ಬಣವೆ ಎಂದು ಗುರುತಿಸಲಾಗಿದೆ. ಬೆಂಕಿಯ ತೀವ್ರತೆಯಿಂದ ಬಣವೆಯಲ್ಲಿದ್ದ ಸಾಮಗ್ರಿಗಳು ಸಂಪೂರ್ಣ ಸುಟ್ಟು ಕರಕಲಾಗಿವೆ. ಘಟನೆಯ ತಿಳಿಯುತ್ತಿದ್ದಂತೆ ಕೂಡಲೇ 34ನೇ ವಾರ್ಡ್ ಸದಸ್ಯ ಹಾಗೂ ಮಾಜಿ ಮೇಯರ್‌ರಾ ಜೇಶ್ವರಿ ಸುಬ್ಬರಾಯುಡು ಅವರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು. ಈ ವೇಳೆ ಆಂಜಿನೆಮ್ಮ ಅವರಿಗೆ ಪಾಲಿಕೆ ಸದಸ್ಯರು 11 ಸ್ವಂತ ಹಣ, ಧನಸಹಾಯ ನೀಡಿದರು. ಜೊತೆಗೆ ಸರ್ಕಾರದಿಂದ ದೊರೆಯುವ ಸೌಲಭ್ಯಗಳನ್ನು ಒದಗಿಸುವುದಾಗಿ ಈ ವೇಳೆ ಭರವಸೆ ನೀಡಿದರು. ಪಕ್ಷದ ಮುಖಂಡರಾದ ಸುಬ್ಬರಾಯುಡು, ಯೋಗಾನಂದ ರೆಡ್ಡಿ, ವಿಷ್ಣು ಸೇರಿದಂತೆ ಇತರರು ಉಪಸ್ಥಿತರಿದ್ದರು.

ನಿಧನ ಸುದ್ದಿ

ಎಸ್.ಎಂ.ಸುಶೀಲಮ್ಮ



ಕೊಟ್ಟೂರು: ಎಸ್.ಎಂ.ಸುಶೀಲಮ್ಮ ಪಟ್ಟಣದ ಎಸ್.ಎಂ.ಸುಶೀಲಮ್ಮ (83) ಶುಕ್ರವಾರ ರಾತ್ರಿ ನಿಧನರಾಗಿದ್ದಾರೆ. ಪತ್ರಕರ್ತ ಎಸ್.ಎಂ.ಗುರುಪ್ರಸಾದ ಸೇರಿ ಮೂವರು ಪುತ್ರರು, ಇಬ್ಬರು ಪುತ್ರಿಯರು ಮೊಮ್ಮಕ್ಕಳು ಮತ್ತು ಅಪಾರ ಬಂದು ಬಳಗವನ್ನು ಅಗಲಿದ್ದಾರೆ.



ವಿಜಯನಗರ: ವಿಶ್ವ ಪರಂಪರಾ ದಿನಚರಣೆ ಪ್ರಯುಕ್ತ ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ (ಹಂಪಿ ವೃತ್ತ)ವತಿಯಿಂದ ಶನಿವಾರ ಹಂಪಿಯಲ್ಲಿ ಸ್ವಚ್ಛತಾ ಅಭಿಯಾನ ಹಮ್ಮಿಕೊಳ್ಳಲಾಗಿತ್ತು. ಪುರಾತತ್ವ ಸರ್ವೇಕ್ಷಣಾ ಇಲಾಖೆ ಅಧೀಕ್ಷಕ ಕೆ.ರಾಮಕೃಷ್ಣ ರೆಡ್ಡಿ, ಮುಖಂಡರಾದ ದೇವರಾಜ್, ಅಭಿಜಿತ್, ಬಿಡ್ಡಪ್ಪ, ವಿರೂಪಾಕ್ಷಿ ಹಂಪಿ ಇತರರಿದ್ದರು.

ಕಣ್ಣಿನ ಉಚಿತ ತಪಾಸಣಾ ಶಿಬಿರ

ಸಿರುಗುಪ್ಪ: ಗ್ರಾಮೀಣ ಪ್ರದೇಶದ ಜನರಿಗೆ ಸುಲಭವಾಗಿ ದೃಷ್ಟಿ ದೋಷಗಳನ್ನು ಪತ್ತೆ ಹಚ್ಚಲು ಮತ್ತು ಕಣ್ಣಿನ ಆರೋಗ್ಯವನ್ನು ಉತ್ತೇಜಿಸಲು ಉಚಿತ ಕಣ್ಣಿನ ತಪಾಸಣಾ ಶಿಬಿರ ಉಪಯುಕ್ತವಾಗುತ್ತದೆ ಎಂದು ನೇತ್ರಾ ತಜ್ಞೆ ಸ್ವಾತಿ ಹೇಳಿದರು.

ತಾಲೂಕಿನ ಹಚ್ಚೊಳ್ಳಿ ಗ್ರಾಮ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಅಂಧತ್ವ ನಿಯಂತ್ರಣಾ, ತಾಲೂಕು ವೈದ್ಯಾಧಿಕಾರಿಗಳ ಕಚೇರಿ, ಹಚ್ಚೊಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರ, ಶಿವಮೊಗ್ಗ ಶಂಕರ ಕಣ್ಣಿನ ಆಸ್ಪತ್ರೆಯ ಸಹಯೋಗದೊಂದಿಗೆ ಬುಧವಾರ ನಡೆದ ಉಚಿತ ಕಣ್ಣಿನ ತಪಾಸಣಾ ಶಿಬಿರದಲ್ಲಿ ಮಾತನಾಡಿದರು.

ಶಿವಮೊಗ್ಗ ಶಂಕರ ಕಣ್ಣಿನ ಆಸ್ಪತ್ರೆಯ ವೈದ್ಯರು 224 ಜನರ ಆರೋಗ್ಯ ತಪಾಸಣೆ ನಡೆಸಿ ಔಷಧೋಪಚಾರ ನೀಡಿದರು. ಉಚಿತ ಕಣ್ಣಿನ ಪೊರೆ ತಪಾಸಣೆ ನಡೆಸಿ, ಶಸ್ತ್ರ ಚಿಕಿತ್ಸೆಯ ಅಗತ್ಯವುಳ್ಳ 105ಜನರನ್ನು ಏ.18ರಂದು ಆಸ್ಪತ್ರೆಗೆ ಕರೆದೊಯ್ಯಲಾಗುತ್ತದೆ ಎಂದು ಮಾಹಿತಿ ನೀಡಿದರು.

ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಎಂ.ರವಿಕುಮಾರ್, ಸಮುದಾಯ ಆರೋಗ್ಯ ಅಧಿಕಾರಿ ಗಾದಿಲಿಂಗ ನಾಯ್ಕ, ಕಿರಿಯ ಆರೋಗ್ಯ ನಿರೀಕ್ಷಣಾಧಿಕಾರಿಗಳಾದ ಎಚ್. ಲಿಂಗರಾಜ ರೆಡ್ಡಿ, ರಾಚೋಟಯ್ಯ, ಪ್ರಾಥಮಿಕ ಆರೋಗ್ಯ ಸುರಕ್ಷಣಾಧಿಕಾರಿಗಳಾದ ಮಹಾಲಕ್ಷ್ಮಿ, ನಜ್ಮ ಮತ್ತು ಆಶಾ ಕಾರ್ಯಕರ್ತೆಯರು ಭಾಗವಹಿಸಿದ್ದರು.



ಸಿರುಗುಪ್ಪ: ತಾಲೂಕಿನ ಹಚ್ಚೊಳ್ಳಿ ಗ್ರಾಮ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಅಂಧತ್ವ ನಿಯಂತ್ರಣಾ, ತಾಲೂಕು ವೈದ್ಯಾಧಿಕಾರಿಗಳ ಕಚೇರಿ, ಹಚ್ಚೊಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರ, ಶಿವಮೊಗ್ಗ ಶಂಕರ ಕಣ್ಣಿನ ಆಸ್ಪತ್ರೆಯ ಸಹಯೋಗದೊಂದಿಗೆ ಬುಧವಾರ ನಡೆದ ಉಚಿತ ಕಣ್ಣಿನ ತಪಾಸಣಾ ಶಿಬಿರ ನಡೆಸಲಾಯಿತು.

ವಿದ್ಯುತ್ ಕಣ್ಣಾಮುಚ್ಚಾಲೆ: ಆಕ್ರೋಶ

ಅಂಗಡಿ ಗಾದಿಲಿಂಗ

ಸಿರುಗುಪ್ಪ: ವಿದ್ಯುತ್ ಪೂರೈಕೆಯಲ್ಲಿ ಕಳೆದ ಕೆಲ ದಿನಗಳಿಂದ ನಿರಂತರ ಸಮಸ್ಯೆ ಎದುರಾಗಿದ್ದು, ಅನಿಯಮಿತ ಲೋಡ್ ಶೆಡ್ಡಿಂಗ್ ಜಾರಿಯಿಂದ ಸಾರ್ವಜನಿಕರು ಹೈರಾಣರಾಗಿದ್ದಾರೆ. ಬೇಸಿಗೆ ಬಿಸಿಲಿನಿಂದ ಬಸವಳಿಯುತ್ತಿರುವ ಜನರಿಗೆ ವಿದ್ಯುತ್ ಪದೇ ಪದೇ ಕೈಕೊಡುತ್ತಿರುವುದು ಜೆಸ್ಕಾಂ ಇಲಾಖೆ ವಿರುದ್ಧ ಜನರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ದಿಗಂತ ವಿಶೇಷ

ವಿದ್ಯುತ್ ವ್ಯತ್ಯಯದಿಂದ ವ್ಯಾಪಾರ ವಹಿವಾಟು ಅಟಕ್ಕುಂಟು ಲೆಕ್ಕಕ್ಕಿಲ್ಲ ಎನ್ನುವಂತಾಗಿದೆ. ಸಣ್ಣ ಪುಟ್ಟ ವ್ಯಾಪಾರ ವಹಿವಾಟು ನಡೆಸುತ್ತಿರುವ ಅಂಗಡಿ ಮಾಲೀಕರು ವಿದ್ಯುತ್ ಸಮಸ್ಯೆಯಿಂದ ಕಂಗಲಾಗಿದ್ದಾರೆ.

ವಾತಾವರಣದಲ್ಲಿ ಉಷ್ಣಾಂಶ ದಿನದಿಂದ ದಿನಕ್ಕೆ ಏರಿಕೆಯಾಗುತ್ತಿದ್ದು, ಜನಸಾಮಾನ್ಯರು ಫ್ಯಾನ್, ಏರ್ ಕೂಲರ್‌ಗಳು, ಹವಾನಿಯಂತ್ರಕಗಳ ಮೊರೆ ಹೋಗಿದ್ದಾರೆ. ಇವುಗಳ ಬಳಕೆಗೆ ವಿದ್ಯುತ್ ಅನಿವಾರ್ಯವಾಗಿದೆ. ಯಾವುದಕ್ಕೂ ಸಮಯವೇ ಇಲ್ಲ, ಇಲಾಖೆ ಅಧಿಕಾರಿಗಳದ್ದೇ ನಿಯಮ, ಸಮಯ ಎನ್ನುವಂತಾಗಿದೆ.

ಬೇಸಿಗೆ ವೇಳೆ 'ವಿದ್ಯುತ್ ಕಣ್ಣಾಮುಚ್ಚಾಲೆ' ಯಿಂದ ದೈನಂದಿನ ಜೀವನದ ಮೇಲೆ ಭಾರಿ ಪರಿಣಾಮ ಬೀರುತ್ತಿದೆ.ಅನಿಯಮಿತ ಲೋಡ್ ಶೆಡ್ಡಿಂಗ್‌ನಿಂದ ಕೃಷಿ, ವ್ಯಾಪಾರ, ಮಕ್ಕಳ ವಿದ್ಯಾಭ್ಯಾಸ ಸೇರಿ ಹಲವು ಕ್ಷೇತ್ರಗಳ ಮೇಲೆ ಕರಿನೆರಳು ಬೀಳುವಂತಾಗಿದೆ.

ವ್ಯಾಪಾರ, ಉತ್ಪಾದನಾ ವಲಯದ ಮೇಲೂ ಲೋಡ್ ಶೆಡ್ಡಿಂಗ್ ದುಷ್ಪರಿಣಾಮ ಬೀರುತ್ತಿದ್ದು,



> ಹವಾಮಾನ ವೈಪರೀತ್ಯದಿಂದಾಗಿ ತಾಪಮಾನ ಏರಿಕೆಯಾಗುತ್ತಿರುವ ಕಾರಣ ವಿದ್ಯುತ್ ಬಳಕೆ ಜಾಸ್ತಿಯಾಗುತ್ತಿರುವುದು ಮತ್ತು 110ಕೆವಿ ವಿದ್ಯುತ್ ವಿತರಣಾ ಕೇಂದ್ರದಲ್ಲಿ 20ಎಂವಿಎ ಪರಿವರ್ತಕ ವಿಫಲವಾಗಿರುವುದರಿಂದ ಸಮಸ್ಯೆ ಉಲ್ಬಣಗೊಳ್ಳಲು ಕಾರಣವಾಗಿದೆ. ಇದನ್ನು ಸರಿಪಡಿಸಲು ನಮ್ಮ ಮೇಲಧಿಕಾರಿಗಳಿಗೆ ತಿಳಿಸಲಾಗಿದೆ. 8-10 ದಿನಗಳ ಕಾಲ ಸಮಸ್ಯೆಯಾಗುತ್ತಿದೆ. ಗ್ರಾಹಕರು ಸಹಕರಿಸಬೇಕು.
>
> ■ ಅಶೋಕ್ ರೆಡ್ಡಿ, ಜೆಸ್ಕಾಂ ಎಇಇ

ಸಣ್ಣಪುಟ್ಟ ಕೈಗಾರಿಕೆಗಳಲ್ಲಿ ಕರೆಂಟ್ ಇಲ್ಲದೆ ಕೆಲಸ ಇಲ್ಲವಾಗಿದ್ದು, ಜ್ಯೂಸ್ ಅಂಗಡಿಗಳು, ಐಸ್‌ಕ್ರೀಮ್ ಪಾರ್ಲರ್‌ಗಳ, ಹೋಟೆಲ್‌ಗಳಲ್ಲಿ ವಿದ್ಯುತ್ ಅನಿವಾರ್ಯ, ಇಲ್ಲದಿದ್ದರೆ ಅವರ ವ್ಯಾಪಾರ ಅಷ್ಟಕಷ್ಟೆಯಾಗಿದ್ದು, ಇವರೆಲ್ಲರ ವ್ಯಾಪಾರ ವಹಿವಾಟು, ಹೊಟ್ಟೆ ಮೇಲೆ ಲೋಡ್ ಶೆಡ್ಡಿಂಗ್ ಪೆಟ್ಟು ನೀಡುತ್ತಿದೆ.

ವಿದ್ಯುತ್ ಕಣ್ಣಾಮುಚ್ಚಾಲೆ ಯಾವ ರೀತಿ ಇದೆ ಎಂದರೆ ಕರೆಂಟ್ ಯಾವಾಗ ಬರುತ್ತದೆ, ಯಾವಾಗ ಹೋಗುತ್ತದೆ ಎಂದು ಕಾದು ಕುಳಿತುಕೊಳ್ಳುವಂತಹ ದುಸ್ಥಿತಿ ನಿರ್ಮಾಣಗೊಂಡಿದೆ.

ದಿನವೊಂದಕ್ಕೆ ಏನಿಲ್ಲವೆಂದರೂ 3-4 ತಾಸು ವಿದ್ಯುತ್ ಪೂರೈಕೆ ಕಡಿತವಾಗುತ್ತಿದೆ, ರಾತ್ರಿ ಸಮಯದಲ್ಲಿ ಕರೆಂಟ್ ಕೈಕೊಡುವ ಹಿನ್ನೆಲೆ ನೆಮ್ಮದಿಯ ನಿದ್ರೆಯು ಮಾಯವಾಗಿದೆ. ಕೂಡಲೇ ಅಧಿಕಾರಿಗಳು ಸಮರ್ಪಕ ವಿದ್ಯುತ್ ಪೂರೈಕೆಗೆ ಮುಂದಾಗಬೇಕು ಎಂದು ನಾಗರಾಜ, ಮನೋಜ್ ಬಿ.ಸಿ., ಹನುಮನ್ ಗೌಡ, ಗೋವಿಂದ್ ರಾಜ್ ಕಲ್ಮನೆ ವಿನಯ್ ಅವರು ಆಗ್ರಹಿಸಿದ್ದಾರೆ.

ಜೋಳ ರಕ್ಷಣೆಗೆ ರೈತರ ಪರದಾಟ

ಕುರುಗೋಡು: ಸಮೀಪದ ಎಮ್ಮಿಗನೂರು ಸೇರಿದಂತೆ ವಿವಿಧೆಡೆಗಳಲ್ಲಿ ಗಾಳಿ, ಗುಡುಗು, ಸಿಡಿಲಿನಿಂದ ಕೂಡಿದ ಮಳೆ ಶುಕ್ರವಾರ ರಾತ್ರಿ ಆರಂಭವಾಗಿತ್ತು. ಹಲವೆಡೆ ರಾತ್ರಿ ಸುರಿದ ಭಾರೀ ಗಾಳಿ-ಮಳೆಯಿಂದ ಜನಜೀವನ ಅಸ್ತವ್ಯಸ್ತಗೊಂಡಿದೆ. ಕಾದ ನೆಲಕ್ಕೆ ಮಳೆ ಬಂದು ತಂಪೆರೆದಂತಾಗಿದೆ.

ಸ್ಥಳೀಯ ರೈತರ ಬೆಳೆ ಹೈಬ್ರೀಡ್ ಜೋಳ ರಾಶಿಗಳ ರಕ್ಷಣೆಗೆ ಸಂಕಷ್ಟಯೊಡ್ಡಿದೆ. ಜೋಳದ ಹಲವು ರಾಶಿಗೆ ಮಳೆ ನೀರು ಸಂಗ್ರಹವಾಗಿದೆ. ಇಂದು ಸ್ಥಳ ಬದಲಿಸಲು ರೈತರಲ್ಲಿ ಆರ್ಥಿಕ ಹೊರೆಯಾಗಿದೆ. ಇಲ್ಲಿನ ಕುರುಗೋಡು ರಸ್ತೆಯಲ್ಲಿ ಜೋಳ ಖರೀದಿ ಕ್ರೇಂದ್ರ ಆವರಣದ ಸಂಚೆ ಮಾರುಕಟ್ಟೆಯಲ್ಲಿ ನೂರಾರು ಎಕ್ಕರೆ ಪ್ರದೇಶದ ಬೆಳೆದ ರಾತ್ರೋಹೋ ತಡಪಲ್ಲ ಹೊದಿಕೆಮುಚ್ಚಲು ರೈತ ಸಮಸ್ಯೆ ಕಂಡು ಬಂತು. ಗಾಳಿ-ಮಳೆಯ ಅಬ್ಬರಕ್ಕೆ ವಿದ್ಯುತ್ ವ್ಯವಸ್ಥೆಯ ಮೇಲೂ ಪರಿಣಾಮಬೀರಿದೆ.

ಈ ವರ್ಷದ ಮೊದಲ ಮಳೆ ಅಶ್ವಿನಿ ಮಳೆ ಸುರಿದಿದ್ದು, ಕಳೆದೊಂದು ತಿಂಗಳು ಬಿಸಿಲ ಬೇಗೆಯಿಂದ ಬಸವಳಿದಿದ್ದ ತಾಲೂಕಿನಲ್ಲಿ ಮಳೆ ತಂಪೆರೆದಿದೆ. ಸಂಜೆ ಹೆಚ್ಚಿನ ಪ್ರಮಾಣದಲ್ಲಿ ಗಾಳಿ ಬೀಸಿದ ಪರಿಣಾಮ ರಸ್ತೆಯಲ್ಲಿ ಧೂಳು ಆವರಿಸಿ, ಅಂಗಡಿ ಮುಂದಿನ ವಸ್ತುಗಳು ಗಾಳಿಗೆ ಹಾರಿ ಚೆಲ್ಲಾಪಿಲ್ಲಿಯಾದವು. ದಿಢೀರ್ ಮಳೆಯಿಂದ ರಕ್ಷಿಸಿಕೊಳ್ಳಲು ಜನರು ಮರ ಹಾಗೂ ಅಂಗಡಿಗಳ ಕಡೆ ಮೊರೆ ಹೋದರು. ಪಟ್ಟಣದ ತುಂಬೆಲ್ಲ ರಸ್ತೆ ಬದಿ ಹಾಕಲಾಗಿದ್ದ ಶಾಲಾ ಕಾಲೇಜುಗಳ ಬ್ಯಾನರ್ ಗಾಳಿ ರಭಸಕ್ಕೆ ಹರಿದು ಹೋಗಿದ್ದವು.

ಕಳೆದ ಎರಡು ವರ್ಷದಲ್ಲಿ ಗ್ರಾಮದಲ್ಲಿ ಖರೀದಿ ಕೇಂದ್ರ ಆರಂಬಿಸಿದ್ದು, ಇನ್ನೂ ದವಸದ್ಯಾನ್ಯ ಸೂಕ್ತ ರಕ್ಷಣೆ ಸಮತಟ್ಟ ಕಮಗಾರಿ ಕೈಗೊಳ್ಳಬೇಕು. ಮಳೆ ನೀರು ನಿಲ್ಲದೇ ಮೂಲ ಭೂತ ಸೌಕರ್ಯ ಒದಗಿಸಬೇಕು ಎಂದು ಸ್ಥಳಿಯ ರೈತರಆಗ್ರಹವಾಗಿದೆ.



ಬಿಸಿಲ ತಾಪ: ಆರೋಗ್ಯ ಇಲಾಖೆಯ ಮಾರ್ಗಸೂಚಿ ಪಾಲಿಸಿ

ವಿಜಯನಗರ: ಜಿಲ್ಲೆಯಲ್ಲಿ ಬೇಸಿಗೆಯ ತಾಪಮಾನ ದಿನದಿಂದ ದಿನಕ್ಕೆ ಏರಿಕೆಯಾಗುತ್ತಿದ್ದು, ಸಾರ್ವಜನಿಕರು ಬಿಸಿಲಿನ ಬೇಗೆಯಿಂದ ತಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳುವ ನಿಟ್ಟಿನಲ್ಲಿ ಜಿಲ್ಲಾ ಆರೋಗ್ಯ ಇಲಾಖೆಯ ತಜ್ಞರು ಪ್ರಮುಖ ಮಾರ್ಗಸೂಚಿಗಳನ್ನು ಪಟ್ಟಿ ಮಾಡಿದ್ದು, ಸಾರ್ವಜನಿಕರು ಕಟ್ಟುನಿಟ್ಟಾಗಿ ಪಾಲಿಸುವಂತೆ ಜಿಲ್ಲಾ ಆರೋಗ್ಯ ಮತ್ತು ಕಲ್ಯಾಣಾಧಿಕಾರಿ(ಪ್ರಭಾರ) ಡಾ.ವಿನಯ್ ಎಂ. ಸಾರ್ವಜನಿಕರಲ್ಲಿ ಮನವಿ ಮಾಡಿದ್ದಾರೆ.



ಈ ಕುರಿತು ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಇತ್ತೀಚೆಗೆ ತಾಪಮಾನ ದಿನದಿಂದ ದಿನಕ್ಕೆ ಏರಿಕೆಯಾಗುತ್ತಿದೆ. ಈ ಹಿನ್ನೆಲೆಯಲ್ಲಿ ಅನಿವಾರ್ಯವಲ್ಲದಿದ್ದರೆ ಮಧ್ಯಾಹ್ನದ ವೇಳೆ ಮನೆಯೊಳಗೆ ಇರುವುದು ಕ್ಷೇಮ. ನಿಮ್ಮ ಹೊರಾಂಗಣ ಕೆಲಸಗಳನ್ನು ಮುಂಜಾನೆ ಅಥವಾ ಸಂಜೆಯ ಅವಧಿಗೆ ಬದಲಾಯಿಸಿಕೊಳ್ಳಿ. ಮದ್ಯಪಾನ, ಚಹಾ, ಕಾಫಿ ಮತ್ತು ಅತಿಯಾದ ಸಕ್ಕರೆ ಇರುವ ಕಾರ್ಬೋನೇಟೆಡ್ ಪಾನೀಯಗಳು ದೇಹವನ್ನು ಇನ್ನಷ್ಟು ನಿರ್ಜಲೀಕರಣಗೊಳಿಸುತ್ತವೆ. ಆದ್ದರಿಂದ ಇವುಗಳಿಂದ ದೂರವಿರಿ ಎಂದು ಸಲಹೆ ನೀಡಿದ್ದಾರೆ.

ಆರೋಗ್ಯದ ಆರೋಗ್ಯದ ದೃಷ್ಟಿಯಿಂದ ಬಾಯಾರಿಕೆ ಇಲ್ಲದಿದ್ದರೂ ಸಹ ಆಗಾಗ್ಗೆ ನೀರು ಕುಡಿಯುತ್ತಿರಬೇಕು. ಪ್ರಯಾಣದ ಸಮಯದಲ್ಲಿ ನೀರಿನ ಬಾಟಲಿಯನ್ನು ಜೊತೆಯಲ್ಲಿಟ್ಟುಕೊಳ್ಳುವುದು ಉತ್ತಮ. ಹೊರಗಡೆ ಕೆಲಸ ಮಾಡುವವರು ಪ್ರತಿ 20 ನಿಮಿಷಕ್ಕೊಮ್ಮೆ ನೀರು ಕುಡಿಯಬೇಕು. ಮನೆಯಲ್ಲೇ ತಯಾರಿಸಿದ ಮಜ್ಜಿಗೆ, ನಿಂಬೆ ಹಣ್ಣಿನ ಶರಬತ್ತು ಹಾಗೂ ಎಳನೀರು ದೇಹಕ್ಕೆ ತಂಪು ನೀಡುತ್ತವೆ. ಕಲ್ಲಂಗಡಿ, ಕಿತ್ತಳೆ, ದ್ರಾಕ್ಷಿ, ಸೌತೆಕಾಯಿಯಂತಹ ನೀರಿನಂಶ ಹೆಚ್ಚಿರುವ ಹಣ್ಣುಗಳನ್ನು ಸೇವಿಸಬೇಕು. ಹೆಚ್ಚು ಪ್ರೋಟೀನ್ ಇರುವ ಆಹಾರ, ಹಳೆಯದಾದ ಪದಾರ್ಥಗಳು ಮತ್ತು ಕೆಂಪು ಮಾಂಸದ ಸೇವನೆ ಕಡಿಮೆ ಇರಲಿ. ತಾಜಾ ಮೀನು ಅಥವಾ ಮೃದುವಾದ ಆಹಾರಗಳನ್ನು ಸೇವಿಸಬಹುದು.

ಹೆಚ್ಚು ಕಾಳಜಿ ವಹಿಸಿ: ನವಜಾತ ಶಿಶುಗಳು, ಗರ್ಭಿಣಿಯರು, ಮಾನಸಿಕ ಅಥವಾ ದೈಹಿಕ ಆರೋಗ್ಯ ಸಮಸ್ಯೆ ಇರುವವರು ಮತ್ತು ರಕ್ತದೊತ್ತಡದ ರೋಗಿಗಳು ಈ ಅವಧಿಯಲ್ಲಿ ವಿಶೇಷ ಮುನ್ನೆಚ್ಚರಿಕೆ ವಹಿಸಬೇಕು. ಸೆಕೆ ಹೆಚ್ಚಾದಾಗ ಒದ್ದೆ ಬಟ್ಟೆಯಿಂದ ಹಣೆಯನ್ನು ಒರೆಸಿಕೊಳ್ಳುವುದು ದೇಹದ ಉಷ್ಣತೆ ತಗ್ಗಿಸಲು ಸಹಾಯ ಮಾಡುತ್ತದೆ. ಶರೀರವನ್ನು ತಂಪಾಗಿರಿಸಲು ತಿಳಿ ಬಣ್ಣದ, ಮೆತ್ತಗಿನ ಹತ್ತಿ ಬಟ್ಟೆಗಳನ್ನು ಧರಿಸುವುದು ಸೂಕ್ತ. ಬಿಸಿಲಿನಲ್ಲಿ ಓಡಾಡುವಾಗ ಪಾದರಕ್ಷೆ ಅಥವಾ ಶೂ ಧರಿಸುವುದನ್ನು ಮರೆಯಬೇಡಿ ಎಂದು ಸಲಹೆ ನೀಡಿದ್ದಾರೆ.

ಆರೋಗ್ಯ ಕೇಂದ್ರದಲ್ಲಿ ಸಿಬ್ಬಂದಿ ನೇಮಕಕ್ಕೆ ಆಗ್ರಹ

ಹೂವಿನಹಡಗಲಿ: ತಾಲೂಕಿನ ಕಾಂತೆಬೆನ್ನೂರು ಗ್ರಾಮದಲ್ಲಿ ಆರೋಗ್ಯ ಮತ್ತು ಕ್ಷೇಮ ಕೇಂದ್ರದಲ್ಲಿ ಅಗತ್ಯ ಸಿಬ್ಬಂದಿ ನೇಮಕ ಮಾಡಿಕೊಳ್ಳಬೇಕೆಂದು ಆಗ್ರಹಿಸಿ ಭಾರತ ಕಮ್ಯೂನಿಸ್ಟ್ ಪಕ್ಷದ ತಾಲೂಕು ಸಮಿತಿ ವತಿಯಿಂದ ತಹಶೀಲ್ದಾರ್ ಮೂಲಕ ಆರೋಗ್ಯ ಸಚಿವರಿಗೆ ಮನವಿ ಸಲ್ಲಿಸಲಾಯಿತು.

ಸಿಪಿಐ ಸಹಕಾರ್ಯದರ್ಶಿ ಬಸವರಾಜ ಸಂಶಿ ಮಾತನಾಡಿ, ಕಾಂತೆಬೆನ್ನೂರು ಆರೋಗ್ಯ ಮತ್ತು ಕ್ಷೇಮ ಕೇಂದ್ರವು ತಾಲೂಕು ಕೇಂದ್ರದಿಂದ ಸುಮಾರು 30 ಕಿಮೀ. ದೂರದಲ್ಲಿದ್ದು, ತುಂಗಭದ್ರಾ ನದಿ ದಡ ಪ್ರದೇಶದಲ್ಲಿರುವ ಅತ್ಯಂತ ಹಿಂದುಳಿದ ಹಾಗೂ ದುರ್ಗಮ್ಮ ಪ್ರದೇಶಕ್ಕೆ ಸೇರಿದ ಆರೋಗ್ಯ ಸಂಸ್ಥೆಯಾಗಿರುತ್ತದೆ. ಈ ಕೇಂದ್ರವು ಕಾಂತೆಬೆನ್ನೂರು, ಹಿರೇಬನ್ನಿಮಟ್ಟಿ, ಚಿಕ್ಕಬನ್ನಿಮಟ್ಟಿ, ನಂದಿಗಾವಿ, ಬ್ಯಾಲಹುಣಸಿ, ಮಕರಬ್ಬಿ, ಕೋಟಿಹಾಳ ಸೇರಿದಂತೆ ಗಿರಿಯಾಪುರ, ದಾಸನಹಳ್ಳಿ, ಕಳಸಾಪುರ ಮುಂತಾದ ಸುಮಾರು 13 ಗ್ರಾಮಗಳಿಗೆ ಸೇವೆ ಸಲ್ಲಿಸುತ್ತಿದ್ದು, ಒಟ್ಟು ಸುಮಾರು 20,000 ರಿಂದ 30,000 ಜನಸಂಖ್ಯೆಗೆ ಕೇವಲ ಏಕೈಕ ಸಾರ್ವಜನಿಕ ಆರೋಗ್ಯ ಸೇವಾ ಕೇಂದ್ರವಾಗಿದೆ. ಆದರೆ, ಪ್ರಸ್ತುತ ಈ ಕೇಂದ್ರದಲ್ಲಿ ತೀವ್ರ ಸಿಬ್ಬಂದಿ ಕೊರತೆ ಉಂಟಾಗಿದ್ದು, ರೋಗಿಗಳಿಗೆ ಸಮಯೋಚಿತ ಹಾಗೂ ಸಮರ್ಪಕ ಚಿಕಿತ್ಸೆಯನ್ನು ಒದಗಿಸಲು ಸಾಧ್ಯವಾಗುತ್ತಿಲ್ಲ. ಇದರ ಪರಿಣಾಮವಾಗಿ ಮಕ್ಕಳು, ಗರ್ಭಿಣಿಯರು,



ಬಾಣಂತಿಯರು. ವೃದ್ಧರು ಸೇರಿದಂತೆ ಸಾಮಾನ್ಯ ಜನರು ತೀವ್ರ ಸಂಕಷ್ಟ ನೋವುಗಳನ್ನು ಅನುಭವಿಸುತ್ತಿದ್ದಾರೆ. ಸರ್ಕಾರ ಈ ಕೂಡಲೇ ಸಿಬ್ಬಂದಿ ನೇಮಕ ಮಾಡಿ ಇಲ್ಲಿನ ಸೂಕ್ತ ಕ್ರಮಕ್ಕೆ ಮುಂಜಾಗ್ರತೆ ವಹಿಸಿ ಸಮಸ್ಯೆ ಬಗೆಹರಿಸಬೇಕೆಂದು ಆಗ್ರಹಿಸಿದರು.

ಸಿಪಿಐ ಕಾರ್ಯದರ್ಶಿ ಜಂಗ್ಲಿಸಾಬ್, ವಿಜಯನಗರ ಜಿಲ್ಲಾ ಕಾರ್ಯದರ್ಶಿ ಎಚ್.ಎಂ.ಸಂತೋಷ, ಸಹ ಕಾರ್ಯದರ್ಶಿ ಕೆ.ಗಂಗಾಧರ ಹಾಗೂ ಇತರರಿದ್ದರು.

ಮಹಿಳಾ ರಕ್ಷಣೆ ಬಿಲ್ ವಿರೋಧಿಸಿ ಕಾಂಗ್ರೆಸ್ ಅವನತಿ ಆರಂಭ

ಬೀದರ್: ಮಹಿಳಾ ಸಬಲೀಕರಣದ ಮಸೂದೆ ಜಾರಿಗೆ ಅಡ್ಡಗಾಲು ಹಾಕಿದ ಕಾಂಗ್ರೆಸ್ ಸೇರಿದಂತೆ ವಿರೋಧ ಪಕ್ಷಗಳ ರಾಜಕೀಯ ಅಸ್ತಿತ್ವದ ಅವನತಿಗೆ ಕಾರಣವಾಗಲಿದೆ ಎಂದು ಮಹಿಳಾ ಹಕ್ಕುಗಳ ಜಾಗೃತಿ ಸಂಸ್ಥೆ ಸದಸ್ಯೆಯಾಗಿರುವ ಬೀದರಿನ ಮಹಿಳಾ ಘಟಕದ ಸಹ ಕಾರ್ಯದರ್ಶಿ ಶೃತಿ ದೇಶಪಾಂಡೆ ಹೇಳಿದರು.

ಈ ಕುರಿತು ನಗರದಲ್ಲಿ ಮಾತನಾಡಿದ ಅವರು, ಮಹಿಳೆಯರ ರಾಜಕೀಯವಾಗಿ ಭಾಗಿಯಾಗಲು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಈ ಬಿಲ್ ಅತ್ಯಗತ್ಯವಾಗಿತು. ಆದರೆ ಕಾಂಗ್ರೆಸ್ ನೇತೃತ್ವದಲ್ಲಿ ವಿರೋಧ ಪಕ್ಷಗಳು ಸಂವಿಧಾನದ ಅಡಿಯಲ್ಲಿ ಮಹಿಳೆಯರಿಗೆ ನೀಡಲಾಗಿರುವ ಮೂಲಭೂತ ಹಕ್ಕುಗಳ ನಿನ್ನೆಯ ಸಂಸತ್ ಅಧಿವೇಶನದಲ್ಲಿ ಬಹಿರಂಗವಾಗಿ ಕಗ್ಗೊಲೆ ಮಾಡಿದ್ದಾರೆ. ಮಹಿಳೆಯರ ಆರಕ್ಷಣೆ ಪರ ಮಾತನಾಡುತ್ತಿದ್ದ ಸೋನಿಯಾ ಗಾಂಧಿ ಈ ಬಿಲ್ ಸಂಸತ್ತಿನಲ್ಲಿ ಬಿದ್ದ ನಂತರ ಮಾತನಾಡದೇ ಬಾಯಿಗೆ ಬೀಗ ಹಾಕಿಕೊಂಡು ಮೌನವಾಗಿರುವುದು ಇಡೀ ಭಾರತೀಯ ಮಹಿಳೆಯರಿಗೆ ಮಾಡಿದ ಅವಮಾನ ಎಂದು ಆಕ್ರೋಶ ಭರಿತವಾಗಿ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಮಹಿಳಾ ಜಾಗೃತಿ ಘಟಕದ ಸಹಕಾರ್ಯದರ್ಶಿ ರಾಧಿಕಾ ದೇಶಪಾಂಡೆ ಮಾತನಾಡಿ, ಮಹಿಳಾ ಸಬಲೀಕರಣ ಮಸೂದೆ ಜಾರಿಗೆ ಆಗದಂತೆ ತಡೆದು ಕಾಂಗ್ರೆಸ್ ಸೇರಿದಂತೆ ಎಲ್ಲ ವಿಪಕ್ಷಗಳು ರಾಕ್ಷಸಿ ಮನೋಭಾವದವರು, ರಾಜಕೀಯ ಸಾಧಿಸಲು ಮಹಿಳೆಯರಿಗೆ ಸಂವಿಧಾನದಲ್ಲಿ ನೀಡಲಾದ ಮೂಲಭೂತ ಹಕ್ಕನ್ನು ಕಿತ್ತುಕೊಳ್ಳುವ ಮೂಲಕ ಕಾಂಗ್ರೆಸ್ ಸೇರಿದಂತೆ ಎಲ್ಲಾ ವಿರೋಧ ಪಕ್ಷಗಳು ಸಂವಿಧಾನ ರಚನಾಕಾರರಾದ ಹಾಗೂ ಸಮಾನತೆಯ ಹರಿಕಾರರಾದ ಡಾ.ಭೀಮರಾವ ಅಂಬೇಡ್ಕರ್, ದಿವಂಗತ ಮಾಜಿ ಪ್ರಧಾನಿ ಇಂದಿರಾ ಗಾಂಧಿ ಹಾಗೂ ಅವರ ಮಹಿಳಾ ಸಬಲೀಕರಣದ ಆಶಯದ ಮೇಲೆ ಚಾಟಿ ಏಟು ಬೀಸೂವ ಮೂಲಕ ಸಂವಿಧಾನದ ಅಪಮಾನ ಮಾಡಿದ್ದಾರೆ.

ವಿವಿಧ ಕಾಮಗಾರಿಗಳಿಗೆ ಶಾಸಕ ಭೂಮಿಪೂಜೆ

ಬಳ್ಳಾರಿ: ನಗರದ ಮಹರ್ಷಿ ವಾಲ್ಮೀಕಿ ವೃತ್ತ ಸಮೀಪದಲ್ಲಿ ಶಾಸಕರ ವಿಶೇಷ ಅನುದಾನದ ಅಡಿ ನಿರ್ಮಾಣ ಮಾಡಲಾಗಿರುವ ಮಳಿಗೆಗಳನ್ನು ಬೀದಿ ಬದಿ ವ್ಯಾಪಾರಿಗಳಿಗೆ ಶಾಸಕ ನಾರಾ ಭರತ್ ರೆಡ್ಡಿ ಅವರು ವಿತರಿಸಿದರು.

ಫಲಾನುಭವಿಗಳಿಂದಲೇ ಚೀಟಿ ಎತ್ತಿ ಆಯ್ಕೆ ಮಾಡುವ ಮೂಲಕ ವಿತರಿಸಲಾಯಿತು.

ಮಹಾನಗರ ಪಾಲಿಕೆಯ ಆಯುಕ್ತ ಮಂಜುನಾಥ, ಮೇಯರ್ ಗಾದೆಪ್ಪ, ಪಾಲಿಕೆಯ ಸದಸ್ಯರಾದ ಗುಡಿಗಂಟಿ ಹನುಮಂತ, ಕುಬೇರಾ ಸೇರಿದಂತೆ ಇತರರು ಇದ್ದರು. ನಂತರ ಬಳ್ಳಾರಿಯ 39ನೇ ವಾರ್ಡ್ ವ್ಯಾಪ್ತಿಯ ನೇತಾಜಿ ನಗರದ ಶ್ರೀಗಣೇಶ ದೇವಸ್ಥಾನದ ಬಳಿ ಅಂದಾಜು 80.63 ಲಕ್ಷ ರೂ.ಗಳ ವೆಚ್ಚದಲ್ಲಿ ಒಳ ಚರಂಡಿ ರಿಪೇರಿ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿದರು. ವಾರ್ಡಿನ ಮುಖಂಡ ಪಿ.ಜಗನ್, ಹಿರಿಯರಾದ ಮಾರೆಣ್ಣ, ಎರುಕುಲಸ್ವಾಮಿ, ಮಲ್ಲಿಕಾರ್ಜುನಸ್ವಾಮಿ, ಸೋಮಶೇಖರ್,



ಸಿದ್ದೇಶ್, ಸುಬ್ಬರಾಯುಡು, ನರೇಂದ್ರ ಇತರರಿದ್ದರು. ಬಳಿಕ ವಾರ್ಡ್ ಸಂಖ್ಯೆ 36ರ ವ್ಯಾಪ್ತಿಯ ಹಾವಂಭಾವಿ ಕಾಲುವೆ ಬಳಿ ರಸ್ತೆ ಅಭಿವೃದ್ಧಿ, ಮಳೆ ನೀರು ಚರಂಡಿ, ಒಳ ಚರಂಡಿ ಹಾಗೂ ಪೇವರ್ಸ್ ಅಳವಡಿಕೆಗೆ ಅಂದಾಜು 2 ಕೋಟಿ ರೂ.ಗಳ ವೆಚ್ಚದ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿದರು.

ನಂತರ ಇದೇ ವಾರ್ಡಿನ ಹಾವಂಭಾವಿ ಕಾಲುವೆ ಬಳಿ ಸರ್ಕಾರಿ ಪ್ರಾಥಮಿಕ ಶಾಲೆಯ ಒಂದು ಕೊಠಡಿಯ ನಿರ್ಮಾಣಕ್ಕಾಗಿ ಅಂದಾಜು 16.5 ಲಕ್ಷ ರೂ.ಗಳ ವೆಚ್ಚದ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿದರು.

ವಾರ್ಡಿನ ಮುಖಂಡ ಟಿ.ಎಂ.ಜಿ.ಲೋಕೇಶ್, ಗಂಗಪ್ಪ, ಗಂಗಾಧರ್, ಸೋಮು ಹಾಗೂ ಶಾಲೆಯ ಮುಖ್ಯೋಪಾಧ್ಯಾಯರು, ಶಿಕ್ಷಕಿಯರು, ಇದ್ದರು. ನಂತರ ಗಡಿಗಿ ಚನ್ನಪ್ಪ ವೃತ್ತ ಬಳಿ ಸಂಚಾರಿ ಅಸ್ತವ್ಯಸ್ತತೆಯ ಬಗ್ಗೆ ಖುದ್ದು ಸ್ಥಳಕ್ಕೆ ಭೇಟಿ ನೀಡಿ, ಪಾಲಿಕೆಯ ಆಯುಕ್ತರು, ಅಧಿಕಾರಿಗಳು ಹಾಗೂ ಸಂಚಾರಿ ಪೊಲೀಸರಿಗೆ ಅಗತ್ಯ ಸಲಹೆ ಸೂಚನೆಗಳನ್ನ ನೀಡಿದರು.

ಬಲಶೆಟ್ಟಿಹಾಳ ಡಾ.ಅಂಬೇಡ್ಕರ್ ಜಯಂತಿ ಆಚರಣೆ

ಹುಣಸಗಿ: ತಾಲೂಕಿನ ಬಲಶೆಟ್ಟಿಹಾಳ ಗ್ರಾಮದಲ್ಲಿ ಸಂವಿಧಾನ ಶಿಲ್ಪಿ ಡಾ ಬಾಬಾ ಸಾಹೇಬ್ ಅಂಬೇಡ್ಕರ್ ಅವರ 135ನೇ ಜಯಂತಿಯನ್ನು ಆಚರಿಸಲಾಯಿತು.

ಸಂವಿಧಾನ ಶಿಲ್ಪಿ ಅಂಬೇಡ್ಕರ್ ಅವರ ಭಾವಚಿತ್ರವನ್ನು ಗ್ರಾಮದ ಪ್ರಮುಖ ಬೀದಿಗಳಲ್ಲಿ ಕುಂಬ ಮೇಳಗಳೊಂದಿಗೆ ಭವ್ಯ ಮೆರವಣಿಗೆ ಮಾಡಲಾಯಿತು.

ಸಾಮಾಜಿಕ ಹೋರಾಟಗಾರ ದೇವಿಂದ್ರಪ್ಪ ಬಳಿಚಕ್ರ ಹಾಗೂ ಗುರು ಹುಲಕಲ್ ಮಾತನಾಡಿ, ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಈ ದೇಶಕ್ಕೆ ಅತ್ಯುತ್ತಮವಾದ ಸಂವಿಧಾನ ಕೊಟ್ಟಿದ್ದಾರೆ ಅವರ ತತ್ವ ಸಿದ್ದಾಂತಗಳನ್ನು ನಮ್ಮೆಲ್ಲರ ಜೀವನದಲ್ಲಿ ಅಳವಡಿಸಿಕೊಂಡು ಬಾಳಬೇಕು ಎಂದರು.

ತಿಪ್ಪಣ್ಣಗೌಡ ಬಿರಾದಾರ, ಶಿವು ಕುಮಾರ ಹಿರೇಮಠ್, ಎಮ್ ಆರ್ ಖಾಜಿ, ಬಸಣ್ಣ ಸಾಹು ಚಿಂಚೋಳಿ, ಸೈದಪ್ಪ ಕಟ್ಟಿಮನಿ, ಚಂದ್ರಶೇಖರ ಹಳ್ಳೂರ, ಜುಮ್ಮಣ್ಣ ಗುಡಿಮನಿ, ಪರಮಣ್ಣ ಚಲವಾದಿ, ಸೋಮಪ್ಪ ಚಲವಾದಿ ಸೇರಿದಂತೆ ಆಶಾ ಕಾರ್ಯಕರ್ತೆ ಈರಬಾಯಿ ಛಲವಾದಿ ಸೇರಿದಂತೆ ಮಹಿಳೆಯರು, ಯುವಕರು ಇನ್ನಿತರರು ಉಪಸ್ಥಿತರಿದ್ದರು.



ರಥೋತ್ಸವ ಯಶಸ್ವಿಗೆ ಸಹಕರಿಸಿ: ಡಿವೈಎಸ್ಪಿ

ಕೊಟ್ಟೂರು: ತಾಲೂಕಿನ ಪಂಚಪೀಠಗಳಲ್ಲಿ ಒಂದಾದ ಉಜ್ಜಯಿನಿಯಲ್ಲಿ ನಡೆಯುವ ಶ್ರೀಮರುಳಸಿದ್ದೇಶ್ವರ ಸ್ವಾಮಿ ರಥೋತ್ಸವ, ಶಿಖರ ತೈಲಾಭಿಷೇಕ ಮತ್ತು ಧಾರ್ಮಿಕ ಕಾರ್ಯಕ್ರಮಗಳ ಯಶಸ್ವಿಗಾಗಿ ಪೊಲೀಸ್ ಇಲಾಖೆ ಕೈಗೊಳ್ಳುವ ಕ್ರಮಗಳಿಗೆ ಸಾರ್ವಜನಿಕರು ಸಹಕಾರ ನೀಡಬೇಕು ಎಂದು ಕೂಡ್ಲಿಗಿ ಡಿವೈಎಸ್ಪಿ ಮಲ್ಲೇಶ ದೊಡ್ಡಮನಿ ಹೇಳಿದರು.

ಶುಕ್ರವಾರ ತಾಲೂಕಿನ ಉಜ್ಜಯಿನಿಯಲ್ಲಿ ನಡೆದ ರಥೋತ್ಸವದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಏ.21ರಂದು ರಥೋತ್ಸವ, ಏ.22ರಂದು ಶಿಖರ ತೈಲಾಭಿಷೇಕದಲ್ಲಿ ಪಾಲ್ಗೊಳ್ಳಲು ನಮ್ಮ ರಾಜ್ಯದ ವಿವಿಧ ಜಿಲ್ಲೆಗಳಿಂದ ಹಾಗೂ ಹೊರ ರಾಜ್ಯಗಳಿಂದಲೂ ಅಪಾರ ಸಂಖ್ಯೆಯಲ್ಲಿ ಭಕ್ತರು ಆಗಮಿಸುತ್ತಾರೆ. ಆಗ ಉಂಟಾಗುವ ಜನಜಂಗುಳಿಯಲ್ಲಿ ಕಾನೂನು ಬಾಹಿರ ಚಟುವಟಿಕೆಗಳನ್ನು ಯಾರಾದರೂ ನಡೆಸಿದರೆ, ಅಂಥಹವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು. ಜನನಿಯಂತ್ರಣಕ್ಕಾಗಿ ಹೆಚ್ಚಿನ ಪೊಲೀಸ್ ಬಂದೋಬಸ್ತ್ ಮಾಡಲಾಗುವುದು. ವಾಹನ ನಿಲುಗಡೆಗೆ ನಿಗದಿಪಡಿಸಿದ ಜಾಗದಲ್ಲಿಯೇ ಭಕ್ತರು ವಾಹನಗಳನ್ನು ನಿಲ್ಲಸಬೇಕು. ದೇವಸ್ಥಾನದಲ್ಲಿ ದರ್ಶನಕ್ಕೆ ಸರದಿ ಸಾಲು ನಿರ್ಮಾಣ ಮಾಡಲಾಗುವುದು. ರಥೋತ್ಸವ ಜರುಗುವ ವೇಳೆಯಲ್ಲಿ ನೂಕು ನುಗ್ಗಲು ಆಗದಂತೆ ಮುನ್ನಚ್ಚರಿಕೆ ಕ್ರಮ ಕೈಗೊಳ್ಳಾಗುವುದು ಎಂದರು.

ಕೊಟ್ಟೂರು ಸಿಪಿಐ ಡಿ.ದುರುಗಪ್ಪ ಮಾತನಾಡಿ, ಸ್ವಾಮಿ



ರಥೋತ್ಸವ ಸಾಗುವ ಮಾರ್ಗದಲ್ಲಿ ಅಂಗಡಿಗಳನ್ನು ಮೊದಲೇ ಹಾಕದಂತೆ ಗ್ರಾಮ ಪಂಚಾಯಿತಿಯವರು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು. ಕುಡಿವ ನೀರು, ನೈರ್ಮಲ್ಯ, ಸ್ವಚ್ಛತೆಗೆ ಸ್ಥಳೀಯ ಆಡಳಿತ ಹೆಚ್ಚಿನ ಆದ್ಯತೆ ನೀಡಬೇಕು. ಜಾತ್ರೆಯಲ್ಲಿ ಯಾವುದೇ ಅಪರಾಧ ಪ್ರಕರಣ ತಡೆಯದಂತೆ ಎಲ್ಲ ಕ್ರಮಗಳನ್ನು ವಹಿಸಲಾಗುವುದು ಎಂದು ಹೇಳಿದರು. ಗ್ರಾಪಂ ಪಿಡಿಒ ಉಮಾಪತಿ ಮಾತನಾಡಿ, ಈಗಾಗಲೇ ಗ್ರಾಮದಲ್ಲಿ ಚರಂಡಿಗಳ ಸ್ವಚ್ಛತೆ ಕಾರ್ಯಗಳನ್ನು ಕೈಗೊಳ್ಳಲಾಗಿದೆ. ಬೀದಿಗಳಲ್ಲಿರುವ ಕಸದ ರಾಶಿಯನ್ನು ವಿಲೇವಾರಿ ಮಾಡಿಸಲಾಗುವುದು. ಸ್ವಚ್ಛತೆ, ನೈರ್ಮಲ್ಯ ನಿರ್ವಹಣೆಗೆ ಸಿಬ್ಬಂದಿಗಳನ್ನು ನಿಯೋಜಿಸಿದೆ. ಕುಡಿವ ನೀರು ಸಮರ್ಪಕ ಸರಬರಾಜಿಗೆ ಎಲ್ಲ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು ಎಂದರು. ಕೊಟ್ಟೂರು ಪಿಎಸ್ಐ ಗೀತಾಂಜಲಿ ಶಿಂಧೆ ಪ್ರಾಸ್ತಾವಿಕ ಮಾತನಾಡಿ ನಿರ್ವಹಿಸಿದರು. ಸಭೆಯಲ್ಲಿ ಗ್ರಾಮದ ಹಾಗೂ ಸದ್ಧರ್ಮ ಪೀಠದ ಒಂಭತ್ತು ಪಾದಗಟ್ಟೆಗಳ ಗ್ರಾಮದ ಭಕ್ತರು ಪಾಲ್ಗೊಂಡಿದ್ದರು.